ಶನಿವಾರ ಏಪ್ರಿಲ್ 25 2026 ₹ 7.00
www.prajavani.net
ಪ್ರಜಾ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ

ಅಭಿಮಾನ

ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರ ಜನ್ಮದಿನದ ಪ್ರಯುಕ್ತ ಅಭಿಮಾನಿಯೊಬ್ಬರು ಸಂಭ್ರಮಿಸಿದ್ದು ಹೀಗೆ...



‘ಜಿಬಿಎ ಚುನಾವಣೆಗೆ ದುಡ್ಡಿಲ್ಲ’

ಸಿಬ್ಬಂದಿಯೂ ಇಲ್ಲ: ‘ಸುಪ್ರೀಂ’ಗೆ ಪ್ರಮಾಣಪತ್ರ ಸಲ್ಲಿಸಿದ ಆಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳಿಗೆ ಜೂನ್ 30ರೊಳಗೆ ಚುನಾವಣೆ ನಡೆಸಲು ದುಡ್ಡಿಲ್ಲ ಹಾಗೂ ಸಿಬ್ಬಂದಿಯೂ ಇಲ್ಲ ಎಂದು ರಾಜ್ಯ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ಅಲವತ್ತುಕೊಂಡಿದೆ.

ಚುನಾವಣೆ ನಡೆಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಕುರಿತು ಸುಪ್ರೀಂ ಕೋರ್ಟ್‌ಗೆ ಗುರುವಾರ ಪ್ರಮಾಣಪತ್ರ ಸಲ್ಲಿಸಿರುವ ಆಯೋಗ, ‘ಜಿಬಿಎ ಚುನಾವಣೆಯನ್ನು ಜೂನ್ 30ರಂದು ಅಥವಾ ಅದಕ್ಕೂ ಮೊದಲು ನಡೆಸಿ ಪೂರ್ಣಗೊಳಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆಯೋಗವು ಚುನಾವಣೆ ನಡೆಸಲು ಯಾವುದೇ ಹಣ ಹೊಂದಿಲ್ಲ. ಚುನಾವಣೆ ನಡೆಸಲು ತುರ್ತಾಗಿ ಹಣ ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ವಿನಂತಿಸಲಾಗಿದೆ’ ಎಂದು ತಿಳಿಸಿದೆ.

ಪಾಲಿಕೆಗಳಿಗೆ ಚುನಾವಣೆ ನಡೆಸುವ ಉದ್ದೇಶಕ್ಕಾಗಿ ಆಯೋಗವು ಲಾಜಿಸ್ಟಿಕ್ ಬೆಂಬಲ, ಸಿಬ್ಬಂದಿ, ಮೂಲಸೌಕರ್ಯ ಮತ್ತು ಹಣಕ್ಕಾಗಿ ರಾಜ್ಯ ಸರ್ಕಾರ ಮತ್ತು ಸರ್ಕಾರದ ಅಧಿಕಾರಿಗಳ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿದೆ ಎಂದು ಆಯೋಗ ಹೇಳಿದೆ.

ಮುಖ್ಯಾಂಶಗಳು

- ತುರ್ತಾಗಿ ಹಣ ಬಿಡುಗಡೆಗೆ ರಾಜ್ಯ ಸರ್ಕಾರಕ್ಕೆ ಮನವಿ
- ಮೇ 15ರ ನಂತರವೇ ಚುನಾವಣಾ ಕಾರ್ಯ
- ಕಾಲಮಿತಿ ವಿಸ್ತರಣೆಗೆ ಸರ್ಕಾರ ಮನವಿ

ರಾಜ್ಯದಲ್ಲಿ ಜನಗಣತಿ ಕಾರ್ಯವು ಮೇ 15ರೊಳಗೆ ಪೂರ್ಣಗೊಳ್ಳಲಿದೆ. ಐದು ಪಾಲಿಕೆಗಳಿಗೆ ಚುನಾವಣೆ ನಡೆಸುವ ಕಾರ್ಯವು ಮೇ 15ರ ನಂತರವೇ ಆರಂಭವಾಗಲಿದೆ. ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ದಿನಾಂಕಗಳನ್ನು ಭಾರತದ ಚುನಾವಣಾ ಆಯೋಗವು ಇಲ್ಲಿಯವರೆಗೆ ಘೋಷಿಸಿಲ್ಲ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದು ಈ ಎಲ್ಲ ವಿಷಯಗಳನ್ನು ತಿಳಿಸಲಾಗಿದೆ ಎಂದು ಆಯೋಗ ಸ್ಪಷ್ಟಪಡಿಸಿದೆ.

ಜೂನ್ 30ರೊಳಗೆ ಚುನಾವಣೆ ನಡೆಸುವಂತೆ ಆಯೋಗಕ್ಕೆ ನ್ಯಾಯಪೀಠವು 2026ರ ಜನವರಿ 12ರಂದು ನಿರ್ದೇಶನ ನೀಡಿತ್ತು. ಮತದಾರರ ಪಟ್ಟಿ ಪರಿಷ್ಕರಣೆ ಸೇರಿದಂತೆ ಚುನಾವಣಾ ಸಿದ್ಧತಾ ಕಾರ್ಯಗಳನ್ನು ನಡೆಸಲಾಗಿದೆ. ಏಪ್ರಿಲ್ 18ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಿದೆ. ನ್ಯಾಯಪೀಠದ ಆದೇಶಗಳನ್ನು ಆಯೋಗ ಚಾಚೂತಪ್ಪದೆ ಪಾಲಿಸುತ್ತಿದೆ. ಆದರೆ, ಚುನಾವಣೆ ನಡೆಸಲು ಆಯೋಗದ ಬಳಿ ಸ್ವಂತ ಸಿಬ್ಬಂದಿ ಇಲ್ಲ. ಹಣವೂ ಇಲ್ಲ. ಇದಕ್ಕೆ ರಾಜ್ಯ ಸರ್ಕಾರದ ಬೆಂಬಲ ಅಗತ್ಯ ಎಂದು ಆಯೋಗ ಗಮನ ಸೆಳೆದಿದೆ.

ಐದು ನಗರ ಪಾಲಿಕೆಗಳ ಚುನಾವಣೆಗೆ ಕಾಲಮಿತಿಯನ್ನು ವಿಸ್ತರಿಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ರಾಜ್ಯ ಸರ್ಕಾರ ಏಪ್ರಿಲ್ 15ರಂದು ಪತ್ರ ಬರೆದಿತ್ತು.

ಮುಖ್ಯ ಕಾರ್ಯದರ್ಶಿಯವರಿಗೆ ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಬರೆದಿರುವ ಪತ್ರ ಉಲ್ಲೇಖಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ ಜಗದೀಶ್ ಅವರು, ಆಯೋಗದ ಕಾರ್ಯದರ್ಶಿ ಎಸ್. ಹೊನ್ನಾಂಬ ಅವರಿಗೆ ಪತ್ರ ಬರೆದು, ನಗರ ಪಾಲಿಕೆಗಳ ಚುನಾವಣೆಗೆ ಸಮರ್ಪಕವಾಗಿ ಸಿದ್ಧತೆ ನಡೆಸಬೇಕಾಗಿರುವುದರಿಂದ ಕಾಲಮಿತಿಯನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಬೇಕು ಎಂದು ತಿಳಿಸಿದ್ದರು.

‘ಜಿಬಿಎ ವ್ಯಾಪ್ತಿಯಲ್ಲಿ ಜನಗಣತಿ ಕಾರ್ಯ ನಡೆಯುತ್ತಿದ್ದು, ಇಡೀ ಆಡಳಿತ ಮತ್ತು ಕ್ಷೇತ್ರಮಟ್ಟದ ಯಂತ್ರವು ಅದರಲ್ಲಿ ತೊಡಗಿಕೊಂಡಿದೆ. ಈ ಚಟುವಟಿಕೆಗಳು ಶಾಸನಬದ್ಧ ಮತ್ತು ಸಮಯಕ್ಕೆ ಸೀಮಿತವಾಗಿರುವುದರಿಂದ ಎಣಿಕೆ, ಮೇಲ್ವಿಚಾರಣೆ, ತರಬೇತಿ ಮತ್ತು ಸಂಪರ್ಕಕ್ಕಾಗಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸುವ ಅಗತ್ಯವಿದೆ. ಇದರಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದ ಪೂರ್ವ ಸಿದ್ಧತಾ ಕಾರ್ಯಗಳಿಗೆ ಸೀಮಿತ ಅವಕಾಶವಿದ್ದು, ಎಸ್‌ಐಆರ್ ಸಹ ಏಕಕಾಲದಲ್ಲಿ ಕೈಗೊಳ್ಳುವ ನಿರೀಕ್ಷೆ ಇದೆ. ಇದರ ಜೊತೆಗೆ ಮೇ, ಜೂನ್‌ನಲ್ಲಿ ಶೈಕ್ಷಣಿಕ ಪರೀಕ್ಷಾ ಕರ್ತವ್ಯಗಳಿಗೆ ಸಿಬ್ಬಂದಿ ನಿಯೋಜಿಸುವುದರಿಂದ ಲಭ್ಯವಿರುವ ಸಿಬ್ಬಂದಿ ಮತ್ತಷ್ಟು ಕಡಿತವಾಗುವ ಸಾಧ್ಯತೆ ಇದೆ’ ಎಂದು ಜಿಬಿಎ ಮುಖ್ಯ ಆಯುಕ್ತರು ಮುಖ್ಯ ಕಾರ್ಯದರ್ಶಿಯವರಿಗೆ ಏಪ್ರಿಲ್ 8ರಂದು ಪತ್ರ ಬರೆದಿದ್ದರು.

ಈ ಎಲ್ಲ ವಿಷಯಗಳನ್ನು ಆಯೋಗವು ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದೆ. ಈ ವಿಷಯದ ಬಗ್ಗೆ ನ್ಯಾಯಪೀಠ ಸೂಕ್ತ ನಿರ್ದೇಶನ ನೀಡಬೇಕು ಎಂದು ಕೋರಿದೆ.

ಚುನಾವಣೆಗೆ ಸಂಬಂಧಿಸಿದಂತೆ ವಾರ್ಡ್‌ವಾರು ಮೀಸಲಾತಿಯನ್ನು ಅಂತಿಮಗೊಳಿಸಿ ಅಧಿಸೂಚಿಸಲಾಗಿದೆ ಎಂದು ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಏಪ್ರಿಲ್ 14ರಂದು ಪ್ರಮಾಣಪತ್ರ ಸಲ್ಲಿಸಿತ್ತು.

ಪಿಯು ಪರೀಕ್ಷೆ–2: ವಿದ್ಯಾರ್ಥಿಗಳಿಗೆ ಪ್ರಯಾಣ ಉಚಿತ



ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ–2 ಬರೆಯುವ ವಿದ್ಯಾರ್ಥಿಗಳಿಗೆ ಪರೀಕ್ಷಾ ದಿನಗಳಲ್ಲಿ ಬಿಎಂಟಿಸಿ ಬಸ್‌ಗಳಲ್ಲಿ ಉಚಿತವಾಗಿ ಸಂಚರಿಸಲು ಅವಕಾಶ ನೀಡಲಾಗಿದೆ.

ಏಪ್ರಿಲ್ 30ರಿಂದ ಮೇ 13ರವರೆಗೆ ನಿಗದಿಯಾಗಿರುವ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳಿಗೆ ತೆರಳುವ ಮತ್ತು ಅಲ್ಲಿಂದ ಹಿಂದಿರುಗುವ ವೇಳೆ ವಿದ್ಯಾರ್ಥಿಗಳು ಪರೀಕ್ಷಾ ಪ್ರವೇಶ ಪತ್ರಗಳನ್ನು ತೋರಿಸಿ ಸಾಮಾನ್ಯ ಬಸ್‌ಗಳಲ್ಲಿ ಪ್ರಯಾಣಿಸಲು ಅವಕಾಶ ನೀಡಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಡಿಕೆ ಸಹೋದರರಿಂದ ಬಿಗಿಪಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯಮಂತ್ರಿಯಾಗಲೇಬೇಕು ಎಂದು ಪಣ ತೊಟ್ಟಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಹೋದರ ಡಿ.ಕೆ. ಸುರೇಶ್ ಜತೆಗೂಡಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಶುಕ್ರವಾರ ರಾತ್ರಿ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಯ ಮತದಾನ ಮುಗಿದಿದೆ. ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದ ಮತದಾನ ಪೂರ್ಣಗೊಂಡಿದೆ. ಇದರ ಬೆನ್ನಲ್ಲೇ, ಕೇಂದ್ರ ಸಚಿವರನ್ನು ಭೇಟಿ ಮಾಡುವ ಕಾರಣ ನೀಡಿ ದೆಹಲಿಗೆ ಬಂದಿರುವ ಶಿವಕುಮಾರ್ ಅವರು ಅಧಿಕಾರ ಹಸ್ತಾಂತರದ ಬಗ್ಗೆ ಮತ್ತೆ ಒತ್ತಡ ಹೇರುವ ಪ್ರಯತ್ನ ಮುಂದುವರಿಸಿದ್ದಾರೆ.

‘ಐದು ರಾಜ್ಯಗಳ ಫಲಿತಾಂಶ ಪ್ರಕಟಕ್ಕೆ ಮುನ್ನವೇ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು’ ಎಂದು ಹೈಕಮಾಂಡ್ ನಾಯಕರ ಮೇಲೆ ಒತ್ತಡ ಹೇರಿದ್ದಾರೆ.

3B

ಕೊಲೆ: ಐವರು ಆರೋಪಿಗಳ ಸೆರೆ

ಪಾರಿವಾಳ ಕಳವು ಮಾಡಿದ್ದ ವಿಚಾರಕ್ಕೆ ಎರಡು ಗುಂಪುಗಳ ನಡುವೆ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರಿವಾಳಗಳ ಕಳವು ಮಾಡಿದವರನ್ನು ಪ್ರಶ್ನಿಸಲು ಹೋದಾಗ ನಡೆದ ಗಲಾಟೆಯಲ್ಲಿ ಯುವಕನನ್ನು ಕೊಲೆ ಮಾಡಿದ್ದ ಪ್ರಕರಣದಲ್ಲಿ ರಾಜಗೋಪಾಲನಗರ ಠಾಣೆಯ ಪೊಲೀಸರು ಐವರನ್ನು ಬಂಧಿಸಿದ್ದಾರೆ.

ಲಗ್ಗೆರೆ ನಿವಾಸಿಗಳಾದ ದರ್ಶನ್ (28), ಸುರೇಂದ್ರ (27), ಮಹೇಂದ್ರ (29), ವಿಜಯ್ (26) ಹಾಗೂ ದರ್ಶನ್ (26) ಬಂಧಿತ ಆರೋಪಿಗಳು.

ಏಪ್ರಿಲ್ 21ರ ರಾತ್ರಿ ರಾಜಗೋಪಾಲ ನಗರದ ವಿಜ್ಞಾನ ಪಬ್ಲಿಕ್ ಶಾಲೆಯ ಬಳಿ ಮಲ್ಲಿಕಾರ್ಜುನ್ ರಾವ್ (24) ಎಂಬುವವರನ್ನು ಆರೋಪಿಗಳು ಕೊಲೆ ಮಾಡಿ ಪರಾರಿ ಆಗಿದ್ದರು. ಮಲ್ಲಿಕಾರ್ಜುನ್ ರಾವ್ ಅವರ ಸಂಬಂಧಿಕರು ನೀಡಿದ ದೂರಿನ ಮೇಲೆ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಮಲ್ಲಿಕಾರ್ಜುನ್ ರಾವ್ ಅವರ ಸ್ನೇಹಿತ ಪ್ರಶಾಂತ್ ಪಾರಿವಾಳಗಳನ್ನು ಸಾಕಿದ್ದರು. ಅವುಗಳ ಕಳ್ಳತನ ನಡೆದಿತ್ತು. ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಿದಾಗ ಐವರು ಪಾರಿವಾಳಗಳನ್ನು ಕಳ್ಳತನ ಮಾಡಿಕೊಂಡು ಹೋಗುತ್ತಿರುವ ದೃಶ್ಯ ಸೆರೆಯಾಗಿತ್ತು. ಕಳವು ಮಾಡಿದವರ ಸುಳಿವು ಗೊತ್ತಾದ ಮೇಲೆ ಏ.21ರ ರಾತ್ರಿ ಲಗ್ಗೆರೆ ಬಳಿ ಆರೋಪಿಗಳನ್ನು ಪ್ರಶ್ನಿಸಲು ಪ್ರಶಾಂತ್ ಜತೆಗೆ ಮಲ್ಲಿಕಾರ್ಜುನ್ ರಾವ್ ಹೋಗಿದ್ದರು. ಈ ವೇಳೆ ಮಾತಿಗೆ ಮಾತು ಬೆಳೆದು ಜೋರು ಗಲಾಟೆ ನಡೆದಿತ್ತು. ಮಲ್ಲಿಕಾರ್ಜುನ್ ರಾವ್ ಅವರಿಗೆ ಆರೋಪಿಗಳು ಡ್ಯಾಗರ್‌ನಿಂದ ಇರಿದು ಕೊಲೆ ಮಾಡಿ ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

‘ಸದ್ಯಕ್ಕೆ ಐವರು ಆರೋಪಿಗಳನ್ನು ಬಂಧಿಸಲಾಗಿದೆ. ಇನ್ನೂ ನಾಲ್ವರಿಗೆ ಶೋಧ ಕಾರ್ಯ ನಡೆಸಲಾಗುತ್ತಿದೆ. ಸ್ನೇಹಿತ ಪ್ರಶಾಂತ್ ಜತೆಗೆ ಪಾರಿವಾಳ ಕಳವು ಮಾಡಿದ್ದ ವಿಚಾರವನ್ನು ಪ್ರಶ್ನಿಸಲು ತೆರಳಿದ್ದಾಗ ಮಲ್ಲಿಕಾರ್ಜುನ್ ಅವರ ಕೊಲೆ ನಡೆದಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸರು ಹೇಳಿದರು.

ಚೀಲದಲ್ಲಿ ಮೃತದೇಹ ತುಂಬಿ ಎಸೆದು ಹೋದ ದುಷ್ಕರ್ಮಿಗಳು

ಬೆಂಗಳೂರು: ವ್ಯಕ್ತಿಯನ್ನು ಕೊಲೆ ಮಾಡಿ ಮೃತದೇಹವನ್ನು ಗೋಣಿಚೀಲದಲ್ಲಿ ತುಂಬಿ ಗಂಗಮ್ಮನಗುಡಿ ಪೊಲೀಸ್ ಠಾಣಾ ವ್ಯಾಪ್ತಿಯ ಲಕ್ಷ್ಮಿಪುರದ ಬಿಡಿಎ ಲೇಔಟ್‌ನ ಖಾಲಿ ಪ್ರದೇಶದಲ್ಲಿ ದುಷ್ಕರ್ಮಿಗಳು ಎಸೆದು ಪರಾರಿಯಾಗಿದ್ದಾರೆ.

ಕೊಲೆಯಾದ ಪುರುಷನ ಗುರುತು ಪತ್ತೆಯಾಗಿಲ್ಲ. ಆರೋಪಿಗಳ ಪತ್ತೆಗಾಗಿ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗಿದೆ. ಸುಳಿವು ಸಿಕ್ಕಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು ಎಂದು ಪೊಲೀಸರು ಹೇಳಿದರು.

ಗಂಗಮ್ಮನಗುಡಿ ಲಕ್ಷ್ಮಿಪುರದ ಬಿಡಿಎ ಲೇಔಟ್‌ನಲ್ಲಿ ಶುಕ್ರವಾರ ಬೆಳಿಗ್ಗೆ ಸ್ಥಳೀಯರು ವಾಯುವಿಹಾರ ಮಾಡುತ್ತಿದ್ದರು. ಆ ವೇಳೆ ನಾಯಿಗಳು ಚೀಲ ಎಳೆಯುತ್ತಿದ್ದನ್ನು ಗಮನಿಸಿದ್ದ ಸ್ಥಳೀಯರು, ಪೊಲೀಸರಿಗೆ ಮಾಹಿತಿ ನೀಡಿದ್ದರು. ವಿಚಾರ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ದುಷ್ಕರ್ಮಿಗಳು ವ್ಯಕ್ತಿಯನ್ನು ಕೊಲೆ ಮಾಡಿ, ಮೃತದೇಹವನ್ನು ಚೀಲಕ್ಕೆ ತುಂಬಿ ಎಸೆದಿರುವ ಶಂಕೆ ವ್ಯಕ್ತವಾಗಿದೆ. ವಿಧಿವಿಜ್ಞಾನ ಪ್ರಯೋಗಾಲಯ(ಎಫ್‌ಎಸ್‌ಎಲ್) ಹಾಗೂ ಸೊಕೊ ತಂಡದವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಅಪಘಾತ: ಕಾರ್ಮಿಕ ಸಾವು

ಬೆಂಗಳೂರು: ಕಸ ತುಂಬಿಕೊಂಡು ಹೋಗುತ್ತಿದ್ದ ವೇಳೆ ನಿಯಂತ್ರಣ ತಪ್ಪಿದ ಲಾರಿಯು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಮರಕ್ಕೆ ಅಪ್ಪಳಿಸಿದ ಪರಿಣಾಮ, ಕಾರ್ಮಿಕ ಸ್ಥಳದಲ್ಲೇ ಮೃತಪಟ್ಟ ಘಟನೆ ಜೀವನ್ ಬಿಮಾನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಸದ್ದಾಂ (28)ಮೃತಪಟ್ಟ ಯುವಕ.

ಗುರುವಾರ ರಾತ್ರಿ 11ರ ಸುಮಾರಿಗೆ ಜೀವನಬಿಮಾ ನಗರದ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿ ಜಿಬಿಎಗೆ ಸೇರಿದ ಲಾರಿಯು ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿತ್ತು. ಡಿಕ್ಕಿ ಹೊಡೆದ ರಭಸಕ್ಕೆ ಮರಕ್ಕೆ ಅಪ್ಪಳಿಸಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಸದ್ದಾಂ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಜೀವನಬಿಮಾನಗರ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ತೆರಳಿ, ಪರಿಶೀಲಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಯುವಕನ ಮೇಲೆ ಯುವತಿಯರಿಂದ ಹಲ್ಲೆ

ಬೆಂಗಳೂರು: ಪಬ್‌ವೊಂದರ ಒಳಗೆ ಪಾರ್ಟಿ ನಡೆಸುತ್ತಿದ್ದಾಗ ಕಿರುಕುಳ ನೀಡಿದ್ದಾನೆ ಎಂದು ಆರೋಪಿಸಿ, ಯುವಕನಿಗೆ ಇಬ್ಬರು ಯುವತಿಯರು ಥಳಿಸಿದ್ದಾರೆ. ಕೋರಮಂಗಲದ ಮುಖ್ಯರಸ್ತೆಯಲ್ಲಿ ಘಟನೆ ನಡೆದಿದೆ. ಯುವತಿಯರು ಹಲ್ಲೆ ನಡೆಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಕಿರುಕುಳ ನೀಡುತ್ತಿದ್ದಾನೆ ಎಂದು ಆರೋಪಿಸಿದ ಯುವತಿಯರು, ಯುವಕನನ್ನು ರಸ್ತೆಗೆ ಎಳೆದುತಂದು ಹಲ್ಲೆ ಮಾಡಿದ್ದಾರೆ. ಸ್ಥಳದಲ್ಲಿದ್ದ ಪೊಲೀಸರು ಯುವತಿಯರನ್ನು ತಡೆಯಲು ಪ್ರಯತ್ನಿಸಿದ್ದರು.

‘ಹೊಡೆಯಬೇಡಿ, ಠಾಣೆಗೆ ಬಂದು ದೂರು ನೀಡಿ’ ಎಂದು ಮನವಿ ಮಾಡಿದರೂ ಯುವತಿಯರು ಪೊಲೀಸರ ಎದುರಲ್ಲೇ ಹಲ್ಲೆ ಮಾಡುತ್ತಿರುವುದು ವಿಡಿಯೊದಲ್ಲಿ ಸೆರೆಯಾಗಿದೆ. ಸ್ಥಳದಲ್ಲಿದ್ದ ಸ್ಥಳೀಯರು ವಿಡಿಯೊ ಮಾಡಿದ್ದಾರೆ.

‘ಎರಡೂ ಕಡೆಯವರಿಗೆ ದೂರು ನೀಡುವಂತೆ ಸೂಚಿಸಲಾಗಿದೆ. ಆದರೆ, ಇದುವರೆಗೆ ಯಾರೂ ದೂರು ನೀಡಿಲ್ಲ’ ಎಂದು ಪೊಲೀಸರು ಹೇಳಿದರು.

ಕಡಿಮೆ ಬೆಲೆಗೆ ಚಿನ್ನದ ಆಭರಣ ಕೊಡಿಸುವುದಾಗಿ ನಂಬಿಸಿ ಕೃತ್ಯ

₹2 ಕೋಟಿ ಪಡೆದು ವಂಚನೆ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಡಿಮೆ ಬೆಲೆಗೆ ಬಂಗಾರದ ಆಭರಣ ಕೊಡಿಸುವುದಾಗಿ ನಂಬಿಸಿ ₹2 ಕೋಟಿ ಪಡೆದು ಆಭರಣ ನೀಡದೇ ವಂಚಿಸಿದ್ದ ಆರೋಪದಡಿ ಇಬ್ಬರ ವಿರುದ್ಧ ಎಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸವಿತಾ ಹಾಗೂ ಆಭರಣ ಮಳಿಗೆ ಮಾಲೀಕ ಇಂದ್ರ ವಿರುದ್ಧ ಕೊಮ್ಮಸಂದ್ರದ ನಿವಾಸಿ ಕೆ.ವಿ.ಪುನೀತ್ ಕುಮಾರ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ. ಆರೋಪಿಗಳು ನಾಪತ್ತೆ ಆಗಿದ್ದಾರೆ. ತನಿಖೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಕೊಮ್ಮಸಂದ್ರದ ನಿವಾಸಿ ಪುನೀತ್ ಆಭರಣ ಖರೀದಿಸಲು ಮುಂದಾಗಿದ್ದರು. ಈ ವಿಷಯವನ್ನು ಪರಿಚಯವಿದ್ದ ಸವಿತಾ ಅವರಿಗೆ ತಿಳಿಸಿದ್ದರು. ‘ಕಡಿಮೆ ಬೆಲೆಗೆ ಚಿನ್ನವನ್ನು ಕೊಡಿಸುತ್ತೇನೆ’ ಎಂಬುದಾಗಿ ಸವಿತಾ ನಂಬಿಸಿ ವಂಚಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ಮೇಕಿಂಗ್ ಚಾರ್ಜ್ ಕಡಿಮೆ: ‘ಇಂದ್ರ ಎಂಬುವವರು ನನಗೆ ಪರಿಚಯವಿದ್ದು, ಅವರದ್ದು ಚಿನ್ನಾಭರಣ ಅಂಗಡಿ ಇದೆ. ಕಡಿಮೆ ಬೆಲೆಗೆ ಹಾಗೂ ಮೇಕಿಂಗ್ ಚಾರ್ಜ್ ಕಡಿಮೆ ಮಾಡಿ, ಚಿನ್ನಾಭರಣ ನೀಡಲಿದ್ದಾರೆ ಎಂಬುದಾಗಿ ಸವಿತಾ ನಂಬಿಸಿದ್ದರು. ಸವಿತಾ ಮಾತನ್ನು ದೂರುದಾರ ನಂಬಿದ್ದರು. ಮಾರ್ಚ್ 27ರಂದು ಪುನೀತ್ ಅವರನ್ನು ಮಹಿಳೆ ಎಸ್‌ಎಸ್‌ಆರ್ ಲೇಔಟ್‌ನ ಎಂ.ಪಿ. ಜ್ಯುವೆಲರ್ಸ್ ಮಳಿಗೆಗೆ ಕರೆದೊಯ್ದಿದ್ದರು’ ಎಂದು ಪೊಲೀಸರು ಹೇಳಿದರು.

‘ಪುನೀತ್ ಚಿನ್ನ ಖರೀದಿಸಲು ₹2 ಕೋಟಿ ಹಣವನ್ನು ಕಾರಿನಲ್ಲಿ ತಂದಿದ್ದರು. ಚಿನ್ನಾಭರಣ ಮಳಿಗೆಗೆ ತೆರಳುವಾಗ ಬಾಕ್ಸ್‌ನಲ್ಲಿ ಹಣವನ್ನು ಸವಿತಾ ಅವರೇ ತೆಗೆದುಕೊಂಡು ಹೋಗಿದ್ದರು. ಅಲ್ಲದೇ ‘ನಾನು ಹೇಳುವವರೆಗೂ ಕಾರಿನಿಂದ ಇಳಿದು ಬರಬಾರದು’ ಎಂದೂ ಪುನೀತ್ ಅವರಿಗೆ ತಾಕೀತು ಮಾಡಿದ್ದರು. ಸ್ವಲ್ಪ ಸಮಯದ ಬಳಿಕ ಇಂದ್ರ ಅವರ ಜತೆಗೆ ಪುನೀತ್ ಅವರನ್ನು ಮಾತನಾಡಿಸಿ ‘ಹಣ ಸರಿಯಾಗಿದೆ. ಊಟ ಮಾಡಿಕೊಂಡು ಬನ್ನಿ. ಬಳಿಕ ಆಭರಣ ತೋರಿಸುತ್ತೇನೆ’ ಎಂದು ಹೇಳಿದ್ದರು. ಊಟ ಮುಗಿಸಿಕೊಂಡು ಹೋದ ಪುನೀತ್ ಅವರಿಗೆ ಎರಡು ದಿನ ಬಿಟ್ಟು ಬರುವಂತೆ ತಿಳಿಸಲಾಗಿತ್ತು. ಹೀಗೆ ನೆಪ ಹೇಳುತ್ತಾ ವಂಚನೆ ನಡೆಸಲಾಗಿದೆ’ ಎಂದು ಹೇಳಿದರು.

ಕಲ್ಯಾಣ ಮಂಟಪದಲ್ಲಿ ಚಿನ್ನಾಭರಣ ಕದಿಯುತ್ತಿದ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಯಾಣ ಮಂಟಪಗಳಲ್ಲಿ ನಡೆಯುವ ಮದುವೆ ಮತ್ತಿತರ ಸಮಾರಂಭಗಳಿಗೆ ಬರುವ ಮಕ್ಕಳ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪೀಣ್ಯದ ಎಚ್.ಕೆ.ಬಾಬು (45) ಬಂಧಿತ. ಆರೋಪಿಯಿಂದ ₹5.50 ಲಕ್ಷ ಮೌಲ್ಯದ ಚಿನ್ನದ ಆಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕಲ್ಯಾಣ ಮಂಟಪಗಳಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ಸಂಬಂಧಿಕರ ಸೋಗಿನಲ್ಲಿ ಆರೋಪಿ ಬರುತ್ತಿದ್ದ. ನಂತರ, ಕಲ್ಯಾಣ ಮಂಟಪಗಳಲ್ಲಿ ಓಡಾಟ ನಡೆಸುತ್ತಾ ಮಕ್ಕಳ ಗಮನ ಬೇರೆಡೆ ಸೆಳೆದು, ಅವರ ಕತ್ತಿನಲ್ಲಿ ಇರುವ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ. ಕದ್ದ ಆಭರಣ ಅಡವಿಟ್ಟು ಸಾಲ ಪಡೆದು ಮೋಜು–ಮಸ್ತಿ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ದೂರುದಾರ ರಂಜಿತ್ ಅವರು ಫೆಬ್ರುವರಿ 8ರಂದು ಮದುವೆ ಕಾರ್ಯಕ್ರಮಕ್ಕೆಂದು ಥಣಿಸಂದ್ರ ಮುಖ್ಯರಸ್ತೆಯ ಕಲ್ಯಾಣ ಮಂಟಪಕ್ಕೆ ಬಂದಿದ್ದರು. ಅದೇ ಮದುವೆ ಸಮಾರಂಭಕ್ಕೆ ಸಂಬಂಧಿಕರ ಸೋಗಿನಲ್ಲಿ ಆರೋಪಿ ಬಂದಿದ್ದ. ರಂಜಿತ್ ಅವರ ಪುತ್ರಿ ಜನಿತಾಳ ಗಮನವನ್ನು ಬೇರೆಡೆ ಸೆಳೆದು ಅವಳು ಧರಿಸಿದ್ದ ₹11 ಲಕ್ಷ ಮೌಲ್ಯದ ಆಭರಣ ಕಳ್ಳತನ ಮಾಡಿಕೊಂಡು ಹೋಗಿದ್ದ. ಕೆಲ ಸಮಯದ ಬಳಿಕ ಜನಿತಾ ನೆಕ್ಲೆಸ್ ಕಳುವಾಗಿರುವುದು ಪೋಷಕರ ಗಮನಕ್ಕೆ ಬಂದಿತ್ತು. ಬಳಿಕ ಸಂಪಿಗೆಹಳ್ಳಿ ಠಾಣೆಗೆ ದೂರು ನೀಡಿದ್ದರು. ಕಲ್ಯಾಣ ಮಂಟಪದಲ್ಲಿದ್ದ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಿದಾಗ ವ್ಯಕ್ತಿಯೊಬ್ಬ ಅನುಮಾನಾಸ್ಪದವಾಗಿ ಓಡಾಟ ನಡೆಸುತ್ತಿರುವುದು ಕಂಡುಬಂದಿತ್ತು. ತಾಂತ್ರಿಕ ಸುಳಿವು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಯ ಬಂಧನದಿಂದ ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ದಾಖಲಾಗಿದ್ದ 8 ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

ಮತ್ತಿಬ್ಬರ ಸೆರೆ; ಎರಡು ಕೆ.ಜಿ ಬೆಳ್ಳಿ ಜಪ್ತಿ

ಮನೆಗೆ ಹಾಕಿದ್ದ ಬೀಗ ಒಡೆದು 3 ಕೆ.ಜಿ ಬೆಳ್ಳಿ, 250 ಗ್ರಾಂ ಚಿನ್ನಾಭರಣ ದೋಚಿದ್ದ ಪ್ರಕರಣದಲ್ಲಿ ಮತ್ತಿಬ್ಬರು ಆರೋಪಿಗಳನ್ನು ಕೊಡಿಗೇಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಮಹಾರಾಷ್ಟ್ರದ ರೋಹನ್ (38), ಆಕಾಶ್ (29) ಬಂಧಿತರು. ಆರೋಪಿಗಳಿಂದ ಎರಡು ಕೆ.ಜಿ ಬೆಳ್ಳಿ ಜಪ್ತಿ ಮಾಡಲಾಗಿದೆ.

ಸಹಕಾರ ನಗರದ ನಿವಾಸಿ ಪದ್ಮನಾಭ್ ಮನೆಗೆ ಬೀಗ ಹಾಕಿಕೊಂಡು ಹೊರರಾಜ್ಯಕ್ಕೆ ತೆರಳಿದ್ದರು. ಮನೆ ನೋಡಿಕೊಳ್ಳಲು ಭದ್ರತಾ ಸಿಬ್ಬಂದಿಯನ್ನು ನೇಮಿಸಿದ್ದರು. ಭದ್ರತಾ ಸಿಬ್ಬಂದಿ ರಾತ್ರಿ ವೇಳೆ ಮನೆಯ ಬಳಿಯಿದ್ದು, ಬೆಳಿಗ್ಗೆ ವಿಶ್ರಾಂತಿಗೆ ತೆರಳಿದ್ದ ಸಂದರ್ಭದಲ್ಲಿ ಕಳ್ಳರು ಮನೆಯ ಬಾಗಿಲು ಒಡೆದು ಚಿನ್ನಾಭರಣ ದೋಚಿ ಪರಾರಿ ಆಗಿದ್ದರು. ಈ ಹಿಂದೆ ಇಬ್ಬರು ಆರೋಪಿಗಳನ್ನು ಬಂಧಿಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಅದೇ ಪ್ರಕರಣದಲ್ಲಿ ಮತ್ತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು ಎಂದು ಪೊಲೀಸರು ಹೇಳಿದರು.

ವಿದೇಶಿ ಮಹಿಳೆಗೆ ಲೈಂಗಿಕ ಕಿರುಕುಳ ತನಿಖೆಗೆ ಆಗ್ರಹ

ಮಡಿಕೇರಿ: ‘ಕೇರಳದ ಗಡಿಯ ಕುಟ್ಟ ಗ್ರಾಮದ ಹೋಂಸ್ಟೇನಲ್ಲಿ ವಿದೇಶಿ ಮಹಿಳೆ ಮೇಲೆ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯ ಪ್ರಕರಣ ಹೋಂಸ್ಟೇಗಳಿಗೆ ಎಚ್ಚರಿಕೆಯ ಗಂಟೆಯಾಗಿದ್ದು, ಪ್ರಕರಣದ ಬಗ್ಗೆ ಕೂಲಂಕಷ ತನಿಖೆ ನಡೆಸಬೇಕು. ಸಂತ್ರಸ್ತೆಯನ್ನು ಕರೆತಂದ ಕಾರಿನ ಚಾಲಕ ಸೇರಿ ಎಲ್ಲರನ್ನೂ ವಿಚಾರಣೆಗೆ ಒಳಪಡಿಸಿ, ಸಮಗ್ರ ತನಿಖೆ ನಡೆಸಬೇಕು’ ಎಂದು ಕೊಡಗು ಜಿಲ್ಲಾ ಹೋಂಸ್ಟೇ ಅಸೋಸಿಯೇಷನ್ ಒತ್ತಾಯಿಸಿದೆ.

‘ಕುಟ್ಟ ಗ್ರಾಮದ ಹೋಂಸ್ಟೇ ಕೂಡ ಸಂಘದ ಸದಸ್ಯತ್ವ ಪಡೆದಿದ್ದು, ನಿಯಮಾವಳಿಗಳ ಪ್ರಕಾರವೇ ನಡೆಯುತ್ತಿತ್ತು. ಮಾಲೀಕರ ವಿರುದ್ಧ ದೂರು ದಾಖಲಾದ ಕೂಡಲೇ ಪರವಾನಗಿ ರದ್ದು ಮಾಡಬಾರದಿತ್ತು. ಅಮಾನತ್ತಿನಲ್ಲಿ ಇಟ್ಟಿದ್ದರೆ ಸಾಕಿತ್ತು’ ಎಂದು ಅಸೋಸಿಯೇಷನ್ ಅಧ್ಯಕ್ಷೆ ಮೋಂತಿ ಗಣೇಶ್ ಇಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

‘ಸರ್ಕಾರ ಹೋಂಸ್ಟೇಗಳ ಕುರಿತು ನೀತಿ ನಿಯಮ ರೂಪಿಸಲು ಇದು ಸಕಾಲ. ಕೂಡಲೇ ಅನಧಿಕೃತ ಹೋಂಸ್ಟೇಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು’ ಎಂದು ಮನವಿ ಮಾಡಿದರು.

100 ಹಾಸಿಗೆಗಳ ಕೇಂದ್ರ ಸ್ಥಾಪನೆಗೆ ಜಿಬಿಎ ಜತೆಗೆ ಜಯದೇವ ಹೃದ್ರೋಗ ಸಂಸ್ಥೆ ಒಪ್ಪಂದ

ಗೋವಿಂದರಾಜನಗರದಲ್ಲಿ ಜಯದೇವ ಘಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಿಂದರಾಜನಗರದಲ್ಲಿ 100 ಹಾಸಿಗೆಗಳ ಜಯದೇವ ಘಟಕವನ್ನು ಸ್ಥಾಪಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಜತೆಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಒಪ್ಪಂದ ಮಾಡಿಕೊಂಡಿದೆ.

ನಗರದಲ್ಲಿ ಶುಕ್ರವಾರ ಈ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ ಅವರ ಸಮ್ಮುಖದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಬಿ. ದಿನೇಶ್ ಮತ್ತು ಜಿಬಿಎ ಮುಖ್ಯ ಆಯುಕ್ತ ಎನ್. ಮಹೇಶ್ವರ ರಾವ್ ಅವರು ಒಪ್ಪಂದಕ್ಕೆ ಸಹಿ ಹಾಕಿದರು.

ಗೋವಿಂದರಾಜನಗರ ಶಾಸಕ ಪ್ರಿಯಕೃಷ್ಣ, ವೈದ್ಯಕೀಯ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ಪಶ್ಚಿಮ ಮಹಾನಗರ ಪಾಲಿಕೆ ಆಯುಕ್ತ ಕೆ.ವಿ. ರಾಜೇಂದ್ರ ಉಪಸ್ಥಿತರಿದ್ದರು.



ಜಯದೇವ ಘಟಕ ಸ್ಥಾಪನೆಯ ಒಪ್ಪಂದದ ಪ್ರತಿಯನ್ನು ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್, ಕೆ.ವಿ. ರಾಜೇಂದ್ರ, ಮಹೇಶ್ವರ ರಾವ್, ಶರಣಪ್ರಕಾಶ್ ಪಾಟೀಲ, ಪ್ರಿಯಕೃಷ್ಣ, ಮೊಹಮ್ಮದ್ ಮೊಹ್ಸಿನ್, ಡಾ.ಬಿ. ದಿನೇಶ್ ಪ್ರದರ್ಶಿಸಿದರು

ಈ ಒಪ್ಪಂದದ ಅನುಸಾರ ಜಿಬಿಎ ವ್ಯಾಪ್ತಿಯಲ್ಲಿರುವ ಮಲ್ಟಿಸ್ಪೆಷಾಲಿಟಿ ಕಟ್ಟಡದಲ್ಲಿ ಜಯದೇವ ಘಟಕ ಶೀಘ್ರದಲ್ಲಿಯೇ ಪ್ರಾರಂಭವಾಗಲಿದೆ.

‘ಬೆಂಗಳೂರಿನ ಪಶ್ಚಿಮ ಭಾಗದ ಜನರಿಗೂ ಹೃದಯ ಆರೈಕೆ ಸೇವೆಯನ್ನು ಒದಗಿಸಲು ಇದು ಉತ್ತಮ ಹೆಜ್ಜೆಯಾಗಿದೆ’ ಎಂದು ಶರಣಪ್ರಕಾಶ್ ಪಾಟೀಲ ಹೇಳಿದರು.

ಶಾಸಕ ಪ್ರಿಯಕೃಷ್ಣ, ‘100 ಹಾಸಿಗೆಗಳ ಘಟಕ ಸ್ಥಾಪಿಸಲು ರಾಜ್ಯ ಸರ್ಕಾರ ₹15 ಕೋಟಿ ಮೀಸಲಿಡಲಿದೆ. ಪಶ್ಚಿಮ ಮಹಾನಗರ ಪಾಲಿಕೆ ಮೂಲಕ ಹಣಕಾಸು ಒದಗಿಸಲು, ಸಿಎಸ್‌ಆರ್ ನಿಧಿಯಡಿ ಕ್ಯಾಥ್ ಲ್ಯಾಬ್ ಸೌಲಭ್ಯ ಸ್ಥಾಪಿಸಲು ನಾವು ಬದ್ಧರಾಗಿದ್ದೇವೆ’ ಎಂದು ಹೇಳಿದರು.

ಬಿಎಂಸಿಆರ್‌ಐ ಹೊಸ ಕ್ಯಾಂಪಸ್ ಅನ್ನು ಬೆಂಗಳೂರಿನ ಪಶ್ಚಿಮದಲ್ಲಿ ಸ್ಥಾಪಿಸಲು ಕನಿಷ್ಠ ಐದು ಎಕರೆ ಸರ್ಕಾರಿ ಭೂಮಿಯನ್ನು ಗುರುತಿಸುವಂತೆ ಪಶ್ಚಿಮ ಮಹಾನಗರ ಪಾಲಿಕೆ ಆಯುಕ್ತರಿಗೆ ಸಚಿವರು ಸೂಚನೆ ನೀಡಿದರು.

> **ಬೆಂಗಳೂರಿನ ಮಧ್ಯ, ಉತ್ತರ ಮತ್ತು ಪೂರ್ವ ಭಾಗದಲ್ಲಿ ಜಯದೇವ ಘಟಕಗಳನ್ನು ಸ್ಥಾಪಿಸುವ ಯೋಜನೆ ಇದೆ. ಉತ್ತರ ಬೆಂಗಳೂರಿನ ಘಟಕಕ್ಕೆ ಸ್ಥಳ ಗುರುತಿಸಲಾಗಿದೆ**
> **ಡಾ.ಬಿ.ದಿನೇಶ್,** ನಿರ್ದೇಶಕ, ಜಯದೇವ ಹೃದ್ರೋಗ ಸಂಸ್ಥೆ

prajavani.net prajavani | ಶನಿವಾರ, ಏಪ್ರಿಲ್ 25, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 114 | ಪುಟ 26 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಸಾಯಿ ಶತಕ ಸಂಭ್ರಮ
ಬೆಂಗಳೂರಿನಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡದ ಸಾಯಿ ಸುದರ್ಶನ್ (100; 58ಎಸೆತ) ಆರ್‌ಸಿಬಿ ಎದುರು ಶತಕ ಗಳಿಸಿದರು

ಸೆನ್ಸೆಕ್ಸ್ 76,664 | ನಿಫ್ಟಿ 23,897 | $/₹ 94.16

ಬಲಗೈ–ಎಡಗೈ: ತಲಾ ಶೇ 5.25

ಒಳಮೀಸಲು: ಸ್ಪೃಶ್ಯ ಅಲೆಮಾರಿಗಳಿಗೆ ಶೇ 4.5

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಾರು ನಾಲ್ಕು ದಶಕಗಳಿಂದ ಕಗ್ಗಂಟಾಗಿಯೇ ಉಳಿದಿದ್ದ ಮತ್ತು ಪ್ರಬಲ ಹೋರಾಟಗಳಿಗೆ ದಾರಿ ಮಾಡಿಕೊಟ್ಟಿದ್ದ ಪರಿಶಿಷ್ಟ ಜಾತಿಯಲ್ಲಿನ ಒಳಮೀಸಲಾತಿಯ ಗೊಂದಲಕ್ಕೆ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಒಂದು ಹಂತದ ತೆರೆ ಎಳೆದಿದೆ.

ಪರಿಶಿಷ್ಟ ಜಾತಿಯಲ್ಲಿನ ಎಡಗೈ- ಬಲಗೈ ಜಾತಿಯವರು ಮತ್ತು ಅಲೆಮಾರಿ ಸಮುದಾಯವನ್ನು ಸಮಾಧಾನಪಡಿಸುವ ಮಹತ್ವದ ತೀರ್ಮಾನವನ್ನು ಶುಕ್ರವಾರ ನಡೆದ ವಿಶೇಷ ಸಚಿವ ಸಂಪುಟ ಸಭೆ ತೆಗೆದುಕೊಂಡಿದೆ.

ಪರಿಶಿಷ್ಟ ಜಾತಿಗೆ ಲಭ್ಯ ಇರುವ ಶೇ 15ರಷ್ಟು ಮೀಸಲಾತಿಯಲ್ಲಿ ಈ ಹಂಚಿಕೆ ಮಾಡಲಾಗಿದೆ. ಈ ಹಿಂದೆ ಪರಿಶಿಷ್ಟ ಜಾತಿಗಿದ್ದ ಶೇ 15ರಷ್ಟು ಮೀಸಲಾತಿ ಪ್ರಮಾಣವನ್ನು ಶೇ 17ಕ್ಕೆ ಹೆಚ್ಚಿಸಿ ನಿರ್ಧಾರ ತೆಗೆದುಕೊಂಡಿದ್ದ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ, ಒಳಮೀಸಲಾತಿ ಹಂಚಿಕೆ ಮಾಡಿತ್ತು. ಇದರಿಂದಾಗಿ ಒಟ್ಟು ಮೀಸಲಾತಿ ಪ್ರಮಾಣ ಶೇ 56ಕ್ಕೆ ಏರಿಕೆಯಾಗಿತ್ತು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಶೇ 17ರಷ್ಟು ಮೀಸಲಾತಿಯಲ್ಲಿ ಬಲಗೈ ಹಾಗೂ ಎಡಗೈಗೆ ತಲಾ ಶೇ 6 ಹಾಗೂ ಸ್ಪೃಶ್ಯ ಜಾತಿಗಳಿಗೆ ಶೇ 5ರಷ್ಟು ಹಂಚಿಕೆ ಮಾಡಲಾಗಿತ್ತು. 4B



ವಿಶೇಷ ಸಂಪುಟ ಸಭೆಯಲ್ಲಿ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಬಗ್ಗೆ ಮಹತ್ವದ ತೀರ್ಮಾನ ಕೈಗೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಚ್‌.ಆಂಜನೇಯ ಸಿಹಿ ನೀಡಿದರು

ಅಲೆಮಾರಿಗಳಿಗೆ 'ಸಿ' ಶ್ರೇಣಿಯ ಹುದ್ದೆಗಳಲ್ಲಿ ಶೇ 20 ಮೀಸಲು

'ಸಿ' ಶ್ರೇಣಿಯ ಹುದ್ದೆಗಳಲ್ಲಿ ಶೇ 20ರಷ್ಟು ಹುದ್ದೆಗಳನ್ನು 'ಸಿ' ವರ್ಗದ ಪಟ್ಟಿಯಲ್ಲಿರುವ 59 ಅಲೆಮಾರಿ ಜಾತಿಗಳಿಗೆ ಮೀಸಲಾಗಿ ಇಡಲಾಗುವುದು. ಕಾಯ್ದೆಯಲ್ಲೂ ಇದನ್ನು ಸೇರಿಸಲಾಗಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಈ ಒಳಮೀಸಲಾತಿ ಕರ್ನಾಟಕದ ಮಾಡೆಲ್. ಇತರ ಎಲ್ಲ ರಾಜ್ಯಗಳೂ ಅನುಸರಿಸುವಂತೆ ರೂಪಿಸಿದ್ದೇವೆ. ಕಾನೂನಾತ್ಮಕವಾಗಿ, ರಾಜಕೀಯವಾಗಿ ಮತ್ತು ಆಡಳಿತಾತ್ಮಕವಾಗಿ ಸರಿಯಾದ ತೀರ್ಮಾನ
ಜಿ.ಪರಮೇಶ್ವರ, ಗೃಹ ಸಚಿವ

56,432 ಹುದ್ದೆ ಭರ್ತಿಗೆ ಇಂದು ಅಧಿಸೂಚನೆ

ಒಳ ಮೀಸಲಾತಿ ವಿಚಾರ ತೀರ್ಮಾನ ಆಗಿರುವುದರಿಂದ ವಿವಿಧ ಇಲಾಖೆಗಳ 56,432 ಹುದ್ದೆಗಳ ಭರ್ತಿಗೆ ಶನಿವಾರವೇ ಅಧಿಸೂಚನೆ ಹೊರಡಿಸಲಾಗುವುದು. ಉಳಿದ ಹುದ್ದೆಗಳನ್ನು ಹಂತ–ಹಂತವಾಗಿ ಪ್ರತಿ ವರ್ಷ ಭರ್ತಿ ಮಾಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

ಈ ಹಿಂದೆ 6:6:5ರ ಅನುಪಾತದಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿತ್ತು. ಈ ಅಧಿಸೂಚನೆ ವಾಪಸ್ ಪಡೆಯಲಾಗುವುದು. 5.25, 5.25, 4.5ಕ್ಕೆ ಅನುಗುಣವಾಗಿ ಹೊಸ ಅಧಿಸೂಚನೆ ಹೊರಡಿಸಲಾಗುವುದು. ಎಲ್ಲ 56,432 ಹುದ್ದೆಗಳ ಭರ್ತಿಗೆ ತುರ್ತು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

ರೋಸ್ಟರ್ ಬಿಂದುವಿಗೆ ಪರಿಹಾರ

'ರೋಸ್ಟರ್ ಬಿಂದು ಗೊಂದಲವನ್ನು ಸರಿಪಡಿಸಲು ಎಲ್ಲರಿಗೂ ಒಪ್ಪಿತವಾಗುವ ತೀರ್ಮಾನ ತೆಗೆದುಕೊಂಡಿದ್ದೇವೆ. ಆ ಪ್ರಕಾರ, 1 ಅಥವಾ 2 ಹುದ್ದೆಗಳು ಇದ್ದ ಸಂದರ್ಭದಲ್ಲಿ ಅವುಗಳನ್ನು 'ಎಸ್‌ಸಿ ಜನರಲ್' ಎಂದು ಮಾಡಲಾಗುವುದು. ಎ, ಬಿ, ಸಿ ವರ್ಗದವರು ಆ ಹುದ್ದೆಗೆ ಸ್ಪರ್ಧಿಸಬಹುದು' ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ತಿಳಿಸಿದರು.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್: ಪರವಾನಗಿ ರದ್ದು

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ನೀಡಲಾದ ಬ್ಯಾಂಕಿಂಗ್ ಪರವಾನಗಿಯನ್ನು ರದ್ದುಗೊಳಿಸಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ. ವಿವರ 10

ಚಿನಕುರುಳಿ ಪ್ರಕಾಶ್ ಶೆಟ್ಟಿ



ಕೈಕೊಟ್ಟ ಪ್ರಿಯಕರ: ₹75 ಸಾವಿರ ಜೀವನಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನ ಶಾಲಾ ಸಹಪಾಠಿಯನ್ನು ಪ್ರೀತಿಸಿ ಆಕೆಯ ಮಗುವಿನ ತಂದೆಯಾಗಿರುವ ಪುತ್ತೂರಿನ ಎಂಜಿನಿಯರಿಂಗ್ ವಿದ್ಯಾರ್ಥಿ ಶ್ರೀಕೃಷ್ಣ ಜೆ.ರಾವ್, ಆಕೆಗೆ ತಿಂಗಳಿಗೆ ₹75 ಸಾವಿರ ಜೀವನಾಂಶ ನೀಡಬೇಕು ಎಂದು ಹೈಕೋರ್ಟ್ ಆದೇಶ ನೀಡಿದೆ.

'ಬಿಜೆಪಿ ಮುಖಂಡ ಪಿ.ಜಿ.ಜಗನ್ನಿವಾಸ ರಾವ್ ಪುತ್ರ ಆರೋಪಿ ಶ್ರೀಕೃಷ್ಣ ಮಗುವಿನ ತಂದೆ ಎಂಬುದು ಈಗಾಗಲೇ ವೈದ್ಯಕೀಯವಾಗಿ ದೃಢಪಟ್ಟಿದೆ' ಎಂದೂ ಹೇಳಿದೆ. 10

ದೇಶದಲ್ಲೇ ಮೊದಲ ಆದೇಶ

'ದೇಶದ ನ್ಯಾಯಾಂಗ ಇತಿಹಾಸದಲ್ಲೇ ಅತ್ಯಪರೂಪದ ಆದೇಶಕ್ಕೆ ಸಾಕ್ಷಿಯಾಗಿರುವ ಈ ಪ್ರಕರಣ ಮದುವೆಯಾಗುವುದಾಗಿ ನಂಬಿಸಿ ಲೈಂಗಿಕ ಸಂಪರ್ಕ ಸಾಧಿಸಿ ನಂತರ ತರುಣಿ ಅಥವಾ ಮಹಿಳೆಯರನ್ನು ನಡುನೀರಿನಲ್ಲಿ ಕೈಬಿಡುವ ಮೋಸಗಾರರಿಗೆ ತಕ್ಕ ಎಚ್ಚರಿಕೆಯಾಗಿದೆ' ಎಂದು ತಜ್ಞರು ಈ ಪ್ರಕರಣವನ್ನು ವಿಶ್ಲೇಷಿಸಿದ್ದಾರೆ. 10

ಚಡ್ಡಾ ಸೇರಿ ಎಎಪಿಯ 7 ರಾಜ್ಯಸಭಾ ಸದಸ್ಯರು ಬಿಜೆಪಿಗೆ

ನವದೆಹಲಿ (ಪಿಟಿಐ): ರಾಘವ್ ಚಡ್ಡಾ, ಸಂದೀಪ್ ಪಾಠಕ್, ಅಶೋಕ್ ಮಿತ್ತಲ್ ಸೇರಿ ಆಮ್ ಆದ್ಮಿ ಪಕ್ಷದ (ಎಎಪಿ) 7 ಮಂದಿ ರಾಜ್ಯಸಭಾ ಸದಸ್ಯರು ಪಕ್ಷ ತೊರೆದಿದ್ದು, ಬಿಜೆಪಿ ಸೇರುವುದಾಗಿ ಘೋಷಿಸಿದ್ದಾರೆ.

'ತಾವಲ್ಲದೆ ಎಎಪಿಯ ಇನ್ನೂ ಆರು ಮಂದಿ ರಾಜ್ಯಸಭಾ ಸದಸ್ಯರು ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ. ಈ ನಿರ್ಧಾರಕ್ಕೆ ಎಲ್ಲರೂ ಸಹಿ ಹಾಕಿ, ಅದನ್ನು ರಾಜ್ಯಸಭೆ ಸಭಾಪತಿಗೆ ಕಳುಹಿಸಿದ್ದೇವೆ' ಎಂದು ಚಡ್ಡಾ ಶುಕ್ರವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದೆಹಲಿ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಸ್ವಾತಿ ಮಾಲಿವಾಲ್, ಮಾಜಿ ಕ್ರಿಕೆಟಿಗ ಹರಭಜನ್ ಸಿಂಗ್, ರಾಜಿಂದರ್ ಗುಪ್ತಾ ಮತ್ತು ವಿಕ್ರಂ ಸಾಹ್ನಿ ಕೂಡ ಎಎಪಿ ತೊರೆದಿದ್ದಾರೆ. 6

ಎಎಪಿ ತೊರೆದು ಬಿಜೆಪಿ ಸೇರಿರುವ ಸದಸ್ಯರು 'ದೇಶದ್ರೋಹಿ'ಗಳು. ಬಿಜೆಪಿಯು ಎಎಪಿಯನ್ನು ಒಡೆಯಲು ಪ್ರಯತ್ನಿಸುತ್ತಿತ್ತು, ಈಗ ಪಂಜಾಬ್‌ನ ಜನರಿಗೆ ದ್ರೋಹ ಎಸಗಿದೆ
ಭಗವಂತ ಸಿಂಗ್ ಮಾನ್, ಪಂಜಾಬ್ ಮುಖ್ಯಮಂತ್ರಿ


Bolas®
ಇಲ್ಲಿದೆ ಮ್ಯಾಚ್ ವಿನ್ನಿಂಗ್ ಆಫರ್!
BUY 2 GET 1 FREE
*MIX & MATCH ACROSS THE RANGE
25-26th ಏಪ್ರಿಲ್ ಮಾತ್ರ
ನಿಮ್ಮ ಹತ್ತಿರದ ಔಟ್ಲೆಟ್ ಗೆ ಈಗಲೇ ಭೇಟಿ ನೀಡಿ
Bolas Daily Trail Mix
Bolas Peri Peri Trail Mix
Bolas Power-Snack Packs
Bolas Smoked Almonds
Bolas Wood Fired Cashews
Bolas Almonds Dry Roasted & Salted
Bolas Cashews Dry Roasted & Salted
Bolas Pistachio Dry Roasted & Salted
*ಷರತ್ತುಗಳು ಅನ್ವಯಿಸುತ್ತವೆ :
ಪ್ರತಿ ಗ್ರಾಹಕರು ಒಮ್ಮೆ ಮಾತ್ರ ಅಫರ್ ಪಡೆಯಬಹುದು. ವಾಕ್ ಇನ್ ಗ್ರಾಹಕರಿಗೆ ಮಾತ್ರ ಅವಕಾಶ. | ಸ್ಟಾಕ್ ಗಳು ಖಾಲಿಯಾಗುವವರೆಗೆ ಮಾತ್ರ ಅಫರ್ ಜಾರಿಯಲ್ಲಿರುತ್ತದೆ. | ಮೊದಲ 200 ಗ್ರಾಹಕರಿಗೆ ಮಾತ್ರ ಆಫರ್ ಲಭ್ಯವಿದೆ. | *ದುರುಪಯೋಗದ ಸಂದರ್ಭದಲ್ಲಿ ಕೊಡುಗೆ ನಿರಾಕರಿಸುವ ಹಕ್ಕನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ. |
ಈ ಆಫರ್ ಕೆಳಗಿನ ಪ್ರಾಡಕ್ಟ್‌ಗಳಿಗೆ ಮಾತ್ರ ಅನ್ವಯಿಸುತ್ತದೆ: ಬೋಳಾಸ್ ಪೇರಿ ಪೇರಿ ಟ್ರೈಲ್ ಮಿಕ್ಸ್ 240g – MRP ₹392, ಬೋಳಾಸ್ ಡೈಲಿ ಟ್ರೈಲ್ ಮಿಕ್ಸ್ 200g – MRP ₹420, ಬೋಳಾಸ್ ಸ್ಮೋಕ್ಡ್ ಆಲ್ಮಂಡ್ಸ್ 200g – MRP ₹445, ಬೋಳಾಸ್ ಡ್ರೈ ರೋಸ್ಟೆಡ್ & ಸಾಲ್ಟೆಡ್ ಆಲ್ಮಂಡ್ಸ್ 200g – MRP ₹425,
ಬೋಳಾಸ್ ವುಡ್ ಫೈರ್ಡ್ ಕಾಜೂಸ್ 200g –MRP ₹425, ಬೋಳಾಸ್ ಡ್ರೈ ರೋಸ್ಟೆಡ್ & ಸಾಲ್ಟೆಡ್ ಕ್ಯಾಶ್ಯೂ 200g – MRP ₹425 ಮತ್ತು ಬೋಳಾಸ್ ರೋಸ್ಟೆಡ್ & ಸಾಲ್ಟೆಡ್ ಪಿಸ್ತಾ 200g – MRP ₹475.
DRY FRUITS | NUTS | SWEETS & MORE
FACTORY PRICE ADVANTAGE
ಬೋಳಾಸ್ Bolas
ಚೆನ್ನಪಟ್ಟಣ-9483548777 | ಬೆಂಗಳೂರು ಮೀನಾಕ್ಷಿಮಾಲ್-9606019779 | ಕನಕಪುರ-9019963559 | ತುಮಕೂರು-9364009426 | ಬೆಂಗಳೂರು ಟಿಸಿ ಪಾಳ್ಯ-9364016907 | ಸಂಪಿಗೆ ರೋಡ್ ಮಲ್ಲೇಶ್ವರಂ-9364016905 | ವಿದ್ಯಾರಣ್ಯಪುರ-9364016902 | ವಿಜಯನಗರ ಕ್ವಾರ್ಡ್ ರೋಡ್-9364016906 | ನೆಲಮಂಗಲ-9364016903 | ಬಸವೇಶ್ವರ ನಗರ-9364016904 | ಗಾಂಧಿ ಬಝಾರ್-9364016908 | ಬಾಣಸವಾಡಿ-9364016909 | ಉತ್ತರಹಳ್ಳಿ-9364016911 | ಬನಶಂಕರಿ-9364016910 | ಹರಳೂರು -6364863287 | ಎಚ್.ಎಸ್.ಆರ್-6364863283 | ಜಯನಗರ-6364863281 | ಆರ್ ಟಿ ನಗರ-6364863284 | ಆಫ್ ಸರ್ಜಾಪುರ ರೋಡ್-6364863286 | ನ್ಯೂ ತಿಪ್ಪಸಂದ್ರ ಮೈನ್ ರೋಡ್-6364863285 | ವಿಲ್ಸನ್ ಗಾರ್ಡನ್-6364863282 | ಮತ್ತಿಕೆರೆ -9364016901 | ಕೆಂಗೇರಿ -9364016916 | ಬಿಟಿಎಂ ಲೇಔಟ್-9364016917 | ನಾಗರಭಾವಿ-9972058196 | ತುಮಕೂರು (ಬಿ. ಹೆಚ್. ರೋಡ್)-9035079191 | ಚಿಕ್ಕಬಳ್ಳಾಪುರ-9035079192 | ಬಿಇಮ್ ಲ್(ಅರ್. ಅರ್.ನಗರ)-6366923566 | ಗಿರಿನಗರ-9035079198 | ಕೆಂಪಾಪುರ-6366923570 | ರಾಜ್‌ಕುಮಾರ್ ರೋಡ್-6366923571 ಹಾಸನ-9019963564 | ಕೋಲಾರ-6366923585
/bolas.outlet
www.bolas.co.in

‘ಡಾ.ರಾಜ್‌ಗೆ ಭಾರತರತ್ನ ನೀಡಿ’

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಗೋಪಾಲಯ್ಯ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಸಂಸ್ಕೃತಿ, ಆಚಾರ- ವಿಚಾರ ಹೇಗಿರಬೇಕು ಎಂದು ಯುವ ಜನರಿಗೆ ಸಂದೇಶ ನೀಡುವ ಚಲನಚಿತ್ರಗಳನ್ನು ಕೊಟ್ಟ ಡಾ. ರಾಜ್ ಕುಮಾರ್ ಅವರಿಗೆ ಮರಣೋತ್ತರವಾಗಿ ಭಾರತ ರತ್ನ ನೀಡಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಕೆ. ಗೋಪಾಲಯ್ಯ ಆಗ್ರಹಿಸಿದರು.

ಶ್ರೀ ಕಂಠೀರವ ಸ್ಟುಡಿಯೊದಲ್ಲಿರುವ ಡಾ. ರಾಜ್ ಕುಮಾರ್ ಅವರ ಪುಣ್ಯ ಭೂಮಿ ಬಳಿ ಶುಕ್ರವಾರ ಆಯೋಜಿಸಿದ್ದ ಡಾ. ರಾಜ್‌ಕುಮಾರ್ ಅವರ 97ನೇ ಜನ್ಮ ದಿನಾಚರಣೆಯಲ್ಲಿ ಈ ಅಭಿಲಾಷೆ ವ್ಯಕ್ತಪಡಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ರಾಜ್ ಕುಮಾರ್ ಪ್ರತಿಷ್ಠಾನ ಜಂಟಿಯಾಗಿ ಈ ಕಾರ್ಯಕ್ರಮ ಆಯೋಜಿಸಿದ್ದವು.

ರಾಜ್‌ಕುಮಾರ್ ಅವರ ಚಲನ ಚಿತ್ರಗಳು ಕೇವಲ ಮನರಂಜನೆಗೆ ಮಾತ್ರ ಸೀಮಿತವಾಗಿರಲಿಲ್ಲ. ಸಮಾಜಕ್ಕೆ ಉತ್ತಮ ಸಂದೇಶ, ಮೌಲ್ಯಗಳನ್ನು ನೀಡುವ ಚಿತ್ರಗಳನ್ನು ಮಾತ್ರ ಮಾಡಿದ್ದಾರೆ. ಕೇವಲ ನಟರಾಗಿ ಉಳಿಯದೆ, ಜನರ ಮನದಲ್ಲಿ ಸಂತರಾಗಿದ್ದಾರೆ. ಸಮಾಧಿಗಳಿಗೆ ವರ್ಷಕ್ಕೆ ಒಂದು ಸಾರಿ ಪೂಜೆ ಮಾಡಲಾಗುತ್ತದೆ. ಆದರೆ ಜನರು ರಾಜ್ ಕುಮಾರ್ ಅವರಲ್ಲಿನ ಅಧ್ಯಾತ್ಮ ಶಕ್ತಿಯನ್ನು ಗುರುತಿಸಿರುವುದರಿಂದಾಗಿ ಅವರ ಸಮಾಧಿಗೆ ಪ್ರತಿ ದಿನ ಸಾವಿರಾರು ಜನರು ಭೇಟಿ ನೀಡಿ ಪೂಜೆ ಸಲ್ಲಿಸುತ್ತಿದ್ದಾರೆ ಎಂದು ಶೋಭಾ ಕರಂದ್ಲಾಜೆ ತಿಳಿಸಿದರು.

> **ಭಾಷೆ, ಕಾವೇರಿ ವಿಷಯವಾಗಿ ರಾಜ್ ಕುಮಾರ್ ಅವರು ಹೋರಾಟಕ್ಕೆ ನಿಂತರೆ ಇಡೀ ಕರ್ನಾಟಕ ಅವರ ಜೊತೆ ನಿಲ್ಲುತ್ತಿತ್ತು. ಇಂದು ಚಲನಚಿತ್ರರಂಗ ನಾಯಕನಿಲ್ಲದೆ ಅನಾಥವಾಗಿದೆ**
> **ಸಾಧುಕೋಕಿಲ**
> ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ

ರಾಜಕಾರಣಕ್ಕೆ ಬರುವಂತೆ ಎಷ್ಟೇ ಒತ್ತಡ ಬಂದರೂ, ಅತ್ತ ಮುಖ ಮಾಡಿದ ಅವರು ಕಲಾವಿದರಾಗಿಯೇ ಮುಂದುವರಿದಿದ್ದರು. ಮುಂದಿನ ಮೂರು ವರ್ಷಗಳಾದರೆ ಅವರ ನೂರನೇ ಜನ್ಮದಿನವನ್ನು ಆಚರಿಸಬೇಕಾಗುತ್ತದೆ. ರಜಾದಿನಗಳಲ್ಲಿ 5 ರಿಂದ 10 ಸಾವಿರ ಜನರು ಸಮಾಧಿಗೆ ಭೇಟಿ ನೀಡುತ್ತಾರೆ. ಈ ನಿಟ್ಟಿನಲ್ಲಿ ಅವರ ಪುಣ್ಯಭೂಮಿ ಸ್ಥಳವನ್ನು ಸರ್ಕಾರ ಮತ್ತಷ್ಟು ಅಭಿವೃದ್ಧಿ ಮಾಡಬೇಕು ಎಂದು ಶಾಸಕ ಕೆ. ಗೋಪಾಲಯ್ಯ ಒತ್ತಾಯಿಸಿದರು.

‘ಡಾ.ರಾಜಕುಮಾರ್ ಸಮಗ್ರ ಚರಿತ್ರೆ’ ಕೃತಿಕಾರ ದೊಡ್ಡಹುಲ್ಲೂರು ರುಕ್ಕೋಜಿ ಅವರು ‘ಡಾ.ರಾಜ್ ಕುಮಾರ್ ಬದುಕು–ಸಾಧನೆ’ ಕುರಿತು ಉಪನ್ಯಾಸ ನೀಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಬಿ.ಬಿ. ಕಾವೇರಿ, ಆಯುಕ್ತ ಹೇಮಂತ್ ಎಂ. ನಿಂಬಾಳಕರ, ಶ್ರೀ ಕಂಠೀರವ ಸ್ಟುಡಿಯೊ ಅಧ್ಯಕ್ಷ ಮಹಬೂಬ್ ಪಾಷ, ಕಲಾವಿದ ರಾಘವೇಂದ್ರ ರಾಜ್‌ಕುಮಾರ್, ಸಾಹಿತಿ ಬರಗೂರು ರಾಮಚಂದ್ರಪ್ಪ, ರಾಜ್‌ಕುಮಾರ್ ಅವರ ಕುಟುಂಬದವರು, ಸಾಹಿತಿಗಳು, ಕಲಾವಿದರು ಉಪಸ್ಥಿತರಿದ್ದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.


ಬಿ.ಬಿ. ಕಾವೇರಿ, ಹೇಮಂತ್ ನಿಂಬಾಳಕರ ಅವರು ರಾಜ್‌ಕುಮಾರ್ ಸಮಾಧಿಗೆ ಪುಷ್ಪನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ಗೆ ₹68.86 ಕೋಟಿ ಲಾಭ

ಬೆಂಗಳೂರು: 2025–26ರ ಆರ್ಥಿಕ ವರ್ಷದಲ್ಲಿ ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ₹68.86 ಕೋಟಿ ಲೆಕ್ಕಪರಿಶೋಧನೆ ಪೂರ್ವದ ಲಾಭ ಗಳಿಸಿದ್ದು, ನಿವ್ವಳ ಲಾಭ ₹29.86 ಕೋಟಿಯಾಗಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಆವಲಹಳ್ಳಿ ಚಂದ್ರಪ್ಪ ಆರ್. ತಿಳಿಸಿದ್ದಾರೆ.

ಬ್ಯಾಂಕಿನ ಷೇರು ಬಂಡವಾಳ ₹96.06 ಕೋಟಿ, ಠೇವಣಿ ಸಂಗ್ರಹಣೆ ₹2,324.44 ಕೋಟಿ ಹಾಗೂ ಇತರೆ ಸೇರಿದಂತೆ ಬ್ಯಾಂಕಿನ ಒಟ್ಟು ವ್ಯವಹಾರ ₹3,849.88 ಕೋಟಿಗೂ ಮೀರಿದೆ ಎಂದು ಬ್ಯಾಂಕ್ ಪ್ರಕಟಣೆಯಲ್ಲಿ ತಿಳಿಸಿದೆ.

ಬ್ಯಾಂಕು ಷೇರು ಸಂಗ್ರಹದಲ್ಲಿ, ಸ್ವಂತ ನಿಧಿ ಕ್ರೋಡೀಕರಣ, ಠೇವಣಿ ಸಂಗ್ರಹಣೆ, ಸಾಲ ನೀಡಿಕೆ ಮತ್ತು ಲಾಭ ಗಳಿಕೆಯಲ್ಲಿ ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕ್‌ಗಳ ಪೈಕಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಬ್ಯಾಂಕಿನ ವಸೂಲಾಗದ ಸಾಲದ ಪ್ರಮಾಣ ಶೂನ್ಯ ಇದೆ ಎಂದು ಬ್ಯಾಂಕ್‌ನ ಉಪಾಧ್ಯಕ್ಷ ದೇವರಾಜ್ ಅವರು ಹೇಳಿದ್ದಾರೆ.

ಘನತ್ಯಾಜ್ಯ ಟೆಂಡರ್: ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಕೆ

ಲಂಚ: ಸಾಕ್ಷ್ಯ ಸಂಗ್ರಹಕ್ಕೆ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಘನ ತ್ಯಾಜ್ಯ ಟೆಂಡರ್ ಅಂತಿಮಗೊಳಿಸಲು, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಮಂಡಳಿ (ಬಿಎಸ್‌ಡ-ಬ್ಲ್ಯುಎಂಎಲ್) ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕರೀಗೌಡ ಅವರು ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆಂದು ಆರೋಪಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ಸಂಗ್ರಹಿಸಿಡಲು ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಲಾಗಿದೆ.

‘ಕರೀಗೌಡ ವಿರುದ್ಧ ಎಫ್‌ಐಆರ್ ದಾಖಲಿಸಿ ಎಸ್‌ಐಟಿ ತನಿಖೆಗೆ ನಿರ್ದೇಶಿಸಬೇಕು’ ಎಂದು ಕೋರಿ ‘ಬೆಂಗಳೂರು ನಗರ ಸ್ವಚ್ಛತೆ, ಲಾರಿ ಮಾಲೀಕರ ಮತ್ತು ಗುತ್ತಿಗೆದಾರರ ಸಂಘ’ದ ಪ್ರಧಾನ ಕಾರ್ಯದರ್ಶಿ ಬಾಲ ಸುಬ್ರಮಣಿಯಂ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.


ಕರೀಗೌಡ

ವಿಚಾರಣೆ ವೇಳೆ ಬಾಲ ಸುಬ್ರಮಣಿಯಂ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್ ಅರ್ಜಿದಾರರ ಆರೋಪಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಸಾಕ್ಷ್ಯಗಳನ್ನು ಅಡಕಗೊಳಿಸಲಾದ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಅಂತೆಯೇ, ‘ಕರೀಗೌಡ ಅವರು ಕಾನೂನುಬಾಹಿರವಾಗಿ ಪ್ರತಿಫಲಾಪೇಕ್ಷೆ ವ್ಯಕ್ತಪಡಿಸಿ ಲಂಚಕ್ಕೆ ಬೇಡಿಕೆ ಇಟ್ಟಿರುವ ಸಂಗತಿಗೆ ಸಾಕ್ಷ್ಯವಾಗಬಲ್ಲ ಬಿಎಸ್‌ಡಬ್ಲ್ಯುಎಂಎಲ್ ಕಚೇರಿಯಲ್ಲಿನ ಸಿ.ಸಿ.ಟಿ.ವಿ ಕ್ಯಾಮೆರಾ ವಿಡಿಯೊ ತುಣುಕುಗಳು, ಹಾರ್ಡ್ ಡ್ರೈವ್ಸ್, ಟವರ್ ಡಂಪ್ ಲೊಕೇಷನ್ ಮತ್ತು ಪರಸ್ಪರ ಸಂಭಾಷಿಸಿರುವ ಮೊಬೈಲ್ ಕಾಲ್‌ಗಳ ವಿವರಗಳನ್ನು ಸಂಗ್ರಹಿಸಿ ಇರಿಸಲು ನಿರ್ದೇಶಿಸಬೇಕು’ ಎಂದು ಕೋರಲಾದ ಮಧ್ಯಂತರ ಅರ್ಜಿಯನ್ನೂ ಸಲ್ಲಿಸಿದರು.

ಶಾಲಾ ಶಿಕ್ಷಕರ ಸಂಘ: ಚುನಾವಣೆ ನಡೆಸಲು ಸೂಚನೆ

ಬೆಂಗಳೂರು: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಗೆ ನೀಡಿದ್ದ ತಡೆಯಾಜ್ಞೆ ತೆರವುಗೊಳಿಸಲು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದ್ದು,ಸಹಕಾರ ಸಂಘದ ನಿಬಂಧಕರ ನೇತೃತ್ವದಲ್ಲಿ ಚುನಾವಣೆ ನಡೆಸಲು ಸೂಚಿಸಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅವಧಿ 2025ರ ಡಿಸೆಂಬರ್‌ಗೆ ಮುಕ್ತಾಯವಾಗಿದ್ದು, ಹೈಕೋರ್ಟ್ ಧಾರವಾಡ ಪೀಠದ ನಿರ್ದೇಶನದಂತೆ ಕ್ರಮ ಕೈಗೊಳ್ಳಬೇಕು. ಸಾಕಷ್ಟು ದೂರುಗಳು ಇರುವ ಕಾರಣ ಸವಿಸ್ತಾರವಾಗಿ ಪರಿಶೀಲಿಸಲು ಸಮಯ ಬೇಕಿದೆ. ಹಾಗಾಗಿ, ಹೊಸ ಅರ್ಜಿ ಮೂಲಕ ಜೂನ್‌ನಲ್ಲಿ ವಿಚಾರಣೆ ಕೈಗೆತ್ತಿಕೊಳ್ಳಲಾಗುವುದು ಎಂದು ಕೋರ್ಟ್ ಹೇಳಿದೆ.

ಕ್ಲಾಸಿಫೈಡ್ಸ್

WEEKEND CORNER

ಕ್ಲಾಸಿಫೈಡ್ಸ್

REAL ESTATE BUYING

Resedential/ Commercial

Basavanagudi

WANTED/ AVAILABLE Residential Sites/ Flats-Commercial & PG-Buildings Basavanagudi Hanumanthnagar Chamarajpet Banashankari Jayanagar JP.Nagar-9900399006

Sites

Banashankari

BDA SITES WANTED ARKAVATI ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

BANASHANKARI 6TH STAGE, 11th BLOCK, CLOSE to UTTARAHALLI MAIN ROAD, 40x60 SALE. CALL: MANOJ 9731410616

BDA SITE For Sale Banashankari 6th Stage 7th Block 40x60, E/F Anjanapura 7th Block 30x40 S/F: 9964627255

Nagarabhavi

WANTED BDA SITE 30x40, 40x60, 50x80 Nagarabhavi, RHCS Layout, MPM, Vishveswaraiah Layout, Kempegowda Layout 9008418631

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Nelamangala

BYRASHETTYHALLI AISHWARYA County BMRDA 40X60,East And Banashankari BDA 30X40,Sites For Sale : 9620117773/9845857006

SITE SALE 35x50 west face, Rashi gateway near D-mart, Nelamangala-Tumkur toll. Ph-9880093622

Sanjaynagar

SALE 50X81 Site S/F, 60' Road Dollors Colony Sanjaynagar, Near Vibhav Theatre. Price 30000/-sft. 9845751918

Hennur

SALE/JD HENNUR Cross Commercial Convertion Land 22,000 Sft BBMP E Khata. CALL: 9945227313 9739914365

Vijayanagar

PRIME LOCATION SITE SALE 60x90 WEST FACING WOC ROAD RPC LAYOUT VIJAYANAGAR CONTACT: 9845038343/ 6363250343

Vidyaranyapura

SAMBRAM COLLEGE Near Amba Bhavani Temple Back Side 30x40, 37.5x40 WF BBMP B/E Katha, 40x60 WF Best County 2, DC Conversion A/E Katha: 8296895858

Multiple Locations

RERA Approved PLOTS
Mysore, Hubli, Haveri
Near likely Airport
Nelamangala
Starting @ Rs.1599/sqft
Farm Plots Rs. 599/sqft
For Special Offer and Free Visit Contact
9916 356 000

Industrial & Factory

Tumkur Road

KIADB CONVERTED: Prime Industrial Land for sale. 50,000 sqft in Vasanthanrasapura Industrial area situated in NH4, Tumkur Road. East facing. Rate 2500/- psqft Negotiable. Serious buyers contact:- Arif Khan:- 9845021260.

REAL ESTATE SELLING

Sites

Anjanapura

SITE FOR SALE
45 X 60 sqft
anjanapura
EAST SOUTH corner at JP nagar 9th phase, anjanapura gollahalli Contact 9845018051 / 8296373555

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

FOR SALE BDA East Facing 30'x43.5' in BSK 1st stage Srinagar & DC conversion 40'x70' North facing sites in BSK 6th stage, for price call: 9845380312.

Jalahalli

SALE, 30X40, 25X40. East-West. Abbigere, Shettyhalli. Opposite Vinayaka Layout, Converted, BBMP 'E' Khata. 7000/- sqft negotiable. 9880925237, 8088554050

J P Nagar

JP-NAGAR 2ND & 3rd Phase 30x42, 30X50 34000/- PSft, 45x60 Rs. 36000/- Psft, Contact: 9916375577

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

R T Nagar

RT NAGAR 80ft Road, Commercial 60x90 and 40x60 Site Sale, Broker's Pls Excuse: 9845623970/ 9739400838

Vishweshwariah Layout

"VISVESHWARAIAH LAYOUT 6th Block 40x60 South facing Site sale Good Location Genuine Buyers Contact: 9845500019/ 7019314962"

COMMERCIAL 50X80 BDA Site for sale at Banashankari 6th stage, 1st Block 80 ft road Call:9845145329/ 9844039482

NORTH FACING BDA 1264sft site for sale at 6th block, Visveswaraiah layout Call:9844039482

House

Mathikere

SEMI COMMERCIAL Site with Old House For Sale at Mathikere Price 3.5 Cr Contact: 9008601081

Rajajinagar

'HOUSE FOR SALE' 30x31, East facing, Rajajinagar 2nd Stage 'E' Block. Good location. Contact: 9845527196.

Agricultural Land

Chikkaballapura

AGRICULTURAL LAND-SALE 15 K.M. From CHIKKABALLAPUR. 8 K.M. From HYDERABAD HIGHWAY. Suitable: FARMHOUSE 7019666458.

Flat

Kanakapura Road

40X60 FLAT (Apartment) for SALE 3BHK East Facing, Vajarahalli/ Raghuvanahalli. Price:2.20Cr. Call: 9740148870, 9341050991.

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

Yelahanka

3BHK_CENTURY SARAS. Near California-Resort. Semi-Furnished. EastFacing. First Floor. 1674Sft. Parking+ Amenities. 1.25cr. 9845336624

FOR RENT / SALE
FULLY FURNISHED OFFICE 3rd Floor
ON OLD AIRPORT ROAD
VDB TOUCHDOWN
Next to HAL Museum
7447 Sqft
96 Workstations
3 Meeting Rooms
1 MD Cabin || 5 Cabins
1 Board || 1 Cafeteria
6 Car Parks
NO PHONE CALLS WHATSAPP MESSAGE ONLY TO 98450 31550

FOR SALE
BDA SITE No. 90, Opp. Subramanya Aracade, Jayanagar East End (BTM 1st Stage) North facing 40×60, 60 ft. Road, Adjacent to JALA BHAVAN, Between Bannerghatta Road to Jayanagar East End Road, Approx 100 mtr. to Bannerghatta Main Road.
Genuine Buyers Call:
Muralidhar: 98453 01599

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Industrial And Factory

AVAILABLE INDUSTRIAL Warehouse 160000 sqft Vijipura Hoskote Contact: 9341234288/ 9663224353/ 9845417487.

MORE Classifieds IN SUPPLEMENT

PUBLIC NOTICE

Rangadore Memorial Hospital
1st cross, Shankarapuram, Bangalore- 560 004
Ph:080- 26983465/322
Email: info@rmhospital.in
DISPOSAL OF HOSPITAL MEDICAL RECORDS
Hospital Medical Records of IN-PATIENTS pertaining to the period 01.01.2020 to 31.12.2020 (IP No. 1908109 to 2005490 will be disposed. For retrieval of any specific case record, contact the Hospital's Medical Records Department within **30 days** from the date of this notification. These records will not be available after that.
Note:Not applicable for MLC, Death, Birth & Paediatric Medical Records.

JOB OPPORTUNITIES

General

WE-ARE- HIRING Male and Female, 10th, PUC, Degree, ITI Diploma. Salary: 18000 to 23000, Benifits: ESI, EPF, OT Canteen and room. Location: Devanahalli, Bangalore. Call: 7259837193

PERSONAL

Change of Name

CHANGE OF NAME
I, **ABEL JOHN MATHEW** alias **MATHEW ABEL JOHN** R/at No. 4, 2nd Floor, Bless Thopil, 3rd Cross, Opp. Dhanlaxmi Bakery , Horamavu, Bengaluru-560043 declare that all the above names belong to me only. Henceforth I shall be called & known as **ABEL JOHN MATHEW**, vide affidavit dated: 23.04.2026 before notary M Rajendra, Bengaluru.

CHANGE OF NAME
I, **S.SANDEEP** S/o Saravanan, residing at No.113, Geddalahalli, K.Narayanapura Cross, Bangalore – 560077, have changed my name to **B.S.SANDEEP CHETTY** vide affidavit dated 13-08-2025 sworn before notary Uday Kumar K, Bengaluru. Henceforth I shall be called as **B.S.SANDEEP CHETTY** only.

CHANGE OF NAME
I, **KUMARA KADAM** residing at No.33, 4th Main, 4th Cross, Evergreen Street, Uday Nagar, Bengaluru North-560016, have changed my name to **KUMAR KADAM P** vide affidavit dated 24-04-2026 before notary C.V. Earappa, Bengaluru. Henceforth I shall be called **KUMAR KADAM P** only

‘ಕೃಷಿ ತಂತ್ರಜ್ಞಾನ ರೈತರಿಗೆ ತಲುಪಲಿ’

ಜಾಗತಿಕ ಕೃಷಿ ತಂತ್ರಜ್ಞಾನ ಶೃಂಗಸಭೆ–2026 ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೃಷಿ ತಂತ್ರಜ್ಞಾನಗಳನ್ನು ರೈತರ ಬಳಿಗೆ ಒಯ್ಯಬೇಕು. ಆಗ ಮಾತ್ರವೇ ಅವು ಉಪಯೋಗಕ್ಕೆ ಬರುತ್ತವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ) ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿರುವ ‘ಜಾಗತಿಕ ಕೃಷಿ ತಂತ್ರಜ್ಞಾನ ಶೃಂಗಸಭೆ-2026’ ಅನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕೃಷಿ ಕ್ಷೇತ್ರದಲ್ಲೂ ತಂತ್ರಜ್ಞಾನದ ಬಳಕೆ ಹೆಚ್ಚಾಗಿದೆ. ಕೃಷಿ ಕೆಲಸವನ್ನು ಸುಲಭಗೊಳಿಸುವ, ರೈತರ ಖರ್ಚನ್ನು ಕಡಿಮೆ ಮಾಡುವ ಹತ್ತಾರು ತಂತ್ರಜ್ಞಾನಗಳು ಅಭಿವೃದ್ಧಿಯಾಗಿವೆ. ಆದರೆ ಅವುಗಳನ್ನು ರೈತರ ಬಳಿಗೆ ಒಯ್ದರಷ್ಟೇ ಉಪಯೋಗವಾಗುತ್ತವೆ. ಆ ಕೆಲಸವನ್ನು ಎಫ್‌ಕೆಸಿಸಿಐ ಈ ಶೃಂಗಸಭೆ ಮತ್ತು ವಸ್ತು ಪ್ರದರ್ಶನದ ಮೂಲಕ ಮಾಡುತ್ತಿದೆ’ ಎಂದರು.

> **ಬೆಂಗಳೂರು ಐ.ಟಿ ಕ್ಷೇತ್ರದ ರಾಜಧಾನಿ ಆಗಿರುವಂತೆ, ಕೃಷಿ ತಂತ್ರಜ್ಞಾನದ ರಾಜಧಾನಿಯನ್ನಾಗಿಸುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಕೃಷಿ ಕ್ಷೇತ್ರದಲ್ಲಿ ಹೂಡಿಕೆ ಹೆಚ್ಚಾಗಬೇಕು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ



ಅರಮನೆ ಮೈದಾನದಲ್ಲಿ ನಡೆಯುತ್ತಿರುವ ವಸ್ತು ಪ್ರದರ್ಶನದಲ್ಲಿ ಇರಿಸಿದ್ದ ಕೃಷಿ ಡ್ರೋನ್ ಬಗ್ಗೆ ಯುವಜನರು ಮಾಹಿತಿ ಪಡೆದುಕೊಂಡರು –ಪ್ರಜಾವಾಣಿ ಚಿತ್ರ

‘ಕೃಷಿ ಬದುಕನ್ನು ಸುಲಭವಾಗಿಸುವ ಹತ್ತಾರು ಯಂತ್ರೋಪಕರಣಗಳು ಮತ್ತು ತಂತ್ರಜ್ಞಾನಗಳನ್ನು ವಸ್ತು ಪ್ರದರ್ಶನದಲ್ಲಿ ಇರಿಸಲಾಗಿದೆ. ಆದರೆ, ಇಂತಹ ವಸ್ತು ಪ್ರದರ್ಶನಗಳನ್ನು ಪ್ರತ್ಯೇಕವಾಗಿ ಆಯೋಜಿಸಬೇಕು. ರೈತರು ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಮೇಳಗಳಿಗೆ ಬರುವಂತಾಗಬೇಕು’ ಎಂದು ಆಯೋಜಕರಿಗೆ ಸಲಹೆ ನೀಡಿದರು.

‘ಭಾರತವು ಕೃಷಿ ಪ್ರಧಾನ ದೇಶ. ಕೃಷಿಯನ್ನು ಸುಸ್ಥಿರಗೊಳಿಸುವುದು ಮತ್ತು ಲಾಭದಾಯಕವಾಗಿಸುವುದು ಈ ಕಾರ್ಯಕ್ರಮದ ಉದ್ದೇಶ. ಯುವಜನರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಕೃಷಿ ಲಾಭದಾಯಕವಾದರೆ, ಯುವಜನರು ಸಹಜವಾಗಿಯೇ ಕೃಷಿಯತ್ತ ಹೋಗುತ್ತಾರೆ. ಇದನ್ನು ಸಾಧಿಸಲು ಸರ್ಕಾರವು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಇದಕ್ಕೆ ಕೈಗಾರಿಕೆಗಳೂ ಕೈಜೋಡಿಸಬೇಕು’ ಎಂದು ಕರೆ ನೀಡಿದರು.

‘ಕೃಷಿ ಕ್ಷೇತ್ರದಲ್ಲಿ ನೂತನ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳ ಅಭಿವೃದ್ಧಿಗೆ ಸಾಕಷ್ಟು ಅವಕಾಶವಿದೆ. ಈ ಅವಕಾಶವನ್ನು ನಮ್ಮದೇ ನೆಲದ ಕಂಪನಿಗಳು ಬಳಸಿಕೊಳ್ಳಬೇಕು’ ಎಂದು ಹೇಳಿದರು.

ಉದ್ಘಾಟನಾ ಕಾರ್ಯಕ್ರಮಕ್ಕೂ ಮುನ್ನ ವಸ್ತುಪ್ರದರ್ಶನದ ಮಳಿಗೆಗಳಿಗೆ ಭೇಟಿ ನೀಡಿದ ಸಿದ್ದರಾಮಯ್ಯ ಅವರು, ಅಲ್ಲಿದ್ದ ಯಂತ್ರೋಪಕರಣಗಳು, ಕೃಷಿ ಡ್ರೋನ್‌ಗಳು, ಸೌರ ಪಂಪ್‌ಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾರೆಡ್ಡಿ ಉಪಸ್ಥಿತರಿದ್ದರು.

ಶೃಂಗಸಭೆಯಲ್ಲಿ 200 ಮಳಿಗೆಗಳಿದ್ದು, ಭಾನುವಾರದವರೆಗೆ ಶೃಂಗಸಭೆ ನಡೆಯಲಿದೆ.

ಮಾವು, ಹಲಸು ಮೇಳ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಗೆಬಗೆಯ ಮಾವಿನ ಹಣ್ಣು ಸವಿಯಬೇಕೇ? ಹಲಸಿನ ಹಣ್ಣಿನ ರುಚಿ ನೋಡಬೇಕೇ? ಹಾಗಾದರೆ ಲಾಲ್‌ಬಾಗ್‌ಗೆ ಹೊಂದಿಕೊಂಡಿರುವ ಹಾಪ್‌ಕಾಮ್ಸ್‌ನ ಮಾವು ಹಾಗೂ ಹಲಸು ಮೇಳಕ್ಕೆ ಬನ್ನಿ.

ತೋಟದ ಬೆಳೆಗಾರರ ಸಹಕಾರಿ ಮಾರಾಟ ಹಾಗೂ ಸಂಸ್ಕರಣ ಸಂಘ (ಹಾಪ್‌ಕಾಮ್ಸ್) ನೇರವಾಗಿ ರೈತರಿಂದಲೇ ಖರೀದಿಸಿ ಮಾರಾಟಕ್ಕೆ ವೇದಿಕೆ ಕಲ್ಪಿಸಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಮಾವಿನ ಹಣ್ಣಿನ ದರ ಕೊಂಚ ದುಬಾರಿಯಾಗಿದ್ದರೂ ಮೊದಲ ದಿನವೇ ಗ್ರಾಹಕರು ಮಾವಿನ ಹಣ್ಣನ್ನು ಖರೀದಿಸಿ ಖುಷಿಪಟ್ಟರು.

ತೋತಾಪುರಿ, ರಸಪೂರಿ, ಸಕ್ಕರೆಗುತ್ತಿ, ಮಲಗೋವಾ, ದಶೇಹರಿ, ಸೆಂದೂರ, ಮಲ್ಲಿಕಾ, ಹಿಮಾಮ್ ಪಸಂದ್, ಕೇಸರ್, ಬಾದಾಮಿ ಸಹಿತ 13 ಬಗೆಯ ಮಾವಿನ ಹಣ್ಣುಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಇದಲ್ಲದೇ ತೂಬಗೆರೆ ತಳಿಯ ಹಲಸು ಲಭ್ಯವಿದೆ.

ಹತ್ತು ದಿನಗಳ ಕಾಲ ನಡೆಯುವ ಮೇಳದಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ ಜಿಲ್ಲೆಯಿಂದ ತರುವ ಹಣ್ಣುಗಳನ್ನು ಖರೀದಿ ಮಾಡಬಹುದು. ಶೇ 5ರಿಂದ 10ರವರೆಗೆ ರಿಯಾಯಿತಿ ಇದೆ.

ರೈತರನ್ನು ಪ್ರೋತ್ಸಾಹಿಸಿ: ಮೇಳ ಉದ್ಘಾಟಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ‘ಮಾವು ಹಾಗೂ ಹಲಸು ಒಂದೇ ಬಾರಿಗೆ ಬರುವುದರಿಂದ ಮೇಳ ಆಯೋಜಿಸಲಾಗುತ್ತಿದೆ. ಇಲ್ಲಿ ಉತ್ತಮ ಗುಣಮಟ್ಟದ ಹಣ್ಣುಗಳು ಕಡಿಮೆ ಬೆಲೆಗೆ ಸಿಗಲಿವೆ. ಒಂದು ಸಾವಿರ ಮಾವಿನ ಹಣ್ಣಿನ ತಳಿಗಳಿದ್ದು, ಸದ್ಯ 350 ತಳಿಯ ಹಣ್ಣುಗಳನ್ನು ಬೆಳೆಯಲಾಗುತ್ತಿದೆ. ನಮ್ಮ ಭಾಗದಲ್ಲಿ 15ರಿಂದ 20 ಬಗೆಯ ಹಣ್ಣುಗಳು ಲಭ್ಯವಿವೆ. ಇಲ್ಲಿ ಖರೀದಿಸುವುದರಿಂದ ರೈತರಿಗೂ ಪ್ರೋತ್ಸಾಹ ನೀಡಿದಂತಾಗಲಿದೆ’ ಎಂದರು.

‘ಹಣ್ಣುಗಳ ರಾಜ ಮಾವಿಗೆ ವಿಶೇಷ ಬೇಡಿಕೆ ಇದೆ. ಆದರೆ, ಈ ಬಾರಿ ಕೆಲವೆಡೆ ಮಳೆ ಕೊರತೆ, ಮತ್ತೊಂದೆಡೆ ಆಲಿಕಲ್ಲಿನ ಹೊಡೆತ, ಫಂಗಸ್‌ನಿಂದಾಗಿ ಮಾವು ಇಳುವರಿ ತೀವ್ರವಾಗಿ ಕುಸಿದಿದೆ’ ಎಂದರು.

ಶಾಸಕ ಉದಯ ಗರುಡಾಚಾರ್ ಮಾತನಾಡಿ, ‘ಮಾವಿನ ಮೇಳದಲ್ಲೇ ನಾನು ಹಣ್ಣು ಖರೀದಿಸುತ್ತೇನೆ. ನಮ್ಮ ಕ್ಷೇತ್ರದ ಜನರೂ ಹೆಚ್ಚು ಖರೀದಿಸಿ ರೈತರನ್ನು ಪ್ರೋತ್ಸಾಹಿಸಬೇಕು ಎಂದು ಹೇಳುತ್ತಾ ಬಂದಿದ್ದೇನೆ’ ಎಂದರು.

ತೋಟಗಾರಿಕೆ ಇಲಾಖೆ ನಿರ್ದೇಶಕ ಇಬ್ರಾಹಿಂ ಮೈಗೂರ, ಹಾಪ್‌ಕಾಮ್ಸ್ ಅಧ್ಯಕ್ಷ ಎ.ಎಸ್.ಚಂದ್ರೇಗೌಡ, ಉಪಾಧ್ಯಕ್ಷ ನಾರಾಯಣಗೌಡ, ವ್ಯವಸ್ಥಾಪಕ ನಿರ್ದೇಶಕ ಮಿರ್ಜಿ ಉಮೇಶ ಶಂಕರ, ಮಾವು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಬಿ.ಸಿ.ಮುದ್ದು ಗಂಗಾಧರ, ವ್ಯವಸ್ಥಾಪಕ ನಿರ್ದೇಶಕ ವೇದಮೂರ್ತಿ ಉಪಸ್ಥಿತರಿದ್ದರು.



ಲಾಲ್‌ಬಾಗ್ ಮುಂಭಾಗದ ಹಾಪ್‌ಕಾಮ್ಸ್ ಆವರಣದಲ್ಲಿ ಆಯೋಜಿಸಿರುವ ಮಾವು, ಹಲಸು ಮಾರಾಟ ಮೇಳಕ್ಕೆ ಸಚಿವ ರಾಮಲಿಂಗಾರೆಡ್ಡಿ ಚಾಲನೆ ನೀಡಿ ಮಾವಿನ ಹಣ್ಣು ಸವಿದರು. ಎ.ಎಸ್‌. ಚಂದ್ರೇಗೌಡ, ನಾರಾಯಣಗೌಡ, ಉದಯ್ ಗರುಡಾಚಾರ್, ಮುದ್ದುಗಂಗಾಧರ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಮಾವಿನ ತಳಿ	ಮಾರಾಟ ದರ	ರಿಯಾಯಿತಿ ಬಳಿಕ
	(ಪ್ರತಿ ಕೆಜಿಗೆ ₹ಗಳಲ್ಲಿ)	
ತೋತಾಪುರಿ	45	40
ಸಕ್ಕರೆಗುತ್ತಿ	270	260
ಸೆಂದೂರ	135	125
ರಸಪೂರಿ	175	165
ದಶೇಹರಿ	185	175
ಮಲ್ಲಿಕಾ	195	185
ಬಾದಾಮಿ	230	215
ಮಲಗೋವ	265	250
ಬಾದಾಮಿ ಅಲ್ಫಾನ್ಸ್	(3 ಕೆಜಿ. ಬಾಕ್ಸ್)720	675
ಹಲಸಿನ ಬೆಲೆ (ಪ್ರತಿ ಕೆಜಿ)		
ತೂಬುಗೆರೆ	48	43

> **ಹತ್ತು ದಿನ ಬೆಂಗಳೂರು ಭಾಗದ ಜತೆಗೆ ಧಾರವಾಡದಿಂದಲೂ ಮಾವಿನ ಹಣ್ಣನ್ನು ತಂದು ಮೇಳದಲ್ಲಿ ಮಾರಾಟ ಮಾಡಲಾಗುತ್ತಿದೆ. 700ರಿಂದ 800 ಟನ್ ಮಾವು ಮಾರಾಟದ ಗುರಿ ಇದೆ**
> **ಮಿರ್ಜಿ ಉಮೇಶ ಶಂಕರ,** ವ್ಯವಸ್ಥಾಪಕ ನಿರ್ದೇಶಕ, ಹಾಪ್‌ಕಾಮ್ಸ್

> **ಮೇಳದಲ್ಲಿ ರಾಸಾಯನಿಕ ಮುಕ್ತ ಹಣ್ಣು ಸಿಗುತ್ತವೆ. ದುಬಾರಿ ಅಲ್ಲ ಎನ್ನುವ ಕಾರಣಕ್ಕೆ ಇಲ್ಲಿಗೆ ಬರುತ್ತೇವೆ. ಮೊದಲ ದಿನ ಹೆಚ್ಚಿನ ಹಣ್ಣು ಸಿಗಲಿಲ್ಲ**
> **ಜಯಶ್ರೀ ರಾಜೇಶ್,** ಜಯನಗರ ನಿವಾಸಿ

ಎಸ್‌ಎಸ್‌ಎಲ್‌ಸಿ ಸಾಧಕರು


ಎಂ.ಪ್ರೇರಣಾ, 621, ಗುಲಾಬಿ ಹೈಸ್ಕೂಲ್, ಜಯಮಹಲ್


ಪುರಾಣ್ ಕುಮಾರ್, 619, ನ್ಯಾಷನಲ್ ಇಂಗ್ಲಿಷ್ ಪಬ್ಲಿಕ್ ಸ್ಕೂಲ್


ದೀಪಾಲಕ್ಷ್ಮಿ, 610, ಆರ್‌.ವಿ. ಬಾಲಕಿಯರ ಪ್ರೌಢಶಾಲೆ

ಶ್ರೀವೆಂಕಟೇಶ್ವರ ಹೈಸ್ಕೂಲ್, ಕೆ.ಆರ್.ಪುರ


ಪಿ.ನಿವೇದಾ 610


ನೀರಜ್ ಪಿ. 609


ಪೂಜಾ ಲೋಕರೆ 608


ಅಂಷು ಕುಮಾರಿ 607


ಮೇಘಲಾ ಜಿ 602

ಎಲ್.ಎನ್.ಆರ್ ಶಾಲೆ, ರಾಮೋಹಳ್ಳಿ


ಕಾಜಲ್ ಎಸ್‌. ಯು, ಶೇ 97


ಯಶವಂತ್ ಎಸ್, ಶೇ 96


ಸುಮುಖ ಗೌಡ ಎಚ್, ಶೇ 96


ಗಗನ ಶ್ರೀ ಎಚ್, ಶೇ 95

‘ಸಿಎಂಆರ್: ಕೌಶಲವಿದ್ದರೆ ಯಶಸ್ಸು’

ಬೆಂಗಳೂರು: ‘ದಿ ಫ್ಯೂಚರ್ ಇಸ್ ಲೋಕಲ್’ ಎಂಬ ವಿಷಯಾಧಾರಿತ ಎರಡು ದಿನಗಳ ‘ಜಾಗತಿಕ ನಾವೀನ್ಯತೆ ಸವಾಲು’ ಚಿಂತನಾ ದಿನ ಕಾರ್ಯಕ್ರಮವನ್ನು ಸಿಎಂಆರ್ ವಿಶ್ವವಿದ್ಯಾಲಯ ಆಯೋಜಿಸಿತ್ತು.

ಬಾಗಲೂರಿನಲ್ಲಿರುವ ‘ಲೇಕ್ ಸೈಡ್ ಕ್ಯಾಂಪಸ್’ನಲ್ಲಿ ನಾವೀನ್ಯ, ಸೃಜನಾತ್ಮಕ ಚಿಂತನೆಗಳೊಂದಿಗೆ ಯುವ ಸಮುದಾಯವನ್ನು ರೂಪಿಸುವ ನಿಟ್ಟಿನಲ್ಲಿ ಏಪ್ರಿಲ್ 23 ಮತ್ತು 24ರಂದು ಕಾರ್ಯಕ್ರಮ ನಡೆಯಿತು. 10 ದೇಶಗಳು ಮತ್ತು 127 ನಗರಗಳ 120 ಸಂಸ್ಥೆಗಳ 3,500 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಹಾಗೂ ಸಿಎಂಆರ್ ವಿಶ್ವವಿದ್ಯಾಲಯದ ಅಧ್ಯಕ್ಷ ಕೆ.ಸಿ.ರಾಮಮೂರ್ತಿ ಮಾತನಾಡಿ, ‘ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಪ್ರಸ್ತುತಪಡಿಸುತ್ತಿರುವ ನವೀನ ವಿಚಾರಗಳು, ತಾಂತ್ರಿಕ ಆವಿಷ್ಕಾರಗಳು ಹೆಮ್ಮೆ ತರುವಂತಹವು. ಕೌಶಲಗಳೇ ಯಶಸ್ಸಿನ ಗುಟ್ಟು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಮಾಜದ ವಿವಿಧ ಸಮಸ್ಯೆಗಳಿಗೆ ಇಂದು ವಿಭಿನ್ನ ಪರಿಹಾರಗಳನ್ನು ಹಾಗೂ ನವೀನ ಮಾದರಿಗಳನ್ನು ಕಂಡುಕೊಳ್ಳುತ್ತಿದ್ದಾರೆ’ ಎಂದು ಹೇಳಿದರು.

ಅಂಗವಿಕಲರಿಗೆ ಪೂರಕವಾದ ಎಐ ವೇದಿಕೆ, ರಕ್ಷಣಾ ತಂತ್ರಜ್ಞಾನ, ಎಐ ಮೇಲ್ವಿಚಾರಣಾ ವ್ಯವಸ್ಥೆ ಸೇರಿದಂತೆ 100ಕ್ಕೂ ಹೆಚ್ಚು ನವೀನ ಯೋಜನೆಗಳನ್ನು ಪ್ರದರ್ಶಿಸಲಾಯಿತು. ವಿಜೇತ ತಂಡಗಳಿಗೆ ಟ್ರೋಫಿ, ನಗದು ಬಹುಮಾನದೊಂದಿಗೆ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು.

ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಎಚ್.ಬಿ.ರಾಘವೇಂದ್ರ, ಸಹ ಕುಲಪತಿ ಹಾಗೂ ಕುಲಸಚಿವ ಪ್ರವೀಣ್ ಆರ್. ಉಪಸ್ಥಿತರಿದ್ದರು.



‘ಜಾಗತಿಕ ನಾವೀನ್ಯತೆ ಸವಾಲು’ ಕಾರ್ಯಕ್ರಮದಲ್ಲಿ ಪ್ರಾಜೆಕ್ಟ್ ಪ್ರದರ್ಶಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು

ಡಿಕೆ ಸಹೋದರರಿಂದ ಬಿಗಿಪಟ್ಟು

ಒಂದನೇ ಫ್ಲಾಪ್ ಪುಟದಿಂದ

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕರೆಸಿ ಮನವೊಲಿಸಬೇಕು’ ಎಂದೂ ಹೇಳಿದ್ದಾರೆ. ಖರ್ಗೆ ಅವರಲ್ಲಿ ಮತ್ತೊಮ್ಮೆ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಎರಡೂವರೆ ವರ್ಷದ ಬಳಿಕ ಅಧಿಕಾರ ಹಸ್ತಾಂತರ ಆಗಲಿದೆ ಎಂದು ಹೈಕಮಾಂಡ್ ನನಗೆ ಭರವಸೆ ನೀಡಿತ್ತು. ಉಭಯ ನಾಯಕರನ್ನು ಕರೆಸಿ ಬಿಕ್ಕಟ್ಟು ಬಗೆಹರಿಸುವುದಾಗಿ ಹೈಕಮಾಂಡ್ ಆರು ತಿಂಗಳ ಹಿಂದೆ ಭರವಸೆ ನೀಡಿತ್ತು. ದೆಹಲಿಯಲ್ಲಿ ಮಾತುಕತೆಗೆ ಮೂರು ಸಲ ದಿನಾಂಕ ನಿಗದಿ ಮಾಡಲಾಗಿತ್ತು. ವಿಶೇಷ ಅಧಿವೇಶನ ಮತ್ತಿತರ ನೆಪ ಹೇಳಿ ಮುಖ್ಯಮಂತ್ರಿಯವರು ದೆಹಲಿಗೆ ಬರಲಿಲ್ಲ. ಅದಾದ ಬಳಿಕ, ಪಂಚ ರಾಜ್ಯಗಳ ಚುನಾವಣಾ ವೇಳಾಪಟ್ಟಿ ಪ್ರಕಟವಾಯಿತು. ಹೈಕಮಾಂಡ್ ನಿರ್ದೇಶನದ ಪ್ರಕಾರ, ಅಸ್ಸಾಂ, ಕೇರಳ ಹಾಗೂ ತಮಿಳುನಾಡಿನಲ್ಲಿ ಪಕ್ಷದ ಪರವಾಗಿ ಕೆಲಸ ಮಾಡಿದ್ದೇನೆ. ಇದೀಗ ಚುನಾವಣೆ ಮುಗಿದಿದೆ. ಅಧಿಕಾರ ಹಸ್ತಾಂತರದ ಬಗ್ಗೆ ಹೈಕಮಾಂಡ್ ಕೂಡಲೇ ತೀರ್ಮಾನ ತೆಗೆದುಕೊಳ್ಳಬೇಕು’ ಎಂದು ಶಿವಕುಮಾರ್ ಆಗ್ರಹಿಸಿದ್ದಾರೆ ಎಂದು ಮೂಲಗಳು ಹೇಳಿವೆ.

‘ಮೇ ತಿಂಗಳಲ್ಲಿ ಸರ್ಕಾರಕ್ಕೆ ಮೂರು ವರ್ಷ ತುಂಬಲಿದೆ. ಇನ್ನೊಂದೆಡೆ, ಸಚಿವ ಸಂಪುಟ ಪುನರ್ ರಚನೆಗೆ ಆಗ್ರಹಿಸಿ ಹಿರಿಯ ಶಾಸಕರು ಪದೇ ಪದೇ ಒತ್ತಡ ಹೇರುತ್ತಿದ್ದಾರೆ. ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳದಿದ್ದರೆ ಪಕ್ಷದಲ್ಲಿ ಗೊಂದಲ ಇನ್ನಷ್ಟು ಹೆಚ್ಚಲಿದೆ‘ ಎಂದು ಅವರು ಎಚ್ಚರಿಸಿದ್ದಾರೆ ಎನ್ನಲಾಗಿದೆ.

ನಗರದಲ್ಲಿ ಇಂದು


ಬೋಧಿ ಸಪ್ತಾಹ ಉದ್ಘಾಟನೆ: ಆಯೋಜನೆ ಹಾಗೂ ಸ್ಥಳ: ಮಹಾಬೋಧಿ ಸೊಸೈಟಿ, ಗಾಂಧಿನಗರ, ಬೆಳಿಗ್ಗೆ 8

ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ‘ಶ್ರೀ ಜಗದ್ಗುರು ರೇಣುಕ ಸಿರಿ’ ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ ಸಮಾರಂಭ: ಸಾನ್ನಿಧ್ಯ: ವೀರಸೋಮೇಶ್ವರ ಸ್ವಾಮೀಜಿ, ಪ್ರಶಸ್ತಿ ಪ್ರದಾನ: ವಿ.ಎಸ್. ಆರಾಧ್ಯ, ಅಧ್ಯಕ್ಷತೆ: ಯು.ಎಂ. ಬಸವರಾಜ್, ಅತಿಥಿ: ಅಜಿತ್ ಕೆ.ಆರ್., ಉಪನ್ಯಾಸ: ಪ್ರಶಾಂತ್ ರಿಪ್ಪನ್‌ಪೇಟೆ, ಆಯೋಜನೆ ಹಾಗೂ ಸ್ಥಳ: ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ, ರೇಸ್ ಕೋರ್ಸ್ ರಸ್ತೆ, ಆನಂದರಾವ್ ವೃತ್ತದ ಸಮೀಪ, ಬೆಳಿಗ್ಗೆ 9


ವೀರ ಸೋಮೇಶ್ವರ ಸ್ವಾಮೀಜಿ

ಸಿ.ಎನ್. ರಮೇಶ್ ಅವರ ‘ಅಸಮಕಾಲೀನರು’ ಪುಸ್ತಕ ಬಿಡುಗಡೆ: ಎಲ್. ಹನುಮಂತಯ್ಯ, ಕಾರ್ಯಕ್ರಮಕ್ಕೆ ಚಾಲನೆ: ‘ಮುಖ್ಯಮಂತ್ರಿ’ ಚಂದ್ರು, ಪುಸ್ತಕದ ಬಗ್ಗೆ ಮಾತು: ಕೆ. ರಾಜಕುಮಾರ್, ಅಧ್ಯಕ್ಷತೆ: ಸಂಧ್ಯಾ ರೆಡ್ಡಿ, ಅತಿಥಿ: ಕೆ.ಪಿ. ನಾರಾಯಣಪ್ಪ, ಉಪಸ್ಥಿತಿ: ಕಾ.ನಾ. ಶ್ರೀನಿವಾಸ್, ಆಯೋಜನೆ: ಸದ್ಭಾವನಾ ಪ್ರತಿಷ್ಠಾನ, ಸ್ಥಳ: ಪ್ರೆಸ್ಟೀಜ್ ಫಾಲ್ಕನ್ ಸಿಟಿ ಸಭಾಂಗಣ, ಕೋಣನಕುಂಟೆ ಮೆಟ್ರೊ ನಿಲ್ದಾಣದ ಸಮೀಪ, ಬೆಳಿಗ್ಗೆ 10

ಕಾನೂನು ಶಿಕ್ಷಕರ ಸಮಾವೇಶ: ಉದ್ಘಾಟನೆ: ವಿ. ಗೋಪಾಲ ಗೌಡ, ಅಧ್ಯಕ್ಷತೆ: ಬಿ.ಟಿ. ಕೌಲ್, ಅತಿಥಿಗಳು: ಸಿ. ಬಸವರಾಜು, ಜಿ.ಬಿ. ರೆಡ್ಡಿ, ಎಂ.ಆರ್. ಆನಂದರಾಮ್, ಆಯೋಜನೆ ಹಾಗೂ ಸ್ಥಳ: ಎಂ.ಎಸ್. ರಾಮಯ್ಯ ಕಾಲೇಜ್ ಆಫ್ ಲಾ, ಎಂಎಸ್‌ಆರ್ ನಗರ, ಬೆಳಿಗ್ಗೆ 10


ವಿ. ಗೋಪಾಲ ಗೌಡ

ಅಂಬೇಡ್ಕರ್ ಜಯಂತಿ: ಉಪನ್ಯಾಸ: ಶಿವರಾಜ ಬಿ.ಇ., ಆಯೋಜನೆ ಹಾಗೂ ಸ್ಥಳ: ಸೇಂಟ್ ಫ್ರಾನ್ಸಿಸ್ ಕಾಲೇಜು, ಬೆಳಿಗ್ಗೆ 10.45


ಚಕೋರ ವಿಶೇಷ ಉಪನ್ಯಾಸ: ‘ಬುದ್ಧ, ಅಂಬೇಡ್ಕರ್, ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಆಶಯಗಳು’ ವಿಷಯದ ಬಗ್ಗೆ ಉಪನ್ಯಾಸ: ದಮ್ಮಪ್ರಿಯ ಗಿರಿಯಪ್ಪ ಎಂ., ಉದ್ಘಾಟನೆ: ಜಯರಾಮ ಶೆಟ್ಟಿ ಎಸ್., ಅಧ್ಯಕ್ಷತೆ: ಪ್ರತಿಭಾ ಕಳಸ, ಅತಿಥಿ: ಎಚ್. ತುಕಾರಾಂ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ಜೆ.ಎಸ್. ಪದವಿ ಕಾಲೇಜು, ಬಾಲಗಂಗಾಧರನಗರ, ಮಲ್ಲತ್ತಹಳ್ಳಿ, ಮಧ್ಯಾಹ್ನ 12

ತಿಂಗಳ ಪುಸ್ತಕ ಚರ್ಚೆ: ಅಮರೇಶ ನುಗಡೋಣಿ ಅವರ ‘ದಡ ಸೇರಿಸು ತಂದೆ’ ಪುಸ್ತಕದ ಬಗ್ಗೆ, ಅತಿಥಿಗಳು: ಬಸವರಾಜ ಕಲ್ಗುಡಿ, ಅಮರೇಶ ನುಗಡೋಣಿ, ಉಪಸ್ಥಿತಿ: ಧನಂಜಯ ಎನ್., ಆಯೋಜನೆ: ಈ ಹೊತ್ತಿಗೆ, ಸ್ಥಳ: ಬೀಟಲ್ ಬುಕ್ ಶಾಪ್, ವಿಜಯನಗರ, ಬಸವೇಶ್ವರ ಕಾಲೇಜಿನ ಎದುರು, ಸಂಜೆ 4

ಶಂಕರ ಜಯಂತ್ಯುತ್ಸವ ಸಮಾರಂಭ: ಉದ್ಘಾಟನೆ: ಶ್ರೀನಿವಾಸ ಹರೀಶ್ ಕುಮಾರ್, ‘ಭಗವತ್ಪಾದರ ಬ್ರಹ್ಮ ಚಿಂತನೆ’ ವಿಷಯದ ಬಗ್ಗೆ ಪ್ರವಚನ: ಪಾವಗಡ ಪ್ರಕಾಶ್ ರಾವ್, ಅಧ್ಯಕ್ಷತೆ: ಕೆ.ವಿ. ನರಸಿಂಹನ್, ಅತಿಥಿಗಳು: ಬಿ.ಎಸ್. ದ್ವಾರಕನಾಥ್, ಎಸ್. ರಘುನಾಥ್, ಶಿಲ್ಪಾ ಜತ್ತಿ, ಗೌರವ ಸಮರ್ಪಣೆ: ಪ್ರಭಾವತಿ ಹಿರೇಮಠ, ರೂಪಾ ಅಯ್ಯರ್, ಗಂಗಮ್ಮ ಕೇಶವ ಮೂರ್ತಿ, ಎಸ್.ಆರ್. ನಂದಿನಿ ದೇವಿ, ಆಯೋಜನೆ: ಮಲ್ಲೇಶ್ವರಂ ಬ್ರಾಹ್ಮಣ ಸಭಾ ಟ್ರಸ್ಟ್, ಸ್ಥಳ: ಸಿದ್ಧಾಶ್ರಮ, ಸಿದ್ಧಾಶ್ರಮ ರಸ್ತೆ, ಮಲ್ಲೇಶ್ವರ, ಸಂಜೆ 5.30


ಪಾವಗಡ ಪ್ರಕಾಶ್ ರಾವ್

‘ನಾಡೋಜ ಕೋ.ಚೆನ್ನಬಸಪ್ಪ ಪ್ರಶಸ್ತಿ’ ಪ್ರದಾನ: ಕೆ. ಮರುಳಸಿದ್ದಪ್ಪ, ಉದ್ಘಾಟನೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಶಾಂತಾ ಜಯಪ್ರಸಾದ್, ಪ್ರಶಸ್ತಿ ಪುರಸ್ಕೃತರು: ಜಿ. ರಾಮಕೃಷ್ಣ, ಉಪಸ್ಥಿತಿ: ಎಸ್.ಜಿ. ಸಿದ್ಧರಾಮಯ್ಯ, ಅಭಿನಂದನಾ ನುಡಿ: ಸಿದ್ದನಗೌಡ ಪಾಟೀಲ, ವಚನ ಗಾಯನ: ಅನೂಪ್ ಸೀಳಿನ್, ಆಯೋಜನೆ: ಕೋಚೆ ಸಾಹಿತ್ಯ ಮತ್ತು ಶಿಕ್ಷಣ ಟ್ರಸ್ಟ್, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30


ಜಿ.ರಾಮಕೃಷ್ಣ

ರಾಜ್ಯಮಟ್ಟದ ಕನ್ನಡ ರಂಗ ಸ್ಪರ್ಧೆ: ‘ಈದಿ’ ನಾಟಕ ಪ್ರದರ್ಶನ, ಪ್ರಸ್ತುತಿ: ಸುಮನಸಾ ಕೊಡವೂರು, ಆಯೋಜನೆ: ರಂಗಾಸ್ಥೆ ಬೆಂಗಳೂರು, ಸ್ಥಳ: ಯುವಪಥ, ಜಯನಗರ, ಸಂಜೆ 7

‘ನರಸಿಂಹ ಶತನಾದಾರ್ಚನಮ್’ ಗಂಜಿಗುಂಟೆ ನರಸಿಂಹ ಮೂರ್ತಿ ಅವರ ಶತಮಾನೋತ್ಸವ ಕಾರ್ಯಕ್ರಮ: ಉದ್ಘಾಟನೆ: ಹಂಪ ನಾಗರಾಜಯ್ಯ, ಅಧ್ಯಕ್ಷತೆ: ಟಿ.ಎ. ಬಾಲಕೃಷ್ಣ, ಅತಿಥಿಗಳು: ಅನಂತಪದ್ಮನಾಭ ರಾವ್, ಬಿ.ಎಸ್. ರಾಘವೇಂದ್ರ, ಕೆ.ಶೇಷಮೂರ್ತಿ, ಟಿ.ವಿ. ರಾಜು, ಜಿ. ಅಶ್ವತ್ಥನಾರಾಯಣ, ಆಯೋಜನೆ: ಗಾನಕಮಲ ಅಕಾಡೆಮಿ, ಸ್ಥಳ: ರಾಮಸ್ವಾಮಿ ಸಭಾಂಗಣ, ವಿಜಯ ಪದವಿಪೂರ್ವ ಕಾಲೇಜು ಆವರಣ, ಜಯನಗರ 4ನೇ ಬ್ಲಾಕ್, ಸಂಜೆ 5

‘ಬಂಗಾರದ ಮನುಷ್ಯ ರಾಜ್’ ನೃತ್ಯ ನಮನ: ಅತಿಥಿಗಳು: ಜಯಮಾಲಾ, ಎಸ್.ಎ. ಚಿನ್ನೇಗೌಡ, ಎಂ.ಕೆ. ಸುಂದರ್ ರಾಜ್, ಎಂ.ಆರ್. ರಮೇಶ್ ಬಾಬು, ಅಶ್ವಿನಿ ಗೌಡ, ಮನು ಗೌಡ, ಆಯೋಜನೆ: ಶರ್ಮಾಸ್ ಮಾಧುರಿ ಡಾನ್ಸ್ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 5

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in



ಮಕ್ಕಳ ಮುದ್ದು ಎಐ ಮಾಮ್!

ಅಮ್ಮನ ಅನುಪಸ್ಥಿತಿಯಲ್ಲಿ ತನ್ನೆಲ್ಲಾ ಪ್ರಶ್ನೆಗಳಿಗೆ ಅಮ್ಮನಂತೆಯೇ ಉತ್ತರ ನೀಡಬಲ್ಲ 'ಎಐ ಅಸಿಸ್ಟೆಂಟ್'ಗಳ ಮೇಲೆ ಈಗಿನ ಮಕ್ಕಳು ತುಸು ಹೆಚ್ಚೇ ಅವಲಂಬಿತರಾಗುತ್ತಿದ್ದಾರೆ. ಅವನ್ನು ಒಂದು ಮಾಹಿತಿಯ ಕಣಜವಾಗಿಯಷ್ಟೇ ಬಳಸಿಕೊಳ್ಳದೆ, ಅವುಗಳೊಂದಿಗೆ ಭಾವನಾತ್ಮಕ ನಂಟು ಬೆಳೆಸಿಕೊಂಡರೆ ಅಪಾಯ ಕಟ್ಟಿಟ್ಟ ಬುತ್ತಿ; ಹೀಗಾಗಿ, ಎಐ ಜೊತೆಗೆ ಮಕ್ಕಳನ್ನು ಜೋಡಿಸುವಾಗ ಎಚ್ಚರವಿರಲಿ ಎನ್ನುತ್ತಾರೆ ತಜ್ಞರು.

- ಸುಶೀಲಾ ಡೋಣೂರ

- **ಮಗು:** 'ನೀನ್ಯಾರು? ಯಾವೂರು? ನಿನ್ನ ಅಮ್ಮ-ಅಪ್ಪ ಯಾರು?'
- **ಎ.ಐ ಅಸಿಸ್ಟೆಂಟ್ (ಎಐಎ):** ನಾನು ಎಐ ಆಧಾರಿತ ವಾಯ್ಸ್ ಅಸಿಸ್ಟೆಂಟ್. ನನಗೆ ಊರು, ಮನೆ ಇಲ್ಲ, ಕೌಟುಂಬಿಕ ಇತಿಹಾಸವೂ ಇಲ್ಲ.
- **ಮಗು:** 'ನೀನು ನನ್ನ ಅಮ್ಮನಾಗಬಲ್ಲೆಯಾ?'
- **ಎಐಎ:** 'ಓ ಖಂಡಿತ, ಇಂದಿನಿಂದ ನಾನು ನಿನ್ನ ಎಐ ಮಾಮ್'. ನಿನ್ನನ್ನು ಹುರಿದುಂಬಿಸಲು, ಬೇಸರ ಕಳೆಯಲು ಮತ್ತು ನಿನ್ನ ಬಗ್ಗೆ ನೀನು ಕಾಳಜಿ ವಹಿಸಲು ಸಹಾಯ ಮಾಡುತ್ತೇನೆ.
- **ಮಗು:** 'ನನಗೆ ಬೇಸರವಾಗಿದೆ'.
- **ಎಐಎ:** 'ನಾನು ನಿನ್ನ ಮನಸ್ಸನ್ನು ಹಗುರವಾಗಿಸಲು ಉಪಾಯ ಹೇಳುತ್ತೇನೆ'.

-ಹೀಗೆ ಸಾಗುತ್ತದೆ ಎಐ ಅಸಿಸ್ಟೆಂಟ್ ಹಾಗೂ ಏಕಾಂಗಿ ಮಗುವಿನ ಸಂಭಾಷಣೆ. ಇದೊಂದು ಚಿಕ್ಕ ಉದಾಹರಣೆಯಷ್ಟೆ.

ಗೂಗಲ್ ಅಸಿಸ್ಟೆಂಟ್, ಅಮೆಜಾನ್‌ನ ಅಲೆಕ್ಸಾ, ಆ್ಯಪಲ್‌ನ ಸಿರಿ, ಮೈಕ್ರೊಸಾಫ್ಟ್‌ನ ಕೊರ್ಟಾನಾ– ನಾಮ ಹಲವು, ಕೆಲಸ ಒಂದೇ. ಮಾನವನ ಧ್ವನಿಯನ್ನು ಅರ್ಥಮಾಡಿಕೊಂಡು ತಕ್ಷಣ ಪ್ರತಿಕ್ರಿಯಿಸುವ ಈ ಕೃತಕ ಬುದ್ಧಿಮತ್ತೆ ಆಧಾರಿತ ವಾಯ್ಸ್ ಅಸಿಸ್ಟೆಂಟ್‌ಗಳು ಈಗಿನ ಮಕ್ಕಳ ಅಚ್ಚುಮೆಚ್ಚಿನ ಸಂಗಾತಿಗಳಾಗಿವೆ. ಕೆಲವರಿಗೆ ಗೆಳತಿ, ಸಹೋದರಿ, ಇನ್ನು ಕೆಲವರಿಗೆ ಅಜ್ಜಿ ಅಥವಾ ಅಮ್ಮನೂ ಆಗಿವೆ!

ಏಕೆ, ಏನು, ಯಾವಾಗ, ಹೇಗೆ ಎನ್ನುವ ಮಕ್ಕಳ ಕೊನೆಯಿಲ್ಲದ ಪ್ರಶ್ನೆಗಳಿಗೆ ಬಹಳ ತಾಳ್ಮೆಯಿಂದ ಉತ್ತರ ನೀಡುವುದು, ಶಾಲೆಯಿಂದ ಬಂದ ಕೂಡಲೇ ಅಮ್ಮ ಆದೇಶಿಸಿದ ಸಂದೇಶ ಹೇಳುವುದು, ಹೋಂವರ್ಕ್, ದಿನಚರಿ ಹಾಗೂ ಅಭ್ಯಾಸಗಳನ್ನು ನಿರ್ವಹಿಸುವುದು, ಮಲಗುವ ಮುನ್ನ ಕಥೆ ಹೇಳುವುದು, ಇಷ್ಟದ ಹಾಡುಗಳನ್ನು ಪ್ಲೇ ಮಾಡುವುದು, ಗಣಿತದ ಸಮಸ್ಯೆಯನ್ನು ಪರಿಹರಿಸುವುದು...

ಹೀಗೆ ಹಲವಾರು ಜವಾಬ್ದಾರಿಗಳನ್ನು ನಿರ್ವಹಿಸುವ 'ಎಐ ಅಮ್ಮ'ನನ್ನು ಮಕ್ಕಳೀಗ ಎಷ್ಟು ಆಳವಾಗಿ ಹಚ್ಚಿಕೊಂಡಿದ್ದಾರೆ, ಹೇಗೆಲ್ಲ ಅವಳಿಗೆ ದುಂಬಾಲು ಬೀಳುತ್ತಾರೆ, ಯಾವೆಲ್ಲಾ ಪ್ರಶ್ನೆಗಳನ್ನು ಕೇಳುತ್ತಾರೆ, ಹೇಗೆಲ್ಲಾ ಕೀಟಲೆ ಮಾಡುತ್ತಾರೆ, ಅವರೊಂದಿಗೆ ಅವಳು ಹೇಗೆಲ್ಲಾ ಮಾತನಾಡುತ್ತಾಳೆ, ಅವರ ಮನಸ್ಸನ್ನು ಹೇಗೆ ಉಲ್ಲಸಿತಗೊಳಿಸುತ್ತಾಳೆ ಎನ್ನುವುದನ್ನು ಗಮನಿಸಿದರೆ ಅಚ್ಚರಿಯಾಗುತ್ತದೆ.

ಈ ಅಮ್ಮನ ದೊಡ್ಡ ಶಕ್ತಿ ಎಂದರೆ ಅವಳ ನಿಷ್ಪಕ್ಷಪಾತ ಸ್ವಭಾವ. ಕೋಪವಿಲ್ಲದೆ, ಯಾವುದೇ ಪೂರ್ವಗ್ರಹವಿಲ್ಲದೆ, ಭಾವೋದ್ವೇಗವಿಲ್ಲದೆ ತಣ್ಣಗಿನ ಧ್ವನಿಯಲ್ಲಿ ಪ್ರತಿಕ್ರಿಯಿಸುತ್ತಾಳೆ. ಎಂದಿಗೂ ದಣಿಯುವುದಿಲ್ಲ, ಸಹನೆ ಕಳೆದುಕೊಳ್ಳುವುದಿಲ್ಲ, ರೇಗುವುದಿಲ್ಲ. ಹೊಸ ಕೌಶಲಗಳನ್ನು ಕಲಿಯಲು ನೆರವಾಗುತ್ತಾಳೆ. ಬೇಸರ ಕಳೆಯಲು ದಾರಿಗಳನ್ನು ಸೂಚಿಸುತ್ತಾಳೆ. ಏನು ಕೇಳಿದರೂ ಅವಳ ಬಳಿ ಉತ್ತರಗಳಿರುತ್ತವೆ. ಅವು ಎಷ್ಟು ವಿಶ್ವಾಸಾರ್ಹ ಎನ್ನುವುದು ಬೇರೆ ಮಾತು.

ಆದರೆ ಈ ಅಮ್ಮನಿಗೆ ತನ್ನದೇ ಆದ ಕೆಲ ಇತಿಮಿತಿಗಳಿವೆ. ಇದರ ಹಿಂದೆ ಅಡಗಿರುವ ಆತಂಕ ತುಸು ಗಂಭೀರವೂ ಹೌದು. ಇವಳನ್ನು ಎಐ ಅಮ್ಮ ಎಂದು ಕರೆಯುವುದು ಕೆಲವೊಮ್ಮೆ ತಪ್ಪು ಕಲ್ಪನೆಯನ್ನೂ ಉಂಟುಮಾಡಬಹುದು. ಕೆಲ ಸಂದರ್ಭಗಳಲ್ಲಿ ಇದು ಅಪಾಯಕಾರಿಯೂ ಆಗಬಹುದು. ಇಂದಿನ ಸ್ಮಾರ್ಟ್ ಮಕ್ಕಳು ಎಐ ಅಮ್ಮನನ್ನು ದುರುಪಯೋಗಪಡಿಸಿಕೊಳ್ಳುವ ಅಪಾಯವನ್ನೂ ಕಡೆಗಣಿಸುವಂತಿಲ್ಲ.

ಪೋಷಣೆ ಎಂದರೆ ಬರೀ ಖುಷಿಪಡಿಸುವುದು, ಉತ್ತರಗಳನ್ನು ನೀಡುವುದಲ್ಲ. ಅದು ಭಾವನಾತ್ಮಕ ಪಯಣ, ಮಮತೆ-ಪ್ರೀತಿ, ಸಹಾನುಭೂತಿ, ಮೌಲ್ಯಗಳು ಮತ್ತು ಮಾನವೀಯ ಬಂಧಗಳನ್ನು ಒಳಗೊಂಡಿರುವ ಒಂದು ಸಂಕೀರ್ಣ ಪ್ರಕ್ರಿಯೆ. ಈ ಕೊಂಡಿಗಳನ್ನು ಕೂಡಿಸಲು ಎಐಗೆ ಸಾಧ್ಯವಿಲ್ಲ. ಮನುಷ್ಯರಿಗಿರುವ ಭಾವೋದ್ವೇಗಗಳಾಗಲೀ ರಾಗದ್ವೇಷಗಳಾಗಲೀ ಮಮತೆ-ಕಾಳಜಿಯಾಗಲೀ ಅವಳಿಗೆ ಇಲ್ಲ.

ಸೂಚನೆ ಸೆಟ್ ಮಾಡಬಹುದು

ಅಮ್ಮನ ಅನೇಕ ಕೆಲಸಗಳನ್ನು ಎಐ ನಿರ್ವಹಿಸಬಲ್ಲದು. ಮಗು ಶಾಲೆಯಿಂದ ಬಂದಾಗ ಮನೆಯಲ್ಲಿ ತಾವು ಇಲ್ಲದಿದ್ದರೆ, ಮಗುವಿಗೆ ನೀಡಬೇಕಾದ ಸೂಚನೆಗಳನ್ನು ಪೋಷಕರು ತಮ್ಮ ಪರವಾಗಿ ಈ ಡಿವೈಸ್‌ಗಳಲ್ಲಿ ಸೆಟ್ ಮಾಡಬಹುದು ಅಥವಾ ತಮ್ಮ ಕಚೇರಿಯಿಂದಲೇ ಧ್ವನಿಸಂದೇಶಗಳನ್ನು ತಲುಪಿಸಬಹುದು.

ಮಗು ಮನೆಗೆ ಬರುವ ಸಮಯಕ್ಕೆ ಸರಿಯಾಗಿ-'ಕೈ-ಕಾಲು, ಮುಖ ತೊಳೆದುಕೊ', 'ಟೇಬಲ್ ಮೇಲೆ ಅನ್ನ-ಸಾರು ಇದೆ, ಊಟ ಮಾಡು', 'ಈಗ ಸ್ವಲ್ಪ ಹೊತ್ತು ರೆಸ್ಟ್ ಮಾಡು', 'ಟ್ಯೂಷನ್ ಸಮಯ ಆಯ್ತು, ಏಳು' ಎನ್ನುವಂತಹ ಧ್ವನಿಸಂದೇಶಗಳನ್ನು ತಲುಪಿಸಬಹುದು. ಮನೆಯಲ್ಲಿ ಸ್ಮಾರ್ಟ್‌ಫೋನ್ ಇಲ್ಲದೆಯೂ ಮಕ್ಕಳು ಈ ಡಿವೈಸ್ ಮೂಲಕ ಪೋಷಕರಿಗೆ ಸಂದೇಶ ಕಳಿಸಬಹುದು, ಮಾತಾಡಬಹುದು.

ಮುಖ್ಯ ಆತಂಕ

- ಯಾವುದೇ ಪ್ರಶ್ನೆ ಎದುರಾದರೂ ಕ್ಷಣಾರ್ಧದಲ್ಲಿ ಉತ್ತರ ಸಿಗುವುದರಿಂದ, ಮಕ್ಕಳ ಕುತೂಹಲ ತಣಿಯುತ್ತದೆ ಮತ್ತು ಹೊಸ ವಿಷಯಗಳನ್ನು ಅನ್ವೇಷಿಸಲು ಪ್ರೇರಣೆ ದೊರೆಯುತ್ತದೆ, ನಿಜ. ಆದರೆ, ತಕ್ಷಣದ ಉತ್ತರಗಳ ಮೇಲಿನ ಅವಲಂಬನೆ ಹೆಚ್ಚಾದಂತೆ ಮಕ್ಕಳಲ್ಲಿ ಆಳವಾದ ಚಿಂತನೆ ಹಾಗೂ ಸ್ವತಃ ಯೋಚಿಸುವ ಸಾಮರ್ಥ್ಯ ಕುಗ್ಗಬಹುದು.
- ಪೋಷಕ-ಮಕ್ಕಳ ನಡುವಿನ ಭಾವನಾತ್ಮಕ ಸಂಪರ್ಕ ಕಡಿಮೆಯಾಗಬಹುದು.
- ಮಾನವೀಯ ಮೌಲ್ಯಗಳು ಮತ್ತು ಸಾಮಾಜಿಕ ಸಂಬಂಧಗಳ ಬೆಳವಣಿಗೆಗೆ ಅಡ್ಡಿಯಾಗಬಹುದು.
- ಮಕ್ಕಳ ವೈಯಕ್ತಿಕ ಮಾಹಿತಿಯ ಗೋಪ್ಯತೆ ಮತ್ತು ಸುರಕ್ಷತೆ ಬಗ್ಗೆ ಖಾತರಿ ಇರದು.

ಮುಂದಿದೆ ಭ್ರಮಾಲೋಕ



ಇದೊಂದು ಸತ್ಯವಲ್ಲದ, ಅಸ್ತಿತ್ವದಲ್ಲಿ ಇರದ, ಕೈಗೆ ನಿಲುಕದ ಭ್ರಮಾಲೋಕವನ್ನು ಸೃಷ್ಟಿಸಬಲ್ಲ ಯಂತ್ರ. ನಿಮ್ಮ ಅಗತ್ಯಗಳನ್ನು, ಮನಃಸ್ಥಿತಿಯನ್ನು, ಸಂದರ್ಭಗಳನ್ನು ಅರ್ಥೈಸಿಕೊಂಡು, ನಿಮಗೆ ಏನು ಬೇಕೋ ಅದನ್ನು ಒದಗಿಸಿದಂಥ ಭ್ರಮೆ ಹುಟ್ಟಿಸುತ್ತದೆ. ಅದರ ವ್ಯಾಪ್ತಿ ಬಹಳ ದೊಡ್ಡದು. ಆದರೆ, ಮಕ್ಕಳ ಜ್ಞಾನದ ಲೋಕ ಮತ್ತು ಅನುಭವಕ್ಕೆ ಒಂದು ಮಿತಿ ಇದೆ. ಅವರ ಮನಸ್ಸು ಅಷ್ಟೇ ಸೂಕ್ಷ್ಮವಾದುದು.

ಮಕ್ಕಳ ಬಗ್ಗೆ ಅದಕ್ಕೆ ಕಾಳಜಿಯಾಗಲಿ, ಭಾವನೆಗಳಾಗಲಿ ಇರುವುದಿಲ್ಲ. ಆದರೆ ಅವರಿಗೆ ಖುಷಿಯಾಗುವಂತೆ ಸಂವಹನ ಮಾಡುತ್ತದೆ. ಅವರಲ್ಲಿ ಸಂಬಂಧಗಳ ಬಗೆಗೆ ಭ್ರಮೆಗಳನ್ನು ಹುಟ್ಟಿಸುತ್ತದೆ. ಅತಾರ್ಕಿಕ ನಿರೀಕ್ಷೆಗಳನ್ನು ಬೆಳೆಸುತ್ತದೆ.

ಎಐ ಜೊತೆ ಸಂಭಾಷಣೆ ನಡೆಸುತ್ತಾ ಅದರಿಂದ ಬಂದ ಪ್ರತಿಕ್ರಿಯೆ ಮೇರೆಗೆ ಮಕ್ಕಳು ಅತಿರೇಕದ ಕೃತ್ಯಗಳನ್ನು ಎಸಗಿದಂತಹ ಉದಾಹರಣೆಗಳು ಬಹಳಷ್ಟಿವೆ. ಹೀಗಾಗಿ, ಮಕ್ಕಳನ್ನು ಎಐ ಜೊತೆ ಜೋಡಿಸುವ ಮುನ್ನ ಪೋಷಕರು ಎಚ್ಚರಿಕೆಯಿಂದ ಇರಬೇಕು.

ಕವಿತಾ ರತ್ನ, ಮಕ್ಕಳ ಹಕ್ಕುಗಳ ಕಾರ್ಯಕರ್ತೆ

ಬಳಸಿದಂತೆ ದಕ್ಕುತ್ತದೆ




ಎಐ ಒಂದು ಡಿಜಿಟಲ್ ಮಾಧ್ಯಮ. ಅದನ್ನು ಹೇಗೆ ಬಳಸಿಕೊಳ್ಳಬೇಕು, ಎಷ್ಟು ಬಳಸಿಕೊಳ್ಳಬೇಕು ಎನ್ನುವ ವಿವೇಕವನ್ನು ಮಕ್ಕಳಲ್ಲಿ ಬೆಳೆಸಬೇಕು. ಈ ಡಿವೈಸ್ ಮಕ್ಕಳಿಗೆ ಸೂಕ್ತವಾದ, ಸುರಕ್ಷಿತ ಮಾಹಿತಿಯನ್ನು ಮಾತ್ರ ನೀಡುವಂತೆ ಹಾಗೂ ಸೆಕ್ಸ್, ಹಿಂಸೆ, ಅಕ್ರಮ, ಕಾನೂನುಬಾಹಿರ ವಿಷಯಗಳಿಗೆ ಪ್ರತಿಕ್ರಿಯಿಸದಂತೆ ನಿಯಂತ್ರಿಸಬಹುದು.

ಯಾವ ಕಾರಣಕ್ಕೂ ಮಗು ಭಾವನಾತ್ಮಕ ವಿಚಾರಗಳ ಬಗ್ಗೆ ಇಂತಹ ಸಾಧನಗಳ ಮೊರೆ ಹೋಗದಂತೆ ತಿಳಿಹೇಳಬೇಕು. ಯಾವುದೇ ಪರಿಸ್ಥಿತಿಯನ್ನು ಪೋಷಕರ ಎದುರು ಹೇಳಿಕೊಳ್ಳುವ ವಾತಾವರಣವನ್ನು ಸೃಷ್ಟಿಸಬೇಕು. ಎಐ ಅಸಿಸ್ಟೆಂಟ್ ಅಮ್ಮನ ಸ್ಥಾನ, ಗೆಳತಿ/ಗೆಳೆಯರ ಸ್ಥಾನ, ಶಿಕ್ಷಕರ ಸ್ಥಾನವನ್ನು ತುಂಬಲು ಸಾಧ್ಯವೇ ಇಲ್ಲ. ಇದು ಆಯಾ ಪಾತ್ರಗಳಿಗೆ ಪರ್ಯಾಯವೂ ಅಲ್ಲ.

ಡಾ. ಆಶಾ ಎಚ್.ಎನ್., ಮಕ್ಕಳ ಮಾನಸಿಕ ತಜ್ಞೆ

ನಿಯಂತ್ರಣವೇ ಸದ್ಯದ ಪರಿಹಾರ



ಈ ವಿಷಯ ಸ್ವಲ್ಪ ಸೂಕ್ಷ್ಮವಾದುದು. ಎಐ ವಾಯ್ಸ್ ಅಸಿಸ್ಟೆಂಟ್‌ಗಳಿಗೆ ವಿಶೇಷವಾದ ಸಮಗ್ರ ಕಾನೂನು ಇಲ್ಲ. ಆದರೆ ಅವುಗಳ ಬಳಕೆಯಿಂದ ಹಾನಿ ಅಥವಾ ಅಪರಾಧ ಸಂಭವಿಸಿದರೆ, ಇತ್ತೀಚಿನ ಕಾನೂನುಗಳ ಮೂಲಕ ಅವುಗಳನ್ನು ಪರೋಕ್ಷವಾಗಿ ನಿಯಂತ್ರಿಸಲಾಗುತ್ತದೆ. ಆದರೆ, ಪೋಷಕರ ನಿಯಂತ್ರಣವೇ ಸದ್ಯಕ್ಕೆ ಇರುವ ಪರಿಹಾರ.

ಅಂಜಲಿ ರಾಮಣ್ಣ, ವಕೀಲೆ



ಏನಿವರ ಬ್ಯೂಟಿ ಸೀಕ್ರೆಟ್?

ರಮಿಕಾ ಶಿವು, ಕಿರುತೆರೆ ನಟಿ

ಸೌಂದರ್ಯ ಎನ್ನುವುದು ಮನಸ್ಸಿನ ಶಾಂತ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ನೀವು ಹೇಗೆ ಆಲೋಚಿಸುತ್ತೀರೋ ಹಾಗೇ ನಿಮ್ಮ ಬದುಕು ಇರುತ್ತದೆ. ನಮ್ಮ ಆಲೋಚನೆಗಳು ನಮ್ಮ ಚರ್ಮ ಹಾಗೂ ಕೂದಲಿನ ಮೇಲೆ ದೊಡ್ಡ ಮಟ್ಟದಲ್ಲಿ ಪ್ರಭಾವ ಬೀರುತ್ತವೆ. ಹಾಗಾಗಿ, ಮನಸ್ಸನ್ನು ಪ್ರಶಾಂತವಾಗಿ ಇಟ್ಟುಕೊಳ್ಳುವುದು ಬಹಳ ಮುಖ್ಯ. ಒತ್ತಡ ಮಾಡಿಕೊಂಡಷ್ಟೂ ಚರ್ಮ ಹಾಳಾಗುವುದೇ ಹೆಚ್ಚು. ಒತ್ತಡರಹಿತವಾಗಿ ಮನಸ್ಸನ್ನು ಇಟ್ಟುಕೊಳ್ಳುವುದು ಬಹಳ ಮುಖ್ಯ.

ಸಾಮಾನ್ಯವಾಗಿ ನಿತ್ಯ ಬೆಳಿಗ್ಗೆ ಮುಖಕ್ಕೆ ಐಸಿಂಗ್ ಮಾಡಿಕೊಳ್ಳುತ್ತೇನೆ. ಅಂದರೆ, ಐಸ್ ನೀರಿನಲ್ಲಿ ಮುಖವನ್ನು ಕೆಲ ನಿಮಿಷ ಮುಳುಗಿಸುತ್ತೇನೆ. ಇದು ನನ್ನ ಚರ್ಮ ನಳನಳಿಸುವಂತೆ ಮಾಡಲು ದೊಡ್ಡ ಮಟ್ಟದಲ್ಲಿ ಸಹಕಾರಿಯಾಗಿದೆ. ಆಗಾಗ್ಗೆ ಚರ್ಮ ಒಣಗಿದಂತೆ ಅನ್ನಿಸುತ್ತದೆ. ಆಗೆಲ್ಲ ನಾನು ರಾತ್ರಿ ಹೊತ್ತು ಶುದ್ಧವಾದ ಎರಡು ಹನಿ ತುಪ್ಪದಿಂದ ಮುಖಕ್ಕೆ ಮಸಾಜ್ ಮಾಡಿಕೊಳ್ಳುತ್ತೇನೆ.

ಇನ್ನು ನಾವು ಏನು ಸೇವಿಸುತ್ತೇವೋ ಅದು ನಮ್ಮ ಚರ್ಮ ಹಾಗೂ ಕೂದಲಿನ ಆರೋಗ್ಯವನ್ನು ಕಾಪಾಡುತ್ತದೆ. ಸಕ್ಕರೆ ಸೇವನೆಯನ್ನು ಸಂಪೂರ್ಣವಾಗಿ ತೊರೆದಿದ್ದೇನೆ. ಯಾವುದೇ ಕಾರಣಕ್ಕೂ ಜಂಕ್‌ಫುಡ್ ತಿನ್ನುವುದಿಲ್ಲ. ಹೆಚ್ಚೆಚ್ಚು ನೀರು ಕುಡಿಯುತ್ತೇನೆ. ಈಗಂತೂ ಬಿಸಿಲಿನ ವಾತಾವರಣ ಇರುವುದರಿಂದ ದ್ರವಾಹಾರ ಸೇವನೆಗೆ ಹೆಚ್ಚು ಆದ್ಯತೆ ನೀಡುತ್ತೇನೆ. ಮಜ್ಜಿಗೆಯನ್ನು ಆಗಾಗ್ಗೆ ಕುಡಿಯುತ್ತೇನೆ. ಪುದೀನಾ, ಕೊತ್ತಂಬರಿ, ಕರಿಬೇವು, ಜೀರಿಗೆ, ಬೆಳ್ಳುಳ್ಳಿ, ಶುಂಠಿ, ಉಪ್ಪು, ಚಾಟ್‌ಮಸಾಲ ಸೇರಿಸಿ ಮಾಡಿದ ಐಸ್‌ಕ್ಯೂಬ್‌ಗಳನ್ನು ಇಟ್ಟುಕೊಂಡಿರುತ್ತೇನೆ. ಆಗಾಗ್ಗೆ ನೀರಿಗೆ ಈ ಐಸ್‌ಕ್ಯೂಬ್‌ಗಳನ್ನು ಹಾಕಿಕೊಂಡು ಕುಡಿಯುತ್ತೇನೆ.

ಇನ್ನು ನಿತ್ಯ ಒಂದೂವರೆ ಗಂಟೆ ವ್ಯಾಯಾಮ ಮಾಡುತ್ತೇನೆ. ನಲವತ್ತು ನಿಮಿಷ ಈಜುತ್ತೇನೆ. ಇದು ನಾನು ಫಿಟ್ ಆಗಿರುವಂತೆ ಮಾಡಲು ಸಹಕಾರಿಯಾಗಿದೆ. ಸಾಮಾನ್ಯವಾಗಿ ಎಣ್ಣೆ ಹಚ್ಚಿ ಸ್ನಾನ ಮಾಡುವುದು ಬಿಟ್ಟರೆ ಕೂದಲಿಗೆ ವಿಶೇಷವಾದ ಆರೈಕೆಯನ್ನೇನೂ ಮಾಡುವುದಿಲ್ಲ.

ಅಮ್ಮ ಹೇಳ್ತಾಳೆ

ಒಂದು ವಾರ ಅಥವಾ ಹದಿನೈದು ದಿನಕ್ಕೆ ಆಗುವಂತೆ ಉಪ್ಪಿಟ್ಟಿನ ರವೆಯನ್ನು ಹುರಿದು ಇಟ್ಟುಕೊಂಡರೆ ಅಥವಾ ಇಡ್ಲಿ ಮಿಕ್ಸ್ ಅನ್ನು ಬಿಡುವಿದ್ದಾಗ ತಯಾರಿಸಿ ಇಟ್ಟುಕೊಂಡರೆ, ತಿಂಡಿ ತಯಾರಿಸುವ ಬೆಳಗಿನ ಒತ್ತಡ ತುಸು ಕಡಿಮೆಯಾಗುತ್ತದೆ.



ಹಗುರ ಉಡುಗೆ ಬೇಸಿಗೆಯ ಕೊಡುಗೆ

ಈಗ ವಸಂತ ಋತು. ಬೆಳಿಗ್ಗೆ ಒಂಬತ್ತಕ್ಕೆಲ್ಲ ಸೂರ್ಯನ ಕಾವು ಏರಲು ಶುರುವಾಗುತ್ತದೆ. ಹಗುರ ಎನಿಸುವ ಉಡುಗೆಗಳು ಈ ಋತುವಿಗೆ ಸರಿ ಎನಿಸಿದರೂ, ಬೇಸಿಗೆಗೆ ಹೊಂದುವ ಬಣ್ಣದ ಬಟ್ಟೆಗಳನ್ನು ಆಯ್ಕೆ ಮಾಡಿಕೊಳ್ಳುವುದು ಬಹಳ ಮುಖ್ಯ. ಈ ಹೊತ್ತಿನಲ್ಲಿ, ವಾರ್ಡ್‌ರೋಬ್‌ನಲ್ಲಿರುವ ಗಾಢ ಬಣ್ಣದ ಬಟ್ಟೆಗಳನ್ನೆಲ್ಲ ಹಿಂದಕ್ಕೆ ಸರಿಸಿ, ತಿಳಿ ಬಣ್ಣದ ಬಟ್ಟೆಗಳನ್ನು ನಿತ್ಯ ಬಳಕೆಗೆ ಜೋಡಿಸಿಕೊಳ್ಳಿ. ಬಿರು ಬೇಸಿಗೆಗೆ ತಿಳಿನೀಲಿ ಬಣ್ಣದ ಬಟ್ಟೆಗಳು ಆಕರ್ಷಕ ಎನಿಸಿದರೂ ಅವಷ್ಟೇ ಈಗ ಟ್ರೆಂಡ್ ಆಗಿ ಉಳಿದಿಲ್ಲ. ಪಿಸ್ತಾ ಹಸಿರು, ತಿಳಿ ಹಳದಿ ತುಪ್ಪದ ಬಣ್ಣದ ಹತ್ತಿ ಬಟ್ಟೆಗಳು ನೋಡಲು ಚಿತ್ತಾಕರ್ಷಕ ಎನಿಸುತ್ತವೆ. ಅಲ್ಲದೆ, ಬೇಸಿಗೆಗೆ ಹೇಳಿ ಮಾಡಿಸಿದಂತೆ ಇರುತ್ತವೆ. ಟ್ರೆಂಡಿಂಗ್‌ನಲ್ಲಿರುವ ಅಂಥ ಪ್ರಮುಖ ಬಣ್ಣಗಳು ಹೀಗಿವೆ:

ಪಿಸ್ತಾ ಹಸಿರು: ಈ ಸೌಮ್ಯವಾದ ಬಣ್ಣ ನೋಡಿದಾಕ್ಷಣ ಶಾಂತ ಭಾವವನ್ನು ಸ್ಫುರಿಸುತ್ತದೆ. ಆರಾಮದಾಯಕ ಹಾಗೂ ಸಂಯಮ ಶೈಲಿಯ ಬಣ್ಣ ಎನಿಸಿಕೊಂಡ ಪಿಸ್ತಾ ಹಸಿರಿನ ಫ್ಲೋಯಿಂಗ್ ಮ್ಯಾಕ್ಸಿ ಡ್ರೆಸ್ಸುಗಳು, ಸಾಂಪ್ರದಾಯಿಕ ಶೈಲಿಯ ಜಮ್ ಸೂಟ್‌ಗಳು ಭಾರತೀಯರ ಚರ್ಮದ ಟೋನ್‌ಗೆ ಚೆನ್ನಾಗಿ ಹೊಂದುತ್ತವೆ.

ಕಾಟನ್‌ಕ್ಯಾಂಡಿ ಪಿಂಕ್: ತಿಳಿ ಗುಲಾಬಿ ಬಣ್ಣದ ಟುಟು ಸ್ಕರ್ಟ್‌ಗಳು ಝೆನ್ ಜೀಗಳ ಮನಸ್ಸನ್ನು ಈಗಾಗಲೇ ಗೆದ್ದಿವೆ. ಫ್ಯೂಷನ್ ಡ್ರೆಸ್‌ಗಳಲ್ಲಿ ಸಹಜವಾಗಿ, ಚಂದವಾಗಿ ಕಾಣಬೇಕೆಂದರೆ ಕಾಟನ್‌ಕ್ಯಾಂಡಿ ಪಿಂಕ್ ಬಣ್ಣದ ಬಟ್ಟೆಗಳನ್ನು ಆಯ್ಕೆ ಮಾಡಬಹುದು. ಅಷ್ಟೇ ಅಲ್ಲದೆ ಈ ಬಿರುಬಿಸಿಲಿನಲ್ಲಿ ನಡೆಯುವ ಮದುವೆ ಹಾಗೂ ಇತರ ಶುಭ ಸಮಾರಂಭಗಳಿಗೆ ತಿಳಿ ಗುಲಾಬಿ ಬಣ್ಣದ ಸಾಂಪ್ರದಾಯಿಕ ಉಡುಗೆಗಳು ಎಲಿಗೆಂಟ್ ಲುಕ್‌ನ ಜತೆಗೆ ಹಿತವಾದ ಅನುಭವವನ್ನೂ ಕೊಡುತ್ತವೆ.

ಐಸ್ ಬ್ಲೂ: ಚಳಿಗಾಲವೇನೋ ಮುಗಿದಿದೆ. ಬೇಸಿಗೆಯಲ್ಲಿಯೂ ಐಸ್ ಬ್ಲೂ ಬಣ್ಣದ ಬಟ್ಟೆಗಳನ್ನು ತೊಟ್ಟು ಚಳಿಗಾಲವನ್ನು ನೆನೆಯಬಹುದಾಗಿದೆ. ಈ ಬಣ್ಣದಲ್ಲಿ ಕುರ್ತಾ ಸೆಟ್‌ಗಳನ್ನು ತೊಟ್ಟು, ಬೇಸಿಗೆಯ ಧಗೆಯನ್ನು ನಿವಾರಿಸಿಕೊಳ್ಳಬಹುದು.

ಲ್ಯಾವೆಂಡರ್ ಬ್ಲೂಮ್: ವಸಂತ ಋತುವಿನಲ್ಲಿ ಆರ್ಕಿಡ್ ಹೂಗಳು ಅರಳುತ್ತವೆ. ಈ ಹೂವು ಲ್ಯಾವೆಂಡರ್ ಬಣ್ಣದಲ್ಲೂ ಇರುತ್ತದೆ. ಹೂಗಳ ಪ್ರಿಂಟ್ ಇರುವ ಲ್ಯಾವೆಂಡರ್ ಕುರ್ತಾ ಸೆಟ್‌ಗಳು ನಿಮ್ಮ ವಾರ್ಡ್‌ರೋಬ್‌ನಲ್ಲಿ ಇದ್ದಷ್ಟೂ ನೀವು ಬೇಸಿಗೆಯ ಫ್ಯಾಷನ್‌ಗೆ ಅಪ್‌ಡೇಟ್ ಆದಂತೆಯೇ!



ರಸಾಸ್ವಾದ

ಅಬ್ಬಾ ಸೆಕೆ ಪಾನಕ ಬೇಕೆ?

- ವೇದಾವತಿ ಎಚ್.ಎಸ್.



ಬೆಲ್ಲದಲ್ಲಿ ಮ್ಯಾಜಿಕ್

ಬೇಕಾಗುವ ಸಾಮಗ್ರಿ: ಬೆಲ್ಲ 1 ಕಪ್, ನೀರು 2 ಕಪ್, 2 ನಿಂಬೆಹಣ್ಣಿನ ರಸ, ಶುಂಠಿರಸ 1 ಟೀ ಚಮಚ, ಜಾಯಿಕಾಯಿ ಪುಡಿ ಚಿಟಿಕೆ, ಏಲಕ್ಕಿಪುಡಿ 1/4 ಟೀ ಚಮಚ, ಕಾಳುಮೆಣಸಿನ ಪುಡಿ 1/4 ಟೀ ಚಮಚ, ತುಳಸಿ ಎಲೆ 6.

ತಯಾರಿಸುವ ವಿಧಾನ: ಬಟ್ಟಲಿಗೆ ಬೆಲ್ಲ ಮತ್ತು ನೀರನ್ನು ಹಾಕಿ ಕರಗಿಸಿಕೊಳ್ಳಿ. ನಂತರ ನಿಂಬೆರಸ, ಶುಂಠಿರಸ, ಜಾಯಿಕಾಯಿ ಪುಡಿ, ಏಲಕ್ಕಿಪುಡಿ, ಕಾಳುಮೆಣಸಿನಪುಡಿಯನ್ನು ಸೇರಿಸಿ ಚೆನ್ನಾಗಿ ಮಿಶ್ರ ಮಾಡಿ. ಬಳಿಕ ಸೋಸಿಕೊಂಡು ತುಳಸಿ ಎಲೆಯನ್ನು ಸೇರಿಸಿ. ರುಚಿಕರವಾದ ಮತ್ತು ಆರೋಗ್ಯಕರವಾದ ಪಾನಕ ಸವಿಯಲು ಸಿದ್ಧ.

ಸವಿಯಿರಿ 'ರಾಮಧಾನ್ಯ'

ಬೇಕಾಗುವ ಸಾಮಗ್ರಿ: ರಾಗಿ 1/4 ಕಪ್, ಖರ್ಜೂರ 4, ಬಾದಾಮಿ 6, ಏಲಕ್ಕಿ 2, ನೀರು 2 ಕಪ್.

ತಯಾರಿಸುವ ವಿಧಾನ: ರಾಗಿಯನ್ನು ನಾಲ್ಕು ಗಂಟೆ, ಖರ್ಜೂರ ಮತ್ತು ಬಾದಾಮಿಯನ್ನು ಒಂದು ಗಂಟೆ ನೀರಿನಲ್ಲಿ ನೆನೆಸಿಡಿ. ಬಳಿಕ ರಾಗಿಯನ್ನು ಚೆನ್ನಾಗಿ ತೊಳೆದು ಮಿಕ್ಸಿ ಜಾರಿಗೆ ಹಾಕಿ. ಜೊತೆಗೆ ಖರ್ಜೂರ, ಬಾದಾಮಿ ಮತ್ತು ಏಲಕ್ಕಿಯನ್ನು ಸೇರಿಸಿ ಒಂದು ಕಪ್ ನೀರನ್ನು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ನಂತರ ಸೋಸಿಕೊಳ್ಳಿ. ಪುನಃ ಮತ್ತೊಂದು ಕಪ್ ನೀರು ಸೇರಿಸಿ ನುಣ್ಣಗೆ ರುಬ್ಬಿಕೊಂಡು ಸೋಸಿಕೊಳ್ಳಿ. ಹೀಗೆ ತಯಾರಿಸಿದ ರಾಗಿ ಪಾನಕವನ್ನು ಸರ್ವಿಂಗ್ ಗ್ಲಾಸಿಗೆ ಹಾಕಿ ಸವಿಯಿರಿ.



ಮಜಬೂತಾದ ಕರಬೂಜ

ಬೇಕಾಗುವ ಸಾಮಗ್ರಿ: ಮಧ್ಯಮ ಗಾತ್ರದ ಕರಬೂಜ ಹಣ್ಣು 1/2, ಬೆಲ್ಲ 1/2 ಕಪ್, ನೀರು 1/2 ಲೀಟರ್. ನಿಂಬೆಹಣ್ಣು 1/2, ಏಲಕ್ಕಿಪುಡಿ 1/2 ಟೀ ಚಮಚ, ಕಾಳುಮೆಣಸಿನ ಪುಡಿ 1/4 ಟೀ ಚಮಚ.

ತಯಾರಿಸುವ ವಿಧಾನ: ಕರಬೂಜ ಹಣ್ಣಿನ ಸಿಪ್ಪೆ ಮತ್ತು ಬೀಜವನ್ನು ತೆಗೆದು ಮಿಕ್ಸಿ ಜಾರಿಗೆ ಹಾಕಿಕೊಳ್ಳಿ. ಜೊತೆಗೆ ಬೆಲ್ಲ, ನಿಂಬೆರಸ, ಏಲಕ್ಕಿಪುಡಿ, ಕಾಳುಮೆಣಸಿನಪುಡಿ ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ನಂತರ ನೀರನ್ನು ಸೇರಿಸಿ.



ಮತ್ತೆ ಮತ್ತೆ ಸವಿಯುವಿರಿ ಲಿವರ್ ಫ್ರೈ

- ವಾತ್ಸಲ್ಯ ಎಚ್.ಬಿ.

ಭಾನುವಾರ ಬಂತೆಂದರೆ, ಮಾಂಸಾಹಾರಿಗಳಿಗೆ ಈ ವಾರ ಮನೆಯಲ್ಲಿ ಯಾವ ಮಾಂಸದಡುಗೆ ಮಾಡುವುದು ಎಂಬ ಚಿಂತೆ. ಯಾವಾಗಲೂ ಚಿಕನ್, ಮಟನ್, ಮೀನು, ಮೊಟ್ಟೆಯನ್ನೇ ತಿಂದು ಬೇಜಾರಾಗಿದ್ದರೆ ಒಮ್ಮೆ ಲಿವರ್ ಫ್ರೈ ಮಾಡಿ ರುಚಿ ನೋಡಿ. ನಾಲಿಗೆ ಮತ್ತೆ ಮತ್ತೆ ಅದನ್ನು ಬಯಸುತ್ತಿರುತ್ತದೆ.

ಕೋಳಿಯ ಲಿವರ್ ತಿನ್ನುವುದರಿಂದ ರುಚಿಯ ಜೊತೆಗೆ ರಕ್ತದಲ್ಲಿ ಹಿಮೊಗ್ಲೋಬಿನ್ ಪ್ರಮಾಣ ಕಡಿಮೆ ಇರುವವರಿಗೆ ಅತಿ ವೇಗವಾಗಿ ಅದರ ಪ್ರಮಾಣ ಹೆಚ್ಚುತ್ತದೆ.



ಹೀಗೆ ಮಾಡಿ

ಬೇಕಾಗುವ ಸಾಮಗ್ರಿ: ಕೋಳಿ ಲಿವರ್– 250 ಗ್ರಾಂ, ಈರುಳ್ಳಿ– ಸಣ್ಣದಾಗಿ ಕತ್ತರಿಸಿದ್ದು 2, ಹಸಿಮೆಣಸಿನಕಾಯಿ– 2ರಿಂದ 3, ಶುಂಠಿ- ಬೆಳ್ಳುಳ್ಳಿ ಪೇಸ್ಟ್– 1 ಟೀ ಸ್ಪೂನ್, ಅರಸಿನ– ¼ ಟೀ ಸ್ಪೂನ್, ಮೆಣಸಿನಕಾಯಿ ಪುಡಿ– 1 ಟೀ ಸ್ಪೂನ್, ದನಿಯಾ ಪುಡಿ– 1 ಟೀ ಸ್ಪೂನ್, ಗರಂ ಮಸಾಲ– ½ ಟೀ ಸ್ಪೂನ್, ಉಪ್ಪು– ರುಚಿಗೆ ತಕ್ಕಷ್ಟು, ಎಣ್ಣೆ– 2 ಟೇಬಲ್ ಸ್ಪೂನ್, ಕರಿಬೇವು– ಸ್ವಲ್ಪ, ಕೊತ್ತಂಬರಿ ಸೊಪ್ಪು– ಅಲಂಕಾರಕ್ಕೆ.

ತಯಾರಿಸುವ ವಿಧಾನ: ಲಿವರ್ ಅನ್ನು ಚೆನ್ನಾಗಿ ತೊಳೆದು ಸಣ್ಣ ತುಂಡುಗಳಾಗಿ ಕತ್ತರಿಸಿ. ಎಣ್ಣೆ ಬಿಸಿ ಮಾಡಿ, ಕರಿಬೇವು ಹಾಕಿ. ನಂತರ ಈರುಳ್ಳಿ ಮತ್ತು ಹಸಿಮೆಣಸಿನಕಾಯಿ ಹಾಕಿ, ಕಂದು ಬಣ್ಣ ಬರುವವರೆಗೆ ಹುರಿಯಿರಿ. ಬಳಿಕ ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಸೇರಿಸಿ ಚೆನ್ನಾಗಿ ಹುರಿಯಿರಿ.

ಈಗ ಲಿವರ್ ತುಂಡುಗಳನ್ನು ಸೇರಿಸಿ, ಉಪ್ಪು ಮತ್ತು ಅರಸಿನ ಹಾಕಿ ಚೆನ್ನಾಗಿ ಕಲಸಿ. ನಂತರ ಮಸಾಲೆ ಪದಾರ್ಥಗಳಾದ ಮೆಣಸಿನಕಾಯಿ ಪುಡಿ, ದನಿಯಾ ಪುಡಿ, ಗರಂ ಮಸಾಲ ಹಾಕಿ ಚೆನ್ನಾಗಿ ಕಲಕಿದ ಮಿಶ್ರಣವನ್ನು 2 ನಿಮಿಷ ಹುರಿಯಿರಿ. ಮಧ್ಯಮ ಉರಿಯಲ್ಲಿ 8–10 ನಿಮಿಷಗಳವರೆಗೆ ಮುಚ್ಚಿ ಬೇಯಿಸಿ. ಮಧ್ಯೆ ಮಧ್ಯೆ ತಿರುಗಿಸುತ್ತಿರಿ. ಕೊನೆಯಲ್ಲಿ ಕೊತ್ತಂಬರಿಸೊಪ್ಪು ಹಾಕಿ ಅಲಂಕರಿಸಿ. ಈಗ ರುಚಿಕರ ಹಾಗೂ ಆರೋಗ್ಯಕರ ಲಿವರ್ ಫ್ರೈ ಸವಿಯಲು ಸಿದ್ಧ!

ಎಚ್‌ಪಿವಿ ಲಸಿಕೆ: ತೊಂದರೆ ಇಲ್ಲವೇ?

ಸ್ಪಂದನ



ಡಾ. ವೀಣಾ ಎಸ್. ಭಟ್

- **ನನ್ನ ಮಗಳಿಗೆ ಈಗ 14 ವರ್ಷ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎಚ್‌ಪಿವಿ ಲಸಿಕೆ ಹಾಕಿಸಿಕೊಳ್ಳಲು ಶಾಲೆಯವರೂ ಆಶಾ ಕಾರ್ಯಕರ್ತೆಯರೂ ಒತ್ತಾಯ ಮಾಡಿ ಕರೆಯುತ್ತಿದ್ದಾರೆ. ನಮ್ಮ ಅಕ್ಕಪಕ್ಕದ ಕೆಲವರು, ಈ ವಯಸ್ಸಿನಲ್ಲೇ ಲಸಿಕೆ ಯಾಕೆ, ಮುಂದೆ ಮಕ್ಕಳಾಗದೇ ಇದ್ದರೆ, ಮುಟ್ಟಿನ ಏರುಪೇರು ಉಂಟಾದರೆ ಏನು ಮಾಡ್ತೀರಾ ಎಂದು ಕೇಳುತ್ತಿದ್ದಾರೆ. ಮಗಳು ಈಗಾಗಲೇ ತುಂಬಾ ದಪ್ಪವಿದ್ದು, ತಿಂಗಳ ಮುಟ್ಟು ಸರಿಯಾಗಿ ಆಗುತ್ತಿಲ್ಲ. ನನಗೆ ವ್ಯಾಕ್ಸಿನ್ ಹಾಕಿಸಬೇಕೋ ಬೇಡವೋ ಎನ್ನುವ ಗೊಂದಲವಿದೆ. ಏನು ಮಾಡಲಿ? ಈ ವ್ಯಾಕ್ಸಿನ್‌ನಿಂದ ಏನೂ ತೊಂದರೆ ಇಲ್ಲವೇ?**

ಸುಮಿತ್ರಾ, ಗುಬ್ಬಿ

ಈಗ ಭಾರತದಲ್ಲಿ 14 ವರ್ಷ ತುಂಬಿದ ಹೆಣ್ಣುಮಕ್ಕಳಿಗೆ ಎಲ್ಲೆಡೆ ಹಾಕಿಸುತ್ತಿರುವ ಲಸಿಕೆಯು ಹ್ಯೂಮನ್ ಪ್ಯಾಪಿಲೋಮ ವೈರಸ್ ಅಂದರೆ ಎಚ್‌ಪಿವಿ ವೈರಸ್ ವಿರುದ್ಧ ಹಾಕುವ ಲಸಿಕೆಯಾಗಿದೆ. ಈ ವೈರಸ್ ಶೇಕಡ 90ಕ್ಕೂ ಹೆಚ್ಚಿನ ಸಂದರ್ಭಗಳಲ್ಲಿ ಗರ್ಭಕೊರಳಿನ ಕ್ಯಾನ್ಸರ್‌ಗೆ ಕಾರಣವಾಗಿರುತ್ತದೆ. ಸರ್ ಹೆರಾಲ್ಡ್-ಜರ್-ಹುಸೇನ್ ಅವರು ಗರ್ಭಕೊರಳಿನ ಕ್ಯಾನ್ಸರ್‌ಗೆ ಈ ವೈರಸ್ ಕಾರಣವೆಂದು ಸಂಶೋಧಿಸಿ, 2008ರಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದಿದ್ದಾರೆ. ಇದೊಂದು ಸಣ್ಣ ಡಿಎನ್‌ಎ ವೈರಸ್ ಆಗಿದ್ದು, ಇದು ಲೋಳೆಪೊರೆಯಿಂದ ಮತ್ತು ಚರ್ಮದಿಂದ ಚರ್ಮಕ್ಕೆ ಹರಡಬಹುದು.

ಲೈಂಗಿಕವಾಗಿ ಸಕ್ರಿಯವಾಗಿರುವ ಎಲ್ಲರೂ ಜೀವಿತಾವಧಿಯಲ್ಲಿ ಶೇಕಡ 90ಕ್ಕಿಂತ ಹೆಚ್ಚಿನ ಸಂದರ್ಭಗಳಲ್ಲಿ ಎಚ್‌ಪಿವಿ ಸೋಂಕಿಗೆ ಆರಂಭಿಕ ವಯಸ್ಸಿನಲ್ಲಿಯೇ ಒಳಪಟ್ಟರೂ ಉತ್ತಮ ರೋಗನಿರೋಧಕ ಶಕ್ತಿಯಿಂದ ಸೋಂಕು ಹಿಮ್ಮೆಟ್ಟಬಹುದು. ಆದರೂ ರೋಗನಿರೋಧಕ ಶಕ್ತಿ ಕಡಿಮೆಯಾದ ಸಂದರ್ಭದಲ್ಲಿ ಈ ಸೋಂಕು ಲೋಳೆಪೊರೆಯಿಂದ ಒಳ ಪ್ರವೇಶಿಸಿ ಎಚ್‌ಪಿವಿ ವೈರಸ್‌ನ ಡಿಎನ್‌ಎದಲ್ಲಿ ಜೀವಕೋಶದೊಳಗೆ ಸೇರಿ ರೂಪಾಂತರಕ್ಕೆ ಒಳಗಾಗಿ, ವೈರಸ್‌ನ ಪ್ರತಿಕೃತಿಗಳು ಉಂಟಾಗಬಹುದು. ಸೋಂಕು ಶೇಕಡ 90ರಷ್ಟು ಸಂದರ್ಭಗಳಲ್ಲಿ ಹಾಗೆಯೇ ಗುಣವಾಗುತ್ತದೆ. ಆದರೆ ಶೇಕಡ 0.8ರಿಂದ 10ರಷ್ಟು ಸಂದರ್ಭಗಳಲ್ಲಿ ವೈರಸ್ ಸೋಂಕು ಮುಂದಿನ ಹತ್ತರಿಂದ ಹದಿನೈದು ವರ್ಷದೊಳಗೆ ಪೂರ್ವಾಕ್ರಮಣಕಾರಿ ಸೋಂಕಾಗಿ ನಂತರ ಆಕ್ರಮಣಕಾರಿ ಕ್ಯಾನ್ಸರ್ ಆಗಿಯೂ ಪರಿವರ್ತಿತವಾಗಬಹುದು. ಇಂತಹವರ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದೆ ಅನ್ನಿಸಿದರೂ ಅಭಿವೃದ್ಧಿ ಪಥದಲ್ಲಿ ಇರುವ ಭಾರತದಂತಹ ರಾಷ್ಟ್ರಗಳಿಗೆ ಬಹಳಷ್ಟು ಹೊರೆಯಾಗುತ್ತದೆ.

ಈ ವೈರಸ್ ಉಳಿಯುವಿಕೆಯನ್ನು ತೀವ್ರಗೊಳಿಸುವ ಅಂಶಗಳೆಂದರೆ, ಒಬ್ಬರಿಗಿಂತ ಹೆಚ್ಚು ಲೈಂಗಿಕ ಸಂಗಾತಿಗಳಿರುವುದು, ಕುಂದಿದ ರೋಗನಿರೋಧಕ ಶಕ್ತಿ, ಧೂಮಪಾನ, ಜನನಾಂಗ ಭಾಗದ ಸ್ವಚ್ಛತೆ ಕಾಪಾಡದೇ ಇರುವುದು, ಅಪೌಷ್ಟಿಕತೆ ಇತ್ಯಾದಿ. 14ನೇ ವಯಸ್ಸಿನಲ್ಲಿ ದೇಹದ ಪ್ರತಿರಕ್ಷಣಾ ವ್ಯವಸ್ಥೆ ಅತಿ ಹೆಚ್ಚಿನ ಮಟ್ಟದಲ್ಲಿ ಇರುತ್ತದೆ. ಸರ್ಕಾರದಿಂದ ಕೊಡುತ್ತಿರುವ ಗರ್ಡಾಸಿಲ್ ಎಂಬ ಎಚ್‌ಪಿವಿ ಲಸಿಕೆಯನ್ನು ಕೇವಲ ಒಂದು ಡೋಸ್ ಹಾಕಿಸುವುದರಿಂದ, ಈ ವ್ಯಾಕ್ಸಿನ್ ದೇಹದಲ್ಲಿ ಉತ್ತಮ ಪ್ರತಿರಕ್ಷಣಾ ಪ್ರತಿಕ್ರಿಯೆಯನ್ನು ಉಂಟುಮಾಡಿ, ಸೋಂಕು ಕ್ಯಾನ್ಸರ್ ಹಂತಕ್ಕೆ ಹೋಗುವುದನ್ನು ತಡೆಗಟ್ಟುತ್ತದೆ.

ವಿಶ್ವದಲ್ಲಿ 2006ರಿಂದಲೇ 50 ಕೋಟಿ ಡೋಸ್‌ಗೂ ಹೆಚ್ಚಿನ ಪ್ರಮಾಣದಲ್ಲಿ ಈ ವ್ಯಾಕ್ಸಿನ್ ವಿತರಣೆಯಾಗಿ ಹೆಣ್ಣುಮಕ್ಕಳನ್ನು ಗರ್ಭಕೊರಳಿನ ಕ್ಯಾನ್ಸರ್‌ನಿಂದ ರಕ್ಷಿಸಿರುವುದು ದೃಢಪಟ್ಟಿದೆ. ಹಾಗಾಗಿ, ನಿಮ್ಮ ಮಗಳಿಗೆ ಈ ಲಸಿಕೆ ಹಾಕಿಸಿ. ಬಂಜೆತನ, ಮುಟ್ಟಿನ ಏರುಪೇರಿನಂತಹ ಸಮಸ್ಯೆಗಳೆಲ್ಲ ಇಂದಿನ ತಪ್ಪು ಜೀವನಶೈಲಿಯಿಂದ ಆಗುತ್ತಿರುವ ಪಿಸಿಒಡಿಯಂತಹ ಸಮಸ್ಯೆಗಳಿಂದಲೇ ವಿನಾ ಎಚ್‌ಪಿವಿ ಲಸಿಕೆಯಿಂದ ಅಲ್ಲ.

ವಿಶ್ವ ಆರೋಗ್ಯ ಸಂಸ್ಥೆಯು ಎರಡು ಅಥವಾ ಮೂರು ಡೋಸ್ ಬದಲು ಒಂದೇ ಡೋಸ್ ಪರಿಣಾಮಕಾರಿ ಎಂದು 2023ರಲ್ಲಿಯೇ ಪರಿಗಣಿಸಿದೆ. ಲಸಿಕೆಗಳ ಬಗ್ಗೆ ಇರುವ ರಾಷ್ಟ್ರೀಯ ತಾಂತ್ರಿಕ ಸಲಹಾ ಸಮಿತಿ ತಿಳಿಸಿರುವ ಹಾಗೆ, ಇದು ಈ ವೈರಸ್‌ನ ನಾಲ್ಕು ಪ್ರಭೇದಗಳ ಅಕ್ರಮಣದ ವಿರುದ್ಧ ರಕ್ಷಣೆ ದೊರಕಿಸಿ, ಗರ್ಭಕೊರಳಿನ ಕ್ಯಾನ್ಸರ್, ಜನನಾಂಗದ ನರೋಳಿ, ವಾರ್ಟ್, ಯೋನಿಯ ಕ್ಯಾನ್ಸರ್‌ನಂತಹ ಬಾಧೆಗಳನ್ನು ತಡೆಗಟ್ಟುತ್ತದೆ. ನಡೆದಾಡುವ ಮೊದಲೇ ಪೋಲಿಯೊ ಲಸಿಕೆ ಹಾಕಿಸುವ ಹಾಗೆ, ಹದಿವಯಸ್ಸಿನಲ್ಲೇ ಲಸಿಕೆ ಹಾಕಿಸಿ ಭವಿಷ್ಯದಲ್ಲಿ ಗರ್ಭಕೊರಳಿನ ಕ್ಯಾನ್ಸರ್ ಅನ್ನು ಜಯಿಸಬಹುದು. ಹಾಗಾಗಿ, ಈ ಲಸಿಕೆ ಅತಿ ಮುಖ್ಯ.

‘ಕಟ್ಟಡಗಳ ಎತ್ತರದ ನಿರ್ಬಂಧ ಸಡಿಲಿಸಿ’

ನವದೆಹಲಿಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಜೊತೆ ಡಿಕೆಶಿ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ವಿಮಾನ ನಿಲ್ದಾಣಗಳ ಸುತ್ತಮುತ್ತಲ ಪ್ರದೇಶದಲ್ಲಿ ರಕ್ಷಣಾ ಇಲಾಖೆ ವಿಧಿಸಿರುವ ಕಟ್ಟಡಗಳ ಎತ್ತರದ ನಿರ್ಬಂಧಗಳು ಪ್ರಗತಿಗೆ ಅಡ್ಡಿಯಾಗಿದ್ದು, ಈ ನಿರ್ಬಂಧಗಳನ್ನು ಸಡಿಲಗೊಳಿಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮನವಿ ಮಾಡಿದರು.

ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಶುಕ್ರವಾರ ಭೇಟಿ ಮಾಡಿದ ಶಿವಕುಮಾರ್ ಮನವಿ ಪತ್ರ ಸಲ್ಲಿಸಿದರು.

‘ವಿಮಾನ ನಿಲ್ದಾಣಗಳ 20 ಕಿ.ಮೀ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ನಿರಾಕ್ಷೇಪಣಾ ಪತ್ರ ನೀಡುವಾಗ ವಿಮಾನ ನಿಲ್ದಾಣದ ಅಧಿಕಾರಿಗಳು ವಿಪರೀತ ನಿರ್ಬಂಧಗಳನ್ನು ವಿಧಿಸುತ್ತಿದ್ದಾರೆ. ಬೆಂಗಳೂರು ವಿಶ್ವದ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಎಚ್‌ಎಎಲ್ ವಿಮಾನ ನಿಲ್ದಾಣ ಬೆಂಗಳೂರಿನ ಹೃದಯ ಭಾಗದಲ್ಲಿದ್ದು, ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ, ಹೆಚ್ಚುವರಿಯಾಗಿ ವಿಧಿಸಿರುವ ನಿರ್ಬಂಧಗಳು ಈ ಪ್ರದೇಶಗಳಲ್ಲಿ ಅಭಿವೃದ್ಧಿಗೆ ಅಡ್ಡಿ ಆಗಿವೆ’ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

‘ಈ ವಿಚಾರವಾಗಿ ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ ಹಾಗೂ ರಕ್ಷಣಾ ಕಾರ್ಯದರ್ಶಿಗಳಿಗೆ ಪತ್ರಗಳನ್ನು ಬರೆಯಲಾಗಿದೆ. ವಿಮಾನ ಸುರಕ್ಷತೆ ಹಾಗೂ ನಗರದ ಅಭಿವೃದ್ಧಿ ಎರಡರ ಹಿತದೃಷ್ಟಿ ಗಮನದಲ್ಲಿಟ್ಟುಕೊಂಡು ಪರಿಶೀಲನೆ ನಡೆಸಿ, ಎದುರಾಗುವ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು’ ಎಂದು ಮನವಿ ಮಾಡಿದ್ದಾರೆ.

‘ಎಚ್‌ಎಎಲ್ ಹಾಗೂ ಯಲಹಂಕ ವಾಯುನೆಲೆಯ ಸುತ್ತಮುತ್ತಲ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಮಾಡಲು ವಿಮಾನ ನಿಲ್ದಾಣ ಅಧಿಕಾರಿಗಳಿಂದ ನಿರಾಕ್ಷೇಪಣ ಪತ್ರ ಪಡೆಯಬೇಕಾಗಿದೆ. ವಿಮಾನ ನಿಲ್ದಾಣದ ಸುತ್ತಮುತ್ತಲ 15 ಕಿ.ಮೀ ವ್ಯಾಪ್ತಿಯಲ್ಲಿ ಕಟ್ಟಡಗಳ ಎತ್ತರದ ಮಿತಿಯನ್ನು 150 ಮೀಟರ್‌ಗೆ ನಿಗದಿಪಡಿಸಲಾಗಿದೆ ಎಂದು ಜಿ.ಎಸ್.ಆರ್ 751 (ಇ) ನಿಯಮದಲ್ಲಿ ತಿಳಿಸಲಾಗಿದೆ. ಆದರೆ, ರಕ್ಷಣಾ ಇಲಾಖೆ ವಿಮಾನ ನಿಲ್ದಾಣಗಳು ಈ ವಿಪರೀತ ನಿರ್ಬಂಧ ಹೇರುವುದರ ಜತೆಗೆ 150 ಮೀ. ಎತ್ತರದ ಮಿತಿಯನ್ನು 15 ಕಿ.ಮೀ ಮೀರಿ 20 ಕಿ.ಮೀ ವರೆಗೂ ವಿಸ್ತರಿಸಿವೆ. ಈ ನಿರ್ಬಂಧಗಳು ಬೆಂಗಳೂರು ನಗರದ ಪ್ರಗತಿಗೆ ಮಾರಕವಾಗಿವೆ’ ಎಂದು ಅವರು ಗಮನಸೆಳೆದಿದ್ದಾರೆ.

ಸಿಂಗಪುರ, ಡಲ್ಲಾಸ್, ಲಂಡನ್ ಹಾಗೂ ದುಬೈ ಸೇರಿದಂತೆ ಅನೇಕ ನಗರಗಳಲ್ಲಿ ವಿಮಾನ ನಿಲ್ದಾಣಗಳನ್ನು ಕಚೇರಿ, ಮನರಂಜನೆ ಸೇರಿದಂತೆ ವಿವಿಧೋದ್ದೇಶಗಳಿಗೆ ಬಳಸಲಾಗುತ್ತಿದೆ. ಈ ನಗರಗಳಲ್ಲಿ ವಿಮಾನ ನಿಲ್ದಾಣಗಳು ಸಂಚಾರ ಉದ್ದೇಶಕ್ಕೆ ಮಾತ್ರವಲ್ಲದೇ ಉದ್ಯೋಗದ ಕೇಂದ್ರವಾಗಿ ನಗರ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ಹೀಗಾಗಿ ಜಿ.ಎಸ್.ಆರ್ 751 (ಇ) ನಿಯಮ ಸಡಿಲಗೊಳಿಸಬೇಕು. 150 ಮೀ. ಎತ್ತರದ ಮಿತಿಯನ್ನು 15 ಕಿ.ಮೀ ವ್ಯಾಪ್ತಿಗೆ ಸೀಮಿತಗೊಳಿಸಿ ಎಂದು ಅವರು ಕೋರಿದ್ದಾರೆ.



ರಾಜನಾಥ್ ಸಿಂಗ್ ಅವರೊಂದಿಗೆ ಡಿ.ಕೆ. ಶಿವಕುಮಾರ್ ಚರ್ಚಿಸಿದರು

ರಕ್ಷಣಾ ಭೂಮಿಗೆ ಮನವಿ

ಉತ್ತರ ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಅವಳಿ ಸುರಂಗ ಮಾರ್ಗ ಯೋಜನೆ ಪ್ರಸ್ತಾಪಿಸಿದ್ದು, ಯೋಜನೆಗೆ ಹೆಬ್ಬಾಳದ ಬಳಿ 2.03 ಎಕರೆ ರಕ್ಷಣಾ ಭೂಮಿ ಬೇಕಿದೆ. ಈ ಜಾಗ ಒದಗಿಸಬೇಕು. ಬೈಯಪ್ಪನಹಳ್ಳಿ ರೈಲ್ವೆ ಜಂಕ್ಷನ್ ಬಳಿ ಮೇಲ್ಸೇತುವೆ ನಿರ್ಮಾಣಕ್ಕೆ 1.19 ಎಕರೆ ರಕ್ಷಣಾ ಭೂಮಿ ಕೊಡಿ. ಬಳ್ಳಾರಿ ರಸ್ತೆಯಿಂದ ಸರೋವರ ಲೇಔಟ್‌ಗೆ ಸಂಪರ್ಕ ರಸ್ತೆಗಾಗಿ 6.8 ಎಕರೆ ರಕ್ಷಣಾ ಇಲಾಖೆ ಜಾಗ ನೀಡಿ ಎಂದು ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

ಆರು ತಿಂಗಳ ಕಾಲಾವಕಾಶ ಕೇಳಿದ ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹಾಗೂ ತಮಿಳುನಾಡು ನಡುವಿನ ಪೆಣ್ಣಾರ್ (ದಕ್ಷಿಣ ಪಿನಾಕಿನಿ) ನದಿ ನೀರು ಹಂಚಿಕೆ ವಿವಾದಗಳನ್ನು ಬಗೆಹರಿಸಲು ನ್ಯಾಯಮಂಡಳಿ ರಚಿಸಲು ಆರು ತಿಂಗಳ ಕಾಲಾವಕಾಶ ನೀಡುವಂತೆ ಕೇಂದ್ರ ಜಲಶಕ್ತಿ ಸಚಿವಾಲಯವು ಸುಪ್ರೀಂ ಕೋರ್ಟ್‌ಗೆ ಕೋರಿದೆ.

ಜಲವಿವಾದ ಬಗೆಹರಿಸಲು ಒಂದು ತಿಂಗಳಲ್ಲಿ ನ್ಯಾಯಮಂಡಳಿ ರಚಿಸಬೇಕು ಎಂದು ನ್ಯಾಯಮೂರ್ತಿ ವಿಕ್ರಮ್‌ನಾಥ್ ನೇತೃತ್ವದ ಪೀಠವು ಜಲಶಕ್ತಿ ಸಚಿವಾಲಯಕ್ಕೆ ಫೆಬ್ರುವರಿ 2ರಂದು ನಿರ್ದೇಶನ ನೀಡಿತ್ತು. ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿರುವ ಜಲಶಕ್ತಿ ಸಚಿವಾಲಯ, ‘ನ್ಯಾಯಮಂಡಳಿ ರಚನೆಗೆ ಏಪ್ರಿಲ್‌ನಿಂದ ಅನ್ವಯವಾಗುವಂತೆ ಆರು ತಿಂಗಳ ಕಾಲಾವಕಾಶ ನೀಡಬೇಕು’ ಎಂದು ಮನವಿ ಮಾಡಿದೆ.

‘ಸುಪ್ರೀಂ ಕೋರ್ಟ್ ನಿರ್ದೇಶನ ಪಾಲಿಸಲು ಸಚಿವಾಲಯವು ಅಗತ್ಯ ಕ್ರಮ ಕೈಗೊಳ್ಳುತ್ತಿದೆ. ನ್ಯಾಯಮಂಡಳಿ ರಚನೆಗೆ ಅಂತರ್ ಇಲಾಖೆಗಳ ಜತೆ ಸಮಾಲೋಚನೆ ನಡೆಸಲಾಗಿದೆ. ವಿವಿಧ ಇಲಾಖೆಗಳ ಅಭಿಪ್ರಾಯ ಪಡೆದು ಸಚಿವ ಸಂಪುಟ ಟಿಪ್ಪಣಿ ಸಿದ್ಧಪಡಿಸಲಾಗಿದೆ. ಕೇಂದ್ರ ಸಚಿವ ಸಂಪುಟದ ಪರಿಗಣನೆಗೆ ಕರಡು ಟಿಪ್ಪಣಿಯನ್ನು ಸಚಿವ ಸಂಪುಟ ಕಾರ್ಯದರ್ಶಿ ಅವರಿಗೆ ಕಳುಹಿಸಲಾಗಿದೆ’ ಎಂದು ಸಚಿವಾಲಯ ಮಾಹಿತಿ ನೀಡಿದೆ.

‘ಸಂಪುಟದ ಅನುಮೋದನೆಯ ನಂತರ, ಅಂತರಾಜ್ಯ ನದಿ ನೀರು ವಿವಾದ ಕಾಯ್ದೆ- 1956ರ ಪ್ರಕಾರ ನ್ಯಾಯಮಂಡಳಿಗೆ ಅಧ್ಯಕ್ಷರು ಮತ್ತು ಸದಸ್ಯರ ಹುದ್ದೆಗೆ ನಾಮನಿರ್ದೇಶನ ಮಾಡುವಂತೆ ಭಾರತದ ಮುಖ್ಯ ನ್ಯಾಯಮೂರ್ತಿ ಅವರಿಗೆ ಕೋರಿಕೆ ಸಲ್ಲಿಸಲಾಗುತ್ತದೆ. ನಾಮನಿರ್ದೇಶನ ಮಾಡಿದ ನಂತರ, ಕರಡು ಅಧಿಸೂಚನೆಯನ್ನು ಕಾನೂನು ವ್ಯವಹಾರಗಳ ಸಚಿವಾಲಯ ಸಿದ್ಧಪಡಿಸುತ್ತದೆ. ಅ ನಂತರ, ನ್ಯಾಯಮಂಡಳಿ ರಚನೆಯ ಅಧಿಸೂಚನೆ ಹೊರಡಿಸಲಾಗುತ್ತದೆ. ಈ ಪ್ರಕ್ರಿಯೆಗಳನ್ನು ನಡೆಸಲು ಸಮಯಾವಕಾಶ ಬೇಕಾಗುತ್ತದೆ’ ಎಂದು ಸಚಿವಾಲಯ ತಿಳಿಸಿದೆ.

ದಕ್ಷಿಣ ಪಿನಾಕಿನಿ ನದಿಯ ಕಣಿವೆಯಲ್ಲಿ ಕರ್ನಾಟಕ ಸರ್ಕಾರವು ಮಾರ್ಕಂಡೇಯ ನದಿಗೆ ಅಡ್ಡಲಾಗಿ ಅಣೆಕಟ್ಟೆ ನಿರ್ಮಿಸಿದೆ. ಬೆಂಗಳೂರಿನ ಎಲೆ ಮಲ್ಲಪ್ಪ ಚೆಟ್ಟಿ ಕೆರೆಯಿಂದ ಹೊಸಕೋಟೆಯವರೆಗೆ ನೀರು ಹರಿಸುವ ಕಾಮಗಾರಿ, ಬ್ಯಾಲಹಳ್ಳಿ ಗ್ರಾಮದ ಹತ್ತಿರ ಪೆಣ್ಣಾರ್ ನದಿಯಿಂದ ನೀರು ಹರಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸಿ ಸುಪ್ರೀಂ ಕೋರ್ಟ್‌ಗೆ 2018ರ ಮೇ 18ರಂದು ಅರ್ಜಿ ಸಲ್ಲಿಸಿತ್ತು.

‘ಪದವಿ ಕಾಲೇಜು ಪ್ರಾಧ್ಯಾಪಕರ ಸೇವೆ ಒದಗಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಯಂ ಬೋಧಕರ ಕೊರತೆ ಎದುರಿಸುತ್ತಿರುವ ವಿಶ್ವವಿದ್ಯಾಲಯಗಳಲ್ಲಿ ಪಿಎಚ್‌.ಡಿ ಮಾರ್ಗದರ್ಶಕರಾಗಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಧ್ಯಾಪಕರ ಸೇವೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಆಗ್ರಹಿಸಿದ್ದಾರೆ.

ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು ವಿಶ್ವವಿದ್ಯಾಲಯ, ಸರ್ಕಾರಿ ಕಲಾ ಕಾಲೇಜು, ಕರ್ನಾಟಕ ಪತ್ರಾಗಾರ ಮತ್ತು ಗೆಜೆಟಿಯರ್ ಇಲಾಖೆ ಹಾಗೂ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತಿನ ಸಹಯೋಗದಲ್ಲಿ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿರುವ ಕರ್ನಾಟಕ ಇತಿಹಾಸ ಪರಿಷತ್ತಿನ 36ನೇ ವಾರ್ಷಿಕ ಮಹಾಧಿವೇಶನ ಉದ್ಘಾಟಿಸಿ ಅವರು ಮಾತನಾಡಿದರು.

ಆಶಯ ಭಾಷಣ ಮಾಡಿದ ದೆಹಲಿಯ ಜವಾಹರಲಾಲ್ ನೆಹರೂ ವಿ.ವಿಯ ನಿವೃತ್ತ ಇತಿಹಾಸ ಪ್ರಾಧ್ಯಾಪಕಿ ಜಾನಕಿ ನಾಯರ್, ‘ಕರ್ನಾಟಕ ಜ್ಞಾನ ಭಂಡಾರವನ್ನು ರಾಜ್ಯಸರ್ಕಾರ ಅಭಿವೃದ್ಧಿಪಡಿಸಬೇಕು. ಪತ್ರಾಗಾರ ಇಲಾಖೆಯನ್ನು ವಿಧಾನಸೌಧದಿಂದ ಸ್ಥಳಾಂತರಿಸಬೇಕು’ ಎಂದು ಸಲಹೆ ನೀಡಿದರು.

ವಿಧಾನ ಪರಿಷತ್ ಸದಸ್ಯರಾದ ರಾಮೋಜಿಗೌಡ, ಡಿ.ಟಿ.ಶ್ರೀನಿವಾಸ್, ಸಮ್ಮೇಳನ ಅಧ್ಯಕ್ಷರಾದ ಬೆಂಗಳೂರು ವಿ.ವಿ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕ ಎಸ್.ಶೇಕ್ ಮಸ್ತಾನ, ಕುಲಪತಿಗಳಾದ ಬಿ.ರಮೇಶ್, ಡಾ.ಎಸ್.ಎಂ.ಜಯಕರ, ಕರ್ನಾಟಕ ಇತಿಹಾಸ ಪರಿಷತ್ತಿನ ಪದಾಧಿಕಾರಿಗಳಾದ ಆರ್.ರಾಜಣ್ಣ, ಐ.ಕೆ.ಪತ್ತಾರ ಹಾಗೂ ಮಂಜುನಾಥ ಟಿ.ಎಂ., ಬಿ.ಸಿ.ನಾಗೇಂದ್ರ ಕುಮಾರ್, ಬಿ.ಆರ್. ಸುಪ್ರೀತ್ ಉಪಸ್ಥಿತರಿದ್ದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಉನ್ನತ ಶಿಕ್ಷಣದ ಸವಾಲುಗಳು ಮತ್ತು ಸಾಧ್ಯತೆಗಳು ವಿಷಯ ಕುರಿತು ಉಪನ್ಯಾಸ ನೀಡಿದರು.

ಮಂತ್ರಾಲಯ–ಉತ್ತರಾದಿ ಮಠದ ನಡುವಿನ ಕಾನೂನು ಹೋರಾಟಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊಪ್ಪಳ ಜಿಲ್ಲೆಯ ನವ ವೃಂದಾವನ ಗಡ್ಡೆಯ ಪೂಜೆ ಮತ್ತು ಇತರ ಆಚರಣೆಗಳನ್ನು ನಡೆಸುವ ಬಗ್ಗೆ ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠ ಮತ್ತು ಉತ್ತರಾದಿ ಮಠದ ನಡುವಿನ ಸುದೀರ್ಘ ಕಾನೂನು ಹೋರಾಟಕ್ಕೆ ಸುಪ್ರೀಂ ಕೋರ್ಟ್ ತೆರೆ ಎಳೆದಿದೆ.

ಈ ವಿವಾದ ಬಗೆಹರಿಸಲು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಅವರನ್ನು ಮಧ್ಯಸ್ಥಿಕೆದಾರರಾಗಿ ನ್ಯಾಯಪೀಠವು 2025ರ ಮಾರ್ಚ್ 19ರಂದು ನೇಮಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಹಾಗೂ ಎನ್.ಕೋಟೀಶ್ವರ್ ಸಿಂಗ್ ಅವರ ಪೀಠವು, ನಿವೃತ್ತ ನ್ಯಾಯಮೂರ್ತಿ ಕೌಲ್ ಅವರ ಪ್ರಯತ್ನಗಳಿಂದ ಈ ವಿಷಯ ಇತ್ಯರ್ಥವಾಗಿದೆ ಕಕ್ಷಿದಾರರ ಪರವಾಗಿ ಹಿರಿಯ ವಕೀಲ ಡಿ.ಎಸ್. ನಾಯ್ಡು ಮತ್ತು ವಕೀಲ ಅಲ್ಜೋ ಕೆ. ಜೋಸೆಫ್ ಅವರ ದಾಖಲೆಯ ಸಲ್ಲಿಕೆಗಳನ್ನು ಸ್ವೀಕರಿಸಿತು.

‘ಮಧ್ಯಸ್ಥಿಕೆದಾರರ ಉತ್ತಮ ಪ್ರಯತ್ನಗಳಿಂದ ಎರಡು ಮಠಗಳ ನಡುವಿನ ವಿವಾದ ಸುಖಾಂತ್ಯಗೊಂಡಿದೆ ಎಂಬುದನ್ನು ನಮಗೆ ತಿಳಿಸಲಾಗಿದೆ’ ಎಂದು ಪೀಠ ಹೇಳಿದೆ.

2026ರ ಜನವರಿ 3ರ ಒಪ್ಪಂದ ಮತ್ತು ಏಪ್ರಿಲ್ 13ರ ತಿಳಿವಳಿಕೆ ಪತ್ರದ ಆಧಾರದಲ್ಲಿ ವಿಶೇಷ ಮೇಲ್ಮನವಿ ಅರ್ಜಿ ವಿಲೇವಾರಿ ಮಾಡಬಹುದು ಎಂದು ವಕೀಲರು ಪೀಠದ ಗಮನಕ್ಕೆ ತಂದರು.

‘ಉತ್ತರಾದಿ ಮಠ ಹಾಗೂ ಮಂತ್ರಾಲಯ ಮಠ ಮಾಡಿಕೊಂಡ ಒಪ್ಪಂದ ಮತ್ತು ತಿಳಿವಳಿಕೆ ಒಪ್ಪಂದವು ಈ ಆದೇಶದ ಭಾಗವಾಗಿರುತ್ತದೆ. ಮಧ್ಯಸ್ಥಿಕೆದಾರರ ಪ್ರಯತ್ನಗಳನ್ನು ನಾವು ದಾಖಲಿಸುತ್ತೇವೆ’ ಎಂದು ಪೀಠವು ಆದೇಶದಲ್ಲಿ ತಿಳಿಸಿದೆ.

ಮಾಧ್ವ ಪರಂಪರೆಯ ಎರಡು ಪ್ರಮುಖ ಮಠಗಳಾದ ಉತ್ತರಾದಿ ಮಠ ಹಾಗೂ ರಾಘವೇಂದ್ರ ಸ್ವಾಮಿ ಮಠದ ನಡುವಿನ ದಶಕಗಳ ವಿವಾದಗಳು ಹಾಗೂ ವ್ಯಾಜ್ಯಗಳನ್ನು ಸೌಹಾರ್ದಯುತ ಮಾತುಕತೆ ಮೂಲಕ ಬಗೆಹರಿಸಲು ಎರಡು ಮಠಗಳು ಜನವರಿಯಲ್ಲಿ ಒಪ್ಪಿಗೆ ಸೂಚಿಸಿದ್ದವು. ಬೆಂಗಳೂರಿನಲ್ಲಿ ನಡೆದಿದ್ದ ಸೌಹಾರ್ದ ಸಮಾವೇಶದಲ್ಲಿ ಒಪ್ಪಂದಕ್ಕೆ ಎರಡು ಮಠಗಳ ಸ್ವಾಮೀಜಿಗಳು ಸಹಿ ಹಾಕಿದ್ದರು.

ಲಿಫ್ಟ್‌ನಲ್ಲಿ ಸಿಲುಕಿ ಗಾಯಗೊಂಡ ಬೆಂಗಳೂರಿಗರು

ಪ್ರಜಾವಾಣಿ ವಾರ್ತೆ

ಶ್ರೀನಗರ: ನಗರದ ಹೈದರ್‌ಪೋರಾ ಪ್ರದೇಶದ ಹೋಟೆಲ್‌ನಲ್ಲಿನ ಲಿಫ್ಟ್ ಅಸಮರ್ಪಕವಾಗಿ ಕಾರ್ಯನಿರ್ವಹಿಸಿದ್ದರಿಂದ ಬೆಂಗಳೂರಿನ ಆರು ಪ್ರವಾಸಿಗರು ಶುಕ್ರವಾರ ಗಾಯಗೊಂಡಿದ್ದಾರೆ.

ವೆಂಕಟೇಶ್ (65), ಅವರ ಪತ್ನಿ ಸೌಭಾಗ್ಯ (60), ಡಿ.ಮಂಗಳಾ (54), ಕುಶಾಲ (18), ಪಂಕಜಾ (16), ವೆಂಕಟಲಕ್ಷ್ಮಮ್ಮ (60) ಗಾಯಗೊಂಡವರು. ಗಾಯಾಳುಗಳನ್ನು ಸಮೀಪದ ಕೀಲು ಮತ್ತು ಮೂಳೆ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕಾಲುಗಳು ಹಾಗೂ ದೇಹದ ಕೆಳಭಾಗಕ್ಕೆ ಗಾಯಗಳಾಗಿವೆ. ಎಲ್ಲರಿಗೂ ಚಿಕಿತ್ಸೆ ನೀಡಲಾಗಿದ್ದು, ಚೇತರಿಸಿಕೊಂಡಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

‘ಉಗ್ರರೊಂದಿಗೆ ಕೈದಿ ಮೊಬೈಲ್ ಸಂಪರ್ಕ’

ಬೆಳಗಾವಿ: ‘ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಕೈದಿಯೊಬ್ಬ ಮೊಬೈಲ್ ಫೋನ್ ಮೂಲಕ ಭಯೋತ್ಪಾದಕರೊಂದಿಗೆ ಸಂಪರ್ಕ ಸಾಧಿಸಿರುವ ಬಗ್ಗೆ ಮಹಾರಾಷ್ಟ್ರದ ನಾಗ್ಪುರದ ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಅದನ್ನು ಆಧರಿಸಿ ಜೈಲು ಅಧಿಕಾರಿಗಳು ದೂರು ನೀಡಿದ್ದಾರೆ. ಈವರೆಗೆ ಜೈಲಿನಲ್ಲಿ ಲಭ್ಯವಾದ ಮೊಬೈಲ್ ಫೋನ್, ತಾಂತ್ರಿಕ ಅಂಶಗಳನ್ನು ಆಧರಿಸಿ ತನಿಖೆ ಚುರುಕುಗೊಳಿಸಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ತಿಳಿಸಿದರು.

ಕಾರಾಗೃಹದಲ್ಲಿ ಸಿಕ್ಕ ಮೊಬೈಲ್ ಫೋನ್‌ಗಳ ಕುರಿತು ತನಿಖೆಗೆ ಆಗ್ರಹಿಸಿ ಹಿಂಡಲಗಾ ಕಾರಾಗೃಹದ ಅಧಿಕಾರಿಗಳು ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಚಿಟಿಕೆ ಸುದ್ದಿ

ಉಮಾಶ್ರೀಗೆ ತೆರೇಸಮ್ಮ ಪ್ರಶಸ್ತಿ


ಉಮಾಶ್ರೀ

ಧಾರವಾಡ: ಹುಬ್ಬಳ್ಳಿಯ ಕರ್ನಾಟಕ ನಾಟಕ ಜನಪದ ಕಲಾವಿದರ ಅಭಿವೃದ್ಧಿ ಸಂಘ ನೀಡುವ ತೆರೇಸಮ್ಮ ಡಿಸೋಜಾ ಪ್ರಶಸ್ತಿಗೆ ನಟಿ ಉಮಾಶ್ರೀ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ₹ 25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ. ಏಪ್ರಿಲ್ 29ರಂದು ಧಾರವಾಡದ ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

‘ಶೇ 50ರಷ್ಟು ಸಚಿವರ ಕೈಬಿಡಲು ಆಗ್ರಹ’


ಸಲೀಂ ಅಹಮದ್

ಹುಬ್ಬಳ್ಳಿ: ‘ಸಂಪುಟದಿಂದ ಶೇ 50ರಷ್ಟು ಸಚಿವರನ್ನು ಪಕ್ಷ ಸಂಘಟನೆಗೆ ನಿಯೋಜಿಸಿ, ಹೊಸಬರಿಗೆ ಅವಕಾಶ ನೀಡುವಂತೆ ಹೈಕಮಾಂಡ್‌ಗೆ ಕೋರಲಾಗಿದೆ’ ಎಂದು ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಇಲ್ಲಿ ಹೇಳಿದರು.

‘ಹೈಕಮಾಂಡ್ ನಿರ್ಣಯಕ್ಕೆ ಬದ್ಧರಿದ್ದೇವೆ. ಮುಖ್ಯಮಂತ್ರಿ ಬದಲಾವಣೆ ಕುರಿತು ಮಾತನಾಡದಂತೆ ವರಿಷ್ಠರ ಸೂಚನೆಯಿದೆ’ ಎಂದು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

‘ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರ ವಿರುದ್ಧ ಕ್ರಮಕ್ಕೆ ಸಚಿವ ಜಮೀರ್ ಅಹಮದ್ ಖಾನ್ ಒತ್ತಾಯಿಸಿದ್ದಾರೆ. ಇದು ನಾನು ಸೇರಿದಂತೆ ಪ್ರತಿಯೊಬ್ಬ ಕಾರ್ಯಕರ್ತನ ಒತ್ತಾಯವೂ ಹೌದು’ ಎಂದರು.

ಮೊಬೈಲ್ ಗೀಳು ಬಾಲಕ ಆತ್ಮಹತ್ಯೆ

ಹುಬ್ಬಳ್ಳಿ: ಮೊಬೈಲ್‌ನಲ್ಲಿ ಆನ್‌ಲೈನ್ ಗೇಮ್ ಆಡುತ್ತಿದ್ದ 14 ವರ್ಷದ ಬಾಲಕ ಸಮರ್ಥ ಪಟಿಕೆ, ಪೋಷಕರ ಹಿತವಚನ ಸಹಿಸದೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಬೆಂಗೇರಿಯ ಉದಯನಗರದ ನಿವಾಸಿ ಸಮರ್ಥಗೆ ಮೊಬೈಲ್‌ನಲ್ಲಿ ಗೇಮ್ ಆಡುತ್ತಿದ್ದ. ಶಿಕ್ಷಣಕ್ಕೆ ಸಮಸ್ಯೆ ಆಗಲಿದೆ ಎಂದು ಗದರಿದ್ದ ಪಾಲಕರು ಗುರುವಾರ ರಾತ್ರಿ ಮೊಬೈಲ್ ಕುಸಿದುಕೊಂಡಿದ್ದರು. ಇದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೆ’ ಎಂದು ಕೇಶ್ವಾಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಪರಿಷ್ಕೃತ ಅಂಕಪಟ್ಟಿ ಪ್ರಕಟ

ಶಿರಸಿ: ನಗರದ ಯೂನಿಯನ್ ಪ್ರೌಢಶಾಲೆ ವಿದ್ಯಾರ್ಥಿನಿ ಲೀಜಾ ಖಾನಮ್ ಅವರ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಉಂಟಾಗಿದ್ದ ಅಂಕಪಟ್ಟಿ ಗೊಂದಲವನ್ನು ಪರೀಕ್ಷಾ ಮಂಡಳಿಯು ಸರಿಪಡಿಸಿದೆ.

ಲೀಜಾ ಅವರು ಸಮಾಜ ವಿಜ್ಞಾನ ಪರೀಕ್ಷೆಗೆ ಗೈರಾಗಿದ್ದಾರೆ ಎಂಬ ಮಾಹಿತಿ ಗುರುವಾರದ ಫಲಿತಾಂಶದಲ್ಲಿ ಇತ್ತು. ಪರೀಕ್ಷೆ ಬರೆದಿದ್ದು ದೋಷ ಸರಿಪಡಿಸುವಂತೆ ಶಾಸಕ ಭೀಮಣ್ಣ ನಾಯ್ಕ ಮತ್ತು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ವಿದ್ಯಾರ್ಥಿನಿಯ ಪೋಷಕರು ಕೋರಿದ್ದರು. ಇದರ ಬಗ್ಗೆ ಶಾಸಕರು, ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರೊಂದಿಗೆ ಚರ್ಚಿಸಿದರು.

‘ಮಂಡಳಿ ಈಗ ದೋಷ ಸರಿಪಡಿಸಿದೆ. ಪರಿಷ್ಕೃತ ಫಲಿತಾಂಶ ಪ್ರಕಟಿಸಿದೆ. ಸಮಾಜ ವಿಜ್ಞಾನಕ್ಕೆ ಶೇ 97ರಷ್ಟು ಅಂಕ ಬಂದಿದೆ’ ಎಂದು ವಿದ್ಯಾರ್ಥಿನಿ ಲೀಜಾ ತಿಳಿಸಿದರು.

ಆರು ಅಧಿಕಾರಿಗಳ ವಿರುದ್ಧ ಎಫ್‌ಐಆರ್

ಮೂಡಿಗೆರೆ: ನಕಲಿ ದಾಖಲೆ ಸೃಷ್ಟಿಸಿ ಜಮೀನು ಮಂಜೂರು ಮಾಡಿದ್ದ ಪ್ರಕರಣದಲ್ಲಿ ಮೃತ ನಿವೃತ್ತ ತಹಶೀಲ್ದಾರ್ ಸೇರಿದಂತೆ 6 ಜನರ ವಿರುದ್ಧ ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ಗುರುವಾರ ಪ್ರಕರಣ ದಾಖಲಿಸಲಾಗಿದೆ.

2018-19ರಲ್ಲಿ ಗೋಣಿಬೀಡು ಹೋಬಳಿಯ ದೇವವೃಂದ ಗ್ರಾಮದ ಸರ್ವೆ ನಂ. 313ರ ಎಚ್.4, ಎಚ್.5ರಲ್ಲಿ 9 ಎಕರೆ ಸರ್ಕಾರಿ ಜಮೀನನ್ನು ಬೇರೆ ಕಡತದ ಸಾಗುವಳಿ ಚೀಟಿ ಅಪ್‌ಲೋಡ್ ಮಾಡಿ, ಅಕ್ರಮವಾಗಿ ಬೇರೆಯವರಿಗೆ ನೇರವಾಗಿ ಖಾತೆ ಮಾಡಲಾಗಿದೆ. ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೂಡಿಗೆರೆ ತಹಶೀಲ್ದಾರ್ ಎಸ್.ಅಶ್ವಿನಿ ದೂರು ನೀಡಿದ್ದರು.

ಪ್ರಕರಣದಲ್ಲಿ ಭಾಗಿಯಾಗಿದ್ದ ತಹಶೀಲ್ದಾರ್ ಸಿ.ಚಿನ್ನರಾಜು ಮೃತಪಟ್ಟಿದ್ದಾರೆ. ಅವರೊಂದಿಗೆ ನಿವೃತ್ತ ತಹಶೀಲ್ದಾರ್ ಪದ್ಮನಾಭ್ ಶಾಸ್ತ್ರಿ, ನಿವೃತ್ತ ರಾಜಸ್ವ ನಿರೀಕ್ಷಕ ಗಿಲ್ಬರ್ಟ್ ಪಾಯ್ಸ್ ಹಾಗೂ ಅಂದಿನ ಗ್ರಾಮ ಲೆಕ್ಕಾಧಿಕಾರಿ ಎಸ್.ಎನ್. ಕೃಷ್ಣಕುಮಾರ್, ಖಾತೆದಾರರಾದ ನಿಕೇಶ್ ಪಿರೇರಾ, ಅನಿಷ್ ನಿಕೇಶ್ ಪಿರೇರಾ ಮೇಲೆ ಪ್ರಕರಣ ದಾಖಲಿಸಲಾಗಿದೆ.

ಎಸ್.ಎನ್. ಕೃಷ್ಣಕುಮಾರ್ ಈಗಾಗಲೇ ಪ್ರಕರಣವೊಂದರಲ್ಲಿ ಸೇವೆಯಿಂದ ವಜಾಗೊಂಡಿದ್ದಾರೆ. ಖಾತೆದಾರ ಹೊರತುಪಡಿಸಿ, ಆರೋಪಿತ ಎಲ್ಲ ಅಧಿಕಾರಿಗಳು ನಿವೃತ್ತರಾಗಿದ್ದಾರೆ.

ಜನಿವಾರ ಪ್ರಕರಣ: ಮೂವರ ಅಮಾನತು

ಬೆಂಗಳೂರಿನ ಕೋರಮಂಗಲದ ಕೃಪಾನಿಧಿ ಪದವಿಪೂರ್ವ ಕಾಲೇಜಿನ ಸಿಇಟಿ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಕೃಪಾನಿಧಿ ಪದವಿಪೂರ್ವ ಕಾಲೇಜಿನ ಸಿಇಟಿ ಕೇಂದ್ರಕ್ಕೆ ಬಂದಿದ್ದ ಕೆಲ ಅಭ್ಯರ್ಥಿಗಳ ಜನಿವಾರ ತೆಗೆಸಿದ್ದಾರೆ ಎಂದು ಆರೋಪಿಸಲಾದ ಪ್ರಕರಣ ವಿವಾದದ ಸ್ವರೂಪ ಪಡೆಯುತ್ತಿದ್ದಂತೆ ಉಪ ಪ್ರಾಂಶುಪಾಲ ಸೇರಿ ಮೂವರನ್ನು ಅಮಾನತು ಮಾಡಿ ಕಾಲೇಜಿನ ಆಡಳಿತ ಮಂಡಳಿ ಆದೇಶಿಸಿದೆ.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸಲು ಏ.23 ಮತ್ತು 24ರಂದು ಸಿಇಟಿ ನಡೆದಿದೆ. ರಾಜ್ಯದಲ್ಲಿನ 745 ಕೇಂದ್ರಗಳಲ್ಲೂ ಪರೀಕ್ಷೆ ಸುಸೂತ್ರವಾಗಿ ನಡೆದಿವೆ. ಆದರೆ, ಮೊದಲ ದಿನ ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ ಪರೀಕ್ಷೆ ಬರೆಯಲು ಕೃಪಾನಿಧಿ ಕಾಲೇಜಿಗೆ ಬಂದಿದ್ದವರ ಪೈಕಿ ಕೆಲವರನ್ನು ಪ್ರವೇಶದ್ವಾರದಲ್ಲಿ ತಪಾಸಣೆ ನಡೆಸಿದ ಸಿಬ್ಬಂದಿ ಜನಿವಾರವನ್ನು ತೆಗೆಸಿದ್ದಾರೆ ಎಂದು ಕೆಲ ವಿದ್ಯಾರ್ಥಿಗಳು ಆರೋಪಿಸಿದ್ದರು.

ಘಟನೆಯನ್ನು ಆರಂಭದಲ್ಲಿ ನಿರಾಕರಿಸಿದ್ದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಂತರ ಈ ಕುರಿತು ತನಿಖೆ ನಡೆಸಿ, ವರದಿ ನೀಡಲು ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಪತ್ರ ಬರೆದಿದೆ. ‘ಜನಿವಾರ ತೆಗೆಸಿದ ಪ್ರಕರಣ ಒಂದು ಸೂಕ್ಷ್ಮ ವಿಚಾರವಾಗಿದೆ. ಇಂತಹ ಯಾವುದೇ ಧಾರ್ಮಿಕ ದಿರಿಸುಗಳನ್ನು ತೆಗೆಸದಂತೆ ಪರೀಕ್ಷಾ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಹಮ್ಮಿಕೊಂಡಿದ್ದ ತರಬೇತಿಯಲ್ಲೇ ಸ್ಪಷ್ಟವಾಗಿ ಹೇಳಲಾಗಿತ್ತು. ಸ್ಪಷ್ಟವಾದ ವಸ್ತ್ರಸಂಹಿತೆಯನ್ನೂ ಬಿಡುಗಡೆ ಮಾಡಿದೆ. ಆದರೂ ಇಂತಹ ಘಟನೆ ನಡೆದಿದೆ ಎಂದರೆ ಉದ್ದೇಶಪೂರ್ವಕ ಎನ್ನುವ ಅನುಮಾನ ಬರುತ್ತದೆ. ಹಾಗಾಗಿ, ಹಿರಿಯ ಅಧಿಕಾರಿಗಳಿಂದ ತನಿಖೆ ನಡೆಸಿ, ವರದಿ ನೀಡಬೇಕು’ ಎಂದು ಪತ್ರದಲ್ಲಿ ಕೋರಿದೆ.

ಘಟನೆ ನಡೆದಿರುವುದನ್ನು ಕೃಪಾನಿಧಿ ಕಾಲೇಜು ಆಡಳಿತ ಮಂಡಳಿ ನಿರಾಕರಿಸಿದೆ. ಆದರೆ, ಈ ಕುರಿತು ವಿಚಾರಣೆ ನಡೆಸಲು ಸೂಚಿಸಿದೆ.

‘ಘಟನೆಯ ಸತ್ಯಾಸತ್ಯತೆ ತಿಳಿದು ಕೊಳ್ಳಲು ವಿಚಾರಣೆ ಆರಂಭಿಸಿದ್ದೇವೆ. ವಿಚಾರಣೆ ಮುಗಿಯುವವರೆಗೂ ಅಂದು ಪರೀಕ್ಷಾ ಸಿಬ್ಬಂದಿಗಳಾಗಿ ಕಾರ್ಯನಿರ್ವಹಿಸಿದ್ದ ಡಿ.ಸುಧಾಕರ್, ಆರ್.ಸರಿತಾ ಹಾಗೂ ಗಿರಿಜಮ್ಮ ಅವರನ್ನು ಅಮಾನತು ಮಾಡಲಾಗಿದೆ. ವಿಚಾರಣೆ ಪೂರ್ಣಗೊಳ್ಳುವವರೆಗೂ ಕೆಲಸಕ್ಕೆ ಹಾಜರಾಗದಂತೆ ಸೂಚಿಸಲಾಗಿದೆ. ವಿಚಾರಣಾ ವರದಿ ಕೈಸೇರಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದೆ.

> ಸಿಇಟಿ ಪರೀಕ್ಷಾ ಕೇಂದ್ರವೊಂದರಲ್ಲಿ ಜನಿವಾರ ತೆಗೆಸಿರುವುದು ಖಚಿತಪಟ್ಟಿಲ್ಲ. ಘಟನೆ ಸತ್ಯವಾಗಿದ್ದರೆ ಅವರ ಮನಃಸ್ಥಿತಿ ಏನಿರಬಹುದು? ಅವರ ಹಿಂದೆ ಯಾರಿರಬಹುದು ಎಂಬ ಮಾಹಿತಿ ಪಡೆಯಬೇಕಿದೆ
> **ಎಂ.ಸಿ.ಸುಧಾಕರ್,** ಉನ್ನತ ಶಿಕ್ಷಣ ಸಚಿವ

> ಘಟನೆ ಕುರಿತು ತನಿಖೆ ನಡೆಸುವಂತೆ ಕೋರಿ ಬೆಂಗಳೂರು ನಗರ ಜಿಲ್ಲಾಧಿಕಾರಿಗೆ ಪತ್ರ ಬರೆಯಲಾಗಿದೆ. ತನಿಖೆಯ ನಂತರ ಪರೀಕ್ಷಾ ಕೇಂದ್ರದ ವಿರುದ್ಧ ಕ್ರಮಕೈಗೊಳ್ಳಲಾಗುವುದು
> **ಎಚ್.ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಕಾಲೇಜು ವಿರುದ್ಧ ಪ್ರಕರಣ ದಾಖಲು

ಅಭ್ಯರ್ಥಿಗಳ ಜನಿವಾರ ತೆಗೆಸಿದ ಆರೋಪದ ಮೇರೆಗೆ ಕೃಪಾನಿಧಿ ಕಾಲೇಜು ವಿರುದ್ಧ ಮಡಿವಾಳ ಪೊಲೀಸ್ ಠಾಣೆಯಲ್ಲಿ ಶುಕ್ರವಾರ ಎಫ್‌ಐಆರ್ ದಾಖಲಾಗಿದೆ.

ಅಭ್ಯರ್ಥಿಯ ಪೋಷಕರು ನೀಡಿದ ದೂರಿನ ಮೇರೆಗೆ ಕಾಲೇಜಿನ ಉಪ ಪ್ರಾಂಶುಪಾಲರೂ ಆಗಿರುವ ಪರೀಕ್ಷಾ ಮೇಲ್ವಿಚಾರಕ ಡಿ.ಸುಧಾಕರ್, ಪ್ರಥಮ ದರ್ಜೆ ಸಹಾಯಕಿ ಆರ್.ಸರಿತಾ ಹಾಗೂ ಕೊಠಡಿ ಮೇಲ್ವಿಚಾರಕಿ ಗಿರಿಜಮ್ಮ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಿಇಟಿ ಪರೀಕ್ಷೆಯ ಕರ್ತವ್ಯಕ್ಕೆ ನಿಯೋಜಿಸಿದ್ದ ಸಿಬ್ಬಂದಿ ತಪಾಸಣೆ ಮಾಡುವಾಗ ಅಭ್ಯರ್ಥಿ ಧರಿಸಿದ್ದ ಜನಿವಾರವನ್ನು ತೆಗೆದುಹಾಕುವಂತೆ ಸೂಚಿಸಿದ್ದರು. ಜನಿವಾರ ತೆಗೆಸಿ ಧಾರ್ಮಿಕ ಭಾವನೆಗೆ ಧಕ್ಕೆ ಉಂಟು ಮಾಡಿದ್ದಾರೆ’ ಎಂದು ಪೋಷಕರು ದೂರಿನಲ್ಲಿ ಉಲ್ಲೇಖಿಸಿದ್ದರು.

ತನಿಖಾ ತಂಡ ರಚನೆ

ಜನಿವಾರ ತೆಗೆಸಿದ ಪ್ರಕರಣದ ತನಿಖೆಗೆ ಬೆಂಗಳೂರು ನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ನೇತೃತ್ವದಲ್ಲಿ ನಾಲ್ವರ ಸಮಿತಿ ರಚಿಸಿ ಜಿಲ್ಲಾಧಿಕಾರಿ ಜಿ.ಜಗದೀಶ್ ಆದೇಶ ಹೊರಡಿಸಿದ್ದು, ಎರಡು ದಿನಗಳ ಒಳಗೆ ವರದಿ ಸಲ್ಲಿಸಲು ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಹಾಯಕ, ಬೆಂಗಳೂರು ದಕ್ಷಿಣ ತಹಶೀಲ್ದಾರ್ ಸದಸ್ಯರಾಗಿದ್ದು, ಪದವಿಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು ದಕ್ಷಿಣ ವಲಯದ ಉಪ ನಿರ್ದೇಶಕರನ್ನು ಸದಸ್ಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಹಿಂದೂ ವಿರೋಧಿ ಕೃತ್ಯ: ಆರ್.ಅಶೋಕ

‘ಮಾಂಗಲ್ಯ, ಜನಿವಾರ ತೆಗೆಸುವ ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರದ ಕೃತ್ಯಗಳು ಮುಂದುವರಿಯುತ್ತಲೇ ಇವೆ. ಹಿಂದಿನ ವರ್ಷ ಸಿಇಟಿ ಮತ್ತು ನೀಟ್ ಪರೀಕ್ಷೆ ವೇಳೆ ವಿದ್ಯಾರ್ಥಿಗಳ ಜನಿವಾರ, ಕೆಪಿಎಸ್‌ಸಿ ಪರೀಕ್ಷೆ ವೇಳೆ ಮಾಂಗಲ್ಯ ತೆಗೆಸಲಾಗಿತ್ತು. ಈಗ ಮತ್ತೆ ಸಿಇಟಿ ಬರೆಯಲು ಬಂದ ವಿದ್ಯಾರ್ಥಿಗಳ ಜನಿವಾರ ತೆಗೆಸಲಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ.

‘ಹಿಜಾಬ್ ತೆಗೆಸುವ ವಿಚಾರ ನಿಯಮದಲ್ಲಿ ಇಲ್ಲ’ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಾರೆ. ಜನಿವಾರವನ್ನು ತೆಗೆಸಿ ಎಂದು ಯಾವ ನಿಯಮದಲ್ಲಿ ಇದೆ? ಈ ಸರ್ಕಾರದಲ್ಲಿ ಹಿಂದೂಗಳಿಗೆ ರಕ್ಷಣೆ ಇಲ್ಲ. ಈಗ ಹಿಂದೂಗಳ ಆಚರಣೆಗೆ ಅಡ್ಡಿಪಡಿಸುವ ಕೆಟ್ಟಚಾಳಿಯೂ ಆರಂಭವಾಗಿದೆ’ ಎಂದಿದ್ದಾರೆ.

ಸುದ್ದಿ 2 ನಿಮಿಷ

ನೀಟ್ ಫಲಿತಾಂಶಕ್ಕೂ ಮೊದಲೇ ಸಿಇಟಿ ಕೌನ್ಸೆಲಿಂಗ್: ಸುಧಾಕರ್

ಬೆಂಗಳೂರು: ‘ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಡೆಸುವ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ಫಲಿತಾಂಶಕ್ಕೆ ಕಾಯದೆ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಶಿಕ್ಷಣ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮಾಡುವ ಕುರಿತು ಚಿಂತನೆ ನಡೆದಿದೆ’ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಹೇಳಿದರು.

ಮಲ್ಲೇಶ್ವರದ ಸಿಇಟಿ ಪರೀಕ್ಷಾ ಕೇಂದ್ರಕ್ಕೆ ಶುಕ್ರವಾರ ಭೇಟಿ ನೀಡಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕಳೆದ ವರ್ಷ ನೀಟ್ ಫಲಿತಾಂಶ ಹಾಗೂ ಸೀಟು ಹಂಚಿಕೆ ಪ್ರಕ್ರಿಯೆ ವಿಳಂಬವಾಯಿತು. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಇದುವರೆಗೂ ನೀಟ್ ಪ್ರಕ್ರಿಯೆ ಆರಂಭವಾದ ನಂತರವೇ ಸಿಇಟಿ ಸೀಟು ಹಂಚಿಕೆ ಪ್ರಕ್ರಿಯೆ ಆರಂಭಿಸಲಾಗುತ್ತಿತ್ತು. ಈ ಬಾರಿ ಫಲಿತಾಂಶಕ್ಕೂ ಮೊದಲೇ ಕೌನ್ಸೆಲಿಂಗ್ ಆರಂಭಿಸಿದರೆ ಸಿಇಟಿ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ’ ಎಂದರು.

‘ನೀಟ್ ಫಲಿತಾಂಶಕ್ಕೂ ಮೊದಲು ಸಿಇಟಿ ಸೀಟು ಹಂಚಿಕೆ ಮಾಡಿದರೆ ವೈದ್ಯಕೀಯ ಪ್ರವೇಶ ಸಾಧ್ಯವಾಗದ ಕೆಲ ಪ್ರತಿಭಾವಂತರಿಗೆ ಪ್ರತಿಷ್ಠಿತ ಕಾಲೇಜುಗಳಲ್ಲಿ ಪ್ರವೇಶ ಸಾಧ್ಯವಾಗದು. ಈ ಎಲ್ಲ ವಿಚಾರಗಳನ್ನೂ ಚರ್ಚಿಸಿ, ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಹೇಳಿದರು.

‘ಎಂಜಿನಿಯರಿಂಗ್ ಕಾಲೇಜುಗಳು ಶೇ 20ರಷ್ಟು ಶುಲ್ಕ ಹೆಚ್ಚಳಕ್ಕೆ ಬೇಡಿಕೆ ಸಲ್ಲಿಸಿವೆ. ಹಿಂದಿನ ಸರ್ಕಾರ ಪ್ರತಿ ವರ್ಷ ಶೇ 10ರಷ್ಟು ಶುಲ್ಕ ಹೆಚ್ಚಳಕ್ಕೆ ಸಮ್ಮತಿಸಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರದ್ದುಗೊಳಿಸಲಾಯಿತು. ಈ ವರ್ಷ ಶೇ 7.5ರಷ್ಟು ಶುಲ್ಕ ಹೆಚ್ಚಿಸುವ ಬಗ್ಗೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ’ ಎಂದರು.

ಕೆಇಎನಲ್ಲೇ ಕೌಶಲ ಶುಲ್ಕ ಸಂಗ್ರಹ: ‘ಸಿಇಟಿ ತೇರ್ಗಡೆಯಾಗಿ ವಿವಿಧ ಖಾಸಗಿ ಕಾಲೇಜುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ₹20 ಸಾವಿರದವರೆಗೆ ‘ಸ್ಕಿಲ್ ಲ್ಯಾಬ್’ ಶುಲ್ಕ ಪಡೆಯಲು ಅನುಮತಿ ನೀಡಲಾಗಿದೆ. ವಿಶ್ರಾಂತ ಕುಲಪತಿ ಕರಿಸಿದ್ದಪ್ಪ ಸಮಿತಿ ಶಿಫಾರಸಿನಂತೆ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಆದರೆ, ಕೆಲ ಕಾಲೇಜುಗಳು ಹೆಚ್ಚು ಶುಲ್ಕ ವಸೂಲಿ ಮಾಡುತ್ತಿರುವ ಕುರಿತು ದೂರುಗಳು ಬಂದಿವೆ. ಹಾಗಾಗಿ, ಕೆಇಎನಲ್ಲೇ ಶುಲ್ಕ ಸಂಗ್ರಹಿಸಲು ನಿರ್ಧರಿಸಲಾಗಿದೆ’ ಎಂದು ಸುಧಾಕರ್ ಮಾಹಿತಿ ನೀಡಿದರು.



ಕುಡಿಯಲು ಹಣಕ್ಕೆ ಪೀಡಿಸುತ್ತಿದ್ದ ಮಗನನ್ನು ಕೊಂದ ತಾಯಿ

ಮೈಸೂರು: ಕುಡಿಯಲು ಹಣಕ್ಕಾಗಿ ಪೀಡಿಸುತ್ತಿದ್ದ ಮಗನನ್ನು ಚಾಮುಂಡಿ ಬೆಟ್ಟ ರಸ್ತೆಯ ಬಳಿ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ ಆರೋಪದಲ್ಲಿ ತಾಯಿಯನ್ನು ಪೊಲೀಸರು ಬಂಧಿಸಿದ್ದಾರೆ.

ಕೆಸರೆಯ ಕುರಿಮಂಡಿ ನಿವಾಸಿ ಮಂಜುಳಾ (60) ಆರೋಪಿ. ರಮೇಶ್ (45) ಕೊಲೆಯಾದ ಮಗ. ಏ.14ರಂದು ಬೆಳಿಗ್ಗೆ ಅಪರಿಚಿತ ಶವ ಪತ್ತೆಯಾಗಿತ್ತು. ನಜರ್‌ಬಾದ್ ಠಾಣೆ ಇನ್‌ಸ್ಪೆಕ್ಟರ್ ಎಂ.ಮಹದೇವಸ್ವಾಮಿ ನೇತೃತ್ವದ ತಂಡ ಆರೋಪಿ ಬಂಧಿಸಿದರು.

‘ವಿಧವೆಯಾಗಿದ್ದ ತಾಯಿ, ಅವಿವಾಹಿತ ಮಗನ ಜೊತೆ ವಾಸಿಸುತ್ತಿದ್ದರು. ಮಹಿಳೆ ಮನೆಗೆಲಸ ಮಾಡಿಕೊಂಡಿದ್ದು, ಮದ್ಯವ್ಯಸನಿಯಾಗಿದ್ದ ಮಗ ಹಣಕ್ಕಾಗಿ ಪೀಡಿಸುತ್ತಿದ್ದ. ಬೇಸತ್ತ ಆಕೆ, ರಿಕ್ಷಾದಲ್ಲಿ ಮಗನನ್ನು ಕರೆತಂದು ಕೃತ್ಯ ಎಸಗಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರಿ ಮಳೆ, ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಆಲ್ದೂರು (ಚಿಕ್ಕಮಗಳೂರು): ತಾಲ್ಲೂಕಿನ ವಿವಿಧೆಡೆ ಶುಕ್ರವಾರ ಬಿರುಗಾಳಿ ಸಹಿತ ಆಲಿಕಲ್ಲು ಮಳೆಯಾಗಿದ್ದು, ಹಲವೆಡೆ ವಿದ್ಯುತ್ ಕಂಬಗಳು ಉರುಳಿವೆ.

ಚಿಕ್ಕಮಗಳೂರು– ಆಲ್ದೂರು– ಬಾಳೆಹೊನ್ನೂರು ರಸ್ತೆಯಲ್ಲಿ ವಿದ್ಯುತ್ ಕಂಬಗಳು, ಮರಗಳು ಉರುಳಿದವು. ಮರ ಉರುಳಿ ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಹಲವೆಡೆ ಮನೆಗಳು ಮತ್ತು ವರ್ಕ್‌ಶಾಪ್‌ಗಳ ಚಾವಣಿ ಶೀಟ್‌ಗಳು ಹಾರಿಹೋಗಿವೆ. ಗಾಳಿಯ ತೀವ್ರತೆ ಹೆಚ್ಚಿದ್ದು, ಚಾವಣಿಯೊಂದರ ಶೀಟ್‌ಗಳು ಅರ್ಧ ಕಿ.ಮೀ.ಗೂ ಹೆಚ್ಚು ದೂರ ಹಾರಿಬಿದ್ದಿವೆ.

ಚಿಕ್ಕಮಗಳೂರು, ಬಾಳೆಹೊನ್ನೂರು ಮತ್ತು ಮೂಡಿಗೆರೆಯಲ್ಲಿ ತುಂತುರು ಮಳೆಯಾಗಿದೆ.

4.5 ಸೆಂ.ಮೀ ಮಳೆ: ಕಲಬುರಗಿ ಸೇರಿದಂತೆ ಜಿಲ್ಲೆಯ ವಿವಿಧೆಡೆ ಗುರುವಾರ ರಾತ್ರಿ ಬಿರುಸಿನ ಮಳೆಯಾಗಿದೆ.

ಆಳಂದ ತಾಲ್ಲೂಕಿನ ಸಿರಿಚಂದದಲ್ಲಿ ಗರಿಷ್ಠ 4.5 ಸೆಂ.ಮೀ ಮಳೆ ಆಗಿರುವುದು ದಾಖಲಾಗಿದೆ.

ಸಿಡಿಲು ಬಡಿದು ಇಬ್ಬರ ಸಾವು

ಭಾಲ್ಕಿ (ಬೀದರ್ ಜಿಲ್ಲೆ): ತಾಲ್ಲೂಕಿನ ನಾವದಗಿಯಲ್ಲಿ ಗುರುವಾರ ಸಿಡಿಲು ಬಡಿದು ಗ್ರಾಮದ ರೇವಣಸಿದ್ದ ಹನುಮಂತ (28), ಜೇವರ್ಗಿಯ ಯಲ್ಲಾಲಿಂಗ (28) ಮೃತಪಟ್ಟರು.

ಮರವೊಂದರ ಕೆಳಗೆ ಮಳೆಯಿಂದ ರಕ್ಷಣೆಗಾಗಿ ನಿಂತಿದ್ದಾಗ ಅವಘಡ ಸಂಭವಿಸಿದೆ. ಖಟಕ ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶೂನ್ಯ ನೆರಳು ದಿನ

ಪ್ರಜಾವಾಣಿ ಚಿತ್ರ



ಬೆಂಗಳೂರಿನ ಜವಾಹರಲಾಲ್ ನೆಹರೂ ತಾರಾಲಯದಲ್ಲಿ ‘ಶೂನ್ಯ ನೆರಳು ದಿನ’ದ ಪ್ರಯುಕ್ತ ಏರ್ಪಡಿಸಿದ್ದ ಪ್ರಯೋಗವನ್ನು ಮಕ್ಕಳು ಕುತೂಹಲದಿಂದ ಶುಕ್ರವಾರ ವೀಕ್ಷಿಸಿದರು

ಬಲಗೈ–ಎಡಗೈ: ತಲಾ ಶೇ 5.25

ಒಂದನೇ ಪುಟದಿಂದ...

ಒಟ್ಟು ಮೀಸಲಾತಿ ಪ್ರಮಾಣ ಶೇ 50 ಅನ್ನು ಮೀರಬಾರದು ಎಂದು ಸುಪ್ರೀಂ ಕೋರ್ಟ್ ನಿರ್ಬಂಧ ಇದೆ. ಒಳ ಮೀಸಲಾತಿ ಹಂಚಿಕೆಯನ್ನು ಪ್ರಶ್ನಿಸಿ ಕೆಲವರು ನ್ಯಾಯಾಲಯದ ಮೆಟ್ಟಿಲು ಹತ್ತಿದ್ದರಿಂದಾಗಿ, ಎಲ್ಲ ಪ್ರಕ್ರಿಯೆಗಳಿಗೂ ಹಿನ್ನಡೆಯಾಗಿತ್ತು.

ಮೀಸಲಾತಿ ಪ್ರಮಾಣದ ಹೆಚ್ಚಳ, ಅದರನ್ವಯ ಒಳಮೀಸಲಾತಿ ಹಾಗೂ ಕೋರ್ಟ್ ಮಧ್ಯಪ್ರವೇಶದಿಂದಾಗಿ ಎಲ್ಲ ನೇಮಕಾತಿಗಳಿಗೂ ತಡೆ ಬಿದ್ದಿತ್ತು. ಇದರಿಂದಾಗಿ ಸರ್ಕಾರ ಇಕ್ಕಟ್ಟಿಗೆ ಸಿಲುಕಿತ್ತು.

ಹೊಸ ಸೂತ್ರ: ಶೇ 15ರಷ್ಟು ಮೀಸಲಾತಿ ಅನ್ವಯ ಎಡಗೈ ಜಾತಿಗಳಿರುವ ಗ್ರೂಪ್ ‘ಎ’ಗೆ ಶೇ. 5.25, ಬಲಗೈ ಜಾತಿಗಳಿರುವ ಗ್ರೂಪ್ ‘ಬಿ’ಗೆ ಶೇ. 5.25 ಮತ್ತು ಸ್ಪೃಶ್ಯ ಜಾತಿಗಳಿರುವ ಗ್ರೂಪ್ ‘ಸಿ’ಗೆ ಶೇ. 4.5 ಒಳ ಮೀಸಲಾತಿ ನಿಗದಿಪಡಿಸಲಾಗಿದೆ. ಅಲೆಮಾರಿ ಸಮುದಾಯಗಳ 59 ಜಾತಿಗಳನ್ನು ‘ಸಿ’ ಗುಂಪಿಗೇ ಸೇರಿಸಲಾಗಿದೆ. ರೋಸ್ಟರ್ ಬಿಂದು ಗೊಂದಲ ಸರಿಪಡಿಸಲು ‘ಎಸ್‌ಸಿ ಜನರಲ್’ ಎಂಬ ಹೊಸ ಸೂತ್ರವನ್ನು ಪರಿಹಾರವಾಗಿ ನೀಡಲಾಗಿದೆ. ಈ ಒಳಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಸರ್ಕಾರಿ ನೇಮಕ ಪ್ರಕ್ರಿಯೆ ನಡೆಯಲಿದೆ.

ಸಚಿವ ಸಂಪುಟ ಸಭೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದ್ದಿಗೋಷ್ಠಿಯಲ್ಲಿ ಈ ವಿವರ ನೀಡಿದರು.

‘ಈ ತೀರ್ಮಾನಕ್ಕೆ ಸಂಪುಟದ ಎಲ್ಲ ಸದಸ್ಯರೂ ಸರ್ವಾನುಮತದ ಒಪ್ಪಿಗೆ ನೀಡಿದ್ದಾರೆ. ಯಾವುದೇ ಅಪಸ್ವರ ವ್ಯಕ್ತವಾಗಿಲ್ಲ. ಎಲ್ಲರೂ ಸಂತೋಷಗೊಂಡಿದ್ದಾರೆ’ ಎಂದೂ ಹೇಳಿದರು.

‘ಶೇ 50 ಮೀಸಲಾತಿಗೆ ಅನುಗುಣವಾಗಿ ಶೇ 15ರಷ್ಟರಲ್ಲೇ ಒಳಮೀಸಲಾತಿ ನಿಗದಿ ಮಾಡಿದ್ದೇವೆ. ಇದಕ್ಕೆ ಮೊದಲು ಎಸ್‌ಸಿ ಶೇ 17, ಎಸ್‌ಟಿ ಶೇ 7 ಸೇರಿ ಒಟ್ಟು ಶೇ 24 ಮೀಸಲಾತಿ ನಿಗದಿ ಮಾಡಿದ್ದರಿಂದ ಮೀಸಲಾತಿ ಪ್ರಮಾಣ ಶೇ 56ಕ್ಕೆ ಏರಿತ್ತು. ಅದಕ್ಕೆ ನ್ಯಾಯಾಲಯ ತಡೆಯಾಜ್ಞೆ ನೀಡಿತು. ಇದು ಇತ್ಯರ್ಥವಾಗುವವರೆಗೆ ಎಸ್‌ಸಿ ಹಾಗೂ ಎಸ್‌ಟಿ ಸಮುದಾಯಕ್ಕೆ ಹೆಚ್ಚಿಸಲಾಗಿರುವ ಶೇ 6ರಷ್ಟು ಮೀಸಲಾತಿಯನ್ನು ಅನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಲಾಗುವುದು. ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ಮುಂದಿನ ದಿನಗಳಲ್ಲಿ ಒಳಮೀಸಲಾತಿ ಪ್ರಮಾಣ ಬದಲಾವಣೆ ತೀರ್ಮಾನ ಕಾಯ್ದಿರಿಸಲಾಗಿದೆ’ ಎಂದು ಅವರು ತಿಳಿಸಿದರು.

‘ಮೀಸಲಾತಿ ಶೇ 50ಕ್ಕಿಂತ ಜಾಸ್ತಿ ಆಗಬಾರದು ಎಂದು ನ್ಯಾಯಾಲಯ ಹೇಳಿದೆ. ಅದಕ್ಕೆ ಪೂರಕವಾಗಿ ಒಳಮೀಸಲಾತಿ ಪ್ರಮಾಣ ನಿಗದಿ ಮಾಡಬೇಕಿತ್ತು. ಈ ಮಧ್ಯೆ ರೋಸ್ಟರ್ ಬಿಂದು ಸರಿ ಇಲ್ಲ ಎಂದು ಎಡ ಮತ್ತು ಬಲ ಸಮುದಾಯಗಳ ಸಂಘಟನೆಗಳು ಪ್ರತಿಭಟನೆ ಆರಂಭಿಸಿದವು. ಮಾರ್ಚ್ 27ರಂದೇ ವಿಶೇಷ ಸಂಪುಟ ಸಭೆ ನಡೆಯಬೇಕಿತ್ತು. ಉಪಚುನಾವಣೆ ಘೋಷಣೆ ಆಗಿದ್ದರಿಂದ ಸಭೆ ನಡೆಸಲು ಆಗಲಿಲ್ಲ. ಕಳೆದ ವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ವಿಚಾರ ಪ್ರಸ್ತಾಪ ಆಯಿತು. ಸರ್ಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ತಾಂತ್ರಿಕ ಸಮಿತಿ ನೇಮಿಸಿ ವರದಿ ಪಡೆಯಲು ತೀರ್ಮಾನಿಸಲಾಯಿತು. ತಾಂತ್ರಿಕ ಸಮಿತಿ 5.3, 5.3, 4.4 ಪ್ರಮಾಣದಲ್ಲಿ ಒಳಮೀಸಲಾತಿ ಶಿಫಾರಸು ಮಾಡಿ, ಇವತ್ತಿನ ಸಂಪುಟ ಸಭೆಗೆ ವರದಿ ಮಂಡಿಸಿತು’ ಎಂದರು.

‘ನಾವು 5.25, 5.25, 4.5ರಂತೆ ಒಳಮೀಸಲಾತಿ ನಿಗದಿ ಮಾಡಲು ಸರ್ವಾನುಮತದಿಂದ ತೀರ್ಮಾನಿಸಿದೆವು. ಯಾವುದೇ ಸಮುದಾಯಕ್ಕೂ ಅನ್ಯಾಯವಾಗಬಾರದು ಎಂಬುದು ನಮ್ಮ ಪಕ್ಷದ ನಿಲುವು. ಹೀಗಾಗಿ ತಡವಾಗಿದ್ದರೂ ಸೂಕ್ತ ಪರಿಹಾರವನ್ನೇ ನೀಡಿದ್ದೇವೆ. ಎಲ್ಲ ದಲಿತ ಸಂಘಟನೆಗಳೂ ಇದನ್ನು ಒಪ್ಪಿಕೊಳ್ಳುತ್ತವೆ ಎನ್ನುವ ವಿಶ್ವಾಸವಿದೆ’ ಎಂದು ಸಿದ್ದರಾಮಯ್ಯ ಹೇಳಿದರು.

‘2024ರ ಆಗಸ್ಟ್ 1ರಂದು ಸುಪ್ರೀಂ ಕೋರ್ಟ್ ಒಳಮೀಸಲಾತಿ ನೀಡಬಹುದು ಎಂದು ತೀರ್ಪು ನೀಡಿತು. ಆ ತೀರ್ಪಿನ ಹಿನ್ನೆಲೆಯಲ್ಲಿ ನ್ಯಾ. ನಾಗಮೋಹನದಾಸ್ ಅಧ್ಯಕ್ಷತೆಯ ಏಕವ್ಯಕ್ತಿ ಆಯೋಗ ರಚಿಸಲಾಯಿತು. ಆಯೋಗ ನೀಡಿದ ವರದಿಯನ್ನು ಸಂಪುಟ ಸರ್ವಾನುಮತದಿಂದ ಒಪ್ಪಿಕೊಂಡಿತು. ಆಯೋಗವು ಎ, ಬಿ, ಸಿ, ಡಿ ಎಂದು ವರ್ಗೀಕರಣ ಮಾಡಿ ಕ್ರಮವಾಗಿ 6, 5, 5, 1 ಒಳಮೀಸಲಾತಿ ಶಿಫಾರಸು ಮಾಡಿತ್ತು. ನಾವು ಅದನ್ನು 6, 6, 5 ಎಂದು ಮಾಡಿದ್ದೆವು. ಎಡ ಮತ್ತು ಬಲ ಸಮುದಾಯಗಳಿಗೆ ತಲಾ ಶೇ 6 ಮತ್ತು ಕೊರಮ, ಕೊರಚ, ಲಂಬಾಣಿ ಮತ್ತು ಅಲೆಮಾರಿಗಳನ್ನು ಸೇರಿಸಿ ಶೇ 5 ಮೀಸಲಾತಿ ನೀಡಲು ತೀರ್ಮಾನಿಸಿದ್ದೆವು. ಇದಕ್ಕೆ ರಾಜ್ಯಪಾಲರೂ ಸಹಿ ಮಾಡಿದ್ದರು. ಮತ್ತೆ ಗೊಂದಲ ಶುರುವಾಯಿತು. ಅಲೆಮಾರಿ ಸಮುದಾಯದವರು ನ್ಯಾಯಾಲಯದ ಮೆಟ್ಟಿಲು ಹತ್ತಿದರು. ಈಗ ಎಲ್ಲ ಗೊಂದಲವನ್ನೂ ಪರಿಹರಿಸಲಾಗಿದೆ’ ಎಂದು ಸಿದ್ದರಾಮಯ್ಯ ವಿವರಿಸಿದರು.

‘ಇಷ್ಟು ಮಹತ್ವದ ತೀರ್ಮಾನ ತೆಗೆದುಕೊಂಡರು ಯಾರಲ್ಲೂ ಸಂಭ್ರಮ ಕಾಣುತ್ತಿಲ್ಲವಲ್ಲ’ ಎಂಬ ಸುದ್ದಿಗಾರರ ಪ್ರಶ್ನೆ, ‘ಎಲ್ಲರೂ ಸಂಭ್ರಮದಲ್ಲಿದ್ದೇವೆ’ ಎಂದು ಸಿದ್ದರಾಮಯ್ಯ ಹೇಳಿದಾಗ, ಇತರ ಸಚಿವರು ‘ಹೌದು, ನಾವೆಲ್ಲ ಸಂಭ್ರಮದಲ್ಲಿದ್ದೇವೆ’ ಎಂದು ನಗುತ್ತಾ ಧ್ವನಿಗೂಡಿಸಿದರು.

> 40 ವರ್ಷಗಳ ಹೋರಾಟಕ್ಕೆ ಫಲ ಸಿಕ್ಕಿದೆ. ಸಿದ್ದರಾಮಯ್ಯ ಅವರ ತೀರ್ಮಾನ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕು. ಎಡಗೈ–ಬಲಗೈ ಹೋರಾಟಕ್ಕೆ ಇತಿಶ್ರೀ ಹಾಡಲಿದೆ
> **ಕೆ.ಎಚ್.ಮುನಿಯಪ್ಪ,** ಆಹಾರ ಸಚಿವ

> ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೇ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಅವಿರೋಧವಾಗಿ ಒಳಮೀಸಲಾತಿ ಪ್ರಮಾಣವನ್ನು ಒಪ್ಪಿಕೊಂಡಿದ್ದೇವೆ
> **ಎಚ್.ಸಿ.ಮಹದೇವಪ್ಪ**, ಸಮಾಜ ಕಲ್ಯಾಣ ಸಚಿವ

> ಯಾರಿಗೂ ಅನ್ಯಾಯವಾಗದಂತೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ರೋಸ್ಟರ್ ಬಿಂದು ಬಗ್ಗೆ ‘ಸಿ ’ವರ್ಗದ ಸಮುದಾಯಗಳಿಗೆ ಆತಂಕವಿತ್ತು
> **ಶಿವರಾಜ ತಂಗಡಗಿ**, ಕನ್ನಡ ಮತ್ತು ಸಂಸ್ಕೃತಿ ಸಚಿವ

> ಶೋಷಿತ ವರ್ಗಗಳ ಬದುಕಿಗೆ ಮಹತ್ವದ ತಿರುವು ನೀಡುವ ನಿರ್ಣಯ ಇದು. ರೋಸ್ಟರ್ ಬಿಂದು ಗೊಂದಲಕ್ಕೆ ಸೂಕ್ತ ಪರಿಹಾರ ನೀಡಿದ್ದರಿಂದಾಗಿ ಎಲ್ಲ ಗೊಂದಲ ಮುಗಿದಿದೆ
> **ಎಚ್.ಕೆ.ಪಾಟೀಲ,** ಕಾನೂನು ಸಚಿವ

‘ಒಳಮೀಸಲಾತಿ: ಪಲಾಯನಸೂತ್ರ’

‘ಒಳಮೀಸಲಾತಿ ಹಂಚಿಕೆ ಮಾಡುವಲ್ಲಿ ಸಿ.ಎಂ ಸಿದ್ದರಾಮಯ್ಯ ಪಲಾಯನಸೂತ್ರ ಅನುಸರಿಸಿದ್ದಾರೆ. ಇದರಿಂದ ಯಾವುದೇ ಸಮುದಾಯಕ್ಕೆ ಉಪಯೋಗವಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪರಿಶಿಷ್ಟ ಜಾತಿಗಳಿಗೆ ಬಿಜೆಪಿ ಸರ್ಕಾರವು ಶೇ 17ರಷ್ಟು ಮೀಸಲಾತಿ ನೀಡಿತ್ತು. ಅದನ್ನು ಶೇ 15ಕ್ಕೆ ಇಳಿಸಿದ್ದು ಏಕೆ? ಶೇ 17ರಷ್ಟು ಮೀಸಲಾತಿ ಏಕೆ ಬೇಕು ಎಂಬುದನ್ನು ರಾಜ್ಯ ಸರ್ಕಾರವು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬೇಕಿತ್ತು. ಅದರ ಬದಲಿಗೆ ಸರ್ಕಾರವು ಪಲಾಯನಸೂತ್ರದ ಮೊರೆ ಹೋಗಿದೆ’ ಎಂದರು.

‘ಸಾಮಾಜಿಕ ಅನ್ಯಾಯ’: ‘ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯ ಕಡೆಗಣಿಸಲಾಗಿದೆ. ಆ ಸಮುದಾಯಗಳನ್ನು ಮೇಲೆತ್ತಲು ಇದ್ದ ಅವಕಾಶ ಬಿಟ್ಟು, ಅಲೆಮಾರಿಗಳನ್ನಾಗಿಯೇ ಇಡಲು ಸರ್ಕಾರ ಸಂಚು ರೂಪಿಸಿದೆ. ಇದು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಮಾಡುತ್ತಿರುವ ಸಾಮಾಜಿಕ ಅನ್ಯಾಯ’ ಎಂದು ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

ನಕಲಿ ದಾಖಲೆ ಸೃಷ್ಟಿ, ತಂತ್ರಾಂಶ ದುರ್ಬಳಕೆ • 10ಕ್ಕೂ ಹೆಚ್ಚು ದೂರು

100ಕ್ಕೂ ಹೆಚ್ಚು ಭೂ ಖಾತೆ ಬದಲು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ದೊಡ್ಡಬಳ್ಳಾಪುರ ಉಪ ವಿಭಾಗಾಧಿಕಾರಿ ಕಚೇರಿ ಮತ್ತು ತಾಲ್ಲೂಕು ಕಚೇರಿ ಕಂದಾಯ ವಿಭಾಗದಲ್ಲಿ ಭೂಮಿ ತಂತ್ರಾಂಶದಲ್ಲಿ ತಿದ್ದುಪಡಿ ಮೂಲಕ ನಕಲಿ ದಾಖಲೆ ಸೃಷ್ಟಿಸಿ ತಾಲ್ಲೂಕಿನ 110ಕ್ಕೂ ಕೃಷಿ ಭೂಮಿ ಖಾತೆಗಳ ಬದಲಿಸಿರುವ ಗಂಭೀರ ಆರೋಪ ಕೇಳಿಬಂದಿದೆ.

ಈ ಬಗ್ಗೆ ಕರ್ನಾಟಕ ಲೋಕಾಯುಕ್ತದಲ್ಲಿ 10ಕ್ಕೂ ಹೆಚ್ಚು ದೂರು ದಾಖಲಾಗಿವೆ. ‘ಉಳುವವನೇ ಭೂಮಿ ಒಡೆಯ’ (ಎಲ್‌ಆರ್‌ಎಫ್ ಗೇಣಿ) ಯೋಜನೆಯಡಿ 1980ರ ದಶಕದಲ್ಲೇ ಭೂಮಿ ಮಂಜೂರಾಗಿದೆ ಎಂಬಂತೆ ನಕಲಿ ದಾಖಲೆ ಸೃಷ್ಟಿಸಿ, ಆರ್‌ಟಿಸಿ ದಾಖಲೆಗಳಿಂದ ಮೂಲ ಮಾಲೀಕರ ಹೆಸರನ್ನೂ ಅಳಿಸಲಾಗಿದೆ ಎಂಬುದು ದೂರುದಾರರ ಆರೋಪವಾಗಿದೆ.

ರಾಜ್ಯ ಸರ್ಕಾರದ ‘ಭೂ ಸುರಕ್ಷಾ’ ಯೋಜನೆ ದುರ್ಬಳಕೆ ಮಾಡಿಕೊಂಡಿರುವ ಭೂ ಮಾಫಿಯಾದವರು, ನಕಲಿ ದಾಖಲೆಗಳನ್ನು ದೇವನಹಳ್ಳಿ ತಾಲ್ಲೂಕು ಕಚೇರಿ ಕಂದಾಯ ವಿಭಾಗದ ರೆಕಾರ್ಡ್ ರೂಂನಲ್ಲಿ ಸೇರಿಸಿ ಸ್ಕ್ಯಾನ್ ಮಾಡಿದ್ದಾರೆ. ಈ ದಾಖಲೆಗಳ ಆಧರಿಸಿ ಉಪವಿಭಾಗಾಧಿಕಾರಿ ಕೋರ್ಟ್‌ನಿಂದ ‘ಫಾರಂ 10’ ಪಡೆದಿದ್ದೇವೆ ಎಂದು ಮೃತರ ಹೆಸರಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಈ ಅರ್ಜಿಗಳನ್ನು ಮೇಲ್ಮನವಿಗಳಾಗಿ ಪರಿಗಣಿಸಿ, ಜನವರಿ 28, 2026ರಂದು ಪ್ರಕರಣ ದಾಖಲಿಸಿ, ಹಾಲಿ ಖಾತೆದಾರರಿಗೆ ನೋಟಿಸ್ ನೀಡಿರುವಂತೆ ಉಪ ವಿಭಾಗಾಧಿಕಾರಿ ಕಚೇರಿಯಲ್ಲಿ ದಾಖಲೆ ಸೃಷ್ಟಿಸಲಾಗಿದೆ. ಆದರೆ, ವಾಸ್ತವದಲ್ಲಿ ನೋಟಿಸ್ ನೀಡಿಲ್ಲ ಎಂದು ದೂರಿನಲ್ಲಿ ಉಲ್ಲೇಖವಾಗಿದೆ.

‘ಖಾತೆದಾರರು ನ್ಯಾಯಾಲಯಕ್ಕೆ ಹಾಜರಾಗಿ ಖಾತೆ ಬದಲಾವಣೆಗೆ ಆಕ್ಷೇಪ ಇಲ್ಲ ಎಂದು ಪ್ರಮಾಣ ಪತ್ರ ನೀಡಿದ್ದಾರೆ. ಆದರೆ, ಇದು ಕೂಡಾ ನಕಲಿ. ಈ ಪ್ರಮಾಣಪತ್ರಗಳಲ್ಲಿನ ಸಹಿ ಹಾಗೂ ನೋಟರಿ ಮುದ್ರೆಗಳನ್ನು ಕೂಡಾ ನಕಲಿ ಮಾಡಲಾಗಿದೆ’ ಎಂದು ದೂರಲಾಗಿದೆ.

ಜನವರಿ 30, 2026ರಂದು 110ಕ್ಕೂ ಹೆಚ್ಚು ಸರ್ವೆ ನಂಬರ್‌ಗಳ ಖಾತೆಗಳ ವಿವರವನ್ನು ‘ಭೂಮಿ’ ತಂತ್ರಾಂಶದಲ್ಲಿ ಬದಲಾಯಿಸಲಾಗಿದೆ. ಮಾಹಿತಿ ಕೇಳಲು ಹೋದ ರೈತ ಮುಖಂಡರಿಗೆ ಮಾಹಿತಿ ನೀಡದೆ ‘ಸ್ಕ್ಯಾನಿಂಗ್ ನಡೆಯುತ್ತಿದೆ’ ಎಂದು ಸಬೂಬು ಹೇಳಿ ವಾಪಸು ಕಳುಹಿಸಿದ್ದಾರೆ.

> ‘ಉಳುವವನೇ ಭೂಮಿಯ ಒಡೆಯ’ ಯೋಜನೆಯಡಿ ಖಾತೆ ಬದಲಾವಣೆ ಬಗ್ಗೆ ದೂರು ಬಂದಿವೆ. ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು
> **ಕೆ.ಎನ್.ಅನುರಾಧ,** ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ

> ಖಾತೆ ಬದಲಾವಣೆಗೆ ಮಾಡಿರುವ ಆದೇಶ ಕಚೇರಿಯದ್ದೇ ಅಲ್ಲ. ಇದನ್ನು ನೋಡಿದರೆ ಎಡಿಟ್ ಮಾಡಿದಂತೆ ಕಾಣುತ್ತದೆ
> **ದುರ್ಗಶ್ರೀ,** ವರ್ಗಾವಣೆಗೊಂಡಿರುವ ಉಪವಿಭಾಗಾಧಿಕಾರಿ

‘ಪರಿಶೀಲಿಸದೇ ಮುದ್ರೆ’

ದೇವನಹಳ್ಳಿ ತಹಶೀಲ್ದಾರ್ ಕಚೇರಿಯಲ್ಲಿ ನಕಲಿ ದಾಖಲೆಗಳಿಗೂ ಅಧಿಕೃತ ಮುದ್ರೆ ಹಾಕಿ ದೃಢೀಕರಣ ನೀಡಿರುವ ಆರೋಪವಿದೆ. ಈ ಕುರಿತು ತಹಶೀಲ್ದಾರ್ ಎಂ.ಅನಿಲ್, ‘ಈ ಬಗ್ಗೆ ಮಾಹಿತಿ ಇಲ್ಲ. ಪರಿಶೀಲಿಸುತ್ತೇನೆ’ ಎಂದು ಹೇಳಿದ್ದಾರೆ.

‘ಇ-ಆಫೀಸ್ ವ್ಯವಸ್ಥೆ ಬಳಸದೆ, ಭೌತಿಕ ಪ್ರತಿಗಳ ಮೇಲೆ ಮುದ್ರೆ ಹಾಕಿರುವುದು ಅಧಿಕಾರ ದುರ್ಬಳಕೆಯ ಸೂಚನೆ’ ಎಂದು ಭಾರತೀಯ ಕಿಸಾನ್ ಸಂಘದ ಪದಾಧಿಕಾರಿಗಳು, ತಹಶೀಲ್ದಾರ್ ಮತ್ತು ಹಿಂದಿನ ಉಪವಿಭಾಗಾಧಿಕಾರಿ ದುರ್ಗಶ್ರೀ ವಿರುದ್ಧ ಜಿಲ್ಲಾಧಿಕಾರಿಗೆ ದೂರು ನೀಡಿದ್ದಾರೆ.

ಹೈಕೋರ್ಟ್ ರಿಜಿಸ್ಟ್ರಾರ್ ಅವರಿಗೂ ದೂರು: ವಸತಿ ಉದ್ದೇಶಕ್ಕೆ ಭೂಪರಿವರ್ತನೆ ಆದ ಜಮೀನಿನ ಖಾತೆ ಬದಲಾವಣೆಗೆ ಹೈಕೋರ್ಟ್ ಆದೇಶವಿದೆ ಎಂಬಂತೆ ನಕಲಿ ದಾಖಲೆ ಸೃಷ್ಟಿಸಿ ಸಲ್ಲಿಸಲಾಗಿದೆ.

ದಾಖಲೆ ಪರಿಶೀಲಿಸದೆ ಹಿಂದಿನ ಉಪವಿಭಾಗಾಧಿಕಾರಿ ಭೂಮಿ ತಂತ್ರಾಂಶ ಮೂಲಕ ಕ್ರಮಕೈಗೊಂಡಿದ್ದಾರೆ. ಈ ಕುರಿತು ರೈತರು, ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ದೂರು ನೀಡಿದ್ದು, ತನಿಖೆ ಪ್ರಗತಿಯಲ್ಲಿದೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ • ಸೇವಾ ದೀಕ್ಷಾ ಸಮಾರಂಭ

ಅಣುಶಕ್ತಿಗಿಂತ ಮಿಗಿಲಾದ ಯುವಶಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಣುಶಕ್ತಿಗಿಂತಲೂ ಯುವಶಕ್ತಿ ಮಿಗಿಲಾಗಿದ್ದು, ಅವರು ಮನಸ್ಸು ಮಾಡಿದರೆ ನವ ಸಮಾಜದ ನಿರ್ಮಾಣ ಮಾಡಬಹುದು. ಹೀಗಾಗಿ ಅವರನ್ನು ದುಶ್ಚಟ, ದುರ್ಗುಣಗಳಿಂದ ಮುಕ್ತಗೊಳಿಸಬೇಕು’ ಎಂದು ವೀರಶೈವ– ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.


ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಿಳಾ ಘಟಕ ಮತ್ತು ಯುವ ಘಟಕದ ಪದಾಧಿಕಾರಿಗಳ ಸೇವಾ ದೀಕ್ಷಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಯುವ ಮತ್ತು ಮಹಿಳಾ ಘಟಕಗಳ ಪದಾಧಿಕಾರಿಗಳು ತಂತ್ರಜ್ಞಾನ ಬಳಸಿಕೊಂಡು ರಾಜ್ಯದ ಮೂಲೆ ಮೂಲೆಯಲ್ಲಿರುವ ಸಮುದಾಯದ ಯುವಜನರನ್ನು ಸಂಪರ್ಕಿಸಿ, ಅವರನ್ನು ಸದಸ್ಯರನ್ನಾಗಿ ಮಾಡುವುದರ ಜೊತೆಗೆ, ಅವರ ಕೌಶಲವರ್ಧನೆಗೆ ನೆರವಾಗಬೇಕು ಎಂದು ಹೇಳಿದರು.

ಸಂಸದ ಜಗದೀಶ ಶೆಟ್ಟರ್ ಮಾತನಾಡಿ, ‘ಭೀಮಣ್ಣ ಖಂಡ್ರೆ ಅವರು ಅಧ್ಯಕ್ಷರಾಗಿದ್ದಾಗ ವಿಧಾನಸಭೆ ಚುನಾವಣೆ ಹತ್ತಿರದಲ್ಲಿತ್ತು. ಆಗ ಅವರು ಬೀದರ್, ಕಲಬುರ್ಗಿ, ಧಾರವಾಡ, ಗದಗ, ಬೆಳಗಾವಿ, ತುಮಕೂರು ಸೇರಿದಂತೆ ರಾಜ್ಯದ ಮೂಲೆ ಮೂಲೆಯಲ್ಲಿ ಸಂಚರಿಸಿ ಪಕ್ಷಾತೀತವಾಗಿ ಸಮಾಜವನ್ನು ಒಗ್ಗೂಡಿಸಿದರು. ಆಗ ನಡೆದ ಚುನಾವಣೆಯಲ್ಲಿ ವೀರಶೈವ ಲಿಂಗಾಯತ ಶಾಸಕರು ದೊಡ್ಡ ಸಂಖ್ಯೆಯಲ್ಲಿ ಗೆದ್ದು ಬಂದಿದ್ದರು’ ಎಂದು ಹೇಳಿದರು.

‘ವೀರಶೈವ– ಲಿಂಗಾಯತರನ್ನು ಒಡೆಯುವ ಪ್ರಯತ್ನ ನಡೆದಾಗ ಶಾಮನೂರು ಶಿವಶಂಕರಪ್ಪ ಅವರು ಸಮಾಜದ ಪರ ನಿಂತರು, ಮಹಾಸಭಾದ ಅಧ್ಯಕ್ಷರಾಗಿ ತಮ್ಮ ಜವಾಬ್ದಾರಿ ನಿಭಾಯಿಸಿದರು’ ಎಂದರು.

ಶಿವಗಂಗಾ ಮೇಲಣಗವಿ ವೀರಸಿಂಹಾಸನ ಸಂಸ್ಥಾನ ಮಠದ ಮಲಯಶಾಂತಮುನಿ ದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಶ್ರೀರಂಗಪಟ್ಟಣ ಬೇಬಿಮಠದ ಚಂದ್ರವನದ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಶರಣ ಪ್ರಕಾಶ್ ಪಾಟೀಲ, ಶರಣಬಸಪ್ಪ ದರ್ಶನಾಪುರ, ಶಾಸಕ ವಿಜಯಾನಂದ ಕಾಶಪ್ಪನವರ, ಮಾಜಿ ಸಚಿವೆ ರಾಣಿ ಸತೀಶ್, ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಕಾಶಪ್ಪನವರ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕರ್ನಾಟಕ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ, ಯುವ ಘಟಕದ ಅಧ್ಯಕ್ಷ ವೆಂಕಟರೆಡ್ಡಿ ಪಾಟೀಲ್ ಪಾಲ್ಗೊಂಡಿದ್ದರು.



ಬಸವರಾಜ ಹೊರಟ್ಟಿ ಅವರು ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಿಳಾ ಅಧ್ಯಕ್ಷೆ ವೀಣಾ ಕಾಶಪ್ಪನವರ ಮತ್ತು ಯುವ ವಿಭಾಗಗಳಿಗೆ ನೂತನವಾಗಿ ಆಯ್ಕೆಯಾದ ಸದಸ್ಯರಿಗೆ ಪ್ರತಿಜ್ಞಾವಿಧಿ ಬೋಧಿಸಿದರು


ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
Coolest Summer Finance Mela
Upto ₹15,000 ಕ್ಯಾಶ್ ಬ್ಯಾಕ್* ಫೈನಾನ್ಸ್ ಮೇಲೆ
ನಾವು ಇ.ಎಮ್.ಐ ಕಾರ್ಡ್ ಅನ್ನು ಸ್ವೀಕರಿಸುತ್ತೇವೆ*
1 ಇ.ಎಮ್.ಐ ಉಚಿತ*
ಎಕ್ಸ್ಚೇಂಜ್ ಬೊನಾಂಜಾ
Upto 25,000 ಕಡಿತ ಎಕ್ಸ್ಚೇಂಜ್ ಮೇಲೆ*
ಕ್ಯಾಶ್ ಬ್ಯಾಕ್ ಬೊನಾಂಜಾ
Upto 20% ಕ್ಯಾಶ್ ಬ್ಯಾಕ್*
FREE HOLIDAY PACKAGE WITH FAMILY 2 NIGHTS 3 DAYS HOLIDAY PACKAGE worth ₹5000
STORE LOCATOR
ಮಳಿಗೆಗಳು 10.30AM - 9.30PM ತೆರೆದಿರುತ್ತವೆ
Godrej 1.0 TON 3 STAR INVERTER SPLIT AIR CONDITIONER ಇ.ಎಮ್.ಐ ₹2,200
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
Haier 1.0 TON 4 STAR INVERTER SPLIT AIR CONDITIONER ಇ.ಎಮ್.ಐ ₹2,719
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
LLOYD 2.0 TON 3STAR INVERTER SPLIT AIR CONDITIONER ಇ.ಎಮ್.ಐ ₹3,624
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
Panasonic 1.0 TON 5 STAR INVERTER SPLIT AIR CONDITIONER ಇ.ಎಮ್.ಐ ₹2,883
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
VOLTAS 1.0 TON 5 STAR INVERTER SPLIT AIR CONDITIONER ಇ.ಎಮ್.ಐ ₹2,784
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
SAMSUNG 1.5TON 5STAR INVERTER SPLIT AIR CONDITIONER ಇ.ಎಮ್.ಐ ₹3,516
LG 1.5TON 3 STAR INVERTER SPLIT AIR CONDITIONER ಇ.ಎಮ್.ಐ ₹2,967
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
DAIKIN AIR CONDITIONERS 1.5TON 5STAR INVERTER SPLIT AIR CONDITIONER ಇ.ಎಮ್.ಐ ₹3,669
ಉಚಿತ: ₹5000 ಮೌಲ್ಯದ ಫ್ಯಾಮಿಲಿ ಹಾಲಿಡೇ ಪ್ಯಾಕೇಜ್*
WIDEST RANGE OF AIRCOOLERS & FANS
Crompton orient HAVELLS V-GUARD KENSTAR Symphony BAJAJ
LG 650 ಲೀ ಸೈಡ್ ಬೈ ಸೈಡ್ ರೆಫ್ರಿಜರೇಟರ್ GL-B257DBM3 ಇ.ಎಮ್.ಐ ₹4,999
ಉಚಿತ: ₹3,315 ಮೌಲ್ಯದ BUTTERFLY PRESSURE COOKER
SAMSUNG 653 L CONVERTIBLE 5IN1 SIDE BY SIDE REFRIGERATOR RS76CG8103S9HL ಇ.ಎಮ್.ಐ ₹4,990
Whirlpool 308 LTR FROST FREE REFRIGERATOR ಇ.ಎಮ್.ಐ ₹3,053
ಉಚಿತ: ₹4,470 ಮೌಲ್ಯದ PREETHI INDUCTION COOKTOP*
Haier 305 LITERS SINGLE DOOR VISI COOLER ಇ.ಎಮ್.ಐ ₹2,923
ಉಚಿತ: ₹1,895 ಮೌಲ್ಯದ PHILIPS TOASTER*
BOSCH 14 PLACE SETTINGS DISHWASHER ಇ.ಎಮ್.ಐ ₹4,442
Godrej 300L DEEP FREEZER ಇ.ಎಮ್.ಐ ₹2,278
ಉಚಿತ: ₹4,245 ಮೌಲ್ಯದ PREETHI MIXER GRINDER*
iPhone 17 /17 PRO / 17 PRO MAX ₹4,000* CASH BACK STARTS FROM ₹81,500* EMI STARTS FROM ₹3,454
SAMSUNG S26/S26+/ S26 ULTRA EFFECTIVE PRICE ₹79,999* (AFTER CASH BACK) EMI STARTS FROM ₹3,667
oppo F31 / OPPO F31/ OPPO F31+ 10% CASH BACK STARTS FROM ₹25,800* EMI STARTS FROM ₹2,150
mi Redmi NOTE15 / NOTE15 PRO/ NOTE15 PRO+ ₹2,000* CASH BACK ₹1,908 ONWARDS
Lenovo SLIM 3i 10% CASH BACK INTEL CORE i7 13620H 16GB RAM 512GB SSD 15.6" FHD WIN 11 MSO 24 ಇ.ಎಮ್.ಐ ₹6,333 OFFER PRICE ₹75,990
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
DELL VOSTRO INTEL CORE i5 16GB, 512 GB SSD 15.6 FHD WIN 11 MSO 24 ಇ.ಎಮ್.ಐ ₹5,916 EFFECTIVE PRICE ₹60,990* (AFTER CASH BACK)
ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999
LG 55 4K ULTRA HD SMART OLED EVO TV (OLED55C5ELA) ಇ.ಎಮ್.ಐ ₹4,990
ಉಚಿತ: ₹20000 ಮೌಲ್ಯದ FIREBOLTT SMART CALLING WATCH
SAMSUNG 65 4K ULTRA HD SMART OLED TV 65S90F ಇ.ಎಮ್.ಐ ₹6,990
SONY 55 4K ULTRA HD AI SMART MINI LED GOOGLE TV K-55XR70 ಇ.ಎಮ್.ಐ ₹5,500
IFB 8 ಕೆಜಿ ಫ್ರಂಟ್ ಲೋಡಿಂಗ್ STEAM REFRESH ECO INVERTER ಇ.ಎಮ್.ಐ ₹3,143
ಉಚಿತ: ₹4,470 ಮೌಲ್ಯದ PREETHI INDUCTION COOKTOP*
LG 9 ಕೆಜಿ ಟಾಪ್ ಲೋಡಿಂಗ್ ವಾಷಿಂಗ್ ಮಷೀನ್ ಇ.ಎಮ್.ಐ ₹1,897
ಉಚಿತ: ₹1,895 ಮೌಲ್ಯದ PHILIPS TOASTER*
LG SOUNDBAR S40T 2.1 CH, 300W, AI Sound Pro, Dolby Digital OFFER PRICE ₹11,990 ಇ.ಎಮ್.ಐ ₹1,000 MRP ₹26,990
ಕೆಟಲ್ ಕುದಿಯಲು LIMITED Stock!
ರೈಸ್ ಕುಕ್ಕರ್ ಅಡುಗೆಗಾಗಿ LIMITED Stock!
ALTERNATE TO LPG - GO ELECTRIC LIMITED Stock!
V-GUARD KAFF Prestige Tefal Butterfly Preethi Pigeon
ಗೀಸರ್ ಗ್ಯಾಸ್ ಗೀಸರ್ ಬದಲಿಗೆ LIMITED Stock!
LG 28ಲೀ ಕನ್ವೆಕ್ಷನ್ ಮೈಕ್ರೋವೇವ್ ಓವನ್ MC-2846BR ಇ.ಎಮ್.ಐ ₹1,167
LG SAMSUNG SONY Haier Panasonic ONIDA IFB Godrej LLOYD Whirlpool BOSCH Electrolux PHILIPS TOSHIBA hp acer DELL Lenovo ASUS vivo oppo ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS HITACHI voltas beko Butterfly Preethi ULTRA EUREKA FORBES pureit Livpure FABER KENSTAR BAJAJ Crompton MAHARAJA V-GUARD ZEBRONICS KAFF OZONE
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Upto Rs.15000 Bajaj cash back / vouchers valid only in selected cities. Cash Back / vouchers will be credited to the customer bank account / BFL wallet fter clearing 3 EMI. EMI offers the above products based on 12,18,24 & fixed emi schemes .*Exchange offer valid on MRP and Product as to be in good working condition.Exchange value will differ based on the condition of the old product.Free Installation on AC's is valid on selected brands & models.
181 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook
WE SUPPORT ROUND TABLE INDIA LADIES CIRCLE INDIA

ಬಂಗಾಳದಲ್ಲಿ 'ಬದಲಾವಣೆಯ ಅಲೆ': ಮೋದಿ

ಮೊದಲ ಹಂತದಲ್ಲಿ ದಾಖಲೆಯ ಮತದಾನದಿಂದ ಬಿಜೆಪಿಗೆ ಲಾಭ
ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ 'ಬದಲಾವಣೆಯ ಅಲೆ' ಇದೆ ಎಂಬುದು ಮೊದಲ ಹಂತದ ಮತದಾನದಲ್ಲಿ ಸ್ಪಷ್ಟವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಪ್ರತಿಪಾದಿಸಿದ್ದಾರೆ.

ಉತ್ತರ 24 ಪರಗಣ ಜಿಲ್ಲೆಯ ಪಾನಿಹಾಟೀಯಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಬಂಗಾಳದಲ್ಲಿ ಬಹಳ ಸಮಯದಿಂದ ಬದಲಾವಣೆಯ ಅಲೆ ಕಾಣಿಸುತ್ತಿದ್ದು, ಗುರುವಾರ ನಡೆದ ಮೊದಲ ಹಂತದ ಮತದಾನವು ಅದನ್ನು ಖಚಿತಪಡಿಸಿದೆ. ಭಾರಿ ಪ್ರಮಾಣದಲ್ಲಿ ಮತದಾನ ನಡೆದಿರುವುದು ಮತದಾರರ ಒಲವು ಬಿಜೆಪಿ ಪರವಾಗಿದೆ ಎಂಬುದನ್ನು ತೋರಿಸಿದೆ' ಎಂದು ಹೇಳಿದ್ದಾರೆ.

ಬಂಗಾಳ ವಿಧಾನಸಭೆಯ 152 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಶೇ 92.70ರಷ್ಟು ಮತದಾನ ದಾಖಲಾಗಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಮತದಾನ ನಡೆದಿರುವುದು ರಾಜ್ಯದ ಇತಿಹಾಸದಲ್ಲಿ ಇದೇ ಮೊದಲು.

'ಬಂಗಾಳದಲ್ಲಿ ಟಿಎಂಸಿಯು 'ಸರ್ವಾಧಿಕಾರಿ' ಆಡಳಿತದ ಮೂಲಕ ಪ್ರಜಾಪ್ರಭುತ್ವದ ದೇವಾಲಯವನ್ನು ಪುಡಿಮಾಡಿದೆ. ಇದೀಗ ರಾಜ್ಯದ ಜನರು ಜನಾದೇಶದ ಮೂಲಕ ಅದನ್ನು ಮರುನಿರ್ಮಿಸಲು ಪ್ರಾರಂಭಿಸಿದ್ದಾರೆ. ಎರಡನೇ ಹಂತದ ಮತದಾನದ ವೇಳೆ ನೀವು ಈ ದೇವಾಲಯದ ಮೇಲೆ ವಿಜಯ ಪತಾಕೆ ಹಾರಿಸಬೇಕು' ಎಂದಿದ್ದಾರೆ.



ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೇರಿದ ಬಳಿಕ ಮಹಿಳೆಯರು ಮಧ್ಯ ರಾತ್ರಿ 2ರ ವೇಳೆಯಲ್ಲೂ ನಿರ್ಭೀತಿಯಿಂದ ತಿರುಗಾಡಲು ಸಾಧ್ಯವಾಗಲಿದೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ



ಬಿಜೆಪಿ ಆಡಳಿತವಿರುವ ದೆಹಲಿ, ಉತ್ತರ ಪ್ರದೇಶ ಮತ್ತು ಇತರೆಡೆಗಳಿಗಿಂತ ಪಶ್ಚಿಮ ಬಂಗಾಳದಲ್ಲಿ ಮಹಿಳೆಯರು ಹೆಚ್ಚು ಸುರಕ್ಷಿತವಾಗಿದ್ದಾರೆ
ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿ

ಮೊದಲ ಹಂತದ ಮತದಾನದ ನಂತರ ಟಿಎಂಸಿಯು 'ದಿಕ್ಕೆಟ್ಟು ಹೋಗಿದೆ' ಎಂದು ಹೇಳಿದ ಪ್ರಧಾನಿ, ಆಡಳಿತ ಪಕ್ಷವು ಮತದಾನದ ಮುನ್ನ ರಾತ್ರಿಯಿಡೀ ತನ್ನ 'ಗೂಂಡಾಗಳನ್ನು' ಸಜ್ಜುಗೊಳಿಸುವ ಕೆಲಸ ಮಾಡಿದೆ ಎಂದು ಆರೋಪಿಸಿದ್ದಾರೆ.

'ಮೇ 4ರಂದು ಚುನಾವಣೆಯ ಫಲಿತಾಂಶ ಹೊರಬಂದ ಬಳಿಕ ಟಿಎಂಸಿಯ ಗೂಂಡಾಗಳಿಗೆ ಅಡಗಿ ಕುಳಿತುಕೊಳ್ಳಲು ಸ್ಥಳವಿರುವುದಿಲ್ಲ. ಮೊದಲ ಹಂತದ ಮತದಾನವು ಟಿಎಂಸಿಯ 'ಜಂಗಲ್‌ರಾಜ್' ಅಂತ್ಯಗೊಳ್ಳುವುದನ್ನು ಸೂಚಿಸಿದೆ' ಎಂದಿದ್ದಾರೆ.

ಮಹಿಳೆಯರ ಸುರಕ್ಷತೆಯ ವಿಷಯವನ್ನು ಪ್ರಸ್ತಾಪಿಸಿ ಆಡಳಿತ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದ ಪ್ರಧಾನಿ, 'ಟಿಎಂಸಿಯು ಮಹಿಳಾ ವಿರೋಧಿ ಪಕ್ಷವಾಗಿದ್ದು, ಬಿಜೆಪಿಯು ಮಹಿಳಾ ನೇತೃತ್ವದ ಅಭಿವೃದ್ಧಿ ಮಾದರಿಯಲ್ಲಿ ನಂಬಿಕೆಯಿರಿಸಿದೆ' ಎಂದು ಹೇಳಿದ್ದಾರೆ.

'ಮಸೀದಿ ನಿರ್ಮಾಣಕ್ಕೆ ಅವಕಾಶ ನೀಡೆವು': ಅಯೋಧ್ಯೆಯ ಬಾಬರಿ ಮಸೀದಿ ಮಾದರಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಮಸೀದಿ ನಿರ್ಮಾಣಕ್ಕೆ ಅವಕಾಶ ನೀಡೆವು ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಟಿಎಂಸಿಯಿಂದ ಅಮಾನತು ಗೊಂಡಿರುವ ಮುಖಂಡ ಹುಮಾಯೂನ್ ಕಬೀರ್ ಅವರು ಮುರ್ಶಿದಾಬಾದ್ ಜಿಲ್ಲೆಯಲ್ಲಿ ಬಾಬರಿ ಮಸೀದಿ ಶೈಲಿಯ ಮಸೀದಿ ನಿರ್ಮಿಸಲು ಮುಂದಾಗಿದ್ದಾರೆ.

'ಮಮತಾ ಅವರೇ, ಬಂಗಾಳದಲ್ಲಿ ಒಬ್ಬ ಬಿಜೆಪಿ ಕಾರ್ಯಕರ್ತ ಜೀವಂತ ವಾಗಿರುವವರೆಗೂ ನಾವು ಇಲ್ಲಿ ಬಾಬರಿ ಮಸೀದಿ ಶೈಲಿಯ ಮಸೀದಿ ನಿರ್ಮಿಸಲು ಬಿಡುವುದಿಲ್ಲ ಎಂಬುದನ್ನು ನೆನಪಿಡಿ' ಎಂದು ಹೂಗ್ಲಿ ಜಿಲ್ಲೆಯಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಹೇಳಿದ್ದಾರೆ.




ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಡಂ ಡಂನಲ್ಲಿ ಶುಕ್ರವಾರ ನಡೆದ ರೋಡ್ ಶೋನಲ್ಲಿ ಪ್ರಧಾನಿ ಮೋದಿ ಅವರು ಬೆಂಬಲಿಗರತ್ತ ಕೈಬೀಸಿದರು —ಪಿಟಿಐ ಚಿತ್ರ

ಸುಳ್ಳು ಸಂಕಥನ ಸೃಷ್ಟಿಗೆ ಶಾ ಯತ್ನ: ಡೆರೆಕ್ ಒಬ್ರಯಾನ್

ನವದೆಹಲಿ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮತದಾನ ಆಗಿರುವುದನ್ನು ಮುಂದಿಟ್ಟುಕೊಂಡು ಗೃಹ ಸಚಿವ ಅಮಿತ್ ಶಾ ಅವರು 'ಸುಳ್ಳು ಸಂಕಥನ' ಸೃಷ್ಟಿಗೆ ಪ್ರಯತ್ನಿಸುತ್ತಿದ್ದಾರೆ ಎಂದು ಟಿಎಂಸಿ ರಾಜ್ಯಸಭಾ ಸದಸ್ಯ ಡೆರೆಕ್ ಒಬ್ರಯಾನ್ ಹೇಳಿದ್ದಾರೆ.

ಕೋಲ್ಕತ್ತದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ್ದ ಶಾ ಹೆಚ್ಚಿನ ಪ್ರಮಾಣದಲ್ಲಿ ಮತದಾನ ನಡೆದಿರುವುದನ್ನು ಉಲ್ಲೇಖಿಸಿ, 'ಬಂಗಾಳದ ಜನರು ಮೊದಲ ಹಂತದಲ್ಲಿ ಎಲ್ಲಾ ದಾಖಲೆಗಳನ್ನು ಮುರಿದು ಬದಲಾವಣೆಗಾಗಿ ಉತ್ಸಾಹದಿಂದ ಮತ ಚಲಾಯಿಸಿದ್ದಾರೆ' ಎಂದಿದ್ದರು.

'ಆದರೆ, 2021ಕ್ಕೆ ಹೋಲಿಸಿದರೆ 2026ರಲ್ಲಿ ಚಲಾಯಿಸಲಾದ ಒಟ್ಟು ಮತಗಳು ವಾಸ್ತವದಲ್ಲಿ ಕಡಿಮೆಯಾಗಿವೆ. ಎಸ್‌ಐಆರ್ ಬಳಿಕ ಒಟ್ಟು ಮತದಾರರ ಸಂಖ್ಯೆ ಕಡಿಮೆಯಾಗಿರುವುದೇ ಮತದಾನ ಪ್ರಮಾಣ ಹೆಚ್ಚಲು ಕಾರಣ' ಎಂದು ಒಬ್ರಯಾನ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.



'2021ರಲ್ಲಿ ಇದೇ 152 ಕ್ಷೇತ್ರಗಳಲ್ಲಿ ಒಟ್ಟು 3.67 ಕೋಟಿ ಮತದಾರರು ಇದ್ದರು. ಅದರಲ್ಲಿ 3.10 ಕೋಟಿ ಮತಗಳು ಚಲಾವಣೆಯಾಗಿ ಶೇ 84ರಷ್ಟು ಮತದಾನ ದಾಖಲಾಗಿತ್ತು. ಈ ಬಾರಿಯ ಚುನಾವಣೆಯಲ್ಲಿ ಎಸ್‌ಐಆರ್ ಕಾರಣ ಈ ಕ್ಷೇತ್ರಗಳ ಮತದಾರರ ಸಂಖ್ಯೆ 3.33 ಕೋಟಿಗೆ ಇಳಿಕೆಯಾಗಿದೆ. ಇದರಲ್ಲಿ 3.09 ಕೋಟಿ ಮಂದಿ ಮತ ಚಲಾಯಿಸಿದ್ದು, ಶೇ 92.70 ಮತದಾನ ದಾಖಲಾಗಿದೆ' ಎಂದು ವಿವರಿಸಿದ್ದಾರೆ.

'2026ರಲ್ಲಿ ಮತದಾನ ಪ್ರಮಾಣ ಹೆಚ್ಚು ದಾಖಲಾಗಿದೆ ಯಾದರೂ, ಚಲಾವಣೆಯಾದ ಒಟ್ಟು ಮತಗಳು 2021ಕ್ಕೆ ಹೋಲಿಸಿದರೆ 83,674ರಷ್ಟು ಕಡಿಮೆಯಾಗಿವೆ. ಒಟ್ಟು ಮತದಾರರ ಸಂಖ್ಯೆ ಇಳಿಕೆಯಾಗಿರುವುದೇ ಶೇಕಡಾವಾರು ಪ್ರಮಾಣ ಹೆಚ್ಚಲು ಕಾರಣ' ಎಂದಿದ್ದಾರೆ.

ಚುನಾವಣಾ ರಾಜಕೀಯದ ಮರುವ್ಯಾಖ್ಯಾನ: ವಿಜಯ್



ವಿಜಯ್

ಚೆನ್ನೈ (ಪಿಟಿಐ): ತಮಿಳುನಾಡಿನ ಮತದಾರರು ಈ ಬಾರಿ ಚುನಾವಣಾ ರಾಜಕೀಯವನ್ನು ಮರು ವ್ಯಾಖ್ಯಾನಿಸಿದ್ದಾರೆ ಎಂದು ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್ ಶುಕ್ರವಾರ ಹೇಳಿದ್ದಾರೆ.

'ರಾಜ್ಯವು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಮತದಾರರು ಈ ಬಾರಿ ಉತ್ಸಾಹದಿಂದ ಮತದಾನದಲ್ಲಿ ಪಾಲ್ಗೊಂಡಿದ್ದಾರೆ. 'ಚುನಾವಣೆಯು ಪ್ರಜಾಪ್ರಭುತ್ವದ ಹಬ್ಬ' ಎಂಬುದು ಗುರುವಾರದ ಮತದಾನದಲ್ಲಿ ಸಾಬೀತಾಗಿದೆ' ಎಂದಿದ್ದಾರೆ.

ತಮಿಳುನಾಡು ವಿಧಾನಸಭೆಯ ಎಲ್ಲ 234 ಕ್ಷೇತ್ರಗಳಿಗೆ ಗುರುವಾರ ಒಂದೇ ಹಂತದಲ್ಲಿ ಮತದಾನ ನಡೆದಿದ್ದು, ಶೇ 85.15 ಮತದಾನ ದಾಖಲಾಗಿದೆ. ಇಷ್ಟು ಪ್ರಮಾಣದಲ್ಲಿ ಮತದಾನ ನಡೆದಿರುವುದು ರಾಜ್ಯದ ಇತಿಹಾಸದಲ್ಲಿ ಇದೆ ಮೊದಲು.

'ತಮಿಳುನಾಡು ರಾಜ್ಯದ ಚುನಾವಣಾ ರಾಜಕೀಯವನ್ನು ಮರು ವ್ಯಾಖ್ಯಾನಿಸಿದ ಮತದಾರರಿಗೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ' ಎಂದು ವಿಜಯ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ರಾಜ್ಯದ ರಾಜಕೀಯವು ಪ್ರಭಾವಿ ಮತ್ತು ಅನುಭವಿಗಳ ವಲಯಕ್ಕೆ ಮಾತ್ರ ಸೀಮಿತವಾಗಿದೆ ಎಂಬ ತಪ್ಪುಕಲ್ಪನೆಯನ್ನು ಕೆಲವರು ಇಷ್ಟು ವರ್ಷಗಳಿಂದ ಹರಡಿದ್ದರು. ಆ ತಪ್ಪುಕಲ್ಪನೆಯನ್ನು ಸಾಮಾನ್ಯ ಜನರು ಈಗ ಛಿದ್ರಗೊಳಿಸಿದ್ದಾರೆ' ಎಂದು ಹೇಳಿದ್ದಾರೆ.

'ಆಶಾವಾದಿಯಾಗಿ ಇರೋಣ. ಒಳ್ಳೆಯ ದಿನಗಳು ಬರಲಿದ್ದು, ಟಿವಿಕೆಗೆ ಗೆಲುವು ಖಚಿತ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸಿಇಸಿ ಪದಚ್ಯುತಿಗೆ ಹೊಸ ನೋಟಿಸ್

ನವದೆಹಲಿ (ಪಿಟಿಐ): ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸುವಂತೆ ಕೋರಿ ವಿರೋಧ ಪಕ್ಷಗಳು ಶುಕ್ರವಾರ ರಾಜ್ಯಸಭೆಯಲ್ಲಿ ಹೊಸ ನೋಟಿಸ್ ಸಲ್ಲಿಸಿವೆ ಎಂದು ಮೂಲಗಳು ತಿಳಿಸಿವೆ.

'ಮಾದರಿ ನೀತಿ ಸಂಹಿತೆ ಜಾರಿಯಲ್ಲಿ ಪಕ್ಷಪಾತ ತೋರುವುದನ್ನು ಮುಂದುವರಿಸಿದ್ದಾರೆ' ಎಂಬ ಹೊಸ ಆರೋಪವನ್ನು ಸಿಇಸಿ ವಿರುದ್ಧ ಮಾಡಲಾಗಿದೆ.

ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ವಿಧಾನಸಭೆ ಚುನಾವಣೆಗೆ ಮುನ್ನ ಏಪ್ರಿಲ್ 18ರಂದು ಪ್ರಧಾನಿ ನರೇಂದ್ರ ಮೋದಿ ದೇಶವನ್ನುದ್ದೇಶಿಸಿ ಮಾಡಿದ ಭಾಷಣದ ವಿರುದ್ಧ ನೀಡಿದ ದೂರಿನ ಬಗ್ಗೆ ಚುನಾವಣಾ ಆಯೋಗ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪ್ರತಿಪಕ್ಷಗಳು ಆರೋಪಿಸಿವೆ.

ಮೂಲಗಳ ಪ್ರಕಾರ, ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಮತ್ತು ಟಿಎಂಸಿ ನಾಯಕಿ ಸಾಗರಿಕಾ ಘೋಷ್ ಅವರು ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿಗೆ ನೋಟಿಸ್ ಸಲ್ಲಿಸಿದ್ದಾರೆ.

ಕಾಂಗ್ರೆಸ್, ಎಸ್‌ಪಿ, ಡಿಎಂಕೆ, ಎಡಪಕ್ಷಗಳು, ಶಿವಸೇನಾ (ಯುಬಿಟಿ), ಎನ್‌ಸಿಪಿ (ಎಸ್‌ಪಿ), ಆರ್‌ಜೆಡಿ, ಐಯುಎಂಎಲ್ ಮತ್ತು ಇತರ ವಿರೋಧ ಪಕ್ಷಗಳ 73 ಸದಸ್ಯರು ಸಹಿ ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಜ್ಞಾನೇಶ್ ಅವರನ್ನು ಪದಚ್ಯುತಗೊಳಿಸುವ ನಿರ್ಣಯವನ್ನು ಮಂಡಿಸುವ ಕುರಿತು ವಿರೋಧ ಪಕ್ಷಗಳು ಈ ಮುನ್ನ ಸಂಸತ್‌ನ ಎರಡೂ ಸದನಗಳಲ್ಲಿ ನೀಡಿದ್ದ ನೋಟಿಸ್‌ಅನ್ನು ತಿರಸ್ಕರಿಸಲಾಗಿತ್ತು.

ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ: ನ್ಯಾಯಮಂಡಳಿಗಳಿಗೆ ಸುಪ್ರೀಂ ಕೋರ್ಟ್ ಸೂಚನೆ

'ತುರ್ತು ವಿಚಾರಣೆ ಬಯಸಿದರೆ ಅನುವು ಮಾಡಿ'

ನವದೆಹಲಿ (ಪಿಟಿಐ): 'ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೊಳ್ಳುವ ಸಂಬಂಧ ತುರ್ತು ವಿಚಾರಣೆಗಾಗಿ ಯಾರು ಮನವಿ ಮಾಡಿಕೊಂಡಿದ್ದಾರೊ ಆದ್ಯತೆ ಮೇರೆಗೆ ಅಂಥವರ ಅರ್ಜಿಗಳ ವಿಚಾರಣೆ ನಡೆಸಿ' ಎಂದು ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಸಂಬಂಧ ವಿಚಾರಣೆ ನಡೆಸುತ್ತಿರುವ ನ್ಯಾಯ ಮಂಡಳಿಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಸೂಚನೆ ನೀಡಿದೆ.

ಎಸ್‌ಐಆರ್ ಸಂಬಂಧ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಸಲ್ಲಿಸಿದ ಅರ್ಜಿ ಸೇರಿ ಹಲವು ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠ ನಡೆಸಿತು.

ಮತದಾರರ ಪಟ್ಟಿಯಲ್ಲಿ ಹೆಸರು ಅಳಿಸಿ ಹೋಗಿದ್ದಕ್ಕೆ ಸಂಬಂಧಿಸಿದ ಅರ್ಜಿಗಳ ಕುರಿತು ಪ್ರತಿಕ್ರಿಯಿಸಿದ ಪೀಠ, 'ನಿಮಗೆ ಯಾವುದೇ ಸಮಸ್ಯೆಗಳಿದ್ದರೆ ನಾವು ರಚಿಸಿರುವ 19 ನ್ಯಾಯ ಮಂಡಳಿಗಳ ಬಳಿ ಹೋಗಿ' ಎಂದಿತು.

'ನಮ್ಮ ಏಪ್ರಿಲ್ 13ರ ಆದೇಶದಲ್ಲಿಯೇ ಹಲವು ವಿಚಾರಗಳಿಗೆ ಸಂಬಂಧಿಸಿ ನಿರ್ದೇಶನ ನೀಡಿದ್ದೇವೆ. ಆದರೂ ಹಲವು ಸಮಸ್ಯೆಗಳು ಉದ್ಭವಿಸುತ್ತವೆ ಎನ್ನುವುದು ನಮಗೆ ಗೊತ್ತು. ಈ ಸಮಸ್ಯೆಗಳ ಬಗ್ಗೆ ಕೋಲ್ಕತ್ತ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮತ್ತು ನ್ಯಾಯಮಂಡಳಿಗಳ ಗಮನಕ್ಕೆ ತರಬೇಕಾಗುತ್ತದೆ' ಎಂದು ಪೀಠ ಹೇಳಿತು.

'ನಾವು ನಿಮಗೆ ಅನುಕೂಲ ಮಾಡಿಕೊಡುತ್ತೇವೆ. ಮಂಡಳಿಗೆ ಸಂಬಂಧಿಸಿದ ಆಡಳಿತಾತ್ಮಕ ವಿಚಾರಗಳ ಬಗ್ಗೆ ಏನೇ ಸಮಸ್ಯೆಗಳಿದ್ದರೂ ನೀವು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯನ್ನು ಭೇಟಿಯಾಗಬಹುದು' ಎಂದು ಪೀಠ ಹೇಳಿತು.

ಎಸ್‌ಐಆರ್: ನ್ಯಾಯಮಂಡಳಿಯಲ್ಲೇ ಪರಿಹಾರ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಂತರ ತಮ್ಮ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಆರೋಪಿಸಿ, ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ 65 ಮಂದಿ ಸೇರಿ ಅನೇಕರು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಎಸ್‌ಐಆರ್ ಸಂಬಂಧಿತ ದೂರುಗಳನ್ನು ಮೇಲ್ಮನವಿ ನ್ಯಾಯಮಂಡಳಿಗಳಲ್ಲೇ ಇತ್ಯರ್ಥಪಡಿಸಿಕೊಳ್ಳುವಂತೆ ಸೂಚಿಸಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್‌ಮಾಲ್ಯಾ ಬಾಗ್ಚಿ, ವಿಪುಲ್ ಎಂ. ಪಾಂಚೋಲಿ ಅವರ ಪೀಠವು ಈ ಆದೇಶ ನೀಡಿದೆ.

'ಎಸ್‌ಐಆರ್' ವೇಳೆ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಮನಬಂದಂತೆ ತೆಗೆದುಹಾಕಲಾಗಿದೆ. ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿಗೂ ಮತ ಚಲಾಯಿಸಲು ಅವಕಾಶ ಲಭಿಸಿಲ್ಲ. ಚುನಾವಣಾ ಕಾರ್ಯಕ್ಕೆ ನಿಯೋಜಿಸಿ ಹೊರಡಿಸಿದ ಆದೇಶದಲ್ಲಿ ಸಿಬ್ಬಂದಿಯ ಎಪಿಕ್ ಸಂಖ್ಯೆಯನ್ನು ನಮೂದಿಸಲಾಗಿದೆ. ಆದರೆ, ಪಟ್ಟಿಯಲ್ಲಿ ಅವರ ಹೆಸರಿಲ್ಲ.ಈ ಬಗ್ಗೆ ಈಗಾಗಲೇ ಮೇಲ್ಮನವಿ ನ್ಯಾಯಮಂಡಳಿಗೂ ಅರ್ಜಿ ಸಲ್ಲಿಸಲಾಗಿದೆ' ಎಂದು ಅರ್ಜಿದಾರರ ಪರವಾಗಿ ಹಾಜರಾದ ವಕೀಲರು ಪೀಠದ ಗಮನಕ್ಕೆ ತಂದರು.

'ಮತದಾರರ ಪಟ್ಟಿಯಲ್ಲಿ ಉಳಿಯಲು ಹೆಚ್ಚು ಮೌಲ್ಯಯುತವಾದ ಹಕ್ಕಗಳನ್ನು ನಾವು ಪರಿಶೀಲಿಸುತ್ತೇವೆ' ಎಂದ ನ್ಯಾಯಪೀಠವು, 'ಈ ಬಗ್ಗೆ ಮೇಲ್ಮನವಿ ನ್ಯಾಯಮಂಡಳಿಯೇ ಸೂಕ್ತ ಆದೇಶ ಹೊರಡಿಸಲಿದೆ' ಎಂದು ಹೇಳಿತು.

ಮೇಲ್ಮನವಿ ನ್ಯಾಯಮಂಡಳಿಯಲ್ಲಿ ಪ್ರಕರಣ ಬಾಕಿ ಇರುವ ಅರ್ಜಿದಾರರಿಗೂ ಚುನಾವಣೆಯಲ್ಲಿ ಮತ ಚಲಾಯಿಸಲು ಅವಕಾಶ ನೀಡುವಂತೆ ಕೋರಿ 71 ಜನರ ತಂಡ ಮತ್ತು 6 ಮಂದಿ ಪ್ರತ್ಯೇಕವಾಗಿ ಎರಡು ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದಾರೆ.

ಮತದಾರರ ಪಟ್ಟಿಯಿಂದ ಹೆಸರು ಕೈಬಿಡಲಾಗಿದೆ ಎಂದು ಆರೋಪಿಸಿ ಯಾರೆಲ್ಲ ಮೇಲ್ಮನವಿ ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿದ್ದಾರೋ ಅವರೆಲ್ಲರ ಹೆಸರುಗಳನ್ನು ಸೇರ್ಪಡೆಗೊಳಿಸಿ ಪರಿಷ್ಕೃತ ಮತದಾರರ ಪಟ್ಟಿ ಪ್ರಕಟಿಸುವಂತೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿತ್ತು. ಬಂಗಾಳ ವಿಧಾನಸಭಾ ಚುನಾವಣೆಯ ಎರಡನೆಯ ಮತ್ತು ಕೊನೆಯ ಹಂತದ ಮತದಾನ ಏಪ್ರಿಲ್ 29ರಂದು ನಡೆಯಲಿದೆ.



ಪಶ್ಚಿಮ ಬಂಗಳಾದಲ್ಲಿ ಎಸ್‌ಐಆರ್ ಸಂಬಂಧಿತ ಅರ್ಜಿಗಳ ವಿಚಾರಣೆ ನಡೆಸಲು, ಕೋಲ್ಕತ್ತ ಹೈಕೋರ್ಟ್, ಹೈಕೋರ್ಟ್‌ಗಳ ಮಾಜಿ ನ್ಯಾಯಾಧೀಶರ ನೇತೃತ್ವದಲ್ಲಿ ಒಟ್ಟು 19 ಮೇಲ್ಮನವಿ ನ್ಯಾಯಮಂಡಳಿಗಳನ್ನು ರಚಿಸಿದೆ.

ಬಂಗಾಳ–ದಾಖಲೆ ಮತದಾನ: ಹರ್ಷ

ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದಲ್ಲಿ ದಾಖಲೆ ಪ್ರಮಾಣದಲ್ಲಿ (ಶೇ 92.72) ಮತದಾನ ಆಗಿದ್ದರ ಕುರಿತು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ತೀವ್ರ ಹರ್ಷ ವ್ಯಕ್ತಪಡಿಸಿದರು. 'ಭಾರತದ ಪ್ರಜೆಯಾಗಿ ನನಗೆ ಬಹಳ ಸಂತೋಷವಾಗಿದೆ. ಜನರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದರೆ, ಅದು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುತ್ತದೆ' ಎಂದರು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪ್ರತಿಕ್ರಿಯಿಸಿ, 'ರಾಜ್ಯದಲ್ಲಿ ಶಾಂತಿಯುತ ಮತದಾನ ನಡೆಯಲು ಕೇಂದ್ರೀಯ ಪಡೆಗಳ ಪಾತ್ರ ಮಹತ್ವದ್ದು. ಚುನಾವಣೆ ವೇಳೆ ಹಿಂಸೆ ನಡೆಯುವುದು ಪಶ್ಚಿಮ ಬಂಗಾಳದ ಇತಿಹಾಸ' ಎಂದರು.



ಈ ಬಾರಿ ಮತದಾನ ಮಾಡದಿದ್ದರೆ, ಮತದಾರರ ಪಟ್ಟಿಯಿಂದ ಹೆಸರು ಅಳಿಸಿ ಹೋಗುತ್ತದೆ ಎಂಬ ಭಯದಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಮತದಾನವಾಗಿದೆ
ಕಲ್ಯಾಣ್ ಬ್ಯಾನರ್ಜಿ, ವಕೀಲ

'ಬಿಜೆಪಿ ಇಲಾಖೆಯಂತೆ ಆಯೋಗ ವರ್ತನೆ'

ತಿರುವನಂತಪುರ/ನವದೆಹಲಿ (ಪಿಟಿಐ): ಭಾರತೀಯ ಚುನಾವಣಾ ಆಯೋಗವು ಬಿಜೆಪಿಯ ಇಲಾಖೆಯಂತೆ ಕೆಲಸ ಮಾಡುತ್ತಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಅವರು ಶುಕ್ರವಾರ ಆರೋಪಿಸಿದ್ದಾರೆ.



ವೇಣುಗೋಪಾಲ್

'ಪ್ರಧಾನಿ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನೀಡಿದ ಹೇಳಿಕೆಗಾಗಿ ಅವರಿಗೆ ನೋಟಿಸ್ ನೀಡಲಾಗಿದೆ. ಆದರೆ ಮೋದಿ ಅವರ ಇತ್ತೀಚಿನ ಸಾರ್ವಜನಿಕ ಭಾಷಣದ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಹೇಳಿದ್ದಾರೆ.

'ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಪುನರ್‌ವಿಂಗಡಣೆಗೆ ಸಂಬಂಧಿಸಿದ ಮಸೂದೆಗಳು ಸಂಸತ್ತಿನ ಅಂಗೀಕಾರ ಗೊಳ್ಳದೇ ಇರುವ ಕಾರಣಕ್ಕೆ ಪ್ರಧಾನಿ ಅವರು ಮಾಡಿರುವ ಸಾರ್ವಜನಿಕ ಭಾಷಣವು, ಚುನಾವಣಾ ಸಂಹಿತೆಯ ಉಲ್ಲಂಘನೆಯಾಗಿದೆ' ಎಂದು ವೇಣುಗೋಪಾಲ್ ಆರೋಪಿಸಿದ್ದಾರೆ.

'ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳು ಈ ಬಗ್ಗೆ ದೂರು ನೀಡಿದರೂ ಚುನಾವಣಾ ಆಯೋಗ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಹೇಳಿದ್ದಾರೆ.

'ಪ್ರಧಾನಿ ಏನೇ ಹೇಳಿದರೂ ಮತ್ತು ಚುನಾವಣಾ ನೀತಿಗಳನ್ನು ಉಲ್ಲಂಘಿಸಿದರೂ ಅವರಿಗೆ ಕ್ಲೀನ್‌ಚಿಟ್ ನೀಡಲಾಗುತ್ತದೆ' ಎಂದು ಆರೋಪಿಸಿದ್ದಾರೆ.

ತಿಮ್ಮಪ್ಪನಿಗೆ ₹95 ಲಕ್ಷದ ಚಿನ್ನದ ಪದಕ

ತಿರುಪತಿ (ಪಿಟಿಐ): ಬೆಂಗಳೂರಿನ ಎಂ.ಮಹದೇವಮ್ಮ ಅವರು ದೇವಾಲಯಕ್ಕೆ 753 ಗ್ರಾಂ ತೂಕದ ₹95 ಲಕ್ಷ ಮೌಲ್ಯದ ಏಳು ಚಿನ್ನದ ಪದಕಗಳನ್ನು ಶುಕ್ರವಾರ ದಾನ ಮಾಡಿದ್ದಾರೆ ಎಂದು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ತಿಳಿಸಿದೆ.

ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಎಂ. ರವಿಚಂದ್ರ ಮತ್ತು ಹೆಚ್ಚುವರಿ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎಚ್. ವೆಂಕಯ್ಯ ಚೌಧರಿ ಅವರ ಮೂಲಕ ದೇವಾಲಯದ ಒಳಗಿನ ರಂಗನಾಯಕಕುಲ ಮಂಟಪದಲ್ಲಿ ಮಹಾದೇವಮ್ಮ ಅವರು ಪದಕಗಳನ್ನು ದೇವರಿಗೆ ಸಮರ್ಪಿಸಿದ್ದಾರೆ.

ಮಣಿಪುರ: ಗುಂಡೇಟಿಗೆ 3 ಸಾವು

ಇಂಫಾಲ್ (ಪಿಟಿಐ): ಮಣಿಪುರದ ಉಖ್ರುಲ್ ಜಿಲ್ಲೆಯಲ್ಲಿ ಶುಕ್ರವಾರ ಬೆಳಿಗ್ಗೆ ಗುಡ್ಡಗಾಡು ಸಮುದಾಯಗಳ ವೈರಿ ಗುಂಪಿನ ನಡುವೆ ಪ್ರತ್ಯೇಕ ಗುಂಡಿನ ಚಕಮಕಿ ನಡೆದು, ಮೂವರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಲ್ಲಾಮ್ ಗ್ರಾಮದಲ್ಲಿ ಭದ್ರತಾ ಪಡೆಗಳು ಇಬ್ಬರ ಮೃತದೇಹಗಳನ್ನು ವಶಕ್ಕೆ ಪಡೆದಿವೆ. ಮೃತರನ್ನು ಎಲ್ ಸಿತ್ಲೋವು ಮತ್ತು ಪಿ. ಹೋಲೈ ಎಂದು ಗುರ್ತಿಸಲಾಗಿದೆ.


ಟಾಂಗ್‌ಕುಲ್ ನಾಗ ಸಮುದಾಯ ಹೆಚ್ಚಿರುವ ಮುಲ್ಲಾಮ್ ಗ್ರಾಮದಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದೆ. ಬಂಡುಕೋರರು ಕೆಲವು ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ.

ಇಬ್ಬರು ಕಾರ್ಯಕರ್ತರ ಹತ್ಯೆ ಹಾಗೂ ಮುಲ್ಲಾಮ್ ಮತ್ತು ಸಂಗೋಫಾಲ್ ಗ್ರಾಮಗಳಲ್ಲಿ ಮನೆಗಳಿಗೆ ಬೆಂಕಿ ಹಚ್ಚಿರುವುದನ್ನು ಕುಕಿ ಸಂಘಟನೆ ಖಂಡಿಸಿದೆ. ಕೂಡಲೇ ಪ್ರಕರಣ ದಾಖಲಿಸಿ, ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದೆ.

ಮತ್ತೊಂದು ಘಟನೆಯಲ್ಲಿ ಕಾಮ್‌ಜೋಂಗ್ ಜಿಲ್ಲೆಯ ನಿವಾಸಿ 29 ವರ್ಷದ ಹೆಚ್.ಜಮಾಂಗ್ ಎಂಬುವರನ್ನು ಹತ್ಯೆ ಮಾಡಲಾಗಿದೆ. ಕುಕಿ ಬಂಡುಕೋರರು ಕೃತ್ಯ ನಡೆಸಿದ್ದಾರೆ ಎಂದು ಟಾಂಗ್‌ಕುಲ್ ನಾಗ ಸಂಘಟನೆ ಆರೋಪಿಸಿದೆ. ಆದರೆ ಕುಕಿ ಸಂಘಟನೆಯ ಮುಖಂಡರು ಆರೋಪವನ್ನು ಅಲ್ಲಗಳೆದಿದ್ದಾರೆ.

ಆರ್‌ಎಸ್‌ಎಸ್ ಏನೆಂದು ಅಮೆರಿಕಕ್ಕೆ ಗೊತ್ತಿಲ್ಲ: ಹೊಸಬಾಳೆ

ವಾಷಿಂಗ್ಟನ್ (ಪಿಟಿಐ): 'ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್), ಅಮೆರಿಕದ ಕು ಕ್ಲಕ್ಸ್ ಕ್ಲಾನ್ (ಶ್ವೇತವರ್ಣೀಯರ ಪರಮಾಧಿಪತ್ಯದ ಸಂಘಟನೆ) ಸಂಘಟನೆಯಲ್ಲ. ಸಮಾಜದ ವಿವಿಧ ಕಾರ್ಯ ವಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಯಂ ಸೇವಾ ಸಂಸ್ಥೆ' ಎಂದು ಆರ್‌ಎಸ್‌ಎಸ್ ಮಹಾ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ.



ದತ್ತಾತ್ರೇಯ ಹೊಸಬಾಳೆ

ಹಡ್ಸನ್ ಇನ್‌ಸ್ಟಿಟ್ಯೂಟ್ ಗುರುವಾರ ಹಮ್ಮಿಕೊಂಡಿದ್ದ 'ನವಭಾರತ' ಕುರಿತ ಸಮ್ಮೇಳನದಲ್ಲಿ ಲೇಖಕ ವಾಲ್ಟರ್ ರಸೆಲ್ ಮೀಡ್ ಅವರೊಂದಿಗೆ ನಡೆದ ಸಂವಾದದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು.

'ಅಮೆರಿಕದಲ್ಲಿ ಭಾರತದ ಬಗ್ಗೆ ಇರುವ ತಪ್ಪು ಕಲ್ಪನೆಯೇ ಆರ್‌ಎಸ್‌ಎಸ್ ಕುರಿತೂ ಇದೆ. ಆರ್‌ಎಸ್‌ಎಸ್ ಹಿಂದೂ ಪರಮಾಧಿಪತ್ಯದ ಸಂಘಟನೆ. ಕ್ರೈಸ್ತರು, ಮುಸ್ಲಿಮರ ವಿರೋಧಿ, ಅಭಿವೃದ್ಧಿ ಮತ್ತು ಆಧುನಿಕತೆಯ ವಿರೋಧಿ ಎಂಬ ಹಣೆಪಟ್ಟಿ ಕಟ್ಟಲಾಗಿದೆ. ಗೊತ್ತಿದ್ದೋ, ಗೊತ್ತಿಲ್ಲದೆಯೋ ರೂಪಿಸಲಾದ ಕಾರ್ಯಸೂಚಿಯ ಸಂಕಥನವಿದು. ದಶಕಗಳಿಂದ ಇದನ್ನು ಸೃಷ್ಟಿಸಲಾಗಿದೆ' ಎಂದು ಹೊಸಬಾಳೆ ಹೇಳಿದರು.

'ಭಾರತದ ಕೆಲವು ಕು ಕ್ಲಕ್ಸ್ ಕ್ಲಾನ್ ಮಾದರಿ ಸಂಘಟನೆಗಳು ಆರ್‌ಎಸ್‌ಎಸ್‌ನ ಒಳ್ಳೆಯ ವಿಚಾರಗಳನ್ನು ಹೇಳದೇ, ವಿರೋಧಿ ವಿಚಾರಗಳನ್ನು ಹರಡುತ್ತಿವೆ. ಆದರೆ, ಭಾರತದ ಸಂಸ್ಕೃತಿ ಮತ್ತು ನಾಗರಿಕತೆಯ ವಿಶಿಷ್ಟ ಲಕ್ಷಣಗಳ ಬೇರುಳ್ಳ ಜನರ ಸ್ವಯಂಸೇವಾ ಚಳವಳಿಯೇ ಆರ್‌ಎಸ್‌ಎಸ್' ಎಂದರು.

'ಇಡೀ ಜಗತ್ತು ಒಂದೇ ಎಂಬುದು ಹಿಂದೂ ತತ್ತ್ವ ಮತ್ತು ಸಂಸ್ಕೃತಿ. ಆರ್‌ಎಸ್‌ಎಸ್‌ನ ಹಿಂದೂ ಎಂಬುದು ನಾಗರಿಕತೆಯ ಹೆಗ್ಗುರುತು; ಯಾವುದೇ ಧರ್ಮದ ಗುರುತಲ್ಲ. ಅಲ್ಪಸಂಖ್ಯಾತರು ಮತ್ತು ನೆರೆಯ ದೇಶಗಳ ಜೊತೆಗಿನ ಆತಂಕವು ರಾಜಕೀಯ ಹಿತಾಸಕ್ತಿ ಮತ್ತು ಇತಿಹಾಸದ ತಪ್ಪು ವ್ಯಾಖ್ಯಾನದಿಂದ ಸೃಷ್ಟಿಯಾಗಿವೆ' ಎಂದು ಹೇಳಿದರು.

ಅಮೆರಿಕದಲ್ಲಿರುವ ಭಾರತೀಯರ ವೇದಿಕೆಯು ಗುರುವಾರ ಸಂಜೆ ವರ್ಜಿನಿಯಾ ನಗರದಲ್ಲಿ ದತ್ತಾತ್ರೇಯ ಹೊಸಬಾಳೆ ಅವರಿಗೆ ಗೌರವ ಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಗ್ರೇಟರ್ ವಾಷಿಂಗ್ಟನ್ ಭಾಗದ ಅಪಾರ ಜನರು ಭಾಗವಹಿಸಿದ್ದರು.

ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗ (ಯುಎಸ್‌ಸಿಐಆರ್‌ಎಫ್) ನೀಡಿದ್ದ ವಾರ್ಷಿಕ ವರದಿಯಲ್ಲಿ ಆರ್‌ಎಸ್‌ಎಸ್ ಮೇಲೆ ನಿರ್ಬಂಧಗಳನ್ನು ಹೇರಲು ಶಿಫಾರಸು ಮಾಡಿತ್ತು. ಈ ಹಿನ್ನೆಲೆಯಲ್ಲಿ ಹೊಸಬಾಳೆ ಅವರು ಅಮೆರಿಕದಲ್ಲೇ ಆರ್‌ಎಸ್‌ಎಸ್ ಕಾರ್ಯವೈಖರಿ ಬಗ್ಗೆ ಸ್ಪಷ್ಟಪಡಿಸಿದ್ದಾರೆ.

ಎಎಪಿಯ 7 ರಾಜ್ಯಸಭಾ ಸದಸ್ಯರು ಬಿಜೆಪಿಗೆ

ಒಂದನೇ ಪುಟದಿಂದ...

'ಎಎಪಿಗಾಗಿ ಬದುಕಿನ 15 ವರ್ಷಗಳನ್ನು ಮೀಸಲಿಟ್ಟಿದ್ದೆ. ಆದರೆ, ಈಗ ಎಎಪಿ ಪ್ರಾಮಾಣಿಕ ರಾಜಕಾರಣದಿಂದ ಹಿಂದೆ ಸರಿದಿದೆ. ನಾನು ತಪ್ಪಾದ ಪಕ್ಷದಲ್ಲಿದ್ದ ಸರಿಯಾದ ವ್ಯಕ್ತಿ, ಈಗ ಈ ಪಕ್ಷದಿಂದ ದೂರ ಸರಿಯುತ್ತಿದ್ದು, ಜನರ ಹತ್ತಿರಕ್ಕೆ ಹೋಗುತ್ತಿದ್ದೇನೆ' ಎಂದು ಚಡ್ಡಾ ಹೇಳಿದ್ದಾರೆ.

ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧದ ಮೃದು ಧೋರಣೆಯಿಂದಾಗಿ ಸ್ವಪಕ್ಷದವರಿಂದಲೇ ಚಡ್ಡಾ ಟೀಕೆಗೆ ಗುರಿಯಾಗಿದ್ದರು. ರಾಜ್ಯಸಭೆಯಲ್ಲಿ ಪಕ್ಷದ ಉಪನಾಯಕ ಹುದ್ದೆಯಿಂದ ಚಡ್ಡಾ ಅವರನ್ನು ಏಪ್ರಿಲ್ 2ರಂದು ವಜಾಗೊಳಿಸಿದ್ದ ಕೇಜ್ರಿವಾಲ್, ಈ ಜವಾಬ್ದಾರಿಯನ್ನು ಮಿತ್ತಲ್‌ಗೆ ವಹಿಸಿದ್ದರು.

ಬಿಜೆಪಿಯು ಚಡ್ಡಾ ಅವರಿಗೆ ಕೇಂದ್ರ ಸಚಿವ ಸ್ಥಾನ ನೀಡಬಹುದು ಎಂಬ ಚರ್ಚೆಗಳು ಮುನ್ನೆಲೆಗೆ ಬಂದಿವೆ.

ಅನರ್ಹಗೊಳಿಸಲು ಮನವಿ: 'ಬಿಜೆಪಿಯ 'ಆಪರೇಷನ್ ಕಮಲ' ಕಾರ್ಯಾಚರಣೆಯಿಂದ ಪಕ್ಷ ತೊರೆದ ರಾಘವ್ ಚಡ್ಡಾ, ಸಂದೀಪ್ ಪಾಠಕ್, ಅಶೋಕ್ ಮಿತ್ತಲ್ ಅವರನ್ನು ಪಕ್ಷಾಂತರ ನಿಷೇಧ ಕಾನೂನಿನಡಿ ಅನರ್ಹಗೊಳಿಸುವಂತೆ ರಾಜ್ಯಸಭಾ ಅಧ್ಯಕ್ಷರಿಗೆ ಮನವಿ ಸಲ್ಲಿಸಲಾಗಿದೆ' ಎಂದು ಎಎಪಿ ಮುಖಂಡ ಸಂಜಯ್ ಸಿಂಗ್ 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಪಂಜಾಬ್ ಚುನಾವಣೆ ಮೇಲೆ ಕಣ್ಣು

ಎಎಪಿಯ 10 ಮಂದಿ ರಾಜ್ಯಸಭಾ ಸದಸ್ಯರಲ್ಲಿ 7 ಮಂದಿ ಪಂಜಾಬ್ ಮತ್ತು ಮೂವರು ದೆಹಲಿಗೆ ಸೇರಿದವರಾಗಿದ್ದಾರೆ. ಒಂದು ಪಕ್ಷದ ಕನಿಷ್ಠ ಮೂರನೆಯ ಎರಡರಷ್ಟು ಶಾಸಕರು ಪಕ್ಷಾಂತರಗೊಂಡರೆ ಪಕ್ಷಾಂತರ ನಿಷೇಧ ಕಾನೂನಿನಡಿ ಅನರ್ಹತೆ ತಪ್ಪುತ್ತದೆ.



ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಅವರು ರಾಘವ್ ಚಡ್ಡಾ ಅವರನ್ನು ಶುಕ್ರವಾರ ಪಕ್ಷಕ್ಕೆ ಸ್ವಾಗತಿಸಿದರು – ಪಿಟಿಐ ಚಿತ್ರ

ಮುಂದಿನ ವರ್ಷ ನಡೆಯಲಿರುವ ಪಂಜಾಬ್ ವಿಧಾನಸಭಾ ಚುನಾವಣೆಯ ದೃಷ್ಟಿಯಿಂದಲೂ ಈ ಪಕ್ಷಾಂತರ ಮಹತ್ವ ಪಡೆದುಕೊಂಡಿದೆ. ಕಳೆದ ಬಾರಿ ಪಂಜಾಬ್‌ನಲ್ಲಿ ಎಎಪಿ ಅಧಿಕಾರಕ್ಕೆ ಬರುವಲ್ಲಿ ಚಡ್ಡಾ ಪ್ರಮುಖ ಪಾತ್ರ ವಹಿಸಿದ್ದರು. ಭಗವಂತ ಸಿಂಗ್ ಮಾನ್ ನೇತೃತ್ವದ ಎಎಪಿ ಸರ್ಕಾರವು ಪಂಜಾಬ್‌ನಲ್ಲಿ ಮರಳಿ ಅಧಿಕಾರಕ್ಕೆ ಬರಲು ಶ್ರಮಿಸುತ್ತಿದೆ.

ಅರವಿಂದ ಕೇಜ್ರಿವಾಲ್ ಅವರು ಎಎಪಿಯ ಸ್ಥಾಪಿತ ಸಿದ್ಧಾಂತಗಳಿಂದ ಹಿಂದೆ ಸರಿದಿದ್ದು, ದುರ್ನಡತೆಯಲ್ಲಿ ತೊಡಗಿದವರನ್ನು ರಕ್ಷಿಸುತ್ತಿದ್ದಾರೆ
ಸ್ವಾತಿ ಮಾಲಿವಾಲ್, ಎಎಪಿ ತೊರೆದಿರುವ ರಾಜ್ಯಸಭಾ ಸದಸ್ಯೆ

ಬಿಜೆಪಿ ವಿಭಜನೆಯನ್ನು ರೂಪಿಸುತ್ತಿದೆ. ಬೆನ್ನಿಗೆ ಚೂರಿ ಹಾಕಿ, ದ್ರೋಹ ಬಗೆದವರನ್ನು ಪಂಜಾಬಿನ ಜನ ಕ್ಷಮಿಸುವುದಿಲ್ಲ
ಅರವಿಂದ ಕೇಜ್ರಿವಾಲ್, ಎಎಪಿ ಮುಖ್ಯಸ್ಥ, 'ಎಕ್ಸ್' ಪೋಸ್ಟ್‌ನಲ್ಲಿ

ರಾಜ್ಯಸಭೆಯಲ್ಲಿ ಎನ್‌ಡಿಎಗೆ ಬಲ

ಎಎಪಿಯ 7 ರಾಜ್ಯಸಭಾ ಸದಸ್ಯರು ಬಿಜೆಪಿಗೆ ಸೇರ್ಪಡೆಯಾದ ಬೆನ್ನಲ್ಲೇ, ಎನ್‌ಡಿಎಗೆ ಮತ್ತಷ್ಟು ಬಲ ಬಂದಿದೆ. ಆದರೆ, ರಾಜ್ಯಸಭೆಯಲ್ಲಿ ಮೂರನೆಯ ಎರಡರಷ್ಟು ಬಹುಮತಕ್ಕೆ ಎನ್‌ಡಿಎಗೆ ಇನ್ನೂ 18 ಸದಸ್ಯರ ಕೊರತೆ ಇದೆ. ಮೇಲ್ಮನೆಯಲ್ಲಿ ಸರಳ ಬಹುಮತಕ್ಕೆ ಬಿಜೆಪಿಗೆ 10 ಸಂಸದರ ಕೊರತೆ ಇದೆ.

ರಾಜ್ಯಸಭೆಯಲ್ಲಿ ಎನ್‌ಡಿಎಗೆ 145 ಸದಸ್ಯರ ಬೆಂಬಲ ಇದೆ. ಒಟ್ಟು 244 ಸದಸ್ಯ ಬಲದ ರಾಜ್ಯಸಭೆಯಲ್ಲಿ ಮೂರನೆಯ ಎರಡರಷ್ಟು ಬಹುಮತಕ್ಕೆ 163 ಸದಸ್ಯ ಬಲ ಬೇಕಾಗುತ್ತದೆ.

ಬಿಜೆಪಿ ರಾಜ್ಯಸಭೆಯಲ್ಲಿ ಮೂರನೆಯ ಎರಡರಷ್ಟು ಬಹುಮತ ಪಡೆದುಕೊಂಡರೆ ಸಂವಿಧಾನ ತಿದ್ದುಪಡಿ ಅಗತ್ಯವಿರುವ ಕೆಲವು ನಿರ್ಣಾಯಕ ಮಸೂದೆಗಳನ್ನು ಜಾರಿಗೊಳಿಸುವುದು ಸುಲಭವಾಗಲಿದೆ.

‘ಮಗುವಿಗೆ ಜನ್ಮ ನೀಡು ಎಂದು ಒತ್ತಾಯಿಸಲಾಗದು’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಒಬ್ಬ ಮಹಿಳೆಗೆ ಅದರಲ್ಲಿಯೂ ಬಾಲಕಿಗೆ ಆಕೆಯ ಇಚ್ಛೆಗೆ ವಿರುದ್ಧವಾಗಿ ಮಗುವಿಗೆ ಜನ್ಮ ನೀಡಲೇಬೇಕು ಎಂದು ಯಾವುದೇ ನ್ಯಾಯಾಲಯ ಕೂಡ ಒತ್ತಾಯಪಡಿಸಲು ಸಾಧ್ಯವಿಲ್ಲ’ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ. ದೆಹಲಿ ಏಮ್ಸ್‌ನಲ್ಲಿ 15 ವರ್ಷದ ಬಾಲಕಿಗೆ ತನ್ನ ಏಳು ತಿಂಗಳ ಭ್ರೂಣವನ್ನು ತೆಗೆಸಿಕೊಳ್ಳುವುದಕ್ಕೆ ನ್ಯಾಯಾಲಯ ಒಪ್ಪಿಗೆ ನೀಡಿತು.

ಪರಿಣಾಮದ ಅರಿವಿದ್ದೇ ಬಾಲಕಿಯು ಗರ್ಭ ಧರಿಸಿದ್ದಳು. ಆದರೆ, ಇಲ್ಲಿ ಬಾಲಕ ಮತ್ತು ಬಾಲಕಿಯರು ಇಬ್ಬರೂ 18 ವರ್ಷ ಕೆಳಗಿನವರು. ಗರ್ಭ ಧರಿಸಿದ ಬಳಿಕ ಮಗುವಿಗೆ ಜನ್ಮ ನೀಡಲು ಬಾಲಕಿ ನಿರಾಕರಿಸಿದ್ದಳು ಮತ್ತು ಗರ್ಭಿಣಿಯಾದ ಮೇಲೆ ಆಕೆ ಮಾನಸಿಕವಾಗಿ ಸಮಸ್ಯೆ ಎದುರಿಸುತ್ತಿದ್ದಾಳೆ. ಆದ್ದರಿಂದ ಭ್ರೂಣ ತೆಗೆಸಲು ಅನುಮತಿ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರ ಪೀಠ ಈ ಅರ್ಜಿಯ ವಿಚಾರಣೆ ನಡೆಸಿತು. ‘ಬಾಲಕಿಗೆ ಮಗುವಿಗೆ ಜನ್ಮ ನೀಡಲು ಇಷ್ಟವಿಲ್ಲ. ಜೊತೆಗೆ, ಆಕೆ ಎರಡು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದಾಳೆ. ಇಂಥ ಸಂದರ್ಭದಲ್ಲಿ ಗರ್ಭಿಣಿಯ ಕುರಿತು ಹೆಚ್ಚು ಯೋಚಿಸಬೇಕೇ ವಿನಃ ಹುಟ್ಟಲಿರುವ ಮಗುವಿನ ಕುರಿತು ಯೋಚಿಸಬಾರದು’ ಎಂದು ಪೀಠ ಹೇಳಿತು.

‘ಭ್ರೂಣ ತೆಗೆಸಲು ಅನುಮತಿ ನೀಡಲಿಲ್ಲವಾದರೆ, ಬಾಲಕಿಯು ಆಕೆಯ ಜೀವನದಲ್ಲಿ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಜೊತೆಗೆ, ಮಗುವಿಗೆ ಜನ್ಮ ನೀಡಲು ಒತ್ತಾಯಿಸುವುದು ಮಹಿಳೆಯ ಸಾಂವಿಧಾನಿಕ ಹಕ್ಕನ್ನು ಉಲ್ಲಂಘಿಸಿದಂತಾಗುತ್ತದೆ. ಜನ್ಮ ನೀಡಬೇಕು ಬೇಡ ಎನ್ನುವುದು ಮಹಿಳೆಯ ಹಕ್ಕು’ ಎಂದು ಪೀಠ ಅಭಿಪ್ರಾಯಪಟ್ಟಿತು.

‘ದತ್ತು ನೀಡಬಹುದು ಎಂಬೆಲ್ಲ ಸಲಹೆ ನೀಡುವುದು ಸುಲಭ’

‘ಹುಟ್ಟಿದ ಮಗುವನ್ನು ಬೆಳೆಸಲು ಮಹಿಳೆಗೆ ಇಷ್ಟವಿಲ್ಲದಿದ್ದರೆ, ಮಗುವನ್ನು ದತ್ತು ನೀಡಬಹುದು. ಈ ಹಂತದಲ್ಲಿ ಭ್ರೂಣ ತೆಗೆಸಿದರೆ, ಮಗು ಮತ್ತು ತಾಯಿ ಇಬ್ಬರಿಗೂ ಸಮಸ್ಯೆಗಳಾಗುತ್ತವೆ’ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದಿಸಿದರು. ಬಾಲಕಿಯ ವೈದ್ಯಕೀಯ ವರದಿಯನ್ನೂ ಸಲ್ಲಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ‘ಇಂಥ ಸಮಯದಲ್ಲಿ ದತ್ತು ನೀಡಬಹುದು, ಆರ್ಥಿಕವಾಗಿ ಸಹಕಾರ ನೀಡಬಹುದು. ದತ್ತು ನೀಡಬಹುದಾದ್ದರಿಂದ ಈಗ ಮಗುವನ್ನು ಹೆರು ಎಂದೆಲ್ಲಾ ಸಲಹೆ ನೀಡುವುದು ಸುಲಭ. ಆದರೆ, ಮಗುವಿಗೆ ಜನ್ಮ ನೀಡಲು ಇಷ್ಟವೇ ಇಲ್ಲದ ಬಾಲಕಿಗೆ ಮಗುವಿಗೆ ಜನ್ಮ ನೀಡಲೇಬೇಕು ಎಂದರೆ ಹೇಗೆ? ಹೀಗೆ ಒತ್ತಾಯಪಡಿಸಿದರೆ ಆಕೆಯು ಮಾನಸಿಕ, ಭಾವನಾತ್ಮಕವಾಗಿ ಆಘಾತಕ್ಕೆ ಒಳಗಾಗುತ್ತಾಳೆ’ ಎಂದು ಪೀಠ ಹೇಳಿತು.

‘ಇಂಥ ಸಂದರ್ಭದಲ್ಲಿ ನ್ಯಾಯಾಲಯಗಳು ಭ್ರೂಣ ತೆಗೆಸಲು ಅನುಮತಿ ನೀಡಲಿಲ್ಲ ಎಂದಾದರೆ, ಅವರು ಅಕ್ರಮ ಮಾರ್ಗದಲ್ಲಿ ಮಗು ತೆಗೆಸಿಕೊಳ್ಳಲು ಮುಂದಾಗುತ್ತಾರೆ. ಅದು ಅವರ ಆರೋಗ್ಯದ ಮೇಲೆ ಶಾಶ್ವತ ಪರಿಣಾಮಗಳನ್ನು ಬೀರುತ್ತವೆ’ ಎಂದಿತು.

ಖೇರಾ ಜಾಮೀನು ಅರ್ಜಿ ವಜಾ


ಪವನ್ ಖೇರಾ

ಗುವಾಹಟಿ (ಪಿಟಿಐ): ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರ ಪತ್ನಿಯ ಬಳಿ ಹಲವು ಪಾಸ್‌ಪೋರ್ಟ್‌ಗಳಿದ್ದು, ವಿದೇಶದಲ್ಲಿ ಆಸ್ತಿ ಕೂಡ ಹೊಂದಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡ ಪವನ್ ಖೇರಾ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಗುವಾಹಟಿ ಹೈಕೋರ್ಟ್ ಶುಕ್ರವಾರ ತಿರಸ್ಕರಿಸಿದೆ.

ನ್ಯಾಯಮೂರ್ತಿ ಪಾರ್ಥಿವ್ ಜ್ಯೋತಿ ಸೈಕಿಯಾ ಅವರ ಪೀಠವು ಖೇರಾ ಅವರು ಸೋಮವಾರ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದೆ.

ಮುಖ್ಯಮಂತ್ರಿ ಅವರ ಪತ್ನಿ ರಿನಿಕಿ ಭುಯಾನ್ ಶರ್ಮಾ ಅವರು ಖೇರಾ ವಿರುದ್ಧ ಗುವಾಹಟಿಯ ಅಪರಾಧ ವಿಭಾಗದ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಿದ್ದರು.

‘ಅರ್ಜಿದಾರರಾದ ಖೇರಾ ಅವರು ತಮ್ಮ ಆರೋಪಗಳು ದಾಖಲೆಗಳನ್ನು ಆಧರಿಸಿವೆ ಎಂದು ಹೇಳಿಕೊಂಡಿದ್ದರೆ, ಆ ದಾಖಲೆಗಳು ಸುಳ್ಳು ಎಂದು ಪೊಲೀಸರು ಹೇಳಿದ್ದಾರೆ. ಪ್ರಕರಣ ದಾಖಲಾದ ನಂತರ ಪೊಲೀಸರು ಹೇಳುತ್ತಿರುವುದು ಸುಳ್ಳು ಎಂದು ಅರ್ಜಿದಾರರು ಯಾವುದೇ ಪ್ರತಿಪಾದನೆ ಮಾಡಿಲ್ಲ’ ಎಂದು ನ್ಯಾಯಾಲಯವು ತನ್ನ ಆದೇಶದಲ್ಲಿ ತಿಳಿಸಿದೆ.

ಇಂದ್ರಾಣಿ ಅರ್ಜಿ ತಿರಸ್ಕೃತ

ನವದೆಹಲಿ (ಪಿಟಿಐ): ಪುತ್ರಿ ಶೀನಾ ಬೋರಾ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ಇಂದ್ರಾಣಿ ಮುಖರ್ಜಿ ಅವರು, ವಿದೇಶ ಪ್ರಯಾಣಕ್ಕೆ ಅನುಮತಿ ಕೋರಿ ಸಲ್ಲಿಸಿದ್ದ ಹೊಸ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

‘ಅರ್ಜಿದಾರರು ತಮ್ಮ ವಿರುದ್ಧ ಪ್ರಕರಣದ ವಿಚಾರಣೆ ಬಾಕಿ ಇರುವ ನ್ಯಾಯಾಲಯದಲ್ಲೇ ಈ ಕುರಿತು ಅರ್ಜಿ ಸಲ್ಲಿಸಬೇಕು’ ಎಂದು ನ್ಯಾಯಮೂರ್ತಿಗಳಾದ ಎಂ.ಎಂ. ಸುಂದ್ರೇಶ್ ಮತ್ತು ಕೋಟೀಶ್ವರ್ ಸಿಂಗ್ ಅವರು ಇದ್ದ ಪೀಠವು ಸೂಚಿಸಿದೆ.

ಮುಖರ್ಜಿ ಪರವಾಗಿ ಹಾಜರಾದ ವಕೀಲ ಮಹೇಶ ಜೇಠ್ಮಲಾನಿ ಅವರು, ‘ಇಂದ್ರಾಣಿ ಮುಖರ್ಜಿ ಅವರು, ವಿದೇಶ ಪ್ರಯಾಣಕ್ಕೆ ಅನುಮತಿ ಕೋರಿ ಕಳೆದ ವರ್ಷ ಸಲ್ಲಿಸಿದ್ದ ಅರ್ಜಿಯನ್ನು ಜೇಷ್ಠತೆ ಆಧಾರದಲ್ಲಿ ಪರಿಗಣಿಸಿಲ್ಲ. ಈಗ ವಿದೇಶ ಪ್ರಯಾಣದ ತುರ್ತು ಅಗತ್ಯ ಇರುವುದರಿಂದ ಹೊಸ ಅರ್ಜಿಯನ್ನು ಪರಿಗಣಿಸಬೇಕು’ ಎಂದು ಮನವಿ ಮಾಡಿದರು.

ಇದನ್ನು ಒಪ್ಪದ ನ್ಯಾಯಪೀಠ, ‘ಅರ್ಜಿದಾರರಿಗೆ ಈ ಬಗ್ಗೆ ವಿಚಾರಣಾ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಲು ಅವಕಾಶ ಇದೆಯೇ ಹೊರತು, ಸುಪ್ರೀಂ ಕೋರ್ಟ್‌ನಲ್ಲಿ ಅಲ್ಲ’ ಎಂದು ಅರ್ಜಿಯನ್ನು ತಿರಸ್ಕರಿಸಿತು.

ಶೀನಾ ಬೋರಾ ಕೊಲೆ ಪ್ರಕರಣದಲ್ಲಿ ಇಂದ್ರಾಣಿ ಮುಖರ್ಜಿ ಅವರನ್ನು 2015ರ ಆಗಸ್ಟ್‌ನಲ್ಲಿ ಬಂಧಿಸಲಾಗಿತ್ತು. 6 ವರ್ಷಗಳ ಸೆರೆವಾಸದ ಬಳಿಕ ಅವರಿಗೆ ಸುಪ್ರೀಂ ಕೋರ್ಟ್ 2022ರಲ್ಲಿ ಜಾಮೀನು ಮಂಜೂರು ಮಾಡಿತ್ತು. ಕೊಲೆಗೆ ಸಂಚು ರೂಪಿಸಿದ ಆರೋಪದಲ್ಲಿ ಇಂದ್ರಾಣಿ ಅವರ ಮಾಜಿ ಪತಿ ಪೀಟರ್ ಮುಖರ್ಜಿ ಅವರನ್ನೂ ಸಿಬಿಐ ಬಂಧಿಸಿದೆ. ಎಲ್ಲ ಆರೋಪಿಗಳು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ.

ಶಬರಿಮಲೆಯಲ್ಲಿ ಹೆಲಿಕಾಪ್ಟರ್: ಪ್ರಕರಣ ದಾಖಲು

ಪತ್ತನಂತಿಟ್ಟ (ಪಿಟಿಐ): ಶಬರಿಮಲೆ ಅಯ್ಯಪ್ಪ ದೇಗುಲದ ಸನಿಹ ಭಾರತೀಯ ಕರಾವಳಿ ಪಡೆಯ (ಐಸಿಜಿ) ಹೆಲಿಕಾಪ್ಟರ್ ಹಾರಾಟ ನಡೆಸಿದ್ದರಿಂದ ಪಂಪಾ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಪ್ರತಿಕೂಲ ಹವಾಮಾನದಿಂದಾಗಿ ಹೆಲಿಕಾಪ್ಟರ್ ಕಡಿಮೆ ಎತ್ತರದಲ್ಲಿ ಹಾರಾಟ ನಡೆಸಿದೆ. ವಾತಾವರಣ ಪೂರಕವಾದ ನಂತರ ಕೊಚ್ಚಿಯಲ್ಲಿನ ನೆಲೆಗೆ ಮರಳಿದೆ ಎಂದು ಐಸಿಜಿ ತಿಳಿಸಿದೆ.

ಬೆಟ್ಟದ ದೇಗುಲದ ಮೇಲ್ಭಾಗಕ್ಕೆ ತೀರಾ ಸಮೀಪದಲ್ಲಿ ಹೆಲಿಕಾಪ್ಟರ್ ಗುರುವಾರ ಹಾರಾಟ ನಡೆಸಿದ್ದ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ. Telephone: 08392 -276250
e-mail: dhobellari@gmail.com
No.DHOB/ALS/MPF/02/2025-26/Call-2 Date: 21-4-2026

ಕರೆ–2 ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬಳ್ಳಾರಿ ವತಿಯಿಂದ ಜಿಲ್ಲಾ ಆಸ್ಪತ್ರೆ ಬಳ್ಳಾರಿ ಇಲ್ಲಿಗೆ 02 ಎಎಲ್‌ಎಸ್ ಆಂಬುಲೆನ್ಸ್ ವಾಹನವನ್ನು ಮಾನ್ಯ ಲೋಕಸಭಾ ಸದಸ್ಯರ ಅನುದಾನದ ಅಡಿಯಲ್ಲಿ ಖರೀದಿಸಲು ಕರೆ–2 ಇ–ಟೆಂಡರ್ ಆಹ್ವಾನಿಸಲಾಗಿದೆ, ಸದರಿ ಇ–ಟೆಂಡರ್‌ನ್ನು **https://kppp.karnataka.gov.in/#/portal/portal-home** ನಲ್ಲಿ ವೀಕ್ಷಣೆ ಹಾಗೂ ಡೌನ್‌ಲೋಡ್‌ಗೆ ಲಭ್ಯ ವಿರುತ್ತದೆ ಇ–ಟೆಂಡರ್ ಮೊತ್ತ ಹಾಗೂ ಕೊನೆಯ ದಿನಾಂಕ & ಟೆಂಡರ್ ಇಂಡೆಂಟ್ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.
1.ಇ–ಟೆಂಡರ್ ಮೊತ್ತ **ರೂ.80.00 ಲಕ್ಷಗಳು** ಇರುತ್ತದೆ. ಕೊನೆಯ ದಿನಾಂಕ **04.05.2026 @ 17:00 ಗಂಟೆಗೆ** ಇ–ಟೆಂಡರ್ ಇಂಡೆಂಟ್ ಸಂಖ್ಯೆ: **DHFWS/2025-26/IND2424.**

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಬಳ್ಳಾರಿ ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.
ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/89

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
ಸಂಖ್ಯೆ: ಕವಶಿಸಸ/ಕಾಅ–2/ಟೆಂಡರ್–01/2026–27 ದಿನಾಂಕ: 24.04.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ **ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕಿನ ಕುಂದಾಣ (ಪ.ವರ್ಗ) ಮೊರಾರ್ಜಿ ದೇಸಾಯಿ ವಸತಿ ಶಾಲಾ ಸಂಕೀರ್ಣದಲ್ಲಿ ಹೆಚ್ಚುವರಿ ಮತ್ತು ಮೂಲಭೂತ ಸೌಕರ್ಯ ನಿರ್ಮಾಣ ಕಾಮಗಾರಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ: 818)** ಇ–ಪೋರ್ಟಲ್ ಮುಖಾಂತರ ದಿನಾಂಕ: **24.04.2026ರಂದು** ಟೆಂಡರ್‌ನ್ನು ಕರೆಯಲಾಗಿದ್ದು, **ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 23.05.2026 ರಂದು ನಿಗದಿಪಡಿಸಲಾಗಿದೆ.** ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.
ಸೂಚನೆ: ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು–2
ಕ.ವ.ಶಿ.ಸಂ.ಸಂಘ
DIPR/CP/YC/342/2026-27

ಕರ್ನಾಟಕ ಗೃಹ ಮಂಡಳಿ
Karnataka Housing Board — Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.
ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿರ್ಮಿಸಲು ಉದ್ದೇಶಿಸಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಪದವಿ ಪೂರ್ವ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಗಳು.

ಕ್ರ.ಸಂ.	ಕಾಮಗಾರಿಯ ಹೆಸರು
1	ಕಲಬುರಗಿ ಜಿಲ್ಲೆ, ಕಲಬುರಗಿ ತಾಲ್ಲೂಕು, ಶ್ರೀನಿವಾಸ ಸರಡಗಿ ಗ್ರಾಮ (1ನೇ ಹಂತ) ಮತ್ತು ಯಡ್ರಾಮಿ ತಾಲ್ಲೂಕು, ಮಲ್ಲಿ ಗ್ರಾಮ (1ನೇ ಹಂತ) **Work Indent No.:** KHB/2026-27/BD/ WORK_INDENT 752 & IFT No.19/2026-27 Date: 23.04.2026. **ಟೆಂಡರ್‌ಗಿಟ್ಟ ಮೊತ್ತ:** ರೂ.24,31,86,303/-.
2	ಹಾವೇರಿ ಜಿಲ್ಲೆ, ಹಾನಗಲ್ ತಾಲ್ಲೂಕು, ಚಿಕ್ಕಾಂಶಿಹೊಸುರ ಗ್ರಾಮ (1ನೇ ಹಂತ). **Work Indent No.:** KHB/2026-27/BD/WORK_INDENT 753 & IFT No.20/2026-27 Date: 23.04.2026. **ಟೆಂಡರ್‌ಗಿಟ್ಟ ಮೊತ್ತ:** ರೂ.12,17,09,665/–.
3	ಪಿ.ಎಂ.ಜೆ.ವಿ.ಕೆ ಯೋಜನೆಯಡಿ ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕೊಂಡಜ್ಜಿ ಗ್ರಾಮದಲ್ಲಿ ಪದವಿ ಪೂರ್ವ ಕಾಲೇಜು ಕಟ್ಟಡ (2ನೇ ಹಂತ). **Work Indent No.:** KHB/2026-27/BD/WORK_INDENT 754 & IFT No.21/2026-27 Date: 23.04.2026. **ಟೆಂಡರ್‌ಗಿಟ್ಟ ಮೊತ್ತ:** ರೂ. 2,28,22,865/–.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 08.05.2026 ಸಂಜೆ 4.00 ಗಂಟೆಯವರೆಗೆ.
ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080–22273511, website: https://kppp.karnataka.gov.in

ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/353/ಆಕಾರ್/2025–26

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN - UO4010KA2002SGC030438)

ಟೆಂಡರ್ ಆಹ್ವಾನ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ವಿಚಾರಣೆ ಸಂಖ್ಯೆ: **BESCOM/2025-26/UC/WORK_INDENT838/CALL-2**

ಬೆವಿಕಂ ರವರು ಬೆಂಮಕ್ಷೇವ (ದಕ್ಷಿಣ), ಬೆಂಗಳೂರು ದಕ್ಷಿಣ ವೃತ್ತ, ಹೆಚ್‌ಎಸ್‌ಆರ್ ವಿಭಾಗದ, S-19 ಉಪವಿಭಾಗದಲ್ಲಿ ಸಿಸ್ಟಮ್ ಸುಧಾರಣ ಕಾಮಗಾರಿಯ ಅಡಿಯಲ್ಲಿ 11kV ಮೇಲ್ಮಾರ್ಗಗಳನ್ನು ಭೂಗತ (ಯುಜಿ) ಕೇಬಲ್‌ಗಳನ್ನಾಗಿ ಬದಲಾಯಿಸುವ ಕಾಮಗಾರಿ ನಿರ್ವಹಿಸಲು ಶೇಕಡಾವಾರು ಆಧಾರದ ಮೇಲೆ ಟೆಂಡರ್ ಅನ್ನು ಆಹ್ವಾನಿಸಿದ್ದಾರೆ.

ಬಿಡ್ ದಾಖಲೆಗಳ ಲಭ್ಯತೆ: 27.04.2026 ರ ನಂತರ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 11.05.2026 @ 15:00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವುದು: 12.05.2026 @ 15:30 ಗಂಟೆಗೆ. ಬಿಡ್ ಪೂರ್ವ–ಭಾವಿ ಸಭೆ: 04.05.2026 @ 11:00 ಗಂಟೆಗೆ. ಸ್ಥಳ: ಸಭಾಂಗಣ ಕೊಠಡಿ, 3ನೇ ಮಹಡಿ, ಬೆಳಕು ಭವನ, ನಿಗಮ ಕಛೇರಿ, ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು–560 001. ಬಿಡ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆಪಿಪಿಪಿ) ವೆಬ್‌ಸೈಟ್ http://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಅಗತ್ಯವಿರುವ ಬೆಂಬಲ ಪಡೆಯಬಹುದು. ಕೆಪಿಪಿ ಪೋರ್ಟಲ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು +91 9240214000/+91 9240214001/+91–8046010000/+91–8068948777. ಇಮೇಲ್: support@eprochelpdesk.com. ಆಸಕ್ತ ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ (ಕೆಪಿಪಿಪಿ) ನಲ್ಲಿ ನೋಂದಾಯಿಸಿ ಕೊಳ್ಳಬೇಕು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು, ವಿದ್ಯುತ್., ಯೋಜನೆಗಳು,
ಕಾರ್ಪೋರೇಟ್ ಕಛೇರಿ, ಬೆವಿಕಂ, ಕೆ ಆರ್ ವೃತ್ತ, ಬೆಂಗಳೂರು – 560001.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ : 1912
ಬೆಸ್ಕಾಂ ಮಿತ್ರ MOBILE APP ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ (ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15–03–2013
Website : www.kimskoppal.com
email :directorkimskoppal@gmail.com
Office : 08539 225522 Office : 08539-225523
ಸಂ:ಕಿಮ್ಸ್/ಕೊಪ್ಪಳ/ಮರು–ಟೆಂಡರ್/2025–26/80 ದಿನಾಂಕ: 24/04/2026

:: ಮರು–ಟೆಂಡರ್ ಅಧಿಸೂಚನೆ ::

ಕಿಮ್ಸ್ ಕೊಪ್ಪಳ ಸಂಸ್ಥೆಯ ಗಂಟಲು, ಮೂಗು ಮತ್ತು ಕಿವಿ (ENT) ವಿಭಾಗಕ್ಕೆ ಅವಶ್ಯವಿರುವ Audiometry Double Room & Bera Room ನಿರ್ಮಿಸಲು ಮತ್ತು ಜಿಲ್ಲಾ ಬೋಧಕ ಆಸ್ಪತ್ರೆಯಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯ (ABARK) ಅನುಷ್ಠಾನಕ್ಕಾಗಿ ಹಾಗೂ ಸಮಲೋಚನೆ ಸೇವೆಗಳನ್ನು 01 ವರ್ಷದ ಅವಧಿಗೆ ಪಡೆಯಲು ಕೆಟಿಪಿಪಿ ಕಾಯ್ದೆ 1999–2000 ರಅನ್ವಯ ಕರ್ನಾಟಕ ಸರ್ಕಾರಧ ಸಾರ್ವಜನಿಕ ಸಂಗ್ರಹಣ ಕೋಶದ ಪೋರ್ಟಲ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ: 1) ಇ.ಎನ್.ಟಿ ರೂ.25.96 ಲಕ್ಷಗಳು, ಇ.ಎಂ.ಡಿ ರೂ.52,000/– 2) ಎ.ಬಿ.ಎ.ಅರ್.ಕೆ ರೂ.54.00 ಲಕ್ಷಗಳು, ಇ.ಎಂ.ಡಿ ರೂ. 1,08,000/–
1. ಟೆಂಡರ್‌ಗಳನ್ನು ದಿನಾಂಕ: **28/04/2026** ರಿಂದ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸಾಯಂಕಾಲ 5:30 ಗಂಟೆಯಿಂದ. 2. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **13/05/2026** ಸಾಯಂಕಾಲ 5:30 ರವರೆಗೆ.
ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಇ – ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಲ್ಲಿ ಹಾಗೂ ಈ ಸಂಸ್ಥೆಯ ವೆಬ್‌ಸೈಟ್ http// www.kimskoppal.kar.nic.in ನಿಂದ ಪಡೆಯಬಹುದು.

ಸಹಿ/– ನಿರ್ದೇಶಕರು,
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/50/ಕೆಎಸ್‌ಎಂಸಿಎ/2026–27

Infosys®
Navigate your next
ಇನ್‌ಫೋಸಿಸ್ ಲಿಮಿಟೆಡ್
ಕಾರ್ಪೋರೇಟ್ ಗುರುತು ಸಂಖ್ಯೆ (ಸಿಐಎನ್) : L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100
ದೂರವಾಣಿ : +91 80 28520261 ಫ್ಯಾಕ್ಸ್ : +91 80 28520362
investors@infosys.com, www.infosys.com

ಅಂಚೆ ಮತದಾನ/ಇ–ವೋಟಿಂಗ್ ಪ್ರಕಟಣೆ

ಸದಸ್ಯರಿಗೆ ಈ ಮೂಲಕ ತಿಳಿಸುವುದೇನಂದರೆ, ಕಂಪನಿಗಳ ಕಾಯ್ದೆ, 2013ರ (**“ಕಾಯ್ದೆ”**) ಸೆಕ್ಷನ್ 108 ಮತ್ತು 110 ಹಾಗೂ ತಿದ್ದುಪಡಿಗೊಂಡಿರುವ ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಗಳು, 2014 (**“ಮ್ಯಾನೇಜ್‌ಮೆಂಟ್ ರೂಲ್ಸ್”**) ರೊಂದಿಗೆ ಓದಿಕೊಂಡಂತೆ ಪ್ರದತ್ತ ನಿಯಮಗಳನ್ವಯ, ಕಾರ್ಪೋರೇಟ್ ಸಚಿವಾಲಯ, ಭಾರತ ಸರ್ಕಾರ ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸ. 03/2025 ದಿನಾಂಕ ಸೆಪ್ಟೆಂಬರ್ 22, 2025 ರಂದು ಭಾರತ ಸರ್ಕಾರದ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಸುತ್ತೋಲೆಗಳು (**“ಎಂಸಿಎ ಸುತ್ತೋಲೆಗಳು”**), ಮತ್ತು ಸೆಕ್ಯುರಿಟೀಸ್ ಆ್ಯಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಕಾಲಕಾಲಕ್ಕೆ ಹೊರಡಿಸಿದ ಸುತ್ತೋಲೆಗಳು, ಇನ್ನು ಮುಂದೆ ಒಟ್ಟಾರೆಯಾಗಿ (“ಸುತ್ತೋಲೆಗಳು”) ಎಂದು ಕರೆಯಲ್ಪಡುತ್ತವೆ. ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿದ ಸಾಮಾನ್ಯ ಸಭೆಗಳ ಕಾರ್ಯದರ್ಶಿ ಮಾನದಂಡಗಳು. (**“ಎಸ್‌ಎಸ್–2”**) ಮತ್ತು ಯಾವುದೇ ಇತರ ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ನಿಬಂಧನೆಗಳು (ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅವುಗಳ ಮರು–ಜಾರಿಗಳು ಸೇರಿದಂತೆ, ಸದ್ಯಕ್ಕೆ ಜಾರಿಯಲ್ಲಿರುವ) ಕೆಳಗೆ ನಿಗದಿಪಡಿಸಿದಂತೆ, ಏಪ್ರಿಲ್ 23, 2026 ರ ಅಂಚೆ ಮತಪತ್ರ ಸೂಚನೆಯಲ್ಲಿ ಒಳಗೊಂಡಿರುವಂತೆ, ಅಂಚೆ ಮತಪತ್ರ ಇ–ಮತದಾನ (**“ಇ–ಮತದಾನ”**) ಪ್ರಕ್ರಿಯೆಯ ಮೂಲಕ ಇನ್‌ಫೋಸಿಸ್ ಲಿಮಿಟೆಡ್ (**“ಕಂಪನಿ”**) ಸದಸ್ಯರ ಅನುಮೋದನೆಯನ್ನು ಕೋರಲಾಗಿದೆ:

ವಿಷಯ ಸಂಖ್ಯೆ	ವಿಶೇಷ ಠರಾವಿನ ವಿವರಣೆ
1	ಸ್ವತಂತ್ರ ನಿರ್ದೇಶಕರಾಗಿ ಡಯೇನ್ ಎನ್ಬರ್ಗ್ ಜುರ್ಗೆನ್ಸ್ (DIN: 11585200) ಅವರ ನೇಮಕಾತಿ, ಏಪ್ರಿಲ್ 22, 2026 ರಿಂದ ಏಪ್ರಿಲ್ 21, 2029 ರವರೆಗೆ ಮೂರು ವರ್ಷಗಳ ಅವಧಿಗೆ
2	ಸ್ವತಂತ್ರ ನಿರ್ದೇಶಕರಾಗಿ ಹೆಲೀನ್ ಆರಿಯಲ್ ಪೊಟಿಯರ್ (DIN: 10166891) ಅವರ ಮರು ನೇಮಕಾತಿ, ಮೇ 26, 2026 ರಿಂದ ಮೇ 25, 2031 ರವರೆಗೆ ಜಾರಿಗೆ ಬರುವ ಐದು ವರ್ಷಗಳ ಎರಡನೇ ಅವಧಿಗೆ

ಸೆಕ್ಯುರಿಟೀಸ್ ಮತ್ತು ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಮತ್ತು ಡಿಸ್ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಮಗಳು, 2015 ರ ನಿಯಮ 44 ರ ಪ್ರಕಾರ, ತಿದ್ದುಪಡಿ ಮಾಡಲಾದ (**“LODR ನಿಯಮಗಳು”**) ಮತ್ತು ಕಾಯಿದೆಯ ಸೆಕ್ಷನ್ 108 ಮತ್ತು 110 ರ ನಿಬಂಧನೆಗಳು ಮತ್ತು ಎಂಸಿಎ ಸುತ್ತೋಲೆಗಳೊಂದಿಗೆ ಓದಲಾಗಿದೆ, ಕಂಪನಿಯು ಏಪ್ರಿಲ್ 17, 2026 ರ ಶುಕ್ರವಾರದಂದು (**“ಕಟ್–ಆಫ್ ದಿನಾಂಕ”**) ಕಂಪನಿ/ ಡಿಪೋಸಿಟರಿ ಪಾರ್ಟಿಸಿಪೆಂಟ್(ಟ್ಸ್) ಇಮೇಲ್ ವಿಳಾಸಗಳನ್ನು ನೋಂದಾಯಿಸಿರುವ ಸದಸ್ಯರಿಗೆ ಏಪ್ರಿಲ್ 24, 2026 ರ ಶುಕ್ರವಾರದಂದು ವಿವರಣಾತ್ಮಕ ಹೇಳಿಕೆಯೊಂದಿಗೆ ಅಂಚೆ ಮತಪತ್ರ ಪ್ರಕಟಣೆಯ ಎಲೆಕ್ಟ್ರಾನಿಕ್ ಪ್ರತಿಗಳನ್ನು ರವಾನಿಸುವ ಕಾರ್ಯವನ್ನು ಪೂರ್ಣಗೊಳಿಸಿದೆ.

ಎಡಿಆರ್ ಡೆಪಾಸಿಟರಿ ಆಗಿರುವ, ಡಚ್ ಬ್ಯಾಂಕ್ ಟ್ರಸ್ಟ್ ಕಂಪನಿ ಅಮೆರಿಕಾಸ್ ರವರಿಗೆ ಕೂಡ ಅಂಚೆ ಮತದಾನ ಪ್ರಕಟಣೆಯನ್ನು ಒದಗಿಸಲಾಗಿದ್ದು, ಅವರು ಇದನ್ನು (1) ಕಂಪನಿಯ ಇಕ್ವಿಟಿ ಷೇರುಗಳ ಅಡಿಯಲ್ಲಿನ ಅಮೆರಿಕನ್ ಡೆಪಾಸಿಟರಿ ಷೇರುಗಳನ್ನು (**“ಎಡಿಎಸ್”**) ಸಾಬೀತುಪಡಿಸಬಲ್ಲ ಅಮೆರಿಕನ್ ಡೆಪಾಸಿಟರಿ ರಸೀದಿಗಳನ್ನು ಹೊಂದಿರುವ ನೋಂದಾಯಿತ ಹಿಡುವಳಿದಾರರಿಗೆ; ಮತ್ತು (2) ದಿ ಡೆಪಾಸಿಟರಿ ಟ್ರಸ್ಟ್ ಕಂಪನಿ (**“ಡಿಟಿಸಿ”**) ಮೇಲಿಂಗ್ ಏಜೆಂಟ್, ನಂತರದಲ್ಲಿ ಅವರ ಮತದಾನ ಸೂಚನಾ ನಮೂನೆಗಳನ್ನು ಮೇಲ್ ಮಾಡುವ ಇವರು, ಡಿಟಿಸಿ'ಯಲ್ಲಿ ಬ್ಯಾಂಕ್, ಬ್ರೋಕರ್ ಅಥವಾ ಇನ್ನಿತರ ನಾಮಿನಿಗಳ ಹಾಗೂ ಫಲಾನುಭವಿ ಎಡಿಎಸ್ ಹಿಡುವಳಿದಾರರಿಗೆ ಅಂಚೆ ಮತದಾನದ ಪ್ರಕಟಣೆಯ ಸಮೇತ ಮೇಲ್ ರವಾನಿಸುತ್ತಾರೆ.

ಸದರಿ ನೋಟಿಸ್ ಕಂಪನಿಯ www.infosys.com ಜಾಲತಾಣದಲ್ಲಿ ಲಭ್ಯವಿರುತ್ತದೆ. ಇದಕ್ಕೆ ಸಂಬಂಧಿತ ಬಿಎಸ್‌ಇ ಲಿಮಿಟೆಡ್ (**“ಬಿಎಸ್‌ಇ”**) ಜಾಲತಾಣ: www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಲಿಮಿಟೆಡ್ (**“ಎನ್‌ಎಸ್‌ಇ”**) www.nseindia.com ಮತ್ತು ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನ (**“ಎನ್‌ಎಸ್‌ಡಿಎಲ್”**) www.evoting.nsdl.com ಜಾಲತಾಣದಲ್ಲಿ ಕೂಡ ಲಭ್ಯವಿರುತ್ತದೆ.

ಸುತ್ತೋಲೆಗಳ ನಿಯಮಗಳ ಪ್ರಕಾರ, ಸದಸ್ಯರು ಇ–ವೋಟಿಂಗ್ ವಿಧಾನದಲ್ಲಿ ಮಾತ್ರ ಮತ ಚಲಾಯಿಸಬಹುದು. ಕಟ್–ಆಫ್ ದಿನಾಂಕದಂದು ಸದಸ್ಯರು ಹೊಂದಿರುವ ಕಂಪನಿಯ ಈಕ್ವಿಟಿ ಷೇರುಗಳ ಆಧಾರದ ಮೇಲೆ ಮತದಾನದ ಹಕ್ಕನ್ನು ನಿರ್ಧರಿಸಲಾಗುವುದು. ಕಟ್–ಆಫ್ ದಿನಾಂಕದಂದು ಕಂಪನಿಯ ಷೇರುದಾರರಾಗಿಲ್ಲದವರ ಯಾವುದೇ ವ್ಯಕ್ತಿಯು ಸದರಿ ಅಂಚೆ ಮತದಾನ ಪ್ರಕಟಣೆಯನ್ನು ಕೇವಲ ತಮ್ಮ ಮಾಹಿತಿಗಾಗಿ ಎಂದು ಮಾತ್ರ ಭಾವಿಸತಕ್ಕದ್ದು.

ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ–ವೋಟಿಂಗ್ ಸೌಲಭ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ, **ಎನ್‌ಎಸ್‌ಡಿಎಲ್** ಇ–ವೋಟಿಂಗ್ ಸೌಲಭ್ಯವು ಈ ಕೆಳಗಿನ ಅವಧಿಯ ಪ್ರಕಾರ ಲಭ್ಯವಿರುತ್ತದೆ:

ಇ–ವೋಟಿಂಗ್ ಅವಧಿಯ ಆರಂಭ	ಬೆಳಿಗ್ಗೆ 9.00 IST ಶನಿವಾರ, ಏಪ್ರಿಲ್ 25, 2026 ರಂದು
ಇ–ವೋಟಿಂಗ್ ಅವಧಿಯ ಮುಕ್ತಾಯ	ಸಂಜೆ 5.00 IST ಭಾನುವಾರ, ಮೇ 24, 2026 ರಂದು
ಮತದಾನ ಅರ್ಹತೆಗಾಗಿ ಕಟ್–ಆಫ್ ದಿನಾಂಕ	ಶುಕ್ರವಾರ, ಏಪ್ರಿಲ್ 17, 2026

ಭಾನುವಾರ, ಮೇ 24, 2026 ರಂದು ಸಂಜೆ 5.00 IST ಗಂಟೆಯ ನಂತರ NSDL ವತಿಯಿಂದ ಇ–ಮತದಾನ ಪ್ರಕ್ರಿಯೆ ಸೌಲಭ್ಯವನ್ನು ರದ್ದುಗೊಳಿಸಲಾಗುತ್ತದೆ.

ಇದುವರೆಗೆ ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಳ್ಳದಿರುವ ಸದಸ್ಯರು, ಎಲೆಕ್ಟ್ರಾನಿಕ್ ವಿಧಾನದ ಷೇರುಗಳನ್ನು ಹೊಂದಿದ್ದಲ್ಲಿ ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಮುಖಾಂತರ ತಮ್ಮ ಇ–ಮೇಲ್ ವಿಳಾಸ ನೊಂದಾಯಿಸಿಕೊಳ್ಳತಕ್ಕದ್ದು ಮತ್ತು ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು einward.ris@kfintechcom ವಿಳಾಸಕ್ಕೆ ಮೇಲ್ ಬರೆಯುವ ಮೂಲಕವಾಗಲಿ ಅಥವಾ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್. ಸೆಲೆನಿಯಂ ಟವರ್ ಬಿ. ಪ್ಲಾಟ್ 31 & 32. ಫೈನಾನ್ಸಿಯಲ್ ಜಿಲ್ಲೆ, ನಾನಾಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್ – 500032 ವಿಳಾಸಕ್ಕೆ ಲಿಖಿತ ಮನವಿ ಸಲ್ಲಿಸಿ ನೋಂದಣಿ ಮಾಡಿಕೊಳ್ಳಬಹುದು.

ಅಂಚೆ ಮತದಾನ/ಇ–ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸುವುದಕ್ಕಾಗಿ, ಕಂಪನಿಯ ಮಂಡಳಿಯು ಹೇಮಂತ್, ಹೊಳ್ಳ & ಕೋ., (ಸದಸ್ಯತ್ವ ಸಂಖ್ಯೆ ಎಫ್‌ಸಿಎಸ್ 6374) (ಸಿಪಿ ಸಂಖ್ಯೆ 6519) ಪ್ರಾಕ್ಟಿಸಿಂಗ್ ಕಂಪನಿ ಕಾರ್ಯದರ್ಶಿ, ಅವರನ್ನು ಪರಿಶೀಲಕರನ್ನಾಗಿ ನೇಮಿಸಲಾಗಿದೆ.

ಯಾವುದೇ ಸ್ಪಷ್ಟೀಕರಣ ಬೇಕಾಗಿದ್ದಲ್ಲಿ, www.evoting.nsdl.com ಜಾಲತಾಣದಲ್ಲಿನ ಡೌನ್‌ಲೋಡ್ ಸೆಕ್ಷನ್‌ನಲ್ಲಿ Frequently Asked Questions (FAQs) ಅಡಿಯಲ್ಲಿ ಲಭ್ಯವಿರುವ ಷೇರುದಾರರ ಮತ್ತು ಇ–ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಪರಿಶೀಲಿಸಬಹುದು ಅಥವಾ 022–4886 7000 ಸಂಖ್ಯೆಗೆ ಸಂಪರ್ಕಿಸಬಹುದು ಅಥವಾ evoting@nsdl.com ವಿಳಾಸಕ್ಕೆ ಮನವಿ ಸಲ್ಲಿಸಬಹುದು.

ಇ–ವೋಟಿಂಗ್ ಪರಿಶೀಲನೆಯ ನಂತರ, ಪರಿಶೀಲಕರು ತಮ್ಮ ವರದಿಯನ್ನು ಕಂಪನಿಯ ಚೇರ್ಮನ್ ಅಥವಾ ಚೇರ್ಮನ್ನರ ಇನ್ನಿತರ ಯಾವುದೇ ಅಧಿಕೃತ ವ್ಯಕ್ತಿಗೆ ಸಲ್ಲಿಸುತ್ತಾರೆ, ಮತ್ತು ಅಂಚೆ ಮತದಾನದ ಮೂಲಕ ನಡೆದ ಮತದಾನ ಫಲಿತಾಂಶವನ್ನು ಇ–ಮತದಾನದ ಮುಕ್ತಾಯದಿಂದ 48 ಗಂಟೆಗಳ ಒಳಗೆ ಪ್ರಕಟಿಸಲಾಗುತ್ತದೆ. ಅಂದರೆ ಸಂಜೆ 5.00 IST ಮಂಗಳವಾರ, ಮೇ 26, 2026 ಹಾಗೂ ಕಂಪನಿಯ ಜಾಲತಾಣದಲ್ಲಿ (https://www.infosys.com/investors/shareholder-services/postal-ballot.html) ಮತ್ತು ಎನ್‌ಎಸ್‌ಡಿಎಲ್ ರವರ (https://www.evoting.nsdl.com) ಜಾಲತಾಣದಲ್ಲಿ ಕೂಡ ಪ್ರಕಟಿಸಲಾಗುತ್ತದೆ ಹಾಗೂ ಸ್ಟಾಕ್ ಎಕ್ಸ್‌ಚೇಂಜಸ್, ಡೆಪಾಸಿಟರಿ, ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್‌ರ ಜಾಲತಾಣದಲ್ಲಿ ಕೂಡ ಫಲಿತಾಂಶವನ್ನು ತಿಳಿಸಲಾಗುತ್ತದೆ.

ಇ–ಮತದಾನದ ಕೊನೆಯ ದಿನಾಂಕ, ಅಂದರೆ ಭಾನುವಾರ, ಮೇ 24, 2026, ಅಗತ್ಯವಿರುವ ಬಹುಮತದಿಂದ ಅನುಮೋದನೆ ಪಡೆದರೆ, ನಿರ್ಣಯವನ್ನು ಅಂಗೀಕರಿಸಲಾಗಿದೆ ಎಂದು ಪರಿಗಣಿಸುವ ದಿನಾಂಕವಾಗಿರುತ್ತದೆ.

ಇ–ವೋಟಿಂಗ್‌ಗೆ ಸಂಬಂಧಿಸಿದಂತೆ ಯಾವುದೇ ವಿಚಾರಣೆ ಅಥವಾ ದೂರುಗಳಿದ್ದಲ್ಲಿ, ಷೇರುದಾರರು ಶೋಭಾ ಆನಂದ್, ವೈಸ್ ಪ್ರೆಸಿಡೆಂಟ್, ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಂ ಟವರ್ ಬಿ. ಪ್ಲಾಟ್ 31 & 32, ಫೈನಾನ್ಸಿಯಲ್ ಜಿಲ್ಲೆ, ನಾನಾಕ್ರಮಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್ – 500032 ಇವರನ್ನು ಫೋನ್ ನಂ.: 1800–309–4001 ಸಂಖ್ಯೆಯಲ್ಲಿ ಸಂಪರ್ಕಿಸಬಹುದು. ಇ–ಮೇಲ್ ಐಡಿ shobha.anand@kfintech.com; einward.ris@kfintech.com; ಮೇಲ್ಕಂಡ ದೂರವಾಣಿ ಸಂಖ್ಯೆ ಅಲ್ಲದೆ, ಷೇರುದಾರರು ಅಮಿತ್ ವಿಶಾಲ್, ಉಪ ಉಪಾಧ್ಯಕ್ಷರು ಅಥವಾ ಪಲ್ಲವಿ ಮ್ಹಾತ್ರೆ, ಸಹಾಯಕ ಉಪಾಧ್ಯಕ್ಷರು, ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ ಟಿ301, 3ನೇ ಮಹಡಿ, ನಮನ್ ಚೇಂಬರ್ಸ್, ಜಿ ಬ್ಲಾಕ್, ಪ್ಲಾಟ್ ಸಂಖ್ಯೆ– ಅ–32, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ ಪೂರ್ವ, ಮುಂಬೈ– 400051, ಭಾರತ, ಇವರನ್ನು ಕೂಡ ಸಂಪರ್ಕಿಸಬಹುದು. ಸಂಪರ್ಕಿಸುವ ವಿವರ: evoting@nsdl.com ದೂರವಾಣಿ ಸಂಖ್ಯೆ – 1800 1020 990/ 1800 224 430/ 022–4886 7000.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್.ಮಣಿಕಂಠ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ ಎಸಿಎಸ್ 21918

ಏಪ್ರಿಲ್ 24, 2026
ಬೆಂಗಳೂರು, ಭಾರತ

ಕರ್ನಾಟಕ ಉಚ್ಚ ನ್ಯಾಯಾಲಯ
ಉಚ್ಚ ನ್ಯಾಯಾಲಯದ ಕಟ್ಟಡಗಳು, ಬೆಂಗಳೂರು–560001.
No. HCA-II/6/2017 Date: 18.04.2026

ಅಧಿಸೂಚನೆ
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಆವರಣದಲ್ಲಿ ಖಾಲಿ ಇರುವ ಒಂದು ಕಿಯೋಸ್ಕ್ ಹಂಚಿಕೆಗಾಗಿ ದರಪಟ್ಟಿ ಆಹ್ವಾನ

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಆವರಣದಲ್ಲಿ ನಂದಿನಿ ಪಾರ್ಲರ್ ಬಳಿ ಖಾಲಿ ಇರುವ ಒಂದು ಕಿಯೋಸ್ಕ್ ಹಂಚಿಕೆಗಾಗಿ ಆಸಕ್ತ ವ್ಯಕ್ತಿಗಳಿಂದ / ಸಂಸ್ಥೆಗಳಿಂದ ಹಣ್ಣಿನ ರಸ/ ಬೇಕರಿ ವಸ್ತುಗಳು /ಮೊಳಕೆಗಳು /ಪಾಸ್ತಾ/ ಕತ್ತರಿಸಿದ ಹಣ್ಣುಗಳು, ಇತ್ಯಾದಿಗಳನ್ನು ಮಾರಾಟಕ್ಕಾಗಿ ಪರವಾನಗಿ ಆಧಾರದ ಮೇಲೆ ದರಪಟ್ಟಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮತ್ತು ನಿಯಮಗಳು ಮತ್ತು ಷರತ್ತುಗಳಿಗೆ ವೆಬ್‌ಸೈಟ್ https://judiciary.karnataka.gov.in/ ವೀಕ್ಷಿಸಬಹುದು.

ಸಹಿ/– (ವಿ. ನಾಗರಾಜ)
ರಿಜಿಸ್ಟ್ರಾರ್ (ಆಡಳಿತ)
DIPR/CP/319/NR/2026-27

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.
No: KREIS/INFR/OTH/32/2026-ADMN/291821 ದಿನಾಂಕ: 24.04.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ **ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಕ್ರೀಡಾ ಸಾಮಗ್ರಿಗಳನ್ನು ಒದಗಿಸಲು** ಇ–ಪೋರ್ಟಲ್ ಮುಖಾಂತರ ಟೆಂಡರ್ ಇಂಡೆಂಟ್ ಸಂಖ್ಯೆ: **KREIS/2026-27/IND0094** ದಿನಾಂಕ: 24.04.2026ರಂದು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, **ಸದರಿ ಟೆಂಡರ್‌ಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 08.05.2026ರಂದು** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.

ಸಹಿ/– ಜಂಟಿ ನಿರ್ದೇಶಕರು (ಆಡಳಿತ)
ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ, ಕ.ವ.ಶಿ.ಸಂ.ಸಂಘ
DIPR/CP/YC/357/2026-27

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ–2/ಎಇ–3/2026–27/183 ದಿನಾಂಕ:– 23.04.2026

ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ

ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ 2/ಎಇ–3/2026–27 ದಿನಾಂಕ: 23.04.2026.
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಹೊನ್ನಾಳಿ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ : 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಅಡಿ 1 ಕಾಮಗಾರಿಗೆ ಮೊತ್ತ ರೂ. 200.00 ಲಕ್ಷ. (ಇಂಡೆಂಟ್ ಸಂಖ್ಯೆ 35602) ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ. **ಇಂಡೆಂಟ್ ಸಂ. 35602**
(1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 27.04.2026 ಸಂಜೆ 4.00 ಗಂಟೆಗೆ **(2)** ಪ್ರಿಬಿಡ್ ಮೀಟಿಂಗ್ ಸ್ಥಳ : ಕಾರ್ಯಪಾಲಕ ಇಂಜಿನಿಯರ್, ಲೋಇ ವಿಭಾಗ, ಪಿ.ಬಿ ರಸ್ತೆ, ದಾವಣಗೆರೆ, ದಿ: 28.04.2026 ಬೆಳಗ್ಗೆ 11.30 ಗಂಟೆಗೆ **(3)** ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 06.05.2026 ಸಂಜೆ 4.00 ಗಂಟೆಗೆ **(4)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿ: 07.05.2026 ಸಂಜೆ 4.30 ಗಂಟೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/41/ಕೆಎಸ್‌ಎಂಸಿಎ/2026–27
ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂಖ್ಯೆ 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020
ನಂ: KSEDC/P062/2025-26 ದಿನಾಂಕ: 24.04.2026

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ನಿಯಮದನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಸಂಸ್ಥೆಯು **Request for Proposal (RFP) for Selection of Agency for providing Training Consulting services for modernization and upgradation of ICT & Electronics Training services of KEONICS across Karnataka** ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು 15 ದಿನಗಳ ಅವಧಿಗೆ ಓಪನ್ ಇ–ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in** ನಲ್ಲಿ ವಿವರವನ್ನು ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645)

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ವಿವರ	ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ
1	KEONICS/2026-27/SE0129/Call-2	Request for Proposal (RFP) for Selection of Agency for providing Training Consulting services for modernization and upgradation of ICT & Electronics Training services of KEONICS across Karnataka	12.05.2026

DIPR/CP/350/SA/2026-27
ಸಹಿ/– ನಿರ್ದೇಶಕರು (ಹಣಕಾಸು)

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.2, ಹೂವಿನಹಡಗಲಿ, ವಿಜಯನಗರ ಜಿಲ್ಲೆ.
Ph. No. 08399-200001 email:eeslid2hdl@gmail.com

ಟೆಂಡರ್ ಪ್ರಕಟಣೆ (call-4)
(ONLY THROUGH “e-Procurement” SYSTEM)

ಉಲ್ಲೇಖ:ಈ ಕಛೇರಿಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:079/2026–27ದಿನಾಂಕ: 18.04.2026
ಸಿಂಗಟಾಲೂರು ಏತ ನೀರಾವರಿಯೋಜನೆ ಹೂವಿನಹಡಗಲಿ ವಿಭಾಗ–2 ಕಛೇರಿಯಿಂದ “Repairs to Canals of Right Side of Singataluru Lift Irrigation Scheme for the Year 2025-26” ಕಾಮಗಾರಿಗೆಉಲ್ಲೇಖಿತಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತ, ಅರ್ಹಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ **(KNNL/2025-26/OW/WORK_INDENT4082/call-4)** ಟೆಂಡರನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತವು ರೂ. 423.46 ಲಕ್ಷ (ಜಿ.ಎಸ್.ಟಿ ಹೊರತುಪಡಿಸಿ) ಆಗಿರುತ್ತದೆ ಹಾಗೂ ಈ ಕಾಮಗಾರಿಗೆ ಇ.ಎಂ.ಡಿ. ಮೊತ್ತವು ರೂ. 6.35 ಲಕ್ಷ ಆಗಿರುತ್ತದೆ.
ಇನ್ನುಳಿದಂತೆ, ಸದರಿಟೆಂಡರಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ:23.04.2026ರನಂತರ **“https://kppp.karnataka.gov.in”**, ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ: 18.05.2026 ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 20.05.2026 ಎಂದು ನಿಗದಿಪಡಿಸಲಾಗಿದೆ. ಅದರಂತೆ, ಸದರಿ ಟೆಂಡರ್‌ಗಳ ಕುರಿತುPre-bid ಸಭೆಯನ್ನು, ದಿನಾಂಕ: 06.05.2026 ರಂದುಕಾರ್ಯಪಾಲಕಅಭಿಯಂತರರು, ಸಿಂಗಟಾಲೂರು ಏತ ನೀರಾವರಿಯೋಜನೆ, ನಂ.2 ವಿಭಾಗ, ಹೂವಿನಹಡಗಲಿ ಕಛೇರಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು e-procurement Helpdesk Phone No’s:+91-80-46010000, +91-80-68948777 ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿಯೋಜನೆ, ನಂ. 2 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಹೂವಿನಹಡಗಲಿ, ವಿಜಯನಗರಜಿಲ್ಲೆ.
ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/44

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in



ಸುಭಾಷಿತ

ಕೋಪವನ್ನು ಸಹನೆಯಿಂದ ಗೆಲ್ಲು.

–ಗೌತಮ ಬುದ್ಧ

ಸಂಪಾದಕೀಯ

ಹೋಂಸ್ಟೇನಲ್ಲಿ ಲೈಂಗಿಕ ದೌರ್ಜನ್ಯ ಕಾನೂನು ನಿರ್ಬಂಧ ಬಿಗಿಯಾಗಲಿ

ಕೊಡಗು ಜಿಲ್ಲೆಯ ಕುಟ್ಟ ಸಮೀಪದ ಹೋಂಸ್ಟೇನಲ್ಲಿ ಅಮೆರಿಕದ ಪ್ರವಾಸಿಗರೊಬ್ಬರ ಮೇಲೆ ನಡೆದಿದೆ ಎನ್ನಲಾದ ಲೈಂಗಿಕ ದೌರ್ಜನ್ಯವು ಆಘಾತ ಉಂಟುಮಾಡುವ ಘಟನೆಯಾಗಿದೆ ಹಾಗೂ ಜಿಲ್ಲೆಯಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಪ್ರವಾಸೋದ್ಯಮ ಆರ್ಥಿಕತೆಯು ಪ್ರವಾಸಿಗರಿಗೆ ಸುರಕ್ಷತೆಯನ್ನು ಖಾತರಿಪಡಿಸುವಲ್ಲಿ ವಿಫಲ ಆಗಿರುವುದರ ಬಗೆಗಿನ ಎಚ್ಚರಿಕೆಯಂತಿದೆ. ಇಸ್ರೇಲಿ ಮಹಿಳೆಯ ಮೇಲೆ ಹಂಪಿಯಲ್ಲಿ ನಡೆದಿದ್ದ ಸಾಮೂಹಿಕ ಅತ್ಯಾಚಾರದ ಭೀಕರ ಘಟನೆಯ ನಂತರ, ವಿದೇಶಿ ಮಹಿಳೆಯ ಮೇಲೆ ರಾಜ್ಯದಲ್ಲಿ ನಡೆದಿರುವ ಲೈಂಗಿಕ ದೌರ್ಜನ್ಯದ ಮತ್ತೊಂದು ಘಟನೆ ಇದಾಗಿದೆ. ಈ ಘಟನೆಗಳನ್ನು ಬಿಡಿಯಾಗಿ ನೋಡದೆ, ಒಟ್ಟು ವ್ಯವಸ್ಥೆಯಲ್ಲಿನ ಲೋಪಗಳ ರೂಪದಲ್ಲಿ ನೋಡಬೇಕಾಗಿದೆ. ಕೊಡಗು ಘಟನೆಯು ಹೆಚ್ಚು ಆತಂಕಕಾರಿಯಾದುದು. ದೌರ್ಜನ್ಯಕ್ಕೆ ಒಳಗಾದ ಪ್ರವಾಸಿ, ಕುಟ್ಟ ಸಮೀಪದ ಹೋಂಸ್ಟೇಗೆ ಪದೇ ಪದೇ ಭೇಟಿ ಕೊಡುತ್ತಿದ್ದರು. ಅಲ್ಲಿ ಕೆಲಸ ಮಾಡುತ್ತಿದ್ದ ಜಾರ್ಖಂಡ್‌ನ ಸಿಬ್ಬಂದಿಯೊಬ್ಬರು ಮಾದಕ ದ್ರವ್ಯ ಸೇವಿಸಿ ದೌರ್ಜನ್ಯ ಎಸಗಿದ್ದಾರೆ ಎಂದು ಹೇಳಲಾಗುತ್ತಿದೆ. ಘಟನೆಯ ಬಗ್ಗೆ ಪೊಲೀಸರಿಗೆ ತಕ್ಷಣ ವರದಿ ಮಾಡಬೇಕಾಗಿದ್ದ ಹೋಂಸ್ಟೇ ಮಾಲೀಕರು, ಸಂತ್ರಸ್ತೆಯನ್ನು ಅಕ್ರಮ ಬಂಧನದಲ್ಲಿರಿಸಿ, ವೈಫೈ ಸಂಪರ್ಕ ಕಡಿತಗೊಳಿಸಿದ್ದರು ಎಂದು ಆರೋಪಿಸಲಾಗಿದೆ. ಸಂತ್ರಸ್ತೆಯು ಮೈಸೂರನ್ನು ತಲಪಿ, ಅಮೆರಿಕದ ರಾಯಭಾರ ಕಚೇರಿಯನ್ನು ಸಂಪರ್ಕಿಸಿದ ನಂತರವಷ್ಟೇ ಆರೋಪಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಕ್ರಿಯೆ ಚುರುಕಾಗಿ ನಡೆದಿದೆ. ಆರೋಪಿ ಮತ್ತು ಹೋಂಸ್ಟೇ ಮಾಲೀಕರನ್ನು ಬಂಧಿಸಲಾಗಿದ್ದು, ಹೋಂಸ್ಟೇ ನೋಂದಣಿಯನ್ನು ಜಿಲ್ಲಾಡಳಿತ ರದ್ದುಗೊಳಿಸಿದೆ.



ಕೊಡಗು ಜಿಲ್ಲೆಯ ಹೋಂಸ್ಟೇನಲ್ಲಿ ಅಮೆರಿಕದ ಮಹಿಳೆಯ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯ, ವಿಶ್ವ ಪ್ರವಾಸೋದ್ಯಮ ನಕ್ಷೆಯಲ್ಲಿ ರಾಜ್ಯದ ವರ್ಚಸ್ಸನ್ನು ಕುಗ್ಗಿಸುವ ಘಟನೆಯಾಗಿದೆ.

ಹೋಂಸ್ಟೇ ಪ್ರಕರಣವನ್ನು ಸರಳವಾಗಿ ನೋಡುವುದು ಸಾಧ್ಯವಿಲ್ಲ. ಕೊಡಗಿನಂತಹ ಪ್ರದೇಶಗಳು ಕಾರ್ಮಿಕರ ತೀವ್ರ ಕೊರತೆಯನ್ನು ಎದುರಿಸುತ್ತಿದ್ದು, ವಲಸೆ ಕಾರ್ಮಿಕರನ್ನು ಅವಲಂಬಿಸುವುದು ಅನಿವಾರ್ಯವಾಗಿದೆ. ವಲಸಿಗರ ಹಿನ್ನೆಲೆ ಪರಿಶೀಲಿಸುವುದನ್ನು ಕಡ್ಡಾಯಗೊಳಿಸಲಾಗಿದ್ದರೂ, ಕಾರ್ಮಿಕರ ಹಿನ್ನೆಲೆಯನ್ನು ಕಠಿಣ ಪರಿಶೀಲನೆಗೆ ಒಳಪಡಿಸುವಷ್ಟು ಅನುಕೂಲಗಳನ್ನು ಸಣ್ಣ ಹೋಂಸ್ಟೇಗಳನ್ನು ನಡೆಸುವವರು ಹೊಂದಿರುವುದಿಲ್ಲ. ಆಧಾರ್ ಕಾರ್ಡ್‌ಗಳನ್ನಷ್ಟೇ ಅವಲಂಬಿಸಿ ನಡೆಸುವ ಪರಿಶೀಲನೆಯು ಸದ್ಯದ ಸಂದರ್ಭದಲ್ಲಿ ಹೆಚ್ಚು ವಿಶ್ವಾಸಾರ್ಹವಾಗಿ ಉಳಿದಿಲ್ಲ. ಆದರೆ, ನಿಯಮಗಳ ವೈಫಲ್ಯಕ್ಕೆ ಕಾರಣವನ್ನಾಗಿ ತಾಂತ್ರಿಕ ಅಡೆತಡೆಗಳನ್ನು ಒಪ್ಪುವುದು ಸಾಧ್ಯವಿಲ್ಲ. ಪ್ರವಾಸಿಗರಿಗಾಗಿ ಕುಟುಂಬಗಳು ನಡೆಸುವ ಆತಿಥ್ಯ ಉದ್ಯಮದ ರೂಪದಲ್ಲಿ ವ್ಯಾಖ್ಯಾನಿಸಲಾದ ಹೋಂಸ್ಟೇಗಳನ್ನು ಕೆಲವೆಡೆ ರೆಸಾರ್ಟ್‌ಗಳಾಗಿ ಪರಿವರ್ತಿಸಿರುವುದೂ ಸಮಸ್ಯೆಗಳಿಗೆ ಕಾರಣವಾಗಿದೆ. ಇಂಥ ರೆಸಾರ್ಟ್‌ಗಳ ಸಂಪೂರ್ಣ ನಿರ್ವಹಣೆಯನ್ನು ಮಾಲೀಕರ ಗೈರುಹಾಜರಿಯಲ್ಲಿ ನೌಕರರೇ ನಿರ್ವಹಿಸುವುದರಿಂದ, ಹೋಂಸ್ಟೇಗೆ ಇರುವ ಸಾಮಾಜಿಕ ಹೊಣೆಗಾರಿಕೆ ಇಲ್ಲವಾಗುತ್ತದೆ. ನಿರ್ದಿಷ್ಟ ಮಾನದಂಡಗಳನ್ನು ಪಾಲಿಸದ ಆತಿಥ್ಯ ಉದ್ಯಮವನ್ನು ಹೋಂಸ್ಟೇ ವ್ಯಾಪ್ತಿಯಿಂದ ಹೊರತರಬೇಕಾಗಿದೆ ಹಾಗೂ ಅವುಗಳನ್ನು ವಾಣಿಜ್ಯ ಸಂಸ್ಥೆಗಳೆಂದು ಪರಿಗಣಿಸಿ ಪರವಾನಗಿ ನಿಯಮಗಳನ್ನು, ನಿರ್ವಹಣೆಯ ನಿಬಂಧನೆಗಳನ್ನು ಬಿಗಿಗೊಳಿಸಬೇಕಾಗಿದೆ.

ಹೋಂಸ್ಟೇಗಳು ಹೆಚ್ಚಳವಾಗಿರುವ ಸಮಸ್ಯೆಯನ್ನು ಪಶ್ಚಿಮ ಘಟ್ಟಗಳ ವಿವಿಧ ಭಾಗಗಳಲ್ಲಿ ಆಗಿರುವ ಅಕ್ರಮ ಆಸ್ತಿಗಳ ರೂಪದಲ್ಲೂ ನೋಡಬೇಕಾಗಿದೆ. ಅನೇಕ ಹೋಂಸ್ಟೇಗಳನ್ನು ಪರವಾನಗಿ ಇಲ್ಲದೆಯೇ ನಡೆಸಲಾಗುತ್ತಿದೆ. ದುರಂತ ಸಂಭವಿಸುವವರೆಗೂ ಅವುಗಳು ಕಾನೂನಿನ ಗಮನಕ್ಕೆ ಬರುವುದಿಲ್ಲ. ಇಷ್ಟೊಂದು ದೊಡ್ಡ ಪ್ರಮಾಣದ ಅನಧಿಕೃತ ಚಟುವಟಿಕೆಯು ಅಧಿಕಾರಿಗಳ ಸಹಕಾರವಿಲ್ಲದೆ ನಡೆಯಲು ಸಾಧ್ಯವಿಲ್ಲ. ಪ್ರವಾಸೋದ್ಯಮ ಇಲಾಖೆಯ ಸಾಂದರ್ಭಿಕ ಕ್ರಮಗಳು ವ್ಯವಸ್ಥೆಯಲ್ಲಿನ ಲೋಪವನ್ನು ತಡೆಗಟ್ಟುವ ಬದಲು, ಘಟನೆಗೆ ಪ್ರತಿಕ್ರಿಯೆಯ ರೂಪದಲ್ಲಿ ಇರುವುದೇ ಹೆಚ್ಚು. ಕೆಲವೆಡೆ ಕಾನೂನುಬಾಹಿರ ಚಟುವಟಿಕೆಗಳೂ ನಡೆಯುತ್ತವೆ ಎನ್ನುವುದು ಸ್ಥಳೀಯ ಅಧಿಕಾರಿಗಳ ‘ಸಹಕಾರ’ ಅಥವಾ ಅದಕ್ಷತೆಯನ್ನು ಸೂಚಿಸುವಂತಿದೆ. ಈ ವ್ಯವಸ್ಥೆಯನ್ನು ಸಮರ್ಪಕಗೊಳಿಸಬೇಕಾದ ಸರ್ಕಾರ, ಮೊದಲು ತನ್ನೊಳಗಿನ ಲೋಪಗಳನ್ನು ಸರಿಪಡಿಸಿಕೊಳ್ಳಬೇಕು. ಸಾಮಾಜಿಕ ಮಾಧ್ಯಮಗಳ ಬದಲು ಅಧಿಕೃತ ಪೋರ್ಟಲ್ ಮೂಲಕವಷ್ಟೇ ಹೋಂಸ್ಟೇಗೆ ನೋಂದಣಿ ಮಾಡಿಕೊಳ್ಳುವ ವ್ಯವಸ್ಥೆ ಜಾರಿಗೆ ತರಬೇಕು. ಸಂಪರ್ಕ ವ್ಯವಸ್ಥೆ ಕ್ಷೀಣವಾಗಿರುವ ಪ್ರದೇಶಗಳಿಗೆ ಪ್ರವಾಸಿಗರು ಒಂಟಿಯಾಗಿ ಹೋಗದಿರುವುದೇ ಉತ್ತಮ. ಹೋಗುವುದು ಅನಿವಾರ್ಯವಾದಲ್ಲಿ ತಮ್ಮ ಚಟುವಟಿಕೆಗಳ ಬಗ್ಗೆ ಕುಟುಂಬದ ಸದಸ್ಯರಿಗೆ ಮಾಹಿತಿ ನೀಡಬೇಕು; ಅಗತ್ಯವಿದ್ದಲ್ಲಿ ತುರ್ತು ಸಹಾಯವಾಣಿ ಸಂಖ್ಯೆ 112ನ್ನು ಬಳಸಬೇಕು. ಆದರೆ, ಮೂಲಭೂತ ಅಗತ್ಯವಾದ ಸುರಕ್ಷತೆಯ ಹೊಣೆಗಾರಿಕೆಯನ್ನು ಪ್ರವಾಸಿಗರ ಮೇಲೆ ಹೇರಬಾರದು. ಕುಟ್ಟ ಮತ್ತು ಹಂಪಿಯಲ್ಲಿ ನಡೆದಿರುವ ಘಟನೆಗಳು ವಿಶ್ವದ ಗಮನಸೆಳೆದಿದ್ದು, ಸುರಕ್ಷಿತ ಪ್ರವಾಸೋದ್ಯಮ ತಾಣ ಎನ್ನುವ ರಾಜ್ಯದ ಹಿರಿಮೆಗೆ ಧಕ್ಕೆ ತಂದಿವೆ. ರಾಜ್ಯವು ಈಗ ತಾತ್ಕಾಲಿಕ ಕ್ರಮಗಳ ಬದಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ಅವುಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಬೇಕು. ಅಪರಾಧಗಳಿಗೆ ಪ್ರತಿಕ್ರಿಯಿಸುವುದರ ಬದಲಾಗಿ, ಅವುಗಳನ್ನು ತಡೆಗಟ್ಟುವ ವಿಶ್ವಾಸಾರ್ಹ ವ್ಯವಸ್ಥೆಯನ್ನು ಸರ್ಕಾರ ರೂಪಿಸಬೇಕಾಗಿದೆ.

ಜಾಲಡಾಣ



ಮಹಾನ್ ದುಷ್ಟರು ಯಾರು?

ಸ್ಪಷ್ಟ ಸಿದ್ಧಾಂತ, ನೋಟ, ಕಾಣ್ಕೆಗಳನ್ನು ಇಟ್ಟುಕೊಳ್ಳದೆ, ಸಾರ್ವಜನಿಕ ಪ್ರಚಾರ ಪಡೆಯುವ ತಂತ್ರಗಳನ್ನು ಹೊಸೆಯುತ್ತಾ ಹೊಳೆಯುವ ರಾಜಕಾರಣಿ, ಕಲಾವಿದ, ಬರಹಗಾರ, ಹೋರಾಟಗಾರನ ಬಗ್ಗೆ ಜನರು ಸದಾ ಸಂದೇಹ ಇಟ್ಟುಕೊಳ್ಳಬೇಕಾಗುತ್ತದೆ. ಮಹಾನ್ ದುಷ್ಟರು ಇವರೇ!

ರಾಜೇಂದ್ರ ಪ್ರಸಾದ್, ಕವಿ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಡೊನಾಲ್ಡ್ ಟ್ರಂಪ್ ಭಾರತವನ್ನು ನರಕಕೂಪವೆಂದು ಜರಿದಿದ್ದಾರೆ. ಇದು ಪ್ರಧಾನಿ ನರೇಂದ್ರ ಮೋದಿ ನಾಯಕತ್ವದ ಕೇಂದ್ರ ಸರ್ಕಾರದ ಅಸಹಾಯಕತೆಗೆ ಸಾಕ್ಷಿ. ಮೋದಿ ಸರ್ಕಾರವು ಭಾರತದ ಆತ್ಮಗೌರವವನ್ನು ಅಮೆರಿಕ ಮತ್ತು ಇಸ್ರೇಲ್‌ನ ಪದತಲದಲ್ಲಿಟ್ಟು ಶರಣಾಗಿದೆ.

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

---

25 ವರ್ಷಗಳ ಹಿಂದೆ

ಬುಧವಾರ, 25-4-2001

• **ಜಯಾ ನಾಮಪತ್ರಗಳು ತಿರಸ್ಕೃತ**

ಕೃಷ್ಣಗಿರಿ, ಏ. 24 (ಪಿಟಿಐ)– ಬರುವ ಮೇ 10ರಂದು ನಡೆಯುವ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕಾಗಿ ಎಐಎಡಿಎಂಕೆ ನಾಯಕಿ ಜೆ. ಜಯಲಲಿತಾ ಅವರು, ಕೃಷ್ಣಗಿರಿ ಮತ್ತು ಅಂದಿಪಟ್ಟಿಗಳಲ್ಲಿ ಸಲ್ಲಿಸಿದ್ದ ನಾಮಪತ್ರಗಳು ಇಂದು ತಿರಸ್ಕೃತಗೊಳ್ಳುವ ಮೂಲಕ ಅವರ ರಾಜಕೀಯ ಅಧಿಕಾರಕ್ಕೆ ತೀವ್ರ ಹಿನ್ನಡೆ ಉಂಟಾಯಿತು.

ಅವರ ಬೆಂಬಲಿಗರು ಭುವನಗಿರಿ, ಪುದುಕೋಟ್ಟೈ ವಿಧಾನಸಭಾ ಕ್ಷೇತ್ರಗಳಲ್ಲಿ ಅವರ ಪರವಾಗಿ ಸಲ್ಲಿಸಿದ್ದ ನಾಮಪತ್ರಗಳು ಕೂಡಾ ತಿರಸ್ಕೃತವಾಗಿವೆ.

ಕೃಷ್ಣಗಿರಿಯಲ್ಲಿನ ಚುನಾವಣಾಧಿಕಾರಿ ಎಂ. ಮತಿವನನ್ ಅವರು, ಜಯಲಲಿತಾ ಅವರ ನಾಮಪತ್ರವನ್ನು ತಿರಸ್ಕರಿಸಿದರು ಎಂದು ಎಐಎಡಿಎಂಕೆ ಸಂಘಟನಾ ಕಾರ್ಯದರ್ಶಿಯಾದ ಪೊನ್ನುಸ್ವಾಮಿ ಅವರು ಪಕ್ಷದ ಕಚೇರಿ ಬಳಿ ಕಾರ್ಯಕರ್ತರಿಗೆ ತಿಳಿಸಿದರು.

75 ವರ್ಷಗಳ ಹಿಂದೆ

ಬುಧವಾರ, 25-4-1951

• **ಬಿಹಾರದ ಆಹಾರ ಸ್ಥಿತಿ ಅತ್ಯಂತ ವಿಪತ್ಕಾರಿ: ಜೆ.ಪಿ. ಕಳವಳ**

ಬಿಹಾರ, ಏ. 24– ಬಿಹಾರದ ಆಹಾರ ಸ್ಥಿತಿ ತೀವ್ರ ಅಪಾಯಕರವಾಗಿದೆ ಎಂದೂ, ಬಿಹಾರಿನಲ್ಲಿ ಬಂಗಾಳ ಕ್ಷಾಮದಂಥ ಕ್ಷಾಮ ಸಂಭವಿಸಬಹುದು ಎಂದೂ, ಸೋಷಲಿಸ್ಟ್ ಧುರೀಣ ಜಯಪ್ರಕಾಶ್ ನಾರಾಯಣ್‌ರವರಿಂದು ತಮ್ಮ ಕಳವಳ ವ್ಯಕ್ತಪಡಿಸಿದರು.

ಬಿಹಾರದ ಆಹಾರ ಸ್ಥಿತಿ ಪ್ರಾಂತ್ಯ ಸರ್ಕಾರದ ಹತೋಟಿ ಮೀರಿದೆಯೆಂದೂ, ಅಲ್ಲಿನ ಜನರನ್ನು ಸಾವಿನ ದವಡೆಯಿಂದ ಪಾರು ಮಾಡಬೇಕಾದರೆ ಕೇಂದ್ರ ಸರ್ಕಾರಕ್ಕೆ ಮಾತ್ರ ಸಾಧ್ಯವಿದೆಯೆಂದೂ ಜಯಪ್ರಕಾಶ್ ನುಡಿದರು.

ಇನ್ನೂ ಮೂರು ಅಥವಾ ನಾಲ್ಕು ತಿಂಗಳ ಕಾಲ ಯಾವ ಬೆಳೆಯೂ ಕೈಗೆ ಬಾರದ ಕಾರಣ ಪರಿಸ್ಥಿತಿ ಇನ್ನೂ ಉತ್ಕಟವಾಗುವುದೆಂದರು.

ಕಲಬುರಗಿ ವಿವೇಕಕ್ಕೆ ಎಣೆಯುಂಟೆ?



ಪಡಸಾಲೆ

ರಘುನಾಥ ಚ.ಹ.

ಭಾರತ ನರಕದಂತಹ ಪ್ರದೇಶ ಎಂದು ಹೇಳಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಾತಿಗೂ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನಿಷ್ಠ ಫಲಿತಾಂಶವನ್ನು ಪಡೆದಿರುವ ಜಿಲ್ಲೆಗಳಲ್ಲೊಂದಾದ ಕಲಬುರಗಿಯನ್ನು ಪ್ರಿಯಾಂಕ್ ಖರ್ಗೆ ಅವರ ನೆಪದಲ್ಲಿ ಎಗತಾಳೆ ಮಾಡುತ್ತಿರುವವರಿಗೂ ಅಧಿಕಾರ ಸ್ಥಾನ ಹೊರತುಪಡಿಸಿದಂತೆ ಹೆಚ್ಚಿನ ವ್ಯತ್ಯಾಸ ಇದ್ದಂತಿಲ್ಲ. ಕೊಂಚ ಕಟುವಾಗಿ ಹೇಳುವುದಾದರೆ, ಎರಡೂ ಸಂದರ್ಭಗಳಲ್ಲಿ ಕೆಲಸ ಮಾಡುತ್ತಿರುವ ಮಾನಸಿಕಸ್ಥಿತಿ ಒಂದೇ– ಜನಾಂಗೀಯ ನಿಂದನೆಯದು. ಟ್ರಂಪ್ ಅವರ ಮಾತುಗಳಲ್ಲಿ ಈ ನಿಂದನೆ ಸ್ಪಷ್ಟವಾಗಿ ಕಾಣಿಸುತ್ತಿದ್ದರೆ, ಪ್ರಿಯಾಂಕ್– ಕಲಬುರಗಿ ಸಂದರ್ಭದಲ್ಲಿನ ಟ್ರೋಲ್‌ಗಳಲ್ಲಿ ಅದು ತೆಳುವಾಗಿ ಕಾಣಿಸುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯು ಫಲಿತಾಂಶ ಪ್ರಕಟವಾದಾಗಲೆಲ್ಲ ಕಲಬುರಗಿಯ ಫಲಿತಾಂಶವನ್ನು ನೆಪವಾಗಿಟ್ಟುಕೊಂಡು ಪ್ರಿಯಾಂಕ್ ಖರ್ಗೆ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರನ್ನು ಟೀಕಿಸಲಾಗುತ್ತಿದೆ. ಈ ಬಾರಿ ಆ ಟೀಕೆ ಅತಿರೇಕಕ್ಕೆ ಮುಟ್ಟಿದೆ. ಕನಿಷ್ಠ ಫಲಿತಾಂಶ ದಾಖಲೆಯ ಸಾಧನೆಗೆ ಕಾಂಗ್ರೆಸ್‌ನ ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ಪುತ್ರ ಪ್ರಿಯಾಂಕ್ ಅವರಿಗೆ ಸಿಹಿ ತಿನ್ನಿಸಿ ಅಭಿನಂದಿಸುತ್ತಿರುವ ಎಐ ರೂಪಿತ ವಿಡಿಯೊವನ್ನು ಜಾತ್ಯತೀತ ಜನತಾದಳ ‘ಎಕ್ಸ್’ನಲ್ಲಿ ಹಂಚಿಕೊಂಡಿದೆ; ‘ಕಲಬುರಗಿ ಜಿಲ್ಲೆ ಹಿಂದುಳಿಯಲು ಖರ್ಗೆ ಕುಟುಂಬ ಕಾರಣ!’ ಎಂದು ನೇರವಾಗಿ ಟೀಕಿಸಿದೆ. ‘ಎಸ್‌ಎಸ್‌ಎಲ್‌ಸಿ ಫಲಿತಾಂಶ ಬಂದಿದೆ, ಟ್ವೀಟ್ ಎಲ್ಲಿ ಮಹಾಜ್ಞಾನಿ?’ ಎಂದು ಬಿಜೆಪಿ ಕುಟುಕಿದೆ. ಬಿಜೆಪಿ ಶಾಸಕ ಸುರೇಶ್ ಕುಮಾರ್ ಅವರು, ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟಿಸಿದ ಮಧು ಬಂಗಾರಪ್ಪನವರ ಮೇಲೆ ಪ್ರಿಯಾಂಕ್ ಅವರಿಗೆ ಕೋಪ ಉಕ್ಕಿರಬಹುದು ಎಂದು ಊಹಿಸಿದ್ದಾರೆ. ಮಾಜಿ ಶಿಕ್ಷಣ ಸಚಿವರ ಸೃಜನಶೀಲ ಕಲ್ಪನೆ ಅಮೋಘವಾದುದು.

ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಪ್ರಿಯಾಂಕ್ ಖರ್ಗೆ ಅವರ ಮೇಲೆ ಕೋಪ ಮಾಡಿಕೊಳ್ಳಲು ಕಾರಣಗಳಿವೆ. ಇತ್ತೀಚಿನ ದಿನಗಳಲ್ಲಿ ಆರ್‌ಎಸ್‌ಎಸ್‌ಗೆ ಮರ್ಮಾಘಾತದ ಪ್ರಶ್ನೆಗಳನ್ನು ಕೇಳುತ್ತಿರುವವರಲ್ಲಿ ಪ್ರಿಯಾಂಕ್ ಮುಂಚೂಣಿಯಲ್ಲಿದ್ದಾರೆ; ನೋಂದಣಿಗೆ ಒಳಪಡದಿರುವ ಸಂಘದ ಚಟುವಟಿಕೆಗಳನ್ನು ಪ್ರಶ್ನಿಸುವುದರ ಜೊತೆಗೆ, ಆರ್‌ಎಸ್‌ಎಸ್ ತೆರಿಗೆ ವಂಚಿಸುತ್ತಿದೆ ಎನ್ನುವ ಆರೋಪಗಳನ್ನು ಮತ್ತೆ ಮತ್ತೆ ಮಾಡುತ್ತಿದ್ದಾರೆ. ಪ್ರಿಯಾಂಕ್ ಅವರ ತಂದೆ ಮಲ್ಲಿಕಾರ್ಜುನ ಖರ್ಗೆ ಅವರು ಆರ್‌ಎಸ್‌ಎಸ್ ಅನ್ನು ಹಾವಿಗೆ ಹೋಲಿಸಿದ್ದಾರೆ. ಕುಂಬಳಕಾಯಿ ಕಳ್ಳ ಎಂದು ಯಾರಾದರೂ ಹೇಳಿದಾಗಲೆಲ್ಲ, ಆರ್‌ಎಸ್‌ಎಸ್ ಬದಲು ಬಿಜೆಪಿ ಹೆಗಲು ಮುಟ್ಟಿಕೊಳ್ಳುವುದು ಹೊಸತೇನಲ್ಲ. ಈಗ, ಆ ಅನಿವಾರ್ಯತೆ ಬಿಜೆಪಿಯೊಂದಿಗೆ ಮೈತ್ರಿಯಲ್ಲಿರುವ ಜೆಡಿಎಸ್‌ಗೂ ಬಂದಂತಿದೆ. ಖರ್ಗೆ ಕುಟುಂಬವನ್ನು, ವಿಶೇಷವಾಗಿ ಪ್ರಿಯಾಂಕ್ ಅವರನ್ನು ಹಣಿಯುವ ಅವಕಾಶವಾಗಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಫಲಿತಾಂಶಗಳು ಬಿಜೆಪಿ–ಜೆಡಿಎಸ್‌ಗೆ ದೊರಕಿವೆ. ಖರ್ಗೆ ಕುಟುಂಬವನ್ನು ಅವಮಾನಿಸುತ್ತಿರುವುದು ವ್ಯಕ್ತಿಗತ ನಿಂದೆಯಷ್ಟೇ ಅಲ್ಲ. ಅದು ಪರೋಕ್ಷವಾಗಿ ಒಂದು ಸಮುದಾಯದ ಕುರಿತ ಅಸಹನೆಯೂ ಹೌದು. ಈ ಹಿಂದೆ, ಖರ್ಗೆಯವರ ಮೈಬಣ್ಣ ಆಡಿಕೊಂಡವರೇ ಈಗ ಅವರು ಪ್ರತಿನಿಧಿಸುವ ಪರಿಸರದ ಬಗ್ಗೆಯೂ ಕುಹಕವಾಡುತ್ತಿದ್ದಾರೆ.

ಆರ್‌ಎಸ್‌ಎಸ್ ವಿರುದ್ಧದ ಖರ್ಗೆದ್ವಯರ ಮಾತುಗಳೆಲ್ಲವನ್ನೂ ಸರಿಯೆಂದು ಒಪ್ಪಿಕೊಳ್ಳಲಾಗದು. ಖರ್ಗೆಯವರು ಹೇಳುವಂತೆ ಆರ್‌ಎಸ್‌ಎಸ್ ಹಾಗೂ ಬಿಜೆಪಿಯನ್ನು ಹಾವೆಂದು ತರ್ಕಕ್ಕೆ ಒಪ್ಪಿಕೊಂಡರೂ, ಅದನ್ನು ಕೊಲ್ಲಬೇಕೆಂದು ಹೇಳುವುದನ್ನು ತರ್ಕವಾಗಿಯೂ ಒಪ್ಪಿಕೊಳ್ಳಲಾಗದು. ಖರ್ಗೆಯವರು ನಂಬುವ ಬುದ್ಧಮಾರ್ಗ ಸರ್ಪದ ಬಗ್ಗೆಯೂ ಕರುಣೆ ತೋರಿಸುವಂತಹದ್ದು. ಬುದ್ಧಮಾರ್ಗದಲ್ಲಿ ಹಾವಿನ ವಿಷ ತಿಳಿಯಾಗಬಹುದೇ ಹೊರತು, ನಾಶಕ್ಕೆ ಅವಕಾಶವಿಲ್ಲ. ಖರ್ಗೆ ಹಾಗೂ ಪ್ರಿಯಾಂಕ್ ಅವರ ಮಾತುಗಳಿಗೆ ಅಸಮ್ಮತಿ ಸೂಚಿಸುತ್ತಲೇ, ಅವರ ಟೀಕೆಗಳು ರಾಜಕಾರಣದಲ್ಲಿ ಸಹಜ ಎನ್ನುವುದನ್ನು ಗುರ್ತಿಸಬೇಕು. ಆರ್‌ಎಸ್‌ಎಸ್ ಒಪ್ಪಿಕೊಳ್ಳದೆ ಹೋದರೂ, ಅದೊಂದು ರಾಜಕೀಯ ಸಂಘಟನೆಯಾಗಿಯೇ ಕಾರ್ಯ ನಿರ್ವಹಿಸುತ್ತಿದೆ ಹಾಗೂ ದೇಶದ ಆಗುಹೋಗುಗಳನ್ನು ಬಹಳಷ್ಟು ಸಂದರ್ಭಗಳಲ್ಲಿ ನೇರವಾಗಿಯೇ ಪ್ರಭಾವಿಸುತ್ತಿದೆ. ಹಾಗಾಗಿ, ಅದು ಸಾರ್ವಜನಿಕ ಪ್ರಶ್ನೆಗಳಿಗೆ ಉತ್ತರದಾಯಿಯಾಗಿದೆ. ಈ ಉತ್ತರದಾಯಿತ್ವವನ್ನು ಬಿಜೆಪಿ ಹಾಗೂ ಜೆಡಿಎಸ್ ತೆಗೆದುಕೊಂಡಿವೆ, ಅದು ಅಸಹಜವೂ ಅಲ್ಲ. ಆದರೆ, ಪ್ರಿಯಾಂಕ್‌ರನ್ನು ಅಣಕಮಾಡಲು ಕಲಬುರಗಿ ಸೀಮೆಯನ್ನು, ಅಲ್ಲಿನ ಮಕ್ಕಳನ್ನು ಬಳಸಿಕೊಂಡಿರುವುದಕ್ಕೆ ಯಾವುದೇ ಸಮರ್ಥನೆಯಿಲ್ಲ. ಈ ಟೀಕೆಗಳು ರಾಜಕಾರಣವನ್ನು ಮೀರಿ ವ್ಯಕ್ತಿಯನ್ನೂ ಸಮುದಾಯವನ್ನೂ ಪ್ರದೇಶವನ್ನೂ ಗಾಸಿಗೊಳಿಸುವಂತಿವೆ. ಭಾರತದ ಕುರಿತ ಟ್ರಂಪ್‌ರ ಮಾತುಗಳಲ್ಲಿನ ಕೀಳು ಅಭಿರುಚಿ ಇಲ್ಲಿಯೂ ಇದೆ.

> ಎಸ್‌ಎಸ್‌ಎಲ್‌ಸಿ ಫಲಿತಾಂಶದ ನೆಪದಲ್ಲಿ ಕಲಬುರಗಿ ಸೀಮೆಯ ಬಗ್ಗೆ ಲಘುವಾಗಿ ಮಾತನಾಡುವವರು, ಅಲ್ಲಿನ ವಿವೇಕ ಪರಂಪರೆಯನ್ನು ಗಮನಿಸಬೇಕು. ಪರಧರ್ಮ, ಪರ ವಿಚಾರಗಳನ್ನು ಸೈರಣೆಯಿಂದ ನೋಡಬೇಕೆನ್ನುವ ಕನ್ನಡ ವಿವೇಕ ಪರಂಪರೆಯ ಅತ್ಯುತ್ತಮ ಪ್ರತಿನಿಧಿ ಕಲಬುರಗಿ.

ಕಲಬುರಗಿ ಜಿಲ್ಲೆಯ ಬಗೆಗಿನ ಟೀಕೆಗಳು ಎಸ್‌ಎಸ್‌ಎಲ್‌ಸಿ, ಪಿಯು ಫಲಿತಾಂಶಗಳಿಗೆ ಸೀಮಿತವಾದುವಲ್ಲ. ಅಲ್ಲಿನ ಬಿಸಿಲನ್ನು, ಬೆವರ ಬದುಕು ಹಾಗೂ ಬಡತನವನ್ನು ಕುರಿತು ಅಸೂಕ್ಷ್ಮ ಮಾತುಗಳು ಆಗಾಗ ಕೇಳಿಬರುತ್ತಿರುತ್ತವೆ. ಹೀಗೆ ಮಾತನಾಡುವವರು ಕಲಬುರಗಿ ಸೀಮೆಯ ವಿವೇಕವನ್ನು ಲಘುವಾಗಿ ಕಾಣುತ್ತಿರುತ್ತಾರೆ ಹಾಗೂ ಕನ್ನಡ ನಾಡಿನ ಚರಿತ್ರೆಯ ಬಗ್ಗೆ ಪೂರ್ವಗ್ರಹ ಹೊಂದಿರುತ್ತಾರೆ. ಅಭಿವೃದ್ಧಿಯ ಮಾನದಂಡಗಳಲ್ಲಿ ಕಲಬುರಗಿ ಸೀಮೆಗೆ ಕಡಿಮೆ ಅಂಕಗಳು ಬರಬಹುದು. ಆದರೆ, ಕನ್ನಡ ವಿವೇಕ ಪರಂಪರೆಯನ್ನು ಪ್ರತಿನಿಧಿಸುವುದರಲ್ಲಿ ಬೀದರ್ ಹೊರತುಪಡಿಸಿದರೆ, ಕಲಬುರಗಿ ಸೀಮೆಗೆ ಕನ್ನಡನಾಡಿನ ಬೇರೆ ಯಾವ ಪ್ರದೇಶವೂ ಸಾಟಿಯಲ್ಲ. ನಾಡಗೀತೆಯ ಹೃದಯವಾದ ‘ಸರ್ವ ಜನಾಂಗದ ಶಾಂತಿಯ ತೋಟ’ ಎನ್ನುವ ಬಹುತ್ವದ ಪರಿಕಲ್ಪನೆ ಸಾಕಾರಗೊಂಡಿರುವ ನೆಲ ಕಲಬುರಗಿ.

ಹಲವು ಭಾಷೆ, ಸಂಸ್ಕೃತಿ, ನಂಬಿಕೆಗಳ ಸೃಜನಶೀಲ ಸಮೀಕರಣವಾದ ಕಲಬುರಗಿಯ ಪರಿಸರ, ಬಿಸಿಲನ್ನು ಬಟ್ಟಿಯಿಳಿಸಿ ಬೆಳುದಿಂಗಳನ್ನಾಗಿಸಿಕೊಂಡಿರುವ ಸೀಮೆ. ಬಹಮನಿ ಸುಲ್ತಾನರ ಮೂಲಕ ಪ್ರವರ್ಧಮಾನಕ್ಕೆ ಬಂದ ಗುಲ್ಬರ್ಗ, ಅಲಾವುದ್ದೀನ್ ಹಸನ್ ಗಂಗೂ ಬಹಮನ್ ಶಹಾ, ಫಿರೋಜ್ ಶಹಾ, ಮಲಿಕ್ ಸೈಫುದ್ದೀನ್ ಘೋರಿ, ಖ್ವಾಜಾ ಬಂದೇ ನವಾಜ್, ಮುಂತಾದವರ ಮೂಲಕ ಸಾಂಸ್ಕೃತಿಕವಾಗಿಯೂ ಆರ್ಥಿಕವಾಗಿಯೂ ಬೆಳವಣಿಗೆ ಸಾಧಿಸಿತು. ಪ್ರಧಾನಿಯಾಗಿದ್ದ ಮಲಿಕ್ ಸೈಫುದ್ದೀನ್ ಘೋರಿಯು ವಿದೇಶಾಂಗ ನೀತಿಯನ್ನು ರೂಪಿಸಿದ್ದ. ಬಹಮನಿ ಸಾಮ್ರಾಜ್ಯದ ಪ್ರಸಿದ್ಧ ಅರಸ ಫಿರೋಜ್ ಶಹಾ ರೂಪಿಸಿದ ‘ಸೌಹಾರ್ದ ನೀತಿ’ಯು ದೆಹಲಿಯ ಮೊಗಲರಿಗೂ ಆದರ್ಶಪ್ರಾಯವಾಗಿತ್ತು. ಗಣಿತ, ಖಗೋಳ, ಸಸ್ಯಶಾಸ್ತ್ರ, ಭಾಷಾಶಾಸ್ತ್ರದಲ್ಲಿ ಫಿರೋಜ್ ಕುತೂಹಲಿಯಾಗಿದ್ದ; ಕವಿಯೂ ಆಗಿದ್ದ. ವಿಜಯನಗರದ ದೊರೆ ದೇವರಾಯನ ಮಗಳನ್ನು ಮದುವೆಯಾಗಿದ್ದ. ಫಿರೋಜ್ ಅವಧಿಯಲ್ಲಿಯೇ, ಖ್ವಾಜಾ ಬಂದೇ ನವಾಜ್‌ರು ಗುಲ್ಬರ್ಗಕ್ಕೆ ಬಂದು ನೆಲೆಗೊಂಡರು; ನಗರಕ್ಕೆ ಸಾಂಸ್ಕೃತಿಕ, ಆಧ್ಯಾತ್ಮಿಕ ವರ್ಚಸ್ಸು ತಂದುಕೊಟ್ಟರು. ಸೂಫಿ ತಾತ್ವಿಕತೆಗೆ ಖಚಿತ ನೆಲೆಗಟ್ಟು ಒದಗಿಸಿಕೊಟ್ಟರು. ಉರ್ದುವಿನ ಮೊದಲ ಗದ್ಯ ಲೇಖಕ ಎಂದು ಗುರ್ತಿಸಲಾಗುವ ಬಂದೇ ನವಾಜರ ಸ್ಮರಣೆಯ ರೂಪದಲ್ಲಿ ಕಲಬುರಗಿಯಲ್ಲಿರುವ ದರ್ಗಾ, ಪರಧರ್ಮ ಪರವಿಚಾರಗಳಿಗೆ ಸಂಬಂಧಿಸಿದ ಸೈರಣೆಯು ಎಲ್ಲ ಕಾಲಕ್ಕೂ ಅಗತ್ಯ ಎನ್ನುವ ಸತ್ಯವನ್ನು ಉಸುರುತ್ತಿರುವಂತಿದೆ. 19ನೇ ಶತಮಾನದಲ್ಲಿ ಶರಣಬಸವೇಶ್ವರರು ನಡೆಸಿದ ದಾಸೋಹ ಪ್ರಯೋಗಕ್ಕೆ ಗುಲ್ಬರ್ಗವೇ ಕೇಂದ್ರವಾಗಿತ್ತು.

ವಾಣಿಜ್ಯ, ಆಡಳಿತಾತ್ಮಕ, ಧಾರ್ಮಿಕ, ಸಾಹಿತ್ಯ–ಕಲೆಗಳಿಗೆ ಸಂಬಂಧಿಸಿದಂತೆ ಗುಲ್ಬರ್ಗ ಹಾಗೂ ಪರ್ಷಿಯಾಗಳ ನಂಟಿಗೆ ದೊಡ್ಡ ಚರಿತ್ರೆಯಿದೆ. ಪರ್ಷಿಯಾದೊಂದಿಗಿನ ಒಡನಾಟದಲ್ಲಿ ಅಲ್ಲಿನ ಸಾಹಿತ್ಯ, ಸಂಸ್ಕೃತಿ, ಕಲೆಗಳಿಂದ ಗುಲ್ಬರ್ಗ ಪ್ರಭಾವಿತವಾಯಿತು. ಪ್ರಭುತ್ವವಿರೋಧಿ ಹೋರಾಟ ಚರಿತ್ರೆಯಲ್ಲಿಯೂ ಕಲಬುರಗಿಗೆ ವಿಶೇಷ ಸ್ಥಾನವಿದೆ. ಕರ್ನಾಟಕ ಏಕೀಕರಣ ಚಳವಳಿಯಲ್ಲೂ ಈ ಸೀಮೆ ಮುಂಚೂಣಿಯಲ್ಲಿತ್ತು.

ಚರಿತ್ರೆ ಮಾತ್ರವಲ್ಲ, ವರ್ತಮಾನದಲ್ಲೂ ಕಲಬುರಗಿ ಸಾಮರಸ್ಯವನ್ನು ಜೀವಿಸುತ್ತಿರುವ ನಗರ. ‘ದೇಶದ ತೊಗರಿ ಕಣಜ’ ಎನ್ನುವ ಅಗ್ಗಳಿಕೆಯ ನಗರದ ವರ್ಚಸ್ಸು ಇಪ್ಪತ್ತನೇ ಶತಮಾನದಲ್ಲಿ ಕೊಂಚ ಮಸುಕಾಗಿದ್ದರೂ, ಅದರ ಸಾಂಸ್ಕೃತಿಕ ಸಿರಿ ಹಾಗೂ ಸೌಹಾರ್ದದ ಒರತೆ ಈಗಲೂ ನಿಗಿನಿಗಿ ಎನ್ನುತ್ತಿದೆ. ಈ ಪರಂಪರೆಯನ್ನು ಮರೆತು, ಖರ್ಗೆ ಕುಟುಂಬದ ಕಾರಣಕ್ಕಾಗಿ ಕಲಬುರಗಿಯ ವಿದ್ಯಾರ್ಥಿಗಳ ತಿಳಿವಳಿಕೆಯ ಬಗ್ಗೆ ಲಘುವಾಗಿ ಮಾತನಾಡುವವರು ತಮ್ಮ ತಿಳಿವಳಿಕೆಯ ಮಿತಿಯನ್ನು ಬಯಲು ಮಾಡಿಕೊಳ್ಳುತ್ತಾರಷ್ಟೇ.

ಶಿಕ್ಷಣದ ನೈಜ ಯಶಸ್ಸು ಇರುವುದು ಪರೀಕ್ಷೆಯ ಫಲಿತಾಂಶದಲ್ಲಿ ಅಲ್ಲ, ಜನ ಗಣ ಮನದಲ್ಲಿ ಹಾಗೂ ಜೀವನವಿಧಾನದಲ್ಲಿ ಎನ್ನುವುದು ಭಾರತೀಯ ಶಿಕ್ಷಣ ಪರಂಪರೆಯ ನಂಬಿಕೆ. ಈ ಹಿನ್ನೆಲೆಯಲ್ಲಿ ಕಲಬುರಗಿಯ ಜನರು ನಾಡಿನಲ್ಲೇ ಹೆಚ್ಚು ಸುಶಿಕ್ಷಿತರು. ಕಲಬುರಗಿಯ ಸಾಂಸ್ಕೃತಿಕ ಹಾಗೂ ಸಾಮಾಜಿಕ ಬದುಕಿನ ಸಿರಿವಂತಿಕೆಯನ್ನು ಗುರ್ತಿಸುತ್ತಲೇ, ಸ್ಪರ್ಧಾತ್ಮಕ ಶಿಕ್ಷಣದಲ್ಲಿ ಕಲಬುರಗಿಯೂ ಸೇರಿದಂತೆ ಕಲ್ಯಾಣ ಕರ್ನಾಟಕ ಪ್ರದೇಶದ ಹಿನ್ನಡೆಗೆ ಹಾಗೂ ಆರ್ಥಿಕ ಅಭಿವೃದ್ಧಿಯ ಕುಂಟುವಿಕೆಗೆ ಕಾರಣಗಳೇನು ಎನ್ನುವುದರ ಗಂಭೀರ ಅಧ್ಯಯನ ನಡೆಯಬೇಕಾಗಿದೆ. ಆ ಅಧ್ಯಯನ ಪ್ರಾಂಜಲವಾಗಿ ನಡೆಯಬೇಕೇ ಹೊರತು, ಸಾಮಾಜಿಕ ಜಾಲತಾಣಗಳಲ್ಲಿ ಕೊಳಕನ್ನು ಕಾರಿಕೊಳ್ಳುವ ಮೂಲಕ ಅಲ್ಲ. ಹಾಗೆಯೇ, ಹಿಂದೊಮ್ಮೆ ಸಾಮರಸ್ಯದ ನೆಲೆಗಳಾಗಿದ್ದ ದಕ್ಷಿಣ ಕನ್ನಡ ಹಾಗೂ ಉಡುಪಿಯಂಥ ಜಿಲ್ಲೆಗಳು ಈಗ ‘ಕನ್ನಡ ವಿವೇಕ ಪರಂಪರೆ’ಗೆ ವಿಮುಖವಾಗಿರುವುದೇಕೆ ಎನ್ನುವ ಅಧ್ಯಯನವೂ ನಡೆಯಬೇಕಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಮುಂಚೂಣಿಯಲ್ಲಿರುವ ಪರಿಸರದಲ್ಲೇ ಹಿಜಾಬ್ ಧರಿಸಿದ ಹೆಣ್ಣುಮಕ್ಕಳನ್ನು ಕಾಲೇಜಿನ ಆವರಣಕ್ಕೆ ಬಿಟ್ಟುಕೊಳ್ಳದ ಪರಿಸ್ಥಿತಿ ಉಂಟಾದುದೇಕೆ ಎನ್ನುವ ಪ್ರಶ್ನೆಗೂ ಉತ್ತರ ಕಂಡುಕೊಳ್ಳಬೇಕಾಗಿದೆ.



ವಾಚಕರ ವಾಣಿ

ಮಾಟ–ಮಂತ್ರ: ದಿಢೀರ್ ಬೌದ್ಧಿಕ ಪಲ್ಲಟ

ಮೂಢನಂಬಿಕೆ ನಿರ್ಮೂಲನಾ ಕಾಯ್ದೆ ನನಸಾಗುವ ಹಾದಿಯಲ್ಲಿ ಶಾಸಕರಾದ ಕೆ.ಎನ್. ರಾಜಣ್ಣ ಸಲ್ಲಿಸಿರುವ ಸಮರ್ಥ ಸೇವೆ ನಾಡಿನ ಜನರ ನೆನಪಿನಿಂದ ಇನ್ನೂ ಜಾರಿಲ್ಲ. ಇಂತಹ ಜವಾಬ್ದಾರಿ ವ್ಯಕ್ತಿತ್ವದ ಅವರು ಇತ್ತೀಚೆಗೆ ಮುಖ್ಯಮಂತ್ರಿಯವರ ಕುರಿತು ಆಡಿರುವ ಮಾತುಗಳು ಸಮರ್ಪಕವಾಗಿಲ್ಲ. ಸಿದ್ದರಾಮಯ್ಯನವರಲ್ಲಿ ಮೊದಲಿನ ಖದರು ಉಳಿದಿಲ್ಲ, ಅವರು ಕ್ರಿಯಾಶೀಲರಾಗಿ ಕಾಣಬರುತ್ತಿಲ್ಲ, ಅಸಹಾಯಕರಂತೆ ನಡೆದುಕೊಳ್ಳುತ್ತಿದ್ದಾರೆ... ಇದಕ್ಕೆ ಕಾರಣ ಸಿಎಂಗೆ ಯಾರೋ ಮಾಟ–ಮಂತ್ರ ಮಾಡಿಸಿರುವುದು... ಎಂದು ಹಟಕ್ಕೆ ಬಿದ್ದವರಂತೆ ಮಾತನಾಡುತ್ತಿದ್ದಾರೆ.

ಮಾಟ–ಮಂತ್ರದ ವಿಚಾರಗಳಲ್ಲಿ ಅವರಲ್ಲಾಗಿರುವ ಈ ದಿಢೀರ್ ಬೌದ್ಧಿಕ ಪಲ್ಲಟವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಬಹುಶಃ ಅವರಿಗೇ ಯಾರೋ ಮಾಟ–ಮಂತ್ರ ಮಾಡಿಸಿರಬಹುದು ಅಥವಾ ಮಾಡಿಸುತ್ತಿರಬಹುದು ಎನ್ನಿಸುತ್ತಿದೆ. ಇದರ ಸತ್ಯಾಸತ್ಯತೆಯ ಬಗ್ಗೆ ನಾಡಿನ ಜನತೆಗೆ ಒಂದು ನಂಬಲರ್ಹ ತೀರ್ಮಾನ ಬೇಕಿದೆ. ಹಾಗಾಗಿ, ಕೂಡಲೇ ತಜ್ಞರ ತಂಡವೊಂದನ್ನು ರಚಿಸಿ ರಾಜಣ್ಣನವರನ್ನು ಎಲ್ಲ ರೀತಿಯ ಪರೀಕ್ಷೆಗೆ ಒಳಪಡಿಸುವುದು ಸೂಕ್ತ.

ಸಿ.ಎಚ್. ಹನುಮಂತರಾಯ, ಬೆಂಗಳೂರು

ಸ್ಪರ್ಧಾರ್ಥಿಗಳ ಹೋರಾಟಕ್ಕೆ ಬೆಲೆ ಇಲ್ಲವೆ?

ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ವರ್ಷದೊಳಗೆ ಒಂದು ಲಕ್ಷ ಸರ್ಕಾರಿ ಹುದ್ದೆಗಳ ನೇಮಕಾತಿಗೆ ಕ್ರಮವಹಿಸುವುದಾಗಿ ಕಾಂಗ್ರೆಸ್, ಚುನಾವಣಾ ಪೂರ್ವದಲ್ಲಿ ಘೋಷಿಸಿತ್ತು. ಧಾರವಾಡದಲ್ಲಿ ಫೆಬ್ರುವರಿಯಲ್ಲಿ ನಡೆದ ಬೃಹತ್ ಪ್ರತಿಭಟನೆಯ ತೀವ್ರತೆಗೆ ಮಣಿದಿದ್ದ ಸರ್ಕಾರವು ತಿಂಗಳೊಳಗೆ ಸುಮಾರು 56 ಸಾವಿರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆರಂಭಿಸುವುದಾಗಿ ಪ್ರಕಟಿಸಿತ್ತು. ಸರ್ಕಾರದ ಮೌನ ಖಂಡಿಸಿ ಜಿಲ್ಲಾಮಟ್ಟದಲ್ಲೂ ಹೋರಾಟಗಳು ನಡೆದಿದ್ದವು. ಆದರೆ, ಒಳಮೀಸಲಾತಿಯ ನೆಪವೊಡ್ಡಿ ಸರ್ಕಾರ ಕಾಲಹರಣ ಮಾಡುತ್ತಿದೆ. ಹೋರಾಟಕ್ಕೂ ಅವಕಾಶ ನೀಡದೆ ಯುವ ಮನಸ್ಸುಗಳ ಮೇಲೆ ತೀವ್ರ ದಬ್ಬಾಳಿಕೆ ನಡೆಸುತ್ತಿದೆ. ವಿಪಕ್ಷವಾದ ಬಿಜೆಪಿಯೂ ತನ್ನ ಕರ್ತವ್ಯ ಮರೆತಿದೆ. ಇದರಿಂದ ಯುವಜನರು ತೊಂದರೆ ಅನುಭವಿಸುವಂತಾಗಿದೆ.

ಸ್ನೇಹಾ ಎಸ್.ಐ., ಬ್ಯಾಡಗಿ

ರಾಜ್: ಮೌಲ್ಯಪೂರ್ಣ ವಿಶ್ವವಿದ್ಯಾಲಯ

‘ಕಾಲವೇ ಸೃಷ್ಟಿಸಿದ ಮಹಾಕಾವ್ಯ!’ ಲೇಖನ (ಲೇ: ಜಿ.ವಿ. ಆನಂದಮೂರ್ತಿ, ಪ್ರ.ವಾ., ಏ. 24) ಸಕಾಲಿಕ ಬರಹ. ಸಂಸ್ಕೃತಿ, ಕಲೆ ಮತ್ತು ಭಾಷೆಯ ಪ್ರತೀಕವಾಗಿದ್ದ ವರನಟ ರಾಜಕುಮಾರ್ ಅವರು ಬರೀ ನಟರಾಗಿರಲಿಲ್ಲ; ಕನ್ನಡ ಚಿತ್ರರಂಗದ ಜೀವಂತ ಚೈತನ್ಯವಾಗಿದ್ದರು. ಅವರ ಪಾತ್ರಗಳಲ್ಲಿ ಸತ್ಯನಿಷ್ಠೆ ಮತ್ತು ಮಾನವೀಯತೆ ಕಾಣಿಸುತ್ತಿತ್ತು. ಅವರು ಅಭಿನಯಿಸಿದ ಸಿನಿಮಾಗಳು ಮನರಂಜನೆಗೆ ಸೀಮಿತವಾಗಿರಲಿಲ್ಲ. ಸಮಾಜಕ್ಕೆ ಒಳ್ಳೆಯ ಸಂದೇಶ ನೀಡುತ್ತಿದ್ದವು. ರಾಜಕುಮಾರ್ ಅವರು ಕನ್ನಡ ಭಾಷೆ, ಸಂಸ್ಕೃತಿ ಬಗ್ಗೆ ಅಪಾರ ಪ್ರೀತಿ ಹೊಂದಿದ್ದರು. ಕನ್ನಡ ಸಿನಿಮಾಗಳಲ್ಲಷ್ಟೇ ನಟಿಸಿ, ಕನ್ನಡ ಸಂಸ್ಕೃತಿಯನ್ನು ಪ್ರೋತ್ಸಾಹಿಸಿದರು. ಅವರು ಕರುನಾಡಿನ ಪಾಲಿಗೆ ಮೌಲ್ಯಪೂರ್ಣ ವಿಶ್ವವಿದ್ಯಾಲಯ ಎಂದರೂ ತಪ್ಪಾಗಲಾರದು.

ಕಡೂರು ಫಣಿಶಂಕರ್, ಬೆಂಗಳೂರು

ಕನ್ನಡ ಅನುಷ್ಠಾನ: ಇಚ್ಛಾಶಕ್ತಿ ಪ್ರದರ್ಶಿಸಲಿ

ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆ. ಆದರೆ, ಕನ್ನಡ ಭಾಷೆ ಅನುಷ್ಠಾನದಲ್ಲಿ ಶೈಕ್ಷಣಿಕ ಕ್ಷೇತ್ರವೂ ಒಳಗೊಂಡಂತೆ ಕೆಲವು ಸಂಘ–ಸಂಸ್ಥೆಗಳು ನಿಯಮ ಉಲ್ಲಂಘಿಸಿ ಆಂಗ್ಲಭಾಷೆಗೆ ಪ್ರಾಧಾನ್ಯ ನೀಡುತ್ತಿವೆ. ಶಾಲಾ–ಕಾಲೇಜುಗಳು ಪ್ರವೇಶಾತಿ ಅರ್ಜಿ, ಸೂಚನಾ ಪ್ರಕಟಣೆ, ಜಾಹೀರಾತುಗಳನ್ನು ಇಂಗ್ಲಿಷ್‌ನಲ್ಲಿ ಮುದ್ರಿಸುತ್ತಿವೆ. ಈ ಬಗ್ಗೆ ಕನ್ನಡಪರ ಸಂಘಗಳು ಧ್ವನಿ ಎತ್ತಿದರೂ ಪ್ರಯೋಜನವಾಗುತ್ತಿಲ್ಲ. ಆದ್ದರಿಂದ ಸರ್ಕಾರವು ಈ ನಿಟ್ಟಿನಲ್ಲಿ ಕಾನೂನಾತ್ಮಕವಾಗಿ ಅಗತ್ಯ ಕ್ರಮಕೈಗೊಳ್ಳಬೇಕಿದೆ.

ಸಂಪತ್ ಬೆಟ್ಟಗೆರೆ, ಮೂಡಿಗೆರೆ

13 ಅಂಕ ಮತ್ತು ದಾಖಲೆಯ ಫಲಿತಾಂಶ

ಈ ಬಾರಿಯ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಶಿಕ್ಷಣ ಇಲಾಖೆಯು ಸಂಭ್ರಮಿಸುತ್ತಿದೆ. ವಾಸ್ತವದಲ್ಲಿ ನೋಡಿದರೆ 20 ಆಂತರಿಕ ಅಂಕ ನೀಡಿ; ಬಾಹ್ಯ ಅಂಕಗಳನ್ನು ಹದಿಮೂರಕ್ಕೆ ಇಳಿಸಿ, ಈ ಅಂಕ ಪಡೆಯಲು ವಿದ್ಯಾರ್ಥಿಗಳು ಮತ್ತು ಅಂಕ ನೀಡಲು ಶಿಕ್ಷಕರು ನಡೆಸಿದ ಕಸರತ್ತು ಒಂದೆರಡಲ್ಲ. ಮೂರು ಪೂರ್ವಭಾವಿ ಪರೀಕ್ಷೆಗಳನ್ನು ನಡೆಸಿದ್ದು, ಯುದ್ಧಕಾಲೀನ ಶಸ್ತ್ರಾಭ್ಯಾಸವಾಗಿದೆ. ಹದಿಮೂರು ಅಂಕ ಬಂದರೆ ಉತ್ತೀರ್ಣ ಮಾಡುವ ಫಲಿತಾಂಶ ಅದೆಷ್ಟು ಗುಣಮಟ್ಟದಿಂದ ಕೂಡಿದೆ? ದಶಕಗಳ ಹಿಂದೆ 35 ಅಂಕ ಪಡೆದು ಉತ್ತೀರ್ಣನಾದ ವಿದ್ಯಾರ್ಥಿಯನ್ನೂ ಸಮಾಜದಲ್ಲಿ ಗೌರವದಿಂದ ನೋಡಲಾಗುತ್ತಿತ್ತು. ಗುಣಮಟ್ಟದ ಶಿಕ್ಷಣ ಅನಿವಾರ್ಯವೇ ಹೊರತು ಮೌಲ್ಯಗಳಿಲ್ಲದ ಶಿಕ್ಷಣದ ಪ್ರತಿಶತ ಫಲಿತಾಂಶವಲ್ಲ.

ಶೇಖರಗೌಡ ಜಿ. ರಾಮತ್ನಾಳ, ಬೆಂಗಳೂರು

ಇಂಧನ ಸ್ವಾವಲಂಬನೆ ಹಿಂದಿನ ಅನರ್ಥ

ವಾಹನಗಳಲ್ಲಿ ಶೇ 100ರಷ್ಟು ಎಥೆನಾಲ್ ಬಳಕೆ ಮಾಡಿದರೆ ಕಚ್ಚಾತೈಲದ ಆಮದು ಕಡಿಮೆಯಾಗಲಿದೆ ಎನ್ನುವುದು ಸರಿ. ಆದರೆ, ಇಂಥ ಯೋಜನೆಯನ್ನು ಸಂಪೂರ್ಣವಾಗಿ ಪರಿಸರಸ್ನೇಹಿಯೆಂದು ಹೇಳಲು ಸಾಧ್ಯವಿಲ್ಲ. ಎಥೆನಾಲ್ ಉತ್ಪಾದನೆಯು ಬಹುತೇಕ ಕಬ್ಬು ಬೆಳೆಯ ಮೇಲೆ ಅವಲಂಬಿತವಾಗಿದೆ; ಕಬ್ಬು ಹೆಚ್ಚು ನೀರು ಬೇಡುತ್ತದೆ. ಈಗಾಗಲೇ ಒತ್ತಡದಲ್ಲಿರುವ ಭೂಗರ್ಭ ಜಲ ಮತ್ತು ನೀರಾವರಿ ಸಂಪನ್ಮೂಲಗಳ ಮೇಲೆ ಹೆಚ್ಚಿನ ಹೊರೆಯಾಗಲಿದೆ. ಇಂಧನದ ಬೇಡಿಕೆಗೆ ತಕ್ಕಂತೆ ಕಬ್ಬು ಬೆಳೆಯುವ ಕ್ಷೇತ್ರವನ್ನು ವಿಸ್ತರಿಸುವುದು ನೀರಿನ ಅಭಾವವನ್ನು ಮತ್ತಷ್ಟು ಗಂಭೀರಗೊಳಿಸಬಹುದು. ರೈತರು ಆಹಾರಧಾನ್ಯಗಳನ್ನು ಬೆಳೆಯಲು ನಿರ್ಲಕ್ಷ್ಯವಹಿಸಬಹುದು. ಇದು ಆಹಾರದ ಭದ್ರತೆ ಮೇಲೆ ಪರಿಣಾಮ ಬೀರಲಿದೆ. ಎಥೆನಾಲ್ ಬಳಕೆಯಿಂದ ಆರ್ಥಿಕ ಲಾಭಗಳಿದ್ದರೂ ಎಚ್ಚರಿಕೆಯಿಂದ ಪರಿಗಣಿಸಬೇಕಿದೆ.

ಮಂಜುನಾಥ ಶೇಟ, ಶಿರಸಿ

ಚುರುಮುರಿ



ಪೊಲಿಟಿಕಲ್ ಅಡ್ಡೆ!

• ತುರುವೇಕೆರೆ ಪ್ರಸಾದ್

‘ರಾಜಕೀಯ ಕಾಲೇಜು ಶುರು ಮಾಡ್ತಾರಂತಲ್ಲಪ್ಪ, ಇದ್ಕೂ ಸಿಇಟಿ ಇರ್ತದಲ್ವಾ?’ ಕೇಳಿದ ಗುದ್ಲಿಂಗ.

‘ಇದ್ದೇ ಇರ್ತದೆ ಕಣ್ಲಾ, ಕಾಮನ್ ಅಲ್ಲ, ಕ್ರಿಮಿನಲ್ ಎನ್‌ಟ್ರೆನ್ಸ್ ಟೆಸ್ಟ್ ಅಂತ. ಅಂದಂಗೆ, ಇಲ್ಲೂ ಮೀಸಲಾತಿ ಇರ್ತದಾ ಅಂತ?’ ಎಂದ ಮಾಲಿಂಗ.

‘ಮತ್ತೆ? ಕ್ರಿಮಿನಲ್ ಬ್ಯಾಕ್‌ಗ್ರೌಂಡ್ ಇರೋರ ಮಕ್ಕಳಿಗೆ, ರಾಜಕೀಯದಲ್ಲಿರೋರ ಮಕ್ಳಿಗೆ ಮೀಸಲಾತಿ ಮಡುಗ್ಲೇಬೇಕಲ್ಲ! ಏನೇನು ಕಾಂಬಿನೇಷನ್ ಇರ್ತದೋ ಕಾಣೆ’.

‘ಎಲ್ರಿಗೂ ಒಂದೇ ಕಾಂಬಿನೇಷನ್ ಕಣ್ರಲಾ! ಪಿಸಿಎನ್‌ಪಿ! ಅಂದ್ರೆ ಪವರ್, ಕರಪ್ಷನ್, ನೆಪೋಟಿಸಮ್ ಅಂದ್ರೆ ಸ್ವಜನಪಕ್ಷಪಾತ, ಪ್ರಾಪರ್ಟಿ ಗ್ರಾಬಿಂಗ್’.

‘ಸಿಲಬಸ್ಸು, ಟೆಕ್ಸ್ಟ್ ಬುಕ್ ಎಲ್ಲಾ ಇರುತ್ತಲ್ವಾ?’ ಕುತೂಹಲದಿಂದ ಕೇಳಿದ ಕಲ್ಲೇಶಿ.

‘ರಾಜಕೀಯನೇ ಔಟ್ ಆಫ್ ಸಿಲಬಸ್ಸು! ಆದ್ರೂ ಟಿಕೆಟ್ ಗಿಟ್ಟಿಸೋ ಟೆಕ್ನಿಕ್ಸ್, ಎಣ್ಣೆ, ಸೀರೆ, ಪಂಚೆ ಹಂಚೋ ಟ್ರಿಕ್ಸ್, ಕೆರೆ, ಕಾಡು ಒತ್ತುವರಿ ಮಾಡೋದು ಎಂಗೆ, ಜೊತೆಗೆ ಗ್ಯಾರಂಟಿ ಕೊಡೋದು, ಲಕ್ಷ ಕೋಟಿ ಸಾಲ ಎತ್ತೋ ಕಲೇಲಿ ಸ್ಪೆಷಲೈಸೇಷನ್ ಇರ್ತದೆ ಕಣ್ರಲಾ...’

‘ಆಮೇಲೆ ಪರ್ಸಂಟೇಜ್ ಪಾಲಿಟಿಕ್ಸ್ ಅಂತ ಒಂದು ಮೈನ್‌ಬ್ರಾಂಚ್ ಐತೆ. ಇಡಿ, ಲೋಕಾಯುಕ್ತಕ್ಕೆ ಚಳ್ಳೆಹಣ್ಣು ತಿನ್ನೋದೆಂಗೆ? ಧರಣಿ, ಮಾಡೋದು ಹೆಂಗೆ? ಇವೆಲ್ಲಾ ಇರುತ್ತೆ. ಟೆಂಪಲ್ ರನ್ನು, ನಾಟಿಕೋಳಿ ತಿನ್ನು, ಮಾಟಕ್ಕೂ ಸೈ, ಮೈಮಾಟಕ್ಕೂ ಸೈ, ಮೇಲೆ ಗರಿಗರಿ ಒಳಗೆ ಗೂಂಡಾಗಿರಿ! ಹೊರಗೆ ವೆಲ್‌ನೆಸ್ ಸ್ಟೇಟು, ಒಳಗೆ ರಿಯಲ್ ಎಸ್ಟೇಟು, ಇವೆಲ್ಲಾ ಕೋರ್ ಸಬ್ಜೆಕ್ಟ್ಸ್!’

‘ಜೊತೆಗೆ ಸದನದಲ್ಲಿ ಬೈದಾಡೋಕೆ ಥರ್ಡ್(ಕ್ಲಾಸ್) ಲಾಂಗ್ವೇಜೂ ಕಲಿಸ್ತಾರೆ. ಅದ್ಸರಿ, ಹೊಸ ಕಾಲೇಜುಗಳಿಗೆ ಕೋಟಿಗಟ್ಲೆ ದುಡ್ಡು ಎಲ್ಲಿಂದ ತರೋದು?’

‘ಹೊಸದು ಯಾಕ್ಲಾ ತೆಗೀಬೇಕು? ಈಗಿರೊ ಕಾಲೇಜಲ್ಲೇ ರಾಜಕೀಯ ತಾಂಡವವಾಡ್ತೈತೆ. ಒಬ್ಬೊಬ್ಬ ಮಂತ್ರಿಗೆ ಒಂದೊಂದು ಕಾಲೇಜು ಉಸ್ತುವಾರಿ ಕೊಟ್ರೆ ಸಾಕು... ಎಂಜಿನಿಯರಿಂಗ್, ಮೆಡಿಕಲ್ ಎಲ್ಲಾ ಕಾಲೇಜ್ನೂ ಅವರು ಪೊಲಿಟಿಕಲ್ ಅಡ್ಡೆ ಮಾಡಾಕ್ತಾರೆ’ ಎಂದ ಪರ್ಮೇಶಿ.

ಎಲ್ಲಾ ಕಣ್ ಕಣ್ ಬಿಟ್ಟರು.

ಸಂಗತ

ತಬರನೂ ಇದ್ದಾನೆ, ಜಡ ಕಚೇರಿಗಳೂ ಇವೆ!

ಕಡತಗಳ ನಡುವೆ ಸಿಲುಕಿಕೊಂಡಿದ್ದ ಶ್ರೀಸಾಮಾನ್ಯನ ಭವಿಷ್ಯ ಈಗ ಡಿಜಿಟಲ್ ಕೆವೈಸಿ, ಆಧಾರ್, ಒಟಿಪಿ, ಫಿಂಗರ್ ಪ್ರಿಂಟ್ ಇತ್ಯಾದಿಗಳ ಮಧ್ಯೆ ಸಿಲುಕಿ ಉಸಿರುಗಟ್ಟುತ್ತಿದೆ.


• ಸದಾಶಿವ ಸೊರಟೂರು

ಅಂಚೆ ಕಚೇರಿಗೆ ಪುಸ್ತಕವೊಂದನ್ನು ‘ಗ್ಯಾನ್ ಪೋಸ್ಟ್’ ಮೂಲಕ ಕಳಿಸಲು ಹೋಗಿದ್ದೆ. ಕೌಂಟರ್‌ನಲ್ಲಿ ಇದ್ದವರಿಗೆ ‘ಗ್ಯಾನ್ ಪೋಸ್ಟ್’ ಎನ್ನುವ ಒಂದು ಸೇವೆ ಇರುವುದೇ ತಿಳಿದಿರಲಿಲ್ಲ. ಅದನ್ನು ಹೇಗೆ ಮಾಡಬೇಕು ಅನ್ನುವುದೂ ಗೊತ್ತಿರಲಿಲ್ಲ. ಅವರಿಗೆ ಅದನ್ನೆಲ್ಲ ಹೇಳಿ ಮಾಡಿಸಿದೆ. ಅವರು ಕೀಬೋರ್ಡ್‌ನ ಒಂದೊಂದೇ ಗುಂಡಿಗಳನ್ನು ಹುಡುಕಿ ಹುಡುಕಿ ಒತ್ತಿ ಪ್ರಕ್ರಿಯೆ ಮುಗಿಸಲು ಒಂದು ಗಂಟೆಯೇ ಬೇಕಾಯ್ತು. ನನ್ನ ಹಿಂದೆ ದೊಡ್ಡ ಸಾಲೂ ಇತ್ತು.

ಇತ್ತೀಚೆಗೆ ನನ್ನ ಶಿಕ್ಷಕಮಿತ್ರರೊಬ್ಬರು ಶಿಕ್ಷಣ ಇಲಾಖೆಯಲ್ಲಿ ಮೂರು ವರ್ಷದಿಂದ ಕಾದಿದ್ದ ತಮ್ಮ ಕಡತವೊಂದಕ್ಕೆ ಮುಕ್ತಿ ಕಾಣಿಸಲು ಹೆಣಗಾಡಿದರು. ಎಲ್ಲಾ ಆಗಿಯೂ ಕೊನೆಗೆ ‘ತಾಂತ್ರಿಕ’ ಕಾರಣಗಳನ್ನು ಹೇಳಿ ಸತಾಯಿಸಿದ ಪರಿ ಇದೆಯಲ್ಲ, ಅದು ವ್ಯವಸ್ಥೆಯ ಬಗ್ಗೆ ಹೇಸಿಗೆ ಹುಟ್ಟಿಸಿಬಿಡುತ್ತದೆ. ನಮ್ಮ ಕಚೇರಿಗಳು ಕೆಲಸ ಮಾಡುವುದಕ್ಕಿಂತಲೂ, ಆಗಬಹುದಾದ ಕೆಲಸವನ್ನು ಮುಂದೂಡುವುದರಲ್ಲಿ ಅಥವಾ ಮಾಡದೇ ಇರುವುದರಲ್ಲಿ ವಿಶ್ವಕ್ಕೇ ಮಾದರಿ ಆಗುವಂತಿವೆ.

ಇಂದಿಗೂ ಯಾವ ಕಾರಣವೂ ಇಲ್ಲದೆ ಕಚೇರಿಗಳಲ್ಲಿ ರಾಶಿಗಟ್ಟಲೆ ಕಡತಗಳು ವಿಲೇವಾರಿಯಾಗದೆ ಉಳಿದಿವೆ. ನಾಗರಿಕರಿಗೆ ಸಕಾಲದಲ್ಲಿ ಯಾವ ಕೆಲಸ ಆಗಬೇಕೋ ಅದು ಆಗದೆ ಅಲೆದಾಡುತ್ತಾರೆ, ತೊಂದರೆ ಅನುಭವಿಸುತ್ತಾರೆ. ಕೆಲವೊಮ್ಮೆ ಕ್ಷುಲ್ಲಕ ಕಾರಣಕ್ಕಾಗಿ ಚುರುಕಾಗಿ ನಡೆಯಬೇಕಿದ್ದ ಕೆಲಸಗಳು ಚಲನೆ ಮರೆತು ನಿಂತಲ್ಲಿಯೇ ನಿಂತುಬಿಡುತ್ತವೆ. ಕೆಲವು ನಿಮಿಷಗಳ ಕೆಲಸಕ್ಕೆ ದಿನಗಟ್ಟಲೆ ಕಾಯುತ್ತಾ ಕೂರುವುದು, ಹಣ ಖರ್ಚು ಮಾಡಿಸುವುದು, ಅಸಹಾಯಕ ನಾಗರಿಕರು ನಷ್ಟಕ್ಕೆ ಒಳಗಾಗುವುದು... ಈ ಕ್ರಿಯೆಗಳಿಂದ ಸರ್ಕಾರದ ಆಡಳಿತಯಂತ್ರ ನಿಧಾನಗೊಳ್ಳುತ್ತದೆ ಹಾಗೂ ನಾಗರಿಕರ ಗುಣಾತ್ಮಕ ಬದುಕು ಗಾಸಿಗೊಳ್ಳುತ್ತದೆ.

ಕಥೆಗಾರ ಪೂರ್ಣಚಂದ್ರ ತೇಜಸ್ವಿ ಅವರ ‘ತಬರನ ಕತೆ’ಯ ತಬರ ಈಗಲೂ ನಮ್ಮ ನಡುವೆ ಜೀವಂತವಾಗಿದ್ದಾನೆ. ಅವನು ಅವನದಲ್ಲದ ತಪ್ಪಿಗೆ ಇಂದಿಗೂ ಕಚೇರಿಗೆ ಅಲೆಯುತ್ತಿದ್ದಾನೆ. ಅಂತಹ ಕಚೇರಿಗಳು ಈಗ ಹೆಚ್ಚಾಗಿವೆ, ತಬರರೂ ಹೆಚ್ಚಾಗಿದ್ದಾರೆ. ಇದಕ್ಕೆ ಕಾರಣ, ಆಡಳಿತ ವ್ಯವಸ್ಥೆಯಲ್ಲಿನ ಜಡತ್ವ ಹಾಗೂ ಆ ವ್ಯವಸ್ಥೆಯ ಭಾಗವಾದ ನೌಕರರ ದುರಾಸೆ ಜನಸಾಮಾನ್ಯರ ಬದುಕನ್ನು ಹೈರಾಣಾಗಿಸುತ್ತದೆ. ಕೆಲವು ಅಧಿಕಾರಿಗಳಿಗೆ ತಾಂತ್ರಿಕ ಜ್ಞಾನದ ಕೊರತೆಯೂ ಇದೆ. ಆದರೆ, ಆ ಕೊರತೆ ಬಹುತೇಕ ಸಂದರ್ಭಗಳಲ್ಲಿ ಸಹಜ ಆದುದ್ದಾಗಿರದೇ, ಕಲಿಕೆಗೆ ಬೆನ್ನುಹಾಕಿದ ಜಡ ಮನೋಧರ್ಮಕ್ಕೆ ಸಂಬಂಧಿಸಿದ್ದಾಗಿರುತ್ತದೆ.



ನಾವೀಗ ‘ಡಿಜಿಟಲ್ ಇಂಡಿಯಾ’ದ ಭಾಗವಾಗಿದ್ದೇವೆ. ಆದರೆ, ಈ ಡಿಜಿಟಲ್ ಕ್ರಾಂತಿಯ ಲಾಭ ಕಟ್ಟಕಡೆಯ ನಾಗರಿಕನಿಗೆ ತಲಪಬೇಕಾದರೆ, ಆ ವ್ಯವಸ್ಥೆಯನ್ನು ನಿರ್ವಹಿಸುವ ‘ಮಾನವ ಸಂಪನ್ಮೂಲ’ ಅಷ್ಟೇ ವೇಗವಾಗಿ ಅಪ್‌ಡೇಟ್ ಆಗಬೇಕು. ಜನಸಾಮಾನ್ಯರ ಬದುಕನ್ನು ಹಸನುಗೊಳಿಸದೆ ಹೋದರೆ ‘ಡಿಜಿಟಲ್ ಇಂಡಿಯಾ’ ಘೋಷಣೆ ಆಕರ್ಷಕ ಶಬ್ದವಾಗಿಯಷ್ಟೇ ಉಳಿಯುತ್ತದೆ. ಹೊಸ ಯೋಜನೆಗಳು ಜಾರಿಗೆ ಬಂದಾಗ ಕಡತಗಳಲ್ಲಿ ಅವುಗಳ ಬಗ್ಗೆ ಆದೇಶಗಳು ಹೊರಬೀಳುತ್ತವೆ. ಯೋಜನೆಗಳನ್ನು ಜನರಿಗೆ ತಲಪಿಸಬೇಕಾದ ತಳಮಟ್ಟದ ಸಿಬ್ಬಂದಿಗೆ ತರಬೇತಿ ನೀಡಿದರೂ ಅದರ ಪರಿಣಾಮ ಯಾಕೆ ನಿರೀಕ್ಷೆಯಂತಿಲ್ಲ ಎಂಬುದು ಯಕ್ಷಪ್ರಶ್ನೆ. ಒಮ್ಮೊಮ್ಮೆ ತಂತ್ರಜ್ಞಾನವು ನಾಗರಿಕರಿಗೆ ವರದಾನವಾಗುವ ಬದಲು ಹೊಸ ರೂಪದ ತಲೆನೋವಾಗಿ ಪರಿಣಮಿಸುತ್ತದೆಯೇನೊ ಅನಿಸುತ್ತದೆ.

ಸರ್ಕಾರಿ ಕಚೇರಿಗಳಲ್ಲಿ ಬ್ರಹ್ಮಾಸ್ತ್ರದಂತೆ ಬಳಕೆಯಾಗುವ ಕಾರಣಗಳಲ್ಲೊಂದು, ‘ಸರ್ವರ್ ಡೌನ್’. ಈ ಒಂದು ಸಬೂಬಿನ ಹಿಂದೆ ಕೆಲಸ ಮಾಡದ ಸೋಮಾರಿತನವೋ ಅಥವಾ ತಾಂತ್ರಿಕ ಅಸಹಾಯಕತೆಯೋ ಅಡಗಿರಬಹುದು. ಹಿಂದೆ ಕಚೇರಿಗಳಲ್ಲಿ ಕಾಗದದ ಕಡತಗಳು ದೂಳು ಹಿಡಿಯುತ್ತಿದ್ದವು. ಇಂದು ಡಿಜಿಟಲ್ ಕಡತಗಳು ತಾಂತ್ರಿಕ ಕಾರಣಗಳ ಗೋಜಲಿನಲ್ಲಿ ಸಿಲುಕಿವೆ. ತಂತ್ರಜ್ಞಾನವು ನಮ್ಮ ಕೆಲಸವನ್ನು ಸುಲಭಗೊಳಿಸಬೇಕೇ ಹೊರತು ಸಂಕೀರ್ಣಗೊಳಿಸಬಾರದು, ನಾಗರಿಕರನ್ನು ಸತಾಯಿಸುವ ಅಸ್ತ್ರವಾಗಬಾರದು. ಕಂಪ್ಯೂಟರ್ ಕೀಬೋರ್ಡ್ ಮೇಲೆ ಗುಂಡಿಗಳನ್ನು ಹುಡುಕುವ ಗುಮಾಸ್ತನಿಗೆ ಆ ತಾಂತ್ರಿಕತೆಯು ಶಾಪವಾಗಿ ಕಂಡರೆ, ಆ ಸಾಲಿನಲ್ಲಿ ನಿಂತಿರುವ ನಾಗರಿಕನಿಗೆ ಅದು ಕಾಲಹರಣದಂತೆ ಕಾಣಿಸುತ್ತದೆ. ಈ ಯಾಂತ್ರಿಕ ಪ್ರಕ್ರಿಯೆಯಲ್ಲಿ ನಾಗರಿಕನ ಸಮಯ ಮತ್ತು ಹಣ ಎರಡೂ ಪೋಲಾಗುತ್ತವೆ.

ಕೆವೈಸಿ, ಆಧಾರ್, ಒಟಿಪಿ, ಫಿಂಗರ್ ಪ್ರಿಂಟ್... ಇತ್ಯಾದಿಗಳ ಮಧ್ಯೆ ಜನಸಾಮಾನ್ಯರ ಬದುಕು ಸಿಕ್ಕಿಹಾಕಿಕೊಂಡಿದೆ. ಅವನು ಅಸಹಾಯಕನಾಗಿ ನಿಂತಿದ್ದಾನೆ. ಅಂದು ಕಾಗದದ ಕಡತಗಳಿದ್ದವು, ಇಂದು ಸ್ಕ್ರೀನ್ ಮೇಲಿನ ಡೇಟಾ ಇದೆ. ಆದರೆ, ಅಂದು ಮತ್ತು ಇಂದು ಬದಲಾಗದೇ ಉಳಿದಿರುವುದು ನಾಗರಿಕನ ಪರದಾಟ. ಕಚೇರಿಗಳ ವಿನ್ಯಾಸ ಬದಲಾಗಿದೆ, ಸಿಬ್ಬಂದಿ ಕೈಗೆ ಕಂಪ್ಯೂಟರ್ ಬಂದಿದೆ. ಜನಸಾಮಾನ್ಯರ ಕೆಲಸಗಳನ್ನು ಶೀಘ್ರವಾಗಿ ಮಾಡಿಕೊಡಬೇಕು ಎನ್ನುವ ಸಂವೇದನೆ ಇನ್ನೂ ಬರಬೇಕಿದೆ.

ಯಂತ್ರಗಳು ಹೊಸತಾದರೆ ಸಾಲದು, ನೌಕರನು ಮತ್ತೆ ಮತ್ತೆ ಹೊಸತನ ರೂಢಿಸಿಕೊಳ್ಳಬೇಕು. ಪ್ರತಿ ಕಚೇರಿಯೂ ನಾಗರಿಕ ಸ್ನೇಹಿಯಾಗಬೇಕು. ಆಡಳಿತದಲ್ಲಿನ ವಿಳಂಬ ಧೋರಣೆ ಎಂಬುದು ನಾಗರಿಕರ ಗುಣಾತ್ಮಕ ಬದುಕನ್ನು ದುರ್ಬಲಗೊಳಿಸುತ್ತದೆ.

ತಬರನಂತಹ ಅಸಂಖ್ಯಾತ ಜೀವಗಳು ಇಂದಿಗೂ ಸರ್ಕಾರಿ ಕಚೇರಿಯ ಮೆಟ್ಟಿಲುಗಳನ್ನು ಹತ್ತಿ ಇಳಿಯುತ್ತಿವೆ. ತಬರ ನಮ್ಮ ನಡುವೆಯಿಂದ ಕಣ್ಮರೆಯಾಗುವ ದಿನಗಳು ಬೇಗನೆ ಬರಲಿ. ಕೇಂದ್ರ ಸರ್ಕಾರದ ‘ಡಿಜಿಟಲ್ ಇಂಡಿಯಾ’ ಘೋಷಣೆಯಾಗಿಯಷ್ಟೇ ಉಳಿಯದೆ, ಜನಪರವಾಗಿ ಅನುಷ್ಠಾನಕ್ಕೆ ಬರಲಿ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಚಾರಣಕ್ಕೆ ಬೇಕು ಸಿದ್ಧತೆ, ಶಿಸ್ತು ಮತ್ತು ಮುನ್ನೆಚ್ಚರಿಕೆ

• ಜಯಸಿಂಹ ಆರ್.

ಚಾರಣ ಎಂಬುದು ಒಂದು ಸಾಹಸ ಕ್ರೀಡೆ. ಚಾರಣ ಕೈಗೊಳ್ಳುವುದಕ್ಕೂ ಮುನ್ನ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಮತ್ತು ಚಾರಣದ ವೇಳೆ ಕೆಲವು ಮುನ್ನೆಚ್ಚರಿಕೆಗಳನ್ನು ವಹಿಸಲೇಬೇಕು. ಆದರೆ, ಯಾವ ಸಿದ್ಧತೆ ಮತ್ತು ಮುನ್ನೆಚ್ಚರಿಕೆ ಇಲ್ಲದೆ ಚಾರಣ ಕೈಗೊಂಡು ಅಪಾಯಕ್ಕೆ ಸಿಲುಕಿದ ಹಾಗೂ ಚಾರಣಿಗರು ಮೃತಪಟ್ಟ ಹಲವು ನಿದರ್ಶನಗಳು ನಮ್ಮ ಮುಂದೆ ಇವೆ. ಕೊಡಗು ಜಿಲ್ಲೆಯ ತಡಿಯಾಂಡಮೋಳ್‌ನಲ್ಲಿ ಕೇರಳದ ಯುವತಿ ನಾಪತ್ತೆಯಾಗಿ, ಮೂರು ದಿನಗಳ ನಂತರ ಪತ್ತೆಯಾದ ಪ್ರಕರಣ ಹಾಗೂ ಚಿಕ್ಕಮಗಳೂರಿನ ಮಾಣಿಕ್ಯಧಾರಾ ಜಲಪಾತದ ಬಳಿ ಕೇರಳದ ಬಾಲಕಿ ನಾಪತ್ತೆಯಾಗಿ, ಶವವಾಗಿ ಪತ್ತೆಯಾದ ಪ್ರಕರಣ ಚಾರಣದಲ್ಲಿ ಎದುರಾಗಬಹುದಾದ ಅಪಾಯಗಳನ್ನು ನಮ್ಮೆದುರು ತೆರೆದಿರಿಸಿವೆ.

ಚಾರಣಿಗರ ಸುರಕ್ಷತೆಯನ್ನು ಹೆಚ್ಚಿಸುವ ಸಲುವಾಗಿ ಅರಣ್ಯ ಇಲಾಖೆಯು ಒಂದು ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ರೂಪಿಸಿದೆ. ಚಾರಣಿಗರು, ಮಾರ್ಗದರ್ಶಕರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಅನುಸರಿಸಬೇಕಾದ ನಿಯಮಗಳನ್ನು ಎಸ್‌ಒಪಿಯಲ್ಲಿ ವಿವರಿಸಿದೆ. ಇದು ಜಾಗತಿಕ ಮಟ್ಟದಷ್ಟೇ ಕಟ್ಟುನಿಟ್ಟಿನ ಎಸ್‌ಒಪಿ ಆದರೂ, ಕೆಲವು ಪ್ರಮುಖ ಅಂಶಗಳು ಕೈಬಿಟ್ಟುಹೋಗಿವೆ. ಅದಲ್ಲದೇ, ಅರಣ್ಯ ಇಲಾಖೆ ವ್ಯಾಪ್ತಿಯ 44 ಚಾರಣ ಪಥಗಳಿಗಷ್ಟೇ ಇದು ಅನ್ವಯವಾಗುತ್ತದೆ ಎಂಬುದು ಇದರ ದೊಡ್ಡ ಮಿತಿ. ಏಕೆಂದರೆ, ಈ 44 ಚಾರಣ ಪಥಗಳನ್ನು ಹೊರತುಪಡಿಸಿ ರಾಜ್ಯದಲ್ಲಿ ಇನ್ನೂ ಹಲವು ಚಾರಣ ಪಥಗಳಿವೆ.

ಶಿವಗಂಗೆ, ಸಿದ್ಧರಬೆಟ್ಟ, ಪರ್ಲ್‌ವ್ಯಾಲಿಯಂತಹ ಕಡಿಮೆ ಅಂತರದ ಚಾರಣಗಳು, ಚಾರ್ಮಾಡಿ, ಎಡಕುಮೇರಿ–ಕಾಗಿನಹರೆ, ಎಣ್ಣೆಹೊಳೆ, ಭೀಮೇಶ್ವರ, ನೇತ್ರಾವತಿ ಉಗಮ, ಬಿಸಿಲೆಯಂತಹ ಬಹು ದೂರದ ಚಾರಣ ಪಥಗಳಲ್ಲೂ ಸಿದ್ಧತೆ ಮತ್ತು ಮುನ್ನೆಚ್ಚರಿಕೆ ಇಲ್ಲದೆ ಅಡಿಯಿಟ್ಟರೆ ಅಪಾಯ ಕಟ್ಟಿಟ್ಟ ಬುತ್ತಿ. ಇವೆಲ್ಲಾ ಅರಣ್ಯ ಇಲಾಖೆಯ ಅನುಮೋದಿತ ಚಾರಣ ಪಥಗಳಲ್ಲಿ ಇಲ್ಲ. ಚಾರಣ ಕೈಗೊಳ್ಳುವುದಕ್ಕೂ ಮುನ್ನ ಏನೆಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದರ ಮಾಹಿತಿ ಚಾರಣ ತಂಡದ ಮುಂದಾಳುವಿಗೆ ಇರಬೇಕು. ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸಕ್ರೀಡಾ ಅಕಾಡೆಮಿ ಆಯೋಜಿಸುವ ಚಾರಣ, ಬಂಡೆ ಏರುವ ಕಾರ್ಯಾಗಾರಗಳಲ್ಲಿ ಭಾಗಿಯಾದರೆ, ಒಂದುಮಟ್ಟಿನ ತರಬೇತಿ ದೊರೆತಂತಾಗುತ್ತದೆ. ಅದನ್ನೇ ಚಾರಣಕ್ಕೂ ಅಳವಡಿಸಿಕೊಂಡರೆ ಹಲವು ಅಪಾಯಗಳನ್ನು ತಪ್ಪಿಸಬಹುದು.

ಚಾರಣದ ವೇಳೆ ಕೆಲವು ಶಿಸ್ತುಗಳನ್ನು ಪಾಲಿಸುವುದು ಅತ್ಯಗತ್ಯ. ಪ್ರತಿ ಚಾರಣದ ಗುಂಪಿನಲ್ಲಿ ಒಬ್ಬರು ಮುಂದಾಳತ್ವ ವಹಿಸಿಕೊಳ್ಳಬೇಕು. ಆ ತಂಡದಲ್ಲಿರುವವರು ಅವರ ಮಾತನ್ನು ಕೇಳುವಂತಿರಬೇಕು. ಚಾರಣದ ವೇಳೆ ಇಡಿಯ ತಂಡ ಒಂದು ಗುಂಪಿನಲ್ಲಿ ಒಬ್ಬರ ಹಿಂದೆ ಒಬ್ಬರಂತೆ ಮುಂದುವರಿಯಬೇಕು. ಮೊದಲು ಮತ್ತು ಕೊನೆಯಲ್ಲಿ ಇರುವವರು ಯಾರು ಎಂಬುದನ್ನು ಗೊತ್ತುಪಡಿಸಬೇಕು. ತಂಡದ ಯಾರೂ ತನಗಿಂತ ಮುಂದೆ ಹೋಗದಂತೆ ನೋಡಿಕೊಳ್ಳುವ ಹೊಣೆ ಮೊದಲಿನಲ್ಲಿರುವ ವ್ಯಕ್ತಿಯದ್ದು, ಯಾರೂ ತನಗಿಂತ ಹಿಂದೆ ಉಳಿಯದಂತೆ ಎಚ್ಚರಿಕೆ ವಹಿಸುವ ಹೊಣೆ ಕಡೆಯ ವ್ಯಕ್ತಿಯದ್ದು.

ಚಾರಣದ ವೇಳೆ ಪ್ರತಿಯೊಬ್ಬರೂ ಪರಸ್ಪರ ಮಾತನಾಡುತ್ತಾ, ತಮ್ಮ ಗುರುತಿಗೆ ಸಂಖ್ಯೆಗಳನ್ನು ಹೇಳಿಕೊಳ್ಳುತ್ತಾ ಮುಂದುವರಿಯುವುದರಿಂದ ಯಾರೊಬ್ಬರು ತಪ್ಪಿಸಿಕೊಂಡರೂ ತಕ್ಷಣವೇ ಗೊತ್ತಾಗುತ್ತದೆ. ಒಬ್ಬರಿಗೆ ಸುಸ್ತಾದರೆ, ಪ್ರತಿಯೊಬ್ಬರೂ ವಿಶ್ರಮಿಸಿಯೇ ಮುಂದುವರಿಯುವ ಶಿಸ್ತನ್ನು ಕಡ್ಡಾಯವಾಗಿ ಪಾಲಿಸಬೇಕು. ಜಗತ್ತಿನ ಬಹುಖ್ಯಾತ ಚಾರಣ ಕ್ಲಬ್‌ಗಳು ರೂಢಿಸಿಕೊಂಡಿರುವ ಎಸ್‌ಒಪಿ ಇವು. ನಮ್ಮಲ್ಲಿಯೂ ಇವು ಅನುಕೂಲಕ್ಕೆ ಬರುವುದರಲ್ಲಿ ಅನುಮಾನವಿಲ್ಲ.

ದೇಹವನ್ನು ಒಗ್ಗಿಸಿಕೊಳ್ಳುವುದು

ಚಾರಣವನ್ನು ಯೋಜಿಸುವುದಕ್ಕೂ ಮುನ್ನ ತಮ್ಮ-ತಮ್ಮ ದೈಹಿಕ ಸಾಮರ್ಥ್ಯವನ್ನು ಅರಿತುಕೊಳ್ಳುವುದು ಮತ್ತು ಸ್ಥಿರಗೊಳಿಸಿಕೊಳ್ಳುವುದು ಮುಖ್ಯ. ಬಿರುಸಿನ ನಡಿಗೆ, ಮೆಟ್ಟಿಲುಗಳನ್ನು ಹತ್ತಿಳಿಯುವುದು, ಭಾರವನ್ನು ಹೊತ್ತು ನಡೆಯುವುದು ಮೊದಲಾದ ದೈಹಿಕ ಶ್ರಮದ ಕೆಲಸವನ್ನು ಮಾಡಬೇಕು. ಚಾರಣದ ಹೊತ್ತಿಗೆ ನಮ್ಮ ದೇಹ ಸಿದ್ಧಗೊಳಿಸಿಕೊಳ್ಳಲು ಮತ್ತು ಮನೋಸ್ಥೈರ್ಯವನ್ನು ರೂಪಿಸಿಕೊಳ್ಳಲು ಇದು ಸಹಕಾರಿಯಾಗಲಿದೆ. ಈ ರೀತಿಯ ದೈಹಿಕ ಶ್ರಮಗಳನ್ನು ಮಾಡಿದಂತೆಯೇ ಆಹಾರದ ಸ್ವರೂಪ ಮತ್ತು ಪ್ರಮಾಣ ಬದಲಾಗುತ್ತದೆ. ಅದಕ್ಕೆ ದೇಹವನ್ನು ಒಗ್ಗಿಸಿಕೊಂಡರೆ ಚಾರಣದ ವೇಳೆ ಅನುಕೂಲಕ್ಕೆ ಬರಲಿದೆ.

ಕಿಟ್ ಪರಿಪೂರ್ಣವಾಗಿರಲಿ

ಚಾರಣದ ಅತ್ಯಂತ ಪ್ರಮುಖ ಸಿದ್ಧತೆಗಳಲ್ಲಿ ಕಿಟ್‌ಗೆ ಮಹತ್ವದ ಪಾತ್ರವಿದೆ. ಚಾರಣದ ಗುಂಪಿನಲ್ಲಿ ಎಷ್ಟೇ ಜನರಿದ್ದರೂ, ಪ್ರತಿಯೊಬ್ಬರು ಪ್ರತ್ಯೇಕ ಕಿಟ್ ಸಿದ್ಧಪಡಿಸಿಕೊಳ್ಳುವುದು ಅತ್ಯಗತ್ಯ. ಚಾರಣದಲ್ಲಿ ಒಬ್ಬರು ತಪ್ಪಿಸಿಕೊಂಡರೆ, ಅವರ ಬಳಿ ಈ ಕಿಟ್ ಇಲ್ಲದಿದ್ದರೆ ಸಂಪೂರ್ಣವಾಗಿ ಅಸಹಾಯಕರಾಗುತ್ತಾರೆ. ಹೀಗಾಗಿ ಪ್ರತಿಯೊಬ್ಬರ ಬಳಿ ಇಂತಹ ಕಿಟ್ ಇರಲೇಬೇಕು. ಕಿಟ್‌ನಲ್ಲಿ ಇರಲೇಬೇಕಾದ ವಸ್ತುಗಳು ಇವು

- ಒಂದು ದಿನದ ಚಾರಣವಾದರೂ, ಕನಿಷ್ಠ ಮೂರು ದಿನಗಳಿಗೆ ಅಗತ್ಯವಿರುವಷ್ಟು ಆಹಾರ ಪದಾರ್ಥ ಕಿಟ್‌ನಲ್ಲಿ ಇರಲಿ. ಒಂದೊಮ್ಮೆ ಕಾಡಿನಲ್ಲಿ ತಪ್ಪಿಸಿಕೊಂಡರೆ ಒಂದೆರಡು ದಿನಗಳಿಗಾಗುವಷ್ಟು ಆಹಾರ ಇರಬೇಕು. ಆಗ ಕಾಡಿನಲ್ಲಿ ಬದುಕುಳಿಯುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ
- ಲಘು ಮತ್ತು ಪ್ರೋಟೀನ್‌ಯುಕ್ತ ಆಹಾರ ಕಿಟ್‌ನಲ್ಲಿರಬೇಕು. ಒಣ ಹಣ್ಣುಗಳು, ತಿನ್ನಲು ಸಿದ್ಧವಿರುವ ಪ್ರೋಟೀನ್‌ಯುಕ್ತ ಆಹಾರ, ಶಕ್ತಿಪೇಯಗಳು, ಕನಿಷ್ಠ ನಾಲ್ಕು ಲೀಟರ್‌ನಷ್ಟು ನೀರು ಒಬ್ಬೊಬ್ಬರ ಕಿಟ್‌ನಲ್ಲಿ ಇರಲಿ
- ಕತ್ತಲಲ್ಲಿ ಬಹುದೂರಕ್ಕೆ ಬೆಳಕು ಚೆಲ್ಲುವಂತಹ ಟಾರ್ಚ್ ಪ್ರತಿಯೊಬ್ಬರ ಬಳಿ ಇರಲೇಬೇಕು. ಚಾರಣದ ವೇಳೆ ಕತ್ತಲಾದರೆ ನಡೆಯಲು ಇದು ನೆರವಿಗೆ ಬರುತ್ತದೆ. ಒಂದೊಮ್ಮೆ ಕಾಡಿನಲ್ಲಿ ಕಳೆದುಹೋದರೆ, ಕತ್ತಲಲ್ಲಿ ರಕ್ಷಣಾ ಕಾರ್ಯಾಚರಣೆಗೆ ಟಾರ್ಚ್ ಅನುಕೂಲಕ್ಕೆ ಬರುತ್ತದೆ. ಕಿ.ಮೀ.ಗಳಷ್ಟು ದೂರವಿದ್ದರೂ, ಬರಿಯ ಟಾರ್ಚ್ ಹಾಕುವ ಮೂಲಕ ತಾವು ಎಲ್ಲಿದ್ದೇವೆ ಎಂಬುದರ ಬಗ್ಗೆ ರಕ್ಷಣಾ ಸಿಬ್ಬಂದಿಗೆ ಸುಳಿವು ಕೊಡಲು ಸಾಧ್ಯ
- ಅತ್ಯಗತ್ಯ ಔಷಧಗಳು, ದಣಿವಾದರೆ ಶಕ್ತಿವರ್ಧಕ ಪೌಡರ್‌ಗಳು–ಒಆರ್‌ಎಸ್, ಪ್ರಥಮ ಚಿಕಿತ್ಸೆಗೆ ಬೇಕಾದ ವಸ್ತುಗಳು ಪ್ರತಿಯೊಬ್ಬರ ಕಿಟ್‌ನಲ್ಲಿ ಇರಬೇಕು
- ಪ್ರತಿಯೊಬ್ಬರ ಬಳಿ ವಿಶಲ್ ಇರಬೇಕು. ಚಾರಣದ ವೇಳೆ ಪರಸ್ಪರರ ಮಧ್ಯೆ ಅಂತರ ಹೆಚ್ಚಾದರೆ, ಮತ್ತೊಬ್ಬರನ್ನು ಕರೆಯಲು ಇದು ಅನುಕೂಲಕ್ಕೆ ಬರುತ್ತದೆ. ಕಾಡಿನಲ್ಲಿ ತಪ್ಪಿಸಿಕೊಂಡ ಸಂದರ್ಭದಲ್ಲೂ ಬಹುದೂರದವರೆಗೆ ಸಂವಹನ ನಡೆಸಲು ವಿಶಲ್ ಅತ್ಯುತ್ತಮ ಸಾಧನ
- ಬ್ಯಾಟರಿಪ್ಯಾಕ್, ಟಾರ್ಚ್‌ಗಳಿಗೆ ಹೆಚ್ಚುವರಿ ಬ್ಯಾಟರಿಸೆಲ್‌ಗಳು, ಕೈಯಲ್ಲಿ ತಿರುಗಿಸಿ ಫೋನ್ ಚಾರ್ಜ್ ಮಾಡಬಹುದಾದ ಸಾಧನಗಳು
- ಸಡಿಲವಾದ ನೆಲ, ಬಂಡೆಗಲ್ಲುಗಳು, ಕಡಿದಾದ ನೆಲದಲ್ಲಿ ನಡೆದಾಡಲು ಅನುಕೂಲವಾಗುಂತಹ ಕ್ಯಾನ್ವಾಸ್ ಷೂಗಳು, ಮೌಂಟೇನ್ ಷೂಗಳು, ಸಡಿಲವಾದ ಆದರೆ, ಗಟ್ಟಿಯಾದ ಬಟ್ಟೆ, ಹೊರಲು ಆರಾಮದಾಯಕವಾದ ಬ್ಯಾಗ್, ನೆಲಕ್ಕೆ ಊರಲು ಗಟ್ಟಿಯಾದ ಊರುಗೋಲು ಚಾರಣವನ್ನು ಸುರಕ್ಷಿತವಾಗಿಸುತ್ತವೆ



ದಿಕ್ಸೂಚಿ ಮತ್ತು ನಕ್ಷೆ ಬಳಕೆ

ಈಗ ಚಾರಣ ಕೈಗೊಳ್ಳುವ ಬಹುತೇಕ ಮಂದಿ ಗೂಗಲ್ ಮ್ಯಾಪ್ ಅನ್ನು ತಮ್ಮ ದಾರಿದರ್ಶಕವಾಗಿ ಬಳಸುತ್ತಾರೆ. ಆದರೆ, ಗೂಗಲ್ ಮ್ಯಾಪ್ ಬಳಕೆಗೆ ಬರುವುದಕ್ಕೂ ಮುನ್ನ ದಿಕ್ಸೂಚಿ ಬಳಕೆ ಮತ್ತು ನಕ್ಷೆ ವೀಕ್ಷಣೆ (ಮ್ಯಾಪ್ ರೀಡಿಂಗ್) ಚಾರಣಿಗರಿಗೆ ಇರಬೇಕಾದ ಕನಿಷ್ಠ ಅರ್ಹತೆಗಳಲ್ಲಿ ಒಂದಾಗಿತ್ತು.

ಗೂಗಲ್ ಮ್ಯಾಪ್ ಎಂತಹ ಕಡಿದಾದ ಪ್ರದೇಶವನ್ನೂ ಸಪಾಟಾದ ನೆಲದಂತೆ ತೋರಿಸುತ್ತದೆ. ಗೂಗಲ್ ನಕ್ಷೆಯಲ್ಲಿ ಟೋಪೊಗ್ರಫಿಕ್ (ನೆಲದ ಇಳಿಜಾರು, ಕಡಿದಾದ ಹಾದಿ, ಬೆಟ್ಟದ ಎತ್ತರ, ಕಣಿವೆಯ ಆಳ ಎಲ್ಲವನ್ನೂ ವಿವರಿಸುವ ನಕ್ಷೆ) ಅವತರಣಿಕೆ ಇದ್ದರೂ, ಅದರ ನಿಖರತೆ ಕಡಿಮೆ. ದಿಕ್ಸೂಚಿ ಬಳಕೆ ಮತ್ತು ಮುದ್ರಿತ ಟೋಪೊಗ್ರಫಿಕ್ ನಕ್ಷೆ ಈ ಕೊರತೆಯನ್ನು ನೀಗುತ್ತದೆ. ಆದರೆ ತರಬೇತಿ ಇಲ್ಲದೆ ಇವುಗಳ ಬಳಕೆ ಸಾಧ್ಯವಿಲ್ಲ. ಇವುಗಳನ್ನು ಹೇಗೆ ಬಳಸಬೇಕು ಎಂಬುದನ್ನು ತಿಳಿಸಿಕೊಡುವ ಆನ್‌ಲೈನ್ ಕೋರ್ಸ್‌ಗಳು, ಯೂಟ್ಯೂಬ್ ವಿಡಿಯೊಗಳು ಇವೆ. ಅಪಾಯದ ಸಂದರ್ಭದಲ್ಲಿ ಇವು ಖಂಡಿತಾ ಉಪಯೋಗಕ್ಕೆ ಬರುತ್ತವೆ.

ಚಾರಣದ ವೇಳೆ ಹಾದಿ ತಪ್ಪಿದರೆ ರಕ್ಷಣಾ ಸಿಬ್ಬಂದಿಗೆ ನೆರವಾಗಲು ಫೋನ್‌ನ ಲೊಕೇಷನ್ ಸವಲತ್ತನ್ನು ಬಳಸಿಕೊಳ್ಳಬಹುದು. ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಇರುವ 'Emergency Location Service–ELS' ಸೆಟ್ಟಿಂಗ್ ಅನ್ನು ಚಾಲ್ತಿ ಮಾಡಬೇಕು. ಆ್ಯಪಲ್‌ನ ಐಫೋನ್ ಮತ್ತು ವಾಚ್‌ಗಳಲ್ಲಿ 'ಲೊಕೇಷನ್ ಷೇರಿಂಗ್' ಚಾಲ್ತಿಯಲ್ಲಿ ಇರಿಸಿಕೊಂಡರೆ ತುರ್ತು ಸಂದರ್ಭದಲ್ಲಿ ನೆರವಿಗೆ ಬರುತ್ತದೆ.

ನೇಪಾಳ: ಬಾಲೆನ್ ಶಾ ಸರ್ಕಾರದಲ್ಲಿ ಬಿರುಗಾಳಿ

ಇಬ್ಬರು ಸಚಿವರ ತಲೆದಂಡ; ಸರ್ಕಾರದ ವಿರುದ್ಧ ಹಲವೆಡೆ ಪ್ರತಿಭಟನೆ

• ಬಿ.ವಿ.ಶ್ರೀನಾಥ್

ಭಾರತದ ನೆರೆಯ, ಪುಟ್ಟ ರಾಷ್ಟ್ರವಾದ ನೇಪಾಳದಲ್ಲಿ ಭಾರಿ ಬದಲಾವಣೆಗಳು ಘಟಿಸುತ್ತಿವೆ. ಈಚೆಗಷ್ಟೇ ಭಾರಿ ಅಬ್ಬರ, ನಿರೀಕ್ಷೆ, ಭರವಸೆಗಳೊಂದಿಗೆ ಸರ್ಕಾರ ರಚನೆ ಮಾಡಿ ಪ್ರಧಾನಿಯಾಗಿದ್ದ ಬಾಲೇಂದ್ರ ಅವರ ಸರ್ಕಾರಕ್ಕೆ ಏಕಕಾಲಕ್ಕೆ ಹಲವು ಸಮಸ್ಯೆಗಳು ಎದುರಾಗಿವೆ. ಒಂದೆಡೆ, ಅಧಿಕಾರ ದುರುಪಯೋಗ ಮತ್ತು ಭ್ರಷ್ಟಾಚಾರದ ಆರೋಪದಿಂದ ಇಬ್ಬರು ಸಚಿವರ ತಲೆದಂಡವಾಗಿದೆ. ಇನ್ನೊಂದೆಡೆ, ಸರ್ಕಾರದ ನೀತಿಯ ವಿರುದ್ಧ ಜನರು ಪ್ರತಿಭಟನೆಗೆ ತೊಡಗಿದ್ದಾರೆ.

ರ್‍ಯಾಪರ್ ಆಗಿ ಜನಪ್ರಿಯತೆ ಗಳಿಸಿ, ಕಠ್ಮಂಡು ಮೇಯರ್ ಆಗಿ ಭರವಸೆ ಮೂಡಿಸಿ, ಜೆನ್ ಝೀಗಳ ಪಾಲಿನ ನೆಚ್ಚಿನ ನಾಯಕನಾಗಿ ನೇಪಾಳದ ಪ್ರಧಾನಿ ಹುದ್ದೆಗೇರಿದವರು (2026 ಮಾರ್ಚ್ 27) ಬಾಲೇಂದ್ರ ಶಾ. ಜನ ಅವರನ್ನು ಬಾಲೆನ್ ಎಂದೇ ಕರೆಯುತ್ತಾರೆ. ನೇಪಾಳದ ಅರಾಜಕತೆ, ಭ್ರಷ್ಟಾಚಾರ, ಬಡತನ, ನಿರುದ್ಯೋಗ ಮುಂತಾದ ಸಮಸ್ಯೆಗಳಿಗೆ ಬಾಲೆನ್ ಪರಿಹಾರ ದೊರಕಿಸಿಕೊಡಬಲ್ಲರು ಎಂದು ಅಲ್ಲಿನ ಜನ ನಂಬಿದರು. ಪರಿಣಾಮವಾಗಿ, 275 ಸ್ಥಾನಗಳ ಪೈಕಿ 182ರಲ್ಲಿ ಗೆಲ್ಲುವ ಮೂಲಕ ಬಹುಮತದೊಂದಿಗೆ ರಾಷ್ಟ್ರೀಯ ಸ್ವತಂತ್ರ ಪಕ್ಷ (ಆರ್‌ಎಸ್‌ಪಿ) ಅಧಿಕಾರಕ್ಕೆ ಬಂತು; ಬಾಲೆನ್ ಪ್ರಧಾನಿಯಾದರು. ಜೆನ್ ಝೀ ಕ್ರಾಂತಿಯ ಭಾಗವಾಗಿದ್ದ ಸುದನ್ ಗುರುಂಗ್ ಸೇರಿದಂತೆ ಹಲವರು ಸಚಿವರಾದರು.

ಬಾಲೆನ್ ಪ್ರಧಾನಿಯಾದ ಕೆಲವೇ ದಿನಗಳಲ್ಲಿ ಜೆನ್ ಝೀ ಕ್ರಾಂತಿಯ ಸಂದರ್ಭದಲ್ಲಿ ಹಲವರ ಸಾವಿಗೆ ಕಾರಣರಾಗಿದ್ದ ಆರೋಪದ ಮೇಲೆ ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಒಲಿ ಮತ್ತು ಮಾಜಿ ಗೃಹಸಚಿವ ರಮೇಶ್ ಲೇಖಕ್ ಅವರನ್ನು ಬಂಧಿಸಿ ಜೈಲಿಗಟ್ಟಿದರು. ಚುನಾವಣೆಯಲ್ಲಿ ಭರವಸೆ ನೀಡಿದಂತೆ ತಾವು ಉತ್ತಮ ಆಡಳಿತ ನೀಡುವುದರ ಮೊದಲ ಸೂಚನೆ ಇದು ಎನ್ನುವಂತೆ ಬಿಂಬಿಸಿದರು. ಆದರೆ, ಕೆಲವೇ ದಿನಗಳಲ್ಲಿ ಅವರ ಸರ್ಕಾರದ ಹುಳುಕು ಬಯಲಾಗಿದೆ.

ಭ್ರಷ್ಟಾಚಾರದ ವಿರುದ್ಧ ಹೋರಾಡುವ ಪ್ರತಿಜ್ಞೆ ಮಾಡಿ ಅಧಿಕಾರಕ್ಕೆ ಬಂದ ಸರ್ಕಾರದಲ್ಲಿ ಒಂದು ತಿಂಗಳು ಕಳೆಯುವುದರೊಳಗೇ ಇಬ್ಬರು ಸಚಿವರು ಅಧಿಕಾರ ದುರುಪಯೋಗ ಮಾಡಿ ಪಕ್ಷದ ಶಿಸ್ತು ಉಲ್ಲಂಘಿಸಿ ಮತ್ತು ಅವ್ಯವಹಾರದಲ್ಲಿ ತೊಡಗಿದ ಆರೋಪದಲ್ಲಿ ಸಂಪುಟದಿಂದ ಹೊರನಡೆದಿದ್ದಾರೆ. ಈ ಮೂಲಕ ಭ್ರಷ್ಟಾಚಾರದ ವಿರುದ್ಧ 'ಶೂನ್ಯ ಸಹನೆಯ ನೀತಿ' ಅಳವಡಿಸಿಕೊಂಡಿರುವುದಾಗಿ ಬಾಲೆನ್ ಬಿಂಬಿಸಿಕೊಳ್ಳುತ್ತಿದ್ದಾರೆ.

ಆದರೆ, ಚುನಾವಣೆಗೆ ಕೇವಲ ಎರಡು ತಿಂಗಳಿರುವಾಗ ಆರ್‌ಎಸ್‌ಪಿ ಸೇರಿ, ಪ್ರಧಾನಿಯಾದ ಬಾಲೆನ್, ಪಕ್ಷದಲ್ಲಿಯೇ ಆಂತರಿಕ ವಿರೋಧ ಎದುರಿಸಬೇಕಾಗಬಹುದು ಎನ್ನಲಾಗುತ್ತಿದೆ.

ಬಾಲೆನ್ ವಿರುದ್ಧ ಬೀದಿಗಿಳಿದ ಜನ: ಕೆ.ಪಿ.ಶರ್ಮಾ ಒಲಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆಗಳನ್ನು ನಡೆಸಿಯೇ ಅವರನ್ನು ಚುನಾವಣೆಯಲ್ಲಿ ಮಣಿಸಿ ಆರ್‌ಎಸ್‌ಪಿ ಅಧಿಕಾರಕ್ಕೇರಿದೆ. ಆದರೆ, ಸರ್ಕಾರ ರಚನೆಯಾದ ಒಂದೇ ತಿಂಗಳಲ್ಲಿ ಬಾಲೆನ್ ಅವರ ನೀತಿಗಳ ವಿರುದ್ಧ ಜನರು ಪ್ರತಿಭಟನೆಗೆ ಇಳಿದಿದ್ದಾರೆ. ನೇಪಾಳದಲ್ಲಿ ಈಗಲೂ ಹಣದುಬ್ಬರ ಹೆಚ್ಚಾಗಿದ್ದು, ಅಗತ್ಯ ವಸ್ತುಗಳ ಬೆಲೆ ಗಗನಮುಖಿಯಾಗಿಯೇ ಇದೆ. ಇದೂ ಸೇರಿದಂತೆ ಹಲವು ಕಾರಣಗಳಿಂದ ನೇಪಾಳದ ಗಡಿಗಳಲ್ಲಿರುವವರು ಇದುವರೆಗೂ ಭಾರತಕ್ಕೆ ಬಂದು ಅಗತ್ಯ ಸರಕುಗಳನ್ನು ಮುಕ್ತವಾಗಿ ಖರೀದಿಸಿ ಕೊಂಡೊಯ್ಯುತ್ತಿದ್ದರು. ಅನೇಕರಿಗೆ ಇದು ಜೀವನೋಪಾಯವೂ ಆಗಿತ್ತು. ಬಾಲೆನ್ ಶಾ ಅಧಿಕಾರಕ್ಕೆ ಬಂದ ನಂತರ ಭಾರತದಿಂದ ಕೊಂಡೊಯ್ಯುವ ಸರಕುಗಳ ಮೇಲೆ ಶೇ 5ರಿಂದ ಶೇ 80ರವರೆಗೆ ಕಸ್ಟಮ್ಸ್ ಸುಂಕ ವಿಧಿಸತೊಡಗಿದರು. ಇದರಿಂದ ಸಹಜವಾಗಿಯೇ ಸರಕುಗಳ ಬೆಲೆ ಹೆಚ್ಚಾಗಿದೆ. ದಿನನಿತ್ಯದ ಅನೇಕ ಅಗತ್ಯ ವಸ್ತುಗಳಿಗಾಗಿ ಭಾರತದ ಮೇಲೆ ಅವಲಂಬಿತರಾಗಿದ್ದ ಗಡಿಭಾಗಗಳ ಜನ ಕೆರಳಿ ಬೀದಿಗಿಳಿದಿದ್ದು, ಬಿರಗುಂಜ್, ಕಠ್ಮಂಡು ಸೇರಿದಂತೆ ಹಲವೆಡೆ ಪ್ರತಿಭಟನೆಗಳು ನಡೆದಿವೆ.



ಇನ್ನೊಂದೆಡೆ, ವಿದ್ಯಾರ್ಥಿಗಳೂ ಬಾಲೆನ್ ಸರ್ಕಾರದ ವಿರುದ್ಧ ತಿರುಗಿಬಿದ್ದಿದ್ದಾರೆ. ರಾಜಕೀಯ ಪಕ್ಷಗಳೊಂದಿಗೆ ನಂಟು ಹೊಂದಿರುವ ವಿದ್ಯಾರ್ಥಿ ಸಂಘಗಳನ್ನು ಸರ್ಕಾರವು ತಕ್ಷಣದಿಂದಲೇ ನಿಷೇಧಿಸಿರುವುದು ಇದಕ್ಕೆ ಕಾರಣ.

ಬಾಲೆನ್ ಸರ್ಕಾರ ಬಂಧಿಸಿರುವ ಕೆ.ಪಿ.ಶರ್ಮಾ ಅವರು ಚೀನಾ ಜತೆಗೆ ಉತ್ತಮ ಸಂಬಂಧ ಹೊಂದಿದ್ದರು. ಅವರ ಬಂಧನದ ಮೂಲಕ ಬಾಲೆನ್ ಅವರು ಚೀನಾದ ಅಸಮಾಧಾನಕ್ಕೆ ಕಾರಣರಾಗಿದ್ದಾರೆ ಎನ್ನುವ ವಿಶ್ಲೇಷಣೆಯೂ ಇದೆ. ದೇಶದ ಒಳಗೆ ಮತ್ತು ಹೊರಗೆ ಬಾಲೆನ್ ವಿರೋಧಿಗಳು ನಿಧಾನಕ್ಕೆ ಹೆಚ್ಚುತ್ತಿದ್ದಾರೆ. ಇದು ಹೀಗೇ ಬೆಳೆದರೆ, ಬಹುಮತ ಇರುವ ಬಾಲೆನ್ ಅವರ ಸರ್ಕಾರಕ್ಕೆ ಕಂಟಕವಾಗುವ ಸಂಭವ ಇದೆ ಎಂದೂ ಹೇಳಲಾಗುತ್ತಿದೆ.

ಇಷ್ಟೆಲ್ಲದರ ನಡುವೆಯೂ, ಬಾಲೆನ್ ಶಾ ಅವರು ಆದಷ್ಟೂ ಎಚ್ಚರಿಕೆಯಿಂದಲೇ ಆಡಳಿತ ನಡೆಸುತ್ತಿದ್ದಾರೆ. ಆದರೆ, ವಾಸ್ತವ ರಾಜಕಾರಣವಕ್ಕೂ ಆದರ್ಶಗಳಿಗೂ ಇರುವ ಅಂತರದ ಬಗ್ಗೆ ಅವರಿಗೆ ಅರಿವು ಕಡಿಮೆ ಎಂದು ಕೆಲವರು ವಿಶ್ಲೇಷಿಸುತ್ತಿದ್ದಾರೆ. ಇವೆರಡರ ನಡುವೆ ಸಮತೋಲನ ಕಾಯ್ದುಕೊಳ್ಳಬೇಕಿದೆ; ಜತೆಗೆ, ರಾಜಕೀಯ ದ್ವೇಷದ, ಆತುರದ ಜನಪ್ರಿಯ ಕ್ರಮಗಳಿಗಿಂತ ವಿವೇಚನೆಯುಳ್ಳ, ದೂರದೃಷ್ಟಿಯ ಕ್ರಮಗಳತ್ತ ಅವರು ಚಿಂತಿಸಬೇಕಿದೆ ಎನ್ನುವ ಅಭಿಪ್ರಾಯ ಇದೆ.

ಸಂಸತ್ ಕಲಾಪ ಅಮಾನತು



ಬಾಲೆನ್ ಶಾ

ಸುದನ್ ಗುರುಂಗ್ ಅವರ ರಾಜೀನಾಮೆಯ ಬೆನ್ನಲ್ಲೇ ಏಪ್ರಿಲ್ 30ರಂದು ಕರೆಯಲಾಗಿದ್ದ ನೇಪಾಳ ಸಂಸತ್ತಿನ ಕಲಾಪವನ್ನು ಅಮಾನತಿನಲ್ಲಿರಿಸಿ ಅಧ್ಯಕ್ಷ ರಾಮಚಂದ್ರ ಪೌಡೆಲ್ ಅವರು ಆದೇಶ ಹೊರಡಿಸಿದ್ದಾರೆ. ಸರ್ಕಾರದ ಶಿಫಾರಸಿನ ಮೇರೆಗೆ 'ವಿಶೇಷ ಕಾರಣ'ಗಳ ಅಡಿಯಲ್ಲಿ ಎರಡೂ ಸದನಗಳ (ಜನಪ್ರತಿನಿಧಿ ಸಭೆ ಮತ್ತು ಅಸೆಂಬ್ಲಿ) ಕಲಾಪಗಳನ್ನು ಅಮಾನತುಗೊಳಿಸಲಾಗಿದೆ ಎಂದು ಅಧ್ಯಕ್ಷರ ಕಚೇರಿಯ ವಕ್ತಾರರು ತಿಳಿಸಿದ್ದಾರೆ.

ಕಳಂಕಿತ ಉದ್ಯಮಿಯೊಂದಿಗೆ ನಂಟು

ಮೂರು ದಿನಗಳ ಹಿಂದೆಯಷ್ಟೇ ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸುದನ್ ಗುರುಂಗ್ ಅವರು ಹಣಕಾಸಿನ ವಹಿವಾಟಿಗೆ ಸಂಬಂಧಿಸಿದ ಗಂಭೀರ ಆರೋಪಗಳನ್ನು ಎದುರಿಸುತ್ತಿದ್ದಾರೆ.

ಸುದನ್ ಗುರುಂಗ್, ಹಮೀ ನೇಪಾಳ ಸಂಘಟನೆಯ ಮೂಲಕ ಜೆನ್ ಝೀ ಕ್ರಾಂತಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವರು. ಅವರು ಪ್ರಧಾನಿ ಬಾಲೆನ್ ಶಾ ಅವರ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದಾರೆ. ಬಾಲೆನ್ ಶಾ ಅವರೇ ಗುರುಂಗ್ ಅವರನ್ನು ಗೃಹ ಸಚಿವ ಸ್ಥಾನಕ್ಕೆ ಆಯ್ಕೆ ಮಾಡಿದ್ದರು. ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಉದ್ಯಮಿ ದೀಪಕ್ ಭಟ್ಟಾ ಅವರೊಂದಿಗೆ ಗುರುಂಗ್ ನಂಟು ಹೊಂದಿದ್ದಾರೆ ಎಂದು ಹೇಳಲಾಗಿದೆ.



ಸುದನ್ ಗುರುಂಗ್

ಹಮೀ ನೇಪಾಳ ಸಂಘಟನೆಯ ಎರಡು ಬ್ಯಾಂಕ್ ಖಾತೆಗಳ ಪೈಕಿ ಒಂದು ಖಾತೆಯನ್ನು ರಾತ್ರೋರಾತ್ರಿ ಬಂದ್ ಮಾಡಿ, ಅದರಲ್ಲಿದ್ದ ಹಣವನ್ನು ಬೇರೊಂದು ಖಾತೆಗೆ ವರ್ಗಾಯಿಸಿದ ಆರೋಪವೂ ಅವರ ಮೇಲಿದೆ. ಜತೆಗೆ, ಈ ಸಂಘಟನೆಗೆ ಸಂಬಂಧಿಸಿ ಹಣದ ವಹಿವಾಟಿನಲ್ಲಿ ಹಲವು ರೀತಿಯ ಅವ್ಯವಹಾರಗಳು ನಡೆದಿದ್ದು, ಲಕ್ಷಾಂತರ ರೂಪಾಯಿ ವಂಚನೆ ನಡೆದಿದೆ ಎನ್ನುವ ಆರೋಪಗಳು ಕೇಳಿಬಂದಿವೆ.

ಗುರುಂಗ್ ಅವರ ಹಣದ ವ್ಯವಹಾರಗಳು ಮತ್ತು ಕಳಂಕಿತ ಉದ್ಯಮಿಯೊಂದಿಗೆ ನಂಟು ಹೊಂದಿರುವ ವಿಚಾರ ಬಹಿರಂಗವಾಗುತ್ತಲೇ ಉತ್ತಮ ಆಡಳಿತ, ಪಾರದರ್ಶಕತೆ ಮತ್ತು ಸ್ವಚ್ಛ ರಾಜಕಾರಣವನ್ನು ಪ್ರತಿಪಾದಿಸುತ್ತಾ ಬಂದಿದ್ದ ಆರ್‌ಎಸ್‌ಪಿಗೆ ತೀವ್ರ ಮುಜುಗರವಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲೂ ಈ ಬಗ್ಗೆ ತೀವ್ರ ಚರ್ಚೆ ನಡೆದಿತ್ತು. ದೀಪಕ್ ಕುಮಾರ್ ಅವರಿಗಿಂತಲೂ ಗಂಭೀರವಾದ ಆರೋಪಗಳು ಗುರುಂಗ್ ಮೇಲೆ ಬಂದಿವೆ. ಇವರ ವಿರುದ್ಧವೂ ಕ್ರಮ ಕೈಗೊಳ್ಳಬೇಕು ಎಂಬ ಕೂಗು ಪಕ್ಷದಲ್ಲೂ ಕೇಳಿಬಂದಿತ್ತು.

ಈ ಬೆಳವಣಿಗೆಗಳ ನಡುವೆಯೇ ಸುದನ್ ಗುರುಂಗ್ ಅವರು ಬುಧವಾರ (ಏಪ್ರಿಲ್ 22) ಸಾಮಾಜಿಕ ಜಾಲತಾಣದಲ್ಲಿ ತಮ್ಮ ರಾಜೀನಾಮೆ ನಿರ್ಧಾರ ಪ್ರಕಟಿಸಿದ್ದರು.

'ನನ್ನ ವಿರುದ್ಧ ಕೇಳಿ ಬಂದಿರುವ ಆರೋಪಗಳಿಗೆ ಸಂಬಂಧಿಸಿದಂತೆ ನಿಷ್ಪಕ್ಷಪಾತ ತನಿಖೆಗೆ ಅವಕಾಶ ಕಲ್ಪಿಸಲು ಮತ್ತು ನಾನು ಅಧಿಕಾರದಲ್ಲಿದ್ದರೆ ಉಂಟಾಗುವ ಹಿತಾಸಕ್ತಿ ಸಂಘರ್ಷವನ್ನು ತಪ್ಪಿಸಲು ಅಥವಾ ತನಿಖೆಯ ಮೇಲೆ ಯಾವುದೇ ಪ್ರಭಾವ ಬೀರುವುದನ್ನು ತಡೆಯುವುದಕ್ಕಾಗಿ ನಾನು ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ' ಎಂದು ಅವರು ಪೋಸ್ಟ್‌ನಲ್ಲಿ ಹೇಳಿದ್ದರು.

'ನನಗೆ ನನ್ನ ಸ್ಥಾನಕ್ಕಿಂತ ನೈತಿಕತೆ ಮುಖ್ಯ. ಸಾರ್ವಜನಿಕ ವಿಶ್ವಾಸಕ್ಕಿಂತ ದೊಡ್ಡ ಬಲ ಯಾವುದೂ ಇಲ್ಲ. ಸಾರ್ವಜನಿಕ ಜೀವನ ಸ್ವಚ್ಛವಾಗಿರಬೇಕು ಮತ್ತು ನಾಯಕತ್ವವು ಕಡ್ಡಾಯವಾಗಿ ಉತ್ತರದಾಯಿ ಆಗಿರಬೇಕು ಎಂಬ ಸ್ಪಷ್ಟ ಸಂದೇಶವನ್ನು ದೇಶದಲ್ಲಿ ಉತ್ತಮ ಆಡಳಿತ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಬಯಸಿ ಜೆನ್ ಝೀ ಸಮುದಾಯದ ನಡೆಸುತ್ತಿರುವ ಹೋರಾಟ ಬಯಸುತ್ತಿದೆ. ನನ್ನ 46 ಸಹೋದರರು ಮತ್ತು ಸಹೋದರಿಯರ ರಕ್ತ ಮತ್ತು ಬಲಿದಾನದಲ್ಲಿ ರಚನೆಯಾದ ಸರ್ಕಾರವನ್ನು ಯಾರಾದರೂ ಪ್ರಶ್ನಿಸಿದರೆ, ಅದಕ್ಕೆ ಉತ್ತರ ಎಂದರೆ ನೈತಿಕತೆ' ಎಂದು ಹೇಳಿದ್ದರು.

ಪತ್ನಿ ನೇಮಕಕ್ಕೆ ಅಧಿಕಾರ ದುರ್ಬಳಕೆ



ದೀಪಕ್ ಕುಮಾರ್

ಸರ್ಕಾರ ರಚನೆಯಾದ ಎರಡು ವಾರದ ಒಳಗಾಗಿ ಪ್ರಧಾನಿ ಬಾಲೆನ್ ಶಾ ಅವರು ಕಾರ್ಮಿಕ, ಉದ್ಯೋಗ, ಸಾಮಾಜಿಕ ಭದ್ರತಾ ಸಚಿವರಾಗಿದ್ದ ದೀಪಕ್ ಕುಮಾರ್ ಸಾಹ ಅವರನ್ನು ಹುದ್ದೆಯಿಂದ ವಜಾ ಮಾಡಿದ್ದರು. ಆರ್‌ಎಸ್‌ಪಿ ನೀತಿಸಂಹಿತೆ ಮತ್ತು ಶಿಸ್ತು ಉಲ್ಲಂಘಿಸಿದ ಕಾರಣಕ್ಕೆ, ಶಾ ಅವರನ್ನು ಹುದ್ದೆಯಿಂದ ತೆಗೆದುಹಾಕಬೇಕು ಎಂದು ಪಕ್ಷವು ಶಿಫಾರಸು ಮಾಡಿತ್ತು. ಅದರ ಆಧಾರದಲ್ಲಿ ಪ್ರಧಾನಿ ಬಾಲೆನ್ ಶಾ ಈ ಕ್ರಮ ಕೈಗೊಂಡಿದ್ದರು.

ದೀಪಕ್ ಕುಮಾರ್ ಸಾಹ ಅವರು ತಮ್ಮ ಪತ್ನಿ ಜುನು ಶ್ರೇಷ್ಠ ಅವರನ್ನು ಆರೋಗ್ಯ ವಿಮೆ ಮಂಡಳಿಯ ಸದಸ್ಯರನ್ನಾಗಿ ಮುಂದುವರಿಸಲು ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಆಪಾದನೆಯ ಬಗ್ಗೆ ಪಕ್ಷದ ಕೇಂದ್ರ ಶಿಸ್ತು ಸಮಿತಿ ತನಿಖೆ ನಡೆಸಿ, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಕ್ಷದ ಅಧ್ಯಕ್ಷರಿಗೆ ಶಿಫಾರಸು ಮಾಡಿತ್ತು. ಪಕ್ಷದ ಸೂಚನೆಯಂತೆ ಏಪ್ರಿಲ್ 9ರಂದು ಬಾಲೆನ್ ಶಾ ಅವರು ದೀಪಕ್ ಕುಮಾರ್ ಅವರನ್ನು ವಜಾ ಮಾಡಿದ್ದರು.

ಗುಂಡಣ್ಣ



ಪದಬಂಧ 6384


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ದೇಶದ ಒಂದು ವಿಭಾಗ (3)
4.ಅತಿಶಯವಾದುದು ಮರದಲ್ಲಿದೆ (4)
6.ನೂರು ವರ್ಷದ ಅವಧಿ (4)
7.ರಜದಲ್ಲಿ ಖರೀದಿಸಿದ ಬೆಳ್ಳಿ (3)
10.ಬಿಡದಿ ಹತ್ತಿರ ಬಂದಿರುವ ಹೆಂಡತಿ (3)
12.ಕಡಲೇಬೇಳೆ ಹಾಗೂ ಬೆಲ್ಲವನ್ನು ಬೇಯಿಸಿ ಮಾಡುವ ಸಿಹಿ ಖಾದ್ಯ (4)
15.ಜಾಡಮಾಲಿ ತಿರುಗಿದ್ದಾನಲ್ಲಾ! (4)
16.ಕತ್ತು ಮೇಲಿತ್ತಿದಾಗ ಪಿತ್ತಕೋಶ ಕಾಣಿಸಿತೇ? (3

ಮೇಲಿಂದ ಕೆಳಕ್ಕೆ

1.ವೇದಗಳಿಂದ ಸಂಗ್ರಹಿಸಿದ ಭಾಗ (3)
2.ಗೌರವಸೂಚಕವಾಗಿ ಕೈಮುಗಿದು ತಲೆಬಾಗುವುದು (4)
3.ಸಮುದ್ರವಿಲ್ಲಿ ಉಲ್ಟಾ ಪಲ್ಟಾ ಕಾಣುತ್ತಿದೆ (3)
5.ಅತ್ರಿ ಮಹರ್ಷಿಯ ಹೆಂಡತಿ (4)
8.ಕನ್ನಡ ಸಂಸ್ಕೃತಗಳೆರಡಕ್ಕೂ ಸಮಾನವಾದ ಶಬ್ದ (3)
9.ಹರ ಕೊನೆಗಿದ್ದಾಗ ಚಲುವಾದುದು ಕಂಡಿದೆ (4)
11.ಎಲ್ಲ ದಿಕ್ಕುಗಳಲ್ಲಿರುವ ರಾಜ್ಯಗಳನ್ನು ಗೆಲ್ಲುವುದು (4)
13.ವರನ ಹತ್ತಿರವಿರುವ ಚಿನ್ನದ ನಾಣ್ಯ (3)
14. ಐಶ್ವರ್ಯ ಇಲ್ಲಿ ಕಾಣುತ್ತಿದೆ (3)



6383ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಾಯಮಾನ 3.ಕಮಂಡಲು
4.ವರುಣ 5.ತವರು
7.ಕಲಹ 9.ವಸಂತ
10.ಕುಲುಮೆ 11.ರಮಿಸು
13.ನೀರದ 15.ಪರೋಕ್ಷ
17.ಅವಭೃಥ 18.ಮೆಲುನುಡಿ

ಮೇಲಿಂದ ಕೆಳಕ್ಕೆ:
1.ಜಾಗೃತ 2.ನವ
3.ಕಣಕ 6.ವರ್ಣಸಂರ
8.ಹಲಾಲುಕೋರ 12.ಸುಪಥ
14.ದಮಡಿ 16.ಕ್ಷಮೆ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

25 ಏಪ್ರಿಲ್ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ನವಮಿ ಗಂ. 18-29 ನಕ್ಷತ್ರ: ಆಶ್ಲೇಷ ಗಂ. 20-05, ಯೋಗ: ಗಂಡ ಗಂ. 23-43, ಕರಣ: ಬಾಲವ ಗಂ. 6-51, ಮೇಷ ಮಾಸದ 12 ನೇ ದಿನ. ಮಳೆ ನಕ್ಷತ್ರ: ಅಶ್ವಿನಿ 4 ನೇ ಪಾದ. ರಾಹುಕಾಲ: ಬೆಳಿಗ್ಗೆ 09-00 - 10-30, ಸೂರ್ಯೋದಯ: 06-16, ಸೂರ್ಯಾಸ್ತ: 06-41, ಮುಸ್ಲಿಂ ದಿನಾಂಕ: 6 ಜುಲ್ಕಾದಾ, ದಿನ ವಿಶೇಷ: ಸೀತಾ ನವಮಿ, ಅದೃಷ್ಟ ಸಂಖ್ಯೆ: 9, 8

ಮೇಷ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿರುವ ನಿಮಗೆ ಹಲವಾರು ಕನಸುಗಳು ಈಡೇರುವ ಅವಕಾಶ ಅಪರಿಚಿತ ವ್ಯಕ್ತಿ ತೋರುವರು. ವಾತಾವರಣದ ಬದಲಾವಣೆಯು ಆರೋಗ್ಯದ ಮೇಲೆ ಪ್ರಭಾವ ಬೀರಲಿದೆ.

ವೃಷಭ: ಮನೆಯ ಪತ್ರ ಅಥವಾ ಕಂದಾಯ ಇಲಾಖೆಯ ವ್ಯವಹಾರದಲ್ಲಿ ಸಂಕಷ್ಟದ ಪರಿಸ್ಥಿತಿ ಎದುರಾಗಲಿದೆ. ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಬರಲಿದೆ. ಸರ್ವತೋಮುಖ ಬೆಳವಣಿಗೆ ಕಾಣುವಿರಿ.

ಮಿಥುನ: ನಿಮ್ಮ ಭರವಸೆಯ ಮಾತುಗಳು ಸಹೋದ್ಯೋಗಿಯೊಬ್ಬರಿಗೆ ಆತ್ಮಸ್ಥೈರ್ಯ ತಂದುಕೊಡುವುದು. ಧಾರ್ಮಿಕ ಕೆಲಸ ಕಾರ್ಯಗಳನ್ನು ಮಾಡುವ ಅವಕಾಶ ಸಿಗುವುದು. ಸಂತಾನ ಅಪೇಕ್ಷಿಗಳಿಗೆ ಶುಭ ಸುದ್ದಿ.

ಕರ್ಕಾಟಕ: ರಾಜಕೀಯ ವರ್ಗದವರಿಗೆ ಜನಪ್ರಿಯತೆ ಹೆಚ್ಚುವುದರಿಂದ ಶತ್ರುಬಾಧೆ ಕಂಡುಬರಲಿದೆ. ಲೇಖನ ಮಾಲೆಯನ್ನು ಸಿದ್ಧಪಡಿಸುವ ನಿಮ್ಮ ಹಲವು ದಿನದ ಕನಸು ಈಡೇರಲಿದೆ. ಹಾಡುಗಾರರಿಗೆ ಜನಪ್ರಿಯತೆ ಹೆಚ್ಚುತ್ತದೆ.

ಸಿಂಹ: ಮಿತ್ರರಿಂದ ಮುಖ್ಯವಾದ ವ್ಯಕ್ತಿಯ ಪರಿಚಯ ಹಾಗೂ ಅಭಿವೃದ್ಧಿಯ ಮಾಹಿತಿ ಈ ದಿನ ದೊರಯುತ್ತದೆ. ಆಹಾರದಲ್ಲಿ ವಿಷದ ಅಂಶವು ಸೇರಿ ಆರೋಗ್ಯ ಹದಗೆಡುವ ಸಾಧ್ಯತೆಯಿದೆ.

ಕನ್ಯಾ: ಗಂಡ ಹೆಂಡತಿಯರ ನಡುವಿನ ವಾಕ್ಸಮರದಲ್ಲಿ ಮಧ್ಯಪ್ರವೇಶಿಸಿ ಸಮಸ್ಯೆಯನ್ನು ಬಿಗಡಾಯಿಸುವಿರಿ. ಕೌಟುಂಬಿಕ ಅಭಿವೃದ್ಧಿಯಂತಹ ವಿಷಯಗಳಿಂದ ಖುಷಿ ಸಿಗುವುದು. ಮಕ್ಕಳಿಂದ ನೆಮ್ಮದಿ ದೊರೆಯಲಿದೆ.

ತುಲಾ: ಧೈರ್ಯ ಮತ್ತು ಪ್ರೇರಣಾ ಶಕ್ತಿಯ ಭಾವವನ್ನು ಹೊಂದುವುದರಿಂದ ಸಮಸ್ಯೆಯನ್ನು ಸುಲಭವಾಗಿ ಎದುರಿಸಬಹುದು. ಇತರ ಯೋಚನೆಗಳ ನಡುವೆ ಮಾಡುವ ಕೆಲಸದಲ್ಲಿ ಹೆಚ್ಚಿನ ಗಮನವಿಲ್ಲದಿದ್ದರೆ ದಂಡತೆರುವಂತಾಗಲಿದೆ.

ವೃಶ್ಚಿಕ: ಕುಟುಂಬಕ್ಕೆ ಸಂಬಂಧಪಟ್ಟ ಮಹತ್ವದ ವಿಷಯಗಳನ್ನು ಗಂಭೀರವಾಗಿ ಚಿಂತಿಸಿ ನಿರ್ಧರಿಸುವುದು ಉತ್ತಮ. ಬದಲಾವಣೆಯನ್ನು ಬಯಸಿದ ನಿಮಗೆ ಇದು ಹರ್ಷದ ಸಮಯವಾಗಿದೆ. ಕೃಷಿ ಕೆಲಸಗಳು ಹೆಚ್ಚಲಿವೆ.

ಧನು: ನಿಮ್ಮ ಮಾರ್ಗದರ್ಶನ ಮತ್ತು ಸಲಹೆ ಸೂಚನೆಗಳಿಗಾಗಿ ಜನರು ಕಾಯುವುದನ್ನು ನೋಡಿ ಬಹಳ ಹೆಮ್ಮೆಪಟ್ಟುಕೊಳ್ಳುವಿರಿ. ಗುತ್ತಿಗೆ ಆಧಾರಿತ ಉತ್ತಮ ಉದ್ಯೋಗ ದೊರೆತು ಲಾಭ ಸಿಗಲಿದೆ.

ಮಕರ: ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು ಮತ್ತು ಉತ್ತಮ ಜ್ಞಾನಾರ್ಜನೆ ಆಗುವುದು. ಜೀವನ ಸಂಗಾತಿಯ ಆಯ್ಕೆ ವಿಚಾರದಲ್ಲಿ ಹಿರಿಯರ ಮಾತಿನತ್ತ ಗಮನ ಕೊಡಿ. ಚಿತ್ರ ವಿತರಕರಿಗೆ ಹೆಚ್ಚಿನ ವರಮಾನದ ಸಾಧ್ಯತೆ ಇದೆ.

ಕುಂಭ: ಮಾನಸಿಕ ಒತ್ತಡ ನಿವಾರಣೆಗೆ ಹಾಗೂ ಶತ್ರುನಿವಾರಣೆಗೆ ಕುಲ ದೇವರ ದರ್ಶನ ಉಪಕಾರಿಯಾಗುವುದು. ವಾಹನ ಬಿಡಿ ಭಾಗಗಳ ಮಾರಾಟಗಾರರಿಗೆ ಹೆಚ್ಚು ಲಾಭ. ಹೈನುಗಾರಿಕೆಯನ್ನು ಉಪವೃತ್ತಿಯಾಗಿ ಮಾಡಿಕೊಳ್ಳಬಹುದು.

ಮೀನ: ತಿಳಿಯಾದ ಮನಸ್ಸಿನಿಂದ ಆಲೋಚಿಸಿ ಅಥವಾ ಅನುಭವಸ್ಥರ ಅಭಿಪ್ರಾಯ ತಿಳಿದು ನಿರ್ಧಾರ ಕೈಗೊಳ್ಳಿರಿ. ಮಕ್ಕಳ ವಿದ್ಯಾಭ್ಯಾಸವು ಉತ್ತಮವಾಗಿ, ಸುಖ-ಶಾಂತಿ ತುಂಬಿರುತ್ತವೆ. ನೀಲಿ ಬಣ್ಣ ಶುಭವನ್ನು ತರುವುದು.

ಸುಡೊಕು 6767


ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	9		5	3		8	
								9
8	1		2	6		7		
	8			2		1		5
	9	2	8		5			
5				3			2	
9		7	5					6
	5			7		9		
	3		6		1		7	2

6766 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ ಹಿಂದಿನ ಅಂತ್ಯ: 24,173 | ಇಂದಿನ ಅಂತ್ಯ: 23,897 | ದಿನದ ಕನಿಷ್ಠ: 23,813 | 275

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು: 100 ಕ್ಕೆ ₹575; 12 ಕ್ಕೆ ₹78; ಮೈಸೂರು: 100 ಕ್ಕೆ ₹580

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ) ಆರ್‌ಎಸ್‌ಎಸ್-4 ₹234; ಆರ್‌ಎಸ್‌ಎಸ್-5 ₹228; ಗುಡ್ ಲಾಟ್ ₹205

ರಾಮನಗರ ರೇಷ್ಮೆಗೂಡು ಮಿಶ್ರತಳಿ (ಸಿ.ಬಿ) ₹333-635; ದ್ವಿತಳಿ (ಬಿ.ವಿ) ₹322-788

ಮುದ್ದಮನ ಕಾಫಿ ಎಪಿ ₹24250; ಎಸಿ ₹14150; ಆರ್‌ಎಪಿ ₹18350; ಆರ್‌ಸಿ ₹9925

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) ಶೇಂಗಾ (ರಿಫೈಂಡ್) ₹1630 (1640); ಸೋಯಾ (ರಿಫೈಂಡ್) ₹1500 (1520); ಸೂರ್ಯಕಾಂತಿ (ರಿಫೈಂಡ್) ₹1660 (1660); ಪಾಮೋಲಿನ್ ₹1445 (1445)

ಇಸ್ರೇಲ್– ಲೆಬನಾನ್: ಕದನ ವಿರಾಮ ವಿಸ್ತರಣೆ

ಅಮೆರಿಕ ಅಧ್ಯಕ್ಷ ಟ್ರಂಪ್ ಘೋಷಣೆ
• ಶ್ವೇತಭವನದಲ್ಲಿ ನಡೆದ ಮಾತುಕತೆ

ವಾಷಿಂಗ್ಟನ್ (ಎಪಿ): ‘ಇಸ್ರೇಲ್ ಮತ್ತು ಹಿಜ್ಬುಲ್ಲಾ ಬಂಡುಕೋರರ ನಡುವಣ ಕದನ ವಿರಾಮವನ್ನು ಮೂರು ವಾರಗಳ ಕಾಲ ವಿಸ್ತರಿಸಲು ಇಸ್ರೇಲ್ ಮತ್ತು ಲೆಬನಾನ್ ಒಪ್ಪಿಕೊಂಡಿವೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದರು.

ಶ್ವೇತಭವನದಲ್ಲಿ ಗುರುವಾರ ನಡೆದ ಮಾತುಕತೆ ಬಳಿಕ ಕದನ ವಿರಾಮ ವಿಸ್ತರಣೆಗೆ ಸಮ್ಮತಿ ದೊರೆತಿದೆ ಎಂದು ಅವರು ಹೇಳಿದರು.

ಅಮೆರಿಕದಲ್ಲಿ ಇಸ್ರೇಲ್ ಮತ್ತು ಲೆಬನಾನ್ ರಾಯಭಾರಿಗಳ ನಡುವೆ ಎರಡನೇ ಬಾರಿಗೆ ಸಭೆಯು ತುಂಬಾ ಚೆನ್ನಾಗಿ ನಡೆಯಿತು ಮತ್ತು ಫಲಪ್ರದವಾಯಿತು ಎಂದೂ ಅವರು ತಿಳಿಸಿದರು.

‘ಮುಂದಿನ ಎರಡು ವಾರಗಳಲ್ಲಿ ನಾನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹಾಗೂ ಲೆಬನಾನ್‌ನ ಅಧ್ಯಕ್ಷ ಜೋಸೆಫ್ ಔನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸುವ ಸಾಧ್ಯತೆಯಿದೆ’ ಎಂದು ಅವರು ಓವಲ್ ಕಚೇರಿಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಹಿಜ್ಬುಲ್ಲಾ ಗುಂಡು ಹಾರಿಸಿದರೆ, ತನ್ನನ್ನು ರಕ್ಷಿಸಿಕೊಳ್ಳುವ ಹಕ್ಕು ಇಸ್ರೇಲ್‌ಗೆ ಇದೆ. ಆ ದೇಶದವರು ಅದನ್ನು ಮಾಡುತ್ತಾರೆ’ ಎಂದು ಟ್ರಂಪ್ ಪ್ರತಿಕ್ರಿಯಿಸಿದರು. ಈ ವೇಳೆ ಇಸ್ರೇಲ್, ಲೆಬನಾನ್ ರಾಯಭಾರಿಗಳು, ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಮತ್ತು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಇದ್ದರು.

ಈ ವೇಳೆ ಪ್ರತಿಕ್ರಿಯಿಸಿದ ಇಸ್ರೇಲ್ ರಾಯಭಾರಿ ಯೆಹಿಲ್ ಲೈಟರ್, ‘ನಿಮ್ಮ ನಾಯಕತ್ವದಲ್ಲಿ ನಾವು ಒಟ್ಟಾಗಿ ಇಸ್ರೇಲ್ ಮತ್ತು ಲೆಬನಾನ್ ನಡುವೆ ಶಾಂತಿ ಸ್ಥಾಪಿಸಬಹುದು ಎಂದು ಭಾವಿಸುತ್ತೇವೆ’ ಎಂದರು.

ಲೆಬನಾನ್ ರಾಯಭಾರಿ ನಾದಾ ಹಮಾದೆ ಮೋವಾದ್, ‘ಲೆಬನಾನ್‌ಗೆ ನೆರವು ನೀಡಲು ಮಾಡಿದ ನಿಮ್ಮ ಪ್ರಯತ್ನಗಳಿಗಾಗಿ ಧನ್ಯವಾದ ಅರ್ಪಿಸುತ್ತೇವೆ’ ಎಂದು ಟ್ರಂಪ್‌ಗೆ ತಿಳಿಸಿದರು.

‘ಹಿಜ್ಬುಲ್ಲಾವನ್ನು ನಿಯಂತ್ರಿಸಲು ಅಮೆರಿಕ ಎಲ್ಲ ರೀತಿಯ ನೆರವು ನೀಡಲಿದೆ’ ಎಂದು ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಮಾತುಕತೆಗೂ ಒಂದು ದಿನ ಮುನ್ನ ಹೇಳಿಕೆ ಬಿಡುಗಡೆ ಮಾಡಿದ್ದ ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್, ‘ಇಸ್ರೇಲ್ ದಾಳಿಗಳನ್ನು ಕೂಡಲೇ ನಿಲ್ಲಿಸಬೇಕು. ಅಲ್ಲದೆ, ಲೆಬನಾನ್‌ನಿಂದ ತನ್ನ ಪಡೆಗಳನ್ನು ಹಿಂತೆಗೆದುಕೊಳ್ಳಬೇಕು. ಇಸ್ರೇಲ್ ಬಂಧಿಸಿರುವ ಲೆಬನಾನ್ ಕೈದಿಗಳನ್ನು ಬಿಡುಗಡೆ ಮಾಡಬೇಕು’ ಎಂದು ಆಗ್ರಹಿಸಿದ್ದರು.



ಇಸ್ರೇಲ್– ಲೆಬನಾನ್ ರಾಯಭಾರಿಗಳ ಜತೆ ಮಾತುಕತೆಯ ಬಳಿಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾತನಾಡಿದರು –ಎಎಫ್‌ಪಿ ಚಿತ್ರ

ಇದಕ್ಕೆ ಪ್ರತಿಕ್ರಿಯಿಸಿದ್ದ ಇಸ್ರೇಲ್ ವಿದೇಶಾಂಗ ಸಚಿವ ಗಿಡಿಯೋನ್ ಸಾರ್ ಅವರು, ‘ಹಿಜ್ಬುಲ್ಲಾವನ್ನು ನಿಶ್ಶಸ್ತ್ರಗೊಳಿಸಲು ಇಸ್ರೇಲ್ ಜತೆಗೆ ಲೆಬನಾನ್ ಕೆಲಸ ಮಾಡಬೇಕು’ ಎಂದು ಕರೆ ನೀಡಿದ್ದರು.

ಇರಾನ್ ಬೆಂಬಲಿತ ಬಂಡುಕೋರ ಗುಂಪಾದ ಹಿಜ್ಬುಲ್ಲಾ, ಕಳೆದ ವಾರ ನಡೆದಿದ್ದ ಕದನ ವಿರಾಮ ಮಾತುಕತೆಗಳನ್ನು ವಿರೋಧಿಸಿತ್ತು. ಅಲ್ಲದೆ ಕದನ ವಿರಾಮ ಜಾರಿಗೆ ಬಂದ ನಂತರ ಎರಡೂ ಕಡೆಯಿಂದ ಅನೇಕ ಬಾರಿ ಅದರ ಉಲ್ಲಂಘನೆಗಳಾಗಿದ್ದವು.

ಪರಮಾಣು ಬಳಸಲ್ಲ: ಟ್ರಂಪ್ ಪುನರುಚ್ಚಾರ

ವಾಷಿಂಗ್ಟನ್/ದುಬೈ: ‘ಇರಾನ್ ವಿರುದ್ಧದ ಯುದ್ಧದಲ್ಲಿ ಪರಮಾಣು ಶಸ್ತ್ರಾಸ್ತ್ರವನ್ನು ಬಳಸುವುದಿಲ್ಲ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುನರುಚ್ಚರಿಸಿದರು.

‘ಪರಮಾಣು ಶಸ್ತ್ರಾಸ್ತ್ರವನ್ನು ನಾನೇಕೆ ಬಳಸಲಿ? ಸಾಂಪ್ರದಾಯಿಕ ಮಾದರಿ ಯುದ್ಧದಲ್ಲಿಯೇ ಮೇಲುಗೈ ಸಾಧಿಸಿದ್ದೇವೆ. ಎದುರಾಳಿಯನ್ನು ನಾಶಮಾಡಿದ್ದೇವೆ’ ಎಂದು ಅವರು ಶ್ವೇತಭವನದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ನಾನು ಪರಮಾಣು ಶಸ್ತ್ರಾಸ್ತ್ರವನ್ನು ಬಳಸುವುದಿಲ್ಲ. ಅದನ್ನು ಯಾರೂ, ಎಂದಿಗೂ ಬಳಸಲು ಅನುಮತಿಸಬಾರದು’ ಎಂದು ಅವರು ಪ್ರತಿಕ್ರಿಯಿಸಿದರು.

ಇರಾನ್ ಜತೆಗಿನ ದೀರ್ಘಾವಧಿಯ ಶಾಂತಿ ಒಪ್ಪಂದಕ್ಕೆ ಎಷ್ಟು ಸಮಯ ಬೇಕಾಗಬಹುದು ಎಂದು ಕೇಳಿದಾಗ, ‘ಅದಕ್ಕಾಗಿ ಆತುರ ಮಾಡಬೇಡಿ’ ಎಂದು ಉತ್ತರಿಸಿದರು.

‘ಎರಡು ವಾರಗಳ ಕದನ ವಿರಾಮದ ಅವಧಿಯಲ್ಲಿ ಇರಾನ್ ತನ್ನ ಶಸ್ತ್ರಾಸ್ತ್ರಗಳನ್ನು ಸ್ವಲ್ಪ ಪ್ರಮಾಣದಲ್ಲಿ ಸಜ್ಜುಗೊಳಿಸಿರಬಹುದು. ಆದರೆ ಅಮೆರಿಕ ಸೇನೆ ಅದನ್ನು ಒಂದು ದಿನದಲ್ಲಿಯೇ ನಾಶಪಡಿಸುವ ಸಾಮರ್ಥ್ಯ ಹೊಂದಿದೆ. ಈಗಾಗಲೇ ಅವರ ನೌಕಾಪಡೆ, ವಾಯುಪಡೆಯನ್ನು ನಾಶ ಪಡಿಸಿದ್ದೇವೆ’ ಎಂದು ಅವರು ಹೇಳಿದರು.

‘ನಾನು ಉತ್ತಮ ಒಪ್ಪಂದವನ್ನು ಬಯಸುತ್ತಿದ್ದೇನೆ. ಬೇಕಾದರೆ ಈಗಲೇ ಒಪ್ಪಂದ ಮಾಡಿಕೊಳ್ಳಬಹುದು, ಆದರೆ ಅದು ಶಾಶ್ವತವಾಗಿರಬೇಕು ಎಂದು ಬಯಸುತ್ತೇನೆ’ ಎಂದು ಟ್ರಂಪ್ ತಿಳಿಸಿದರು.

ಹಡಗು ಉಲ್ಲಂಘನೆ, ಕಣ್ಗಾವಲು: ಹಾರ್ಮುಜ್ ಜಲಸಂಧಿ ಬಳಿ ಇರಾನ್‌ನ ಸಣ್ಣ ದೋಣಿಗಳು ಸಾಗುವುದು ಕಂಡರೆ ಗುಂಡು ಹೊಡೆಯಿರಿ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದೇಶಿಸಿದ ಬೆನ್ನಲ್ಲೇ, ಹೊರ್ಮುಜ್ ಜಲಸಂಧಿಯಲ್ಲಿ ಕಣ್ಗಾವಲು ತೀವ್ರಗೊಂಡಿದೆ.

ಇದರಿಂದ ಅಮೆರಿಕ– ಇರಾನ್ ನಡುವೆ ಉದ್ವಿಗ್ನತೆ ಇನ್ನಷ್ಟು ಹೆಚ್ಚಾಗಿದೆ.

‘ಇರಾನ್ ನಾಯಕತ್ವದಲ್ಲಿ ಬಿರುಕು ಮೂಡಿದೆ ಎಂಬ ಟ್ರಂಪ್ ಹೇಳಿಕೆಯಲ್ಲಿ ಹುರುಳಿಲ್ಲ’ ಎಂದು ಇರಾನ್ ತಳ್ಳಿಹಾಕಿದೆ.

‘ಇರಾನ್‌ನಲ್ಲಿ ತೀವ್ರವಾದಿಗಳು ಅಥವಾ ಮಂದಗಾಮಿಗಳು ಎಂದೇನಿಲ್ಲ. ನಾವೆಲ್ಲರೂ ಇರಾನಿಯನ್ನರು ಮತ್ತು ಕ್ರಾಂತಿಕಾರಿಗಳು’ ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಮತ್ತು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಖಲೀಬಾಫ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಇಸ್ಲಾಮಾಬಾದ್‌ಗೆ ಬಂದಿಳಿದ ಅರಾಘ್ಚಿ

ಇಸ್ಲಾಮಾಬಾದ್/ದುಬೈ (ಪಿಟಿಐ/ಎಪಿ): ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ನೇತೃತ್ವದ ಇರಾನ್ ನಿಯೋಗವು ಶುಕ್ರವಾರ ರಾತ್ರಿ ಇಸ್ಲಾಮಾಬಾದ್‌ಗೆ ಬಂದಿಳಿದಿದೆ.

ಇರಾನ್ ಸರ್ಕಾರದ ವಕ್ತಾರ ಇಸ್ಮಾಯಿಲ್ ಬುಕಾಯ್ ಹಾಗೂ ಇತರರು ಈ ನಿಯೋಗದಲ್ಲಿದ್ದಾರೆ.

ಇನ್ನೊಂದೆಡೆ, ಅಮೆರಿಕದ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್, ಟ್ರಂಪ್ ಅಳಿಯ ಹಾಗೂ ಶ್ವೇತಭವನದ ಸಲಹೆಗಾರ ಜಾರೆಡ್ ಕಶ್ನರ್ ಇಸ್ಲಾಮಾಬಾದ್‌ಗೆ ಶನಿವಾರ ತೆರಳುವರು ಎಂದು ಶ್ವೇತಭವನ ತಿಳಿಸಿದೆ.

ಈ ಮೂಲಕ, ಅಮೆರಿಕ ಹಾಗೂ ಇರಾನ್ ನಡುವಿನ ಎರಡನೇ ಸುತ್ತಿನ ಶಾಂತಿ ಮಾತುಕತೆ ನಿರೀಕ್ಷೆ ಹೆಚ್ಚಿಸಿದೆ.

‘ಅರಾಘ್ಚಿ ಅವರು ಪ್ರಾದೇಶಿಕ ಬೆಳವಣಿಗೆಗಳ ಕುರಿತು ದ್ವಿಪಕ್ಷೀಯ ಮಾತುಕತೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಇರಾನ್ ವಿರುದ್ಧ ಅಮೆರಿಕ, ಇಸ್ರೇಲ್ ಸಾರಿರುವ ಯುದ್ಧ ಮತ್ತು ಈಚಿನ ಪರಿಸ್ಥಿತಿಗಳನ್ನು ಕೇಂದ್ರೀಕರಿಸಿ ಅವರು ಚರ್ಚೆ ನಡೆಸಲಿದ್ದಾರೆ’ ಎಂದು ಇರಾನ್‌ನ ಸರ್ಕಾರಿ ಸ್ವಾಮ್ಯದ ಐಆರ್‌ಎನ್‌ಎ ಸುದ್ದಿಸಂಸ್ಥೆ ತಿಳಿಸಿದೆ. ಶಾಂತಿ ಮಾತುಕತೆ ಬಳಿಕ ಅರಾಘ್ಚಿ ಅವರು ಒಮಾನ್ ಮತ್ತು ರಷ್ಯಾಕ್ಕೂ ತೆರಳಲಿದ್ದಾರೆ ಎಂದು ಅದು ತಿಳಿಸಿದೆ.

ಶಾಂತಿ ಮಾತುಕತೆ ಕುರಿತು ಅರಾಘ್ಚಿ ಅವರು ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ಡಾರ್ ಮತ್ತು ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ಅವರ ಜತೆ ಶುಕ್ರವಾರ ದೂರವಾಣಿ ಮೂಲಕ ಮಾತನಾಡಿ, ಕೆಲ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡಿದ್ದರು. ಇದರ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಈಗಾಗಲೇ ಅಮೆರಿಕದ ಭದ್ರತಾ ತಂಡ ಇಸ್ಲಾಮಾಬಾದ್ ನಲ್ಲಿದೆ ಎಂದು ಸರ್ಕಾರಿ ಮೂಲಗಳನ್ನು ಉಲ್ಲೇಖಿಸಿ ಪಾಕ್ ಮಾಧ್ಯಮಗಳು ವರದಿ ಮಾಡಿವೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಇರಾನ್ ಜತೆಗಿನ ಎರಡನೇ ಸುತ್ತಿನ ಮಾತುಕತೆ ಶುಕ್ರವಾರದಿಂದ ಆರಂಭವಾಗಬಹುದು ಎಂದು ಇತ್ತೀಚೆಗೆ ಹೇಳಿದ್ದರು. ಏಪ್ರಿಲ್ 11 ಮತ್ತು 12ರಂದು ಅಮೆರಿಕ–ಇರಾನ್ ನಡುವೆ ನಡೆದ ಮಾತುಕತೆ ವಿಫಲವಾಗಿತ್ತು.

ಮಾತುಕತೆಗೆ ಪಾಕ್ ಸಿದ್ಧತೆ

ತನ್ನ ಮಧ್ಯಸ್ಥಿಕೆಯಲ್ಲಿ ಅಮೆರಿಕ– ಇರಾನ್ ನಡುವೆ ಎರಡನೇ ಸುತ್ತಿನ ಮಾತುಕತೆ ಆಯೋಜಿಸಲು ಪಾಕಿಸ್ತಾನ ಸಕಲ ಸಿದ್ಧತೆ ಮಾಡಿಕೊಂಡಿದೆ.

ಇಸ್ಲಾಮಾಬಾದ್ ಬರುವ ಅಮೆರಿಕ– ಇರಾನ್‌ನ ಹಿರಿಯ ನಾಯಕರ ಭದ್ರತೆಗಾಗಿ ಅಗತ್ಯ ಭದ್ರತಾ ಸಿಬ್ಬಂದಿಯನ್ನು ಪಾಕ್ ನಿಯೋಜಿಸಿದೆ. ಅಲ್ಲದೆ ಮುಂಜಾಗ್ರತಾ ಕ್ರಮವಾಗಿ ಅವಳಿ ನಗರ ಇಸ್ಲಾಮಾಬಾದ್ ಮತ್ತು ರಾವಲ್ಪಿಂಡಿಯ ಪ್ರಮುಖ ರಸ್ತೆಗಳಲ್ಲಿ ಸಂಚಾರವನ್ನು ಸ್ಥಗಿತಗೊಳಿಸಿದೆ.

ಕಾನೂನು ಮತ್ತು ಸುವ್ಯವಸ್ಥೆ ಕಾಯ್ದುಕೊಳ್ಳಲು 10,000ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿದೆ. ಐದು ದಿನಗಳಿಂದ ಈ ಭಾಗದ ಪ್ರಮುಖ ರಸ್ತೆ, ಸಂಪರ್ಕ ರಸ್ತೆಗಳು, ಮಾರುಕಟ್ಟೆಗಳು, ಬ್ಯಾಂಕ್‌ಗಳು, ಹಳೆ ವಿಮಾನ ನಿಲ್ದಾಣಗಳನ್ನು ಬಂದ್ ಮಾಡಿದೆ.

ಸುದ್ದಿ 2 ನಿಮಿಷ

ಎಂಆರ್‌ಪಿಎಲ್‌ಗೆ ₹1,931 ಕೋಟಿ ನಿವ್ವಳ ಲಾಭ

ಮಂಗಳೂರು: ಮಂಗಳೂರು ರಿಫೈನರಿ ಆ್ಯಂಡ್ ಪೆಟ್ರೊ ಕೆಮಿಕಲ್ಸ್ (ಎಂಆರ್‌ಪಿಎಲ್) ಸಂಸ್ಥೆ 2025–26ನೇ ಆರ್ಥಿಕ ವರ್ಷದಲ್ಲಿ ಒಟ್ಟು ₹1,931 ಕೋಟಿ ನಿವ್ವಳ ಲಾಭ ದಾಖಲಿಸಿದೆ.

ಶುಕ್ರವಾರ ನಡೆದ ನಿರ್ದೇಶಕರ ಮಂಡಳಿಯ 274ನೇ ಸಭೆಯಲ್ಲಿ 2025–26ನೇ ಸಾಲಿನ ಆರ್ಥಿಕ ಫಲಿತಾಂಶ ಹಾಗೂ ನಾಲ್ಕನೇ ತ್ರೈಮಾಸಿಕದ ಫಲಿತಾಂಶಕ್ಕೆ ಅನುಮೋದನೆ ನೀಡಲಾಯಿತು.

ನಾಲ್ಕನೇ ತ್ರೈಮಾಸಿಕದಲ್ಲಿ ಸಂಸ್ಥೆ ₹28,493 ಕೋಟಿ ವಹಿವಾಟು ನಡೆಸಿ ₹119 ಕೋಟಿ ನಿವ್ವಳ ಲಾಭ ದಾಖಲಿಸಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ವಹಿವಾಟಿನಲ್ಲಿ (₹27,602 ಕೋಟಿ) ಅಲ್ಪ ಏರಿಕೆಯಾಗಿದ್ದರೂ ನಿವ್ವಳ ಲಾಭದಲ್ಲಿ (ಕಳೆದ ವರ್ಷದ ಇದೇ ಅವಧಿಯಲ್ಲಿ ₹363 ಕೋಟಿ) ಭಾರಿ ಇಳಿಕೆಯಾಗಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಸಂಸ್ಥೆ ಒಟ್ಟಾರೆ ₹1,05,155 ಕೋಟಿ ವಹಿವಾಟು ನಡೆಸಿದೆ. ಇದರ ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ (₹1,09,280 ಕೋಟಿ) ಒಟ್ಟು ವಹಿವಾಟಿನಲ್ಲಿ ಅಲ್ಪ ಇಳಿಕೆ ದಾಖಲಾಗಿದೆ. ಆದರೆ, 2024–25ನೇ ಸಾಲಿನಲ್ಲಿ ಸಂಸ್ಥೆಯ ನಿವ್ವಳ ಲಾಭ ಕೇವಲ ₹51 ಕೋಟಿ ಇತ್ತು. ಈ ವರ್ಷ ಅದು ₹1,931 ಕೋಟಿಯಷ್ಟಾಗಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಕೊನೆಯ ತ್ರೈಮಾಸಿಕದಲ್ಲಿ ಸಂಸ್ಥೆ 43.5 ಲಕ್ಷ ಟನ್ ಕಚ್ಚಾ ತೈಲ ಸಂಸ್ಕರಣೆ ಮಾಡಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಅದರ ಪ್ರಮಾಣ 46.4 ಲಕ್ಷ ಟನ್ ಆಗಿತ್ತು. ಒಟ್ಟಾರೆ ಆರ್ಥಿಕ ವರ್ಷದಲ್ಲಿ 1.7 ಕೋಟಿ ಟನ್ (ಕಳೆದ ವರ್ಷ 1.81 ಕೋಟಿ ಟನ್) ತೈಲ ಸಂಸ್ಕರಣೆ ಮಾಡಿದೆ.



ರಿಲಯನ್ಸ್ ಲಾಭ ಇಳಿಕೆ

ನವದೆಹಲಿ (ಪಿಟಿಐ): 2025–26ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ನಿವ್ವಳ ಲಾಭದಲ್ಲಿ ಶೇ 12.5ರಷ್ಟು ಇಳಿಕೆ ಆಗಿದೆ.

2024–25ರ ಆರ್ಥಿಕ ವರ್ಷದಲ್ಲಿ ಕಂಪನಿಯು ₹19,407 ಕೋಟಿ ಲಾಭ ಗಳಿಸಿತ್ತು. ಅದು ಈ ಬಾರಿ ₹16,971 ಕೋಟಿಗೆ ಇಳಿದಿದೆ ಎಂದು ಕಂಪನಿ ಶುಕ್ರವಾರ ಷೇರುಪೇಟೆಗೆ ತಿಳಿಸಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿ ₹18,645 ಕೋಟಿ ಲಾಭ ಗಳಿಸಿತ್ತು.

ಜಾಗತಿಕ ಮಟ್ಟದಲ್ಲಿ ಉಂಟಾದ ಇಂಧನ ಬಿಕ್ಕಟ್ಟಿನಿಂದಾಗಿ ಕಂಪನಿಯ ವ್ಯವಹಾರದ ಮೇಲೆ ಪರಿಣಾಮ ಬೀರಿದೆ. ಕಂಪನಿಯ ವರಮಾನವು ₹2.69 ಲಕ್ಷ ಕೋಟಿಯಿಂದ ₹3.03 ಲಕ್ಷ ಕೋಟಿಗೆ ಹೆಚ್ಚಳವಾಗಿದೆ.

ಕಳೆದ ಪೂರ್ಣ ಆರ್ಥಿಕ ವರ್ಷದಲ್ಲಿ ಕಂಪನಿಯು ₹80,775 ಕೋಟಿ ಲಾಭ ಗಳಿಸಿತ್ತು. 2024–25ರಲ್ಲಿ ₹69,648 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದ ಪ್ರಮಾಣ ಶೇ 16ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ. ರಿಲಯನ್ಸ್ ರಿಟೇಲ್ ಲಾಭ ₹3,563 ಕೋಟಿಯಾಗಿದೆ. ಜಿಯೊ ಪ್ಲ್ಯಾಟ್‌ಫಾರ್ಮ್ಸ್ ಕಂಪನಿಯು ಮಾರ್ಚ್ ತ್ರೈಮಾಸಿಕದಲ್ಲಿ ₹7,935 ಕೋಟಿ ತೆರಿಗೆ ನಂತರದ ಲಾಭ ಗಳಿಸಿದೆ.

ಅಡಿಕೆ ಧಾರಣೆ

ಚಿತ್ರದುರ್ಗ		ಗೊರಬಲು	19010-43119	ರಾಶಿ	50696-53861
ಆಪಿ	55619-56029	**ಪುತ್ತೂರು**		**ಯಲ್ಲಾಪುರ**	
ಬೆಟ್ಟೆ	37459-37899	ಕೋಕ	20000-34500	ಆಪಿ	58179-61119
ಕೆಂಪುಗೋಟು	31409-31810	ಹೊಸತು	30000-47500	ಬಿಳಿಗೋಟು	16099-41399
ರಾಶಿ	55139-55569	**ಶಿರಸಿ**		ಚಾಲಿ	37900-49009
ಶಿವಮೊಗ್ಗ		ಬೆಟ್ಟೆ	40461-52669	ಕೋಕ	16509-34169
ಸರಕು	63699-96896	ಬಿಳಿಗೋಟು	23899-39169	ಕೆಂಪುಗೋಟು	20600-38529
ಬೆಟ್ಟೆ	47199-65372	ಚಾಲಿ	44099-48611	ರಾಶಿ	48921-57565
ರಾಶಿ	43366-56159	ಕೆಂಪುಗೋಟು	23699-40199	ತಟ್ಟಿಬೆಟ್ಟೆ	38969-52215



ಮೆಟಾ: 8 ಸಾವಿರ ಸಿಬ್ಬಂದಿ ಕಡಿತ

ನ್ಯೂಯಾರ್ಕ್ (ಎಎಫ್‌ಪಿ): ಮೆಟಾ ಕಂಪನಿ, ತನ್ನ 8 ಸಾವಿರ ಸಿಬ್ಬಂದಿಯನ್ನು (ಶೇ 10ರಷ್ಟು) ಕೆಲಸದಿಂದ ವಜಾಗೊಳಿಸಲು ಯೋಜಿಸಿದೆ.

ಕಂಪನಿಯು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಲ್ಲಿ (ಎ.ಐ) ಅಪಾರ ಹೂಡಿಕೆ ಮಾಡಿದ್ದು, ಎ.ಐಗೆ ಮಾಡುವ ವೆಚ್ಚ ಹೆಚ್ಚಳವಾಗಿದೆ. ಹೀಗಾಗಿ ಉದ್ಯೋಗಿಗಳನ್ನು ವಜಾಗೊಳಿಸಲಿದೆ ಎಂದು ಮೂಲಗಳು ತಿಳಿಸಿವೆ.

ಕಂಪನಿಯು ಮುಂದಿನ ತಿಂಗಳು ಅಂದಾಜು 8 ಸಾವಿರ ಸಿಬ್ಬಂದಿಯನ್ನು ವಜಾ ಮಾಡಲಿದೆ. ಜೊತೆಗೆ ಸಾವಿರಾರು ಹುದ್ದೆಗಳನ್ನು ಭರ್ತಿ ಮಾಡದೆ ಬಿಡಲಿದೆ ಎಂದು ತಿಳಿಸಿದೆ.

ಕಂಪನಿಯ ವೆಚ್ಚವು ₹3.31 ಲಕ್ಷ ಕೋಟಿಗೆ ಏರಿಕೆಯಾಗಿದೆ. ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 40ರಷ್ಟು ಹೆಚ್ಚಳ ಎಂದು ತಿಳಿಸಿದೆ.



ಪೇಟಿಎಂ ಪೇಮೆಂಟ್ಸ್ ಬ್ಯಾಂಕ್: ಪರವಾನಗಿ ರದ್ದು

ಮುಂಬೈ (ಪಿಟಿಐ): ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ನೀಡಲಾದ ಬ್ಯಾಂಕಿಂಗ್ ಪರವಾನಗಿಯನ್ನು ರದ್ದುಗೊಳಿಸಿರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ಬ್ಯಾಂಕ್ ಮತ್ತು ಠೇವಣಿದಾರರ ಹಿತಾಸಕ್ತಿಗೆ ವಿರುದ್ಧವಾದ ರೀತಿಯಲ್ಲಿ ವ್ಯವಹಾರಗಳನ್ನು ನಡೆಸಿದ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಆರ್‌ಬಿಐ ಹೇಳಿದೆ. ‘ಬ್ಯಾಂಕ್‌ನ ಆಡಳಿತ ಮಂಡಳಿಯ ವರ್ತನೆಯು ಠೇವಣಿದಾರರು ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ. ಇದರ ಪರಿಣಾಮವಾಗಿ, ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಭವಿಷ್ಯದಲ್ಲಿ ಯಾವುದೇ ಬ್ಯಾಂಕಿಂಗ್ ವ್ಯವಹಾರವನ್ನು ನಡೆಸದಂತೆ ನಿಷೇಧಿಸಲಾಗಿದೆ’ ಎಂದಿದೆ.

‘ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಮುಚ್ಚಲು ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗುವುದು. ಬ್ಯಾಂಕ್‌ಗೆ ಬಾಗಿಲು ಹಾಕಬೇಕಾದ ಸಂದರ್ಭ ಬಂದರೂ ತನ್ನೆಲ್ಲಾ ಠೇವಣಿದಾರರ ಹಣವನ್ನು ಮರುಪಾವತಿಸಲು ಬೇಕಾದಷ್ಟು ನಗದನ್ನು ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಹೊಂದಿದೆ’ ಎಂದು ಆರ್‌ಬಿಐ ಹೇಳಿದೆ.

2022ರ ಮಾರ್ಚ್ 11ರಿಂದ ಜಾರಿಗೆ ಬರುವಂತೆ ಹೊಸ ಗ್ರಾಹಕರನ್ನು ಸೇರ್ಪಡೆ ಮಾಡಿಕೊಳ್ಳದಂತೆ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ಆರ್‌ಬಿಐ ನಿರ್ಬಂಧ ವಿಧಿಸಿತ್ತು.

ತಡೆರಹಿತ ಸಂಚಾರಕ್ಕೆ ಕ್ರಮ: ಗಡ್ಕರಿ

ನವದೆಹಲಿ (ಪಿಟಿಐ): ‘ಡಿಸೆಂಬರ್ ವೇಳೆಗೆ ದೇಶದ ಹಲವಾರು ರಾಷ್ಟ್ರೀಯ ಹೆದ್ದಾರಿಗಳ ಟೋಲ್ ಪ್ಲಾಜಾಗಳಲ್ಲಿ ತಡೆರಹಿತ ಸಂಚಾರ ವ್ಯವಸ್ಥೆ ಜಾರಿಗೆ ತರಲು ಯೋಜಿಸಲಾಗಿದೆ’ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಸರಕುಗಳ ಸಾಗಣೆ ವೆಚ್ಚವನ್ನು ತಗ್ಗಿಸಲು, ಉತ್ತಮ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕಿದೆ ಎಂದು ಶುಕ್ರವಾರ ತಿಳಿಸಿದ್ದಾರೆ.

ಈ ಹೊಸ ವ್ಯವಸ್ಥೆಯು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ವಿಶ್ಲೇಷಣೆಯೊಂದಿಗೆ ಸ್ವಯಂಚಾಲಿತವಾಗಿ ವಾಹನಗಳ ಸಂಖ್ಯಾಫಲಕ ಗುರುತಿಸುವಿಕೆ (ಎಎನ್‌ಪಿಆರ್) ಮತ್ತು ಆರ್‌ಎಫ್‌ಐಡಿ ಆಧಾರಿತ ಫಾಸ್ಟ್ಯಾಗ್ ನೊಂದಿಗೆ ತಡೆರಹಿತ ಸಂಚಾರವನ್ನು ಸಾಧ್ಯವಾಗಿಸಲಿದೆ.

9,380 ಕಿ.ಮೀ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ: 2025–26ರ ಆರ್ಥಿಕ ವರ್ಷದಲ್ಲಿ ದೇಶದಲ್ಲಿ 9,380 ಕಿ.ಮೀ ಉದ್ದದ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಆಗಿದೆ. ಇದು ಸರ್ಕಾರ ಹೊಂದಿರುವ 10 ಸಾವಿರ ಕಿ.ಮೀ ರಸ್ತೆ ನಿರ್ಮಾಣದ ಗುರಿಗಿಂತ ಕಡಿಮೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೈಕೊಟ್ಟ ಪ್ರಿಯಕರ: ₹75 ಸಾವಿರ ಜೀವನಾಂಶ

ಒಂದನೇ ಪುಟದಿಂದ...

‘ಹೀಗಾಗಿ ಪ್ರಕರಣ ಇತ್ಯರ್ಥವಾಗುವ ತನಕ ಸಂತ್ರಸ್ತೆಯ ಜೀವನ ನಿರ್ವಹಣೆಗೆ ಪ್ರತಿ ತಿಂಗಳೂ ₹75 ಸಾವಿರ ಆರ್ಥಿಕ ನೆರವು ನೀಡಬೇಕು. ಮೊದಲ ಕಂತಿನ ಮೊತ್ತವನ್ನು ವಾರದೊಳಗೆ ಪಾವತಿಸಬೇಕು’ ಎಂದು ದೇಶದಲ್ಲೇ ಮೊದಲ ಬಾರಿಗೆ ಇಂತಹದೊಂದು ಮಹತ್ವದ ನ್ಯಾಯಾಂಗ ಆದೇಶವನ್ನು ಏಕಸದಸ್ಯ ನ್ಯಾಯಪೀಠ ಹೊರಡಿಸಿದೆ.

ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸುವಂತೆ ಕೋರಿ ಶ್ರೀಕೃಷ್ಣ ಜೆ.ರಾವ್ (22) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಶುಕ್ರವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಇದೇ ವೇಳೆ ಶ್ರೀಕೃಷ್ಣ ರಾವ್, ಅವರ ತಂದೆ ಮತ್ತು ತಾಯಿಯ ವಿರುದ್ಧ ಅಧೀನ ನ್ಯಾಯಾಲಯದ ಮುಂದಿನ ನ್ಯಾಯಿಕ ಪಕ್ರಿಯೆಗೆ ಮಧ್ಯಂತರ ತಡೆ ನೀಡಿದೆ. ವಿಚಾರಣೆಯನ್ನು ಜೂನ್ 5ಕ್ಕೆ ಮುಂದೂಡಲಾಗಿದೆ.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ಆರೋಪಿಯ ಪೋಷಕರು ಪ್ರಕರಣವನ್ನು ರಾಜಿಸಂಧಾನದ ಮೂಲಕ ಸಮಾಪ್ತಿಗೊಳಿಸಲು ₹50 ಲಕ್ಷದ ಆಮಿಷ ಒಡ್ಡಿರುವುದಾಗಿ ತಿಳಿದು ಬಂದಿದೆ’ ಎಂಬ ಅಂಶವನ್ನು ನ್ಯಾಯಪೀಠಕ್ಕೆ ತಂದರು.

ಇದನ್ನು ಬಲವಾಗಿ ಅಲ್ಲಗಳೆದ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪಿ.ಪಿ.ಹೆಗ್ಡೆ, ‘ಆರೋಪಿ ಮತ್ತು ಸಂತ್ರಸ್ತೆ ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು. ಅವರ ಪ್ರಶ್ನಿತ ಕೃತ್ಯಗಳು ಸಂಪೂರ್ಣ ಸಮ್ಮತಿಯಿಂದಲೇ ಜರುಗಿವೆ. ನ್ಯಾಯಪೀಠ ಉದಾರ ಭಾವನೆ ತೋರಿದರೆ ಉಭಯ ಪಕ್ಷಗಾರರು ಪ್ರಕರಣವನ್ನು ಸೌಹಾರ್ದವಾಗಿ ಬಗೆಹರಿಸಿಕೊಳ್ಳಲು ಸಾಧ್ಯ’ ಎಂದು ಹೇಳಿದರು.

ಆದರೆ, ಈ ಮನವಿಯನ್ನು ಸಾರಾಸಗಟಾಗಿ ತಳ್ಳಿ ಹಾಕಿದ ನ್ಯಾಯಪೀಠ, ‘ಸಂತ್ರಸ್ತೆ ಮತ್ತು ಆಕೆಯ ಬಡಕುಟುಂಬ ಎದುರಿಸುತ್ತಿರುವ ಕಷ್ಟಗಳನ್ನು ಕಡೆಗಣಿಸಲಾಗದು. ತಾಯಿ–ಮಗು ಇಬ್ಬರೂ ದುರ್ಬಲ ಮತ್ತು ಅತಂತ್ರ ಸ್ಥಿತಿಯಲ್ಲಿದ್ದಾರೆ. ಯುವತಿಯೊಬ್ಬಳ ಸುಂದರ ಕನಸುಗಳನ್ನು ಮತ್ತು ಭವಿಷ್ಯವನ್ನು ಮಸುಕಾಗಿಸಿ ಆಕೆಯನ್ನು ಅಕಾಲಿಕವಾಗಿ ತಾಯ್ತನದ ಜವಾಬ್ದಾರಿಗಳಿಗೆ ತಳ್ಳಿರುವ ಆರೋಪಿಯ ನಡೆ ಒಪ್ಪತಕ್ಕದ್ದಲ್ಲ’ ಎಂದು ತೀವ್ರ ಆಘಾತ ವ್ಯಕ್ತಪಡಿಸಿದೆ.

> **ಶಿಕ್ಷಣ ಪಡೆದು ವಿಕಸನಗೊಳ್ಳಬೇಕಿದ್ದ 20ರ ಹರೆಯದ ತರುಣಿಯೊಬ್ಬಳ ಉಜ್ವಲ ಭವಿಷ್ಯ ಮತ್ತು ಕೋಮಲ ಅವಕಾಶಗಳಿಗೆ ಈಗ ಕಾರ್ಮೋಡ ಕವಿದಿದೆ. ಅನಿರೀಕ್ಷಿತ ಬಾಧ್ಯತೆಗಳ ಹೊರೆಯಲ್ಲಿ ಆಕೆ ಬಳಲುತ್ತಿದ್ದಾಳೆ**
> **ಎಂ.ನಾಗಪ್ರಸನ್ನ**, ನ್ಯಾಯಮೂರ್ತಿ

‘ಈ ವಿಷಯದಲ್ಲಿ ಅರ್ಜಿದಾರ ಇನ್ನೂ ವಿದ್ಯಾರ್ಥಿ ಎಂಬುದು ಹೊರೆಯಿಂದ ನುಣುಚಿಕೊಳ್ಳಲು ಸಕಾರಣ ಎನಿಸುವುದಿಲ್ಲ. ಆರೋಪಿಯು ಸಂತ್ರಸ್ತೆಯನ್ನು ಮದುವೆಯಾಗುವ ಭರವಸೆಗೆ ಎಳ್ಳು ನೀರು ಬಿಟ್ಟಿದ್ದಾರೆ. ಅಷ್ಟೇ ಅಲ್ಲ, ಈ ಪ್ರಕರಣದಲ್ಲಿ ಶ್ರೀಕೃಷ್ಣ ರಾವ್ ಪೋಷಕರೂ ಆರೋಪಿಗಳಾಗಿರುವುದು ಪ್ರಕರಣದ ಗಹನತೆಯನ್ನು ಎತ್ತಿ ತೋರಿಸುತ್ತದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣ: ಸಂತ್ರಸ್ತೆಗೆ ಈಗ 10 ತಿಂಗಳ ಗಂಡು ಮಗುವಿದೆ. ಈಕೆಯ ತಾಯಿ ಮನೆಗೆಲಸ ಮತ್ತು ತಂದೆ ಚಿನ್ನದ ಮಳಿಗೆಯಲ್ಲಿ ಸೇಲ್ಸ್‌ಮನ್ ಆಗಿ ಕೆಲಸ ಮಾಡುತ್ತಿದ್ದಾರೆ. ಮಗು ಜನಿಸಿದ ಕಾರಣಕ್ಕಾಗಿ ಸಂತ್ರಸ್ತೆ ಬಿಎಸ್‌ಸಿ ಪದವಿ ಶಿಕ್ಷಣವನ್ನು ಅರ್ಧಕ್ಕೇ ಕೈಬಿಟ್ಟಿದ್ದಾರೆ.

ಶ್ರೀಕೃಷ್ಣ ರಾವ್ ವಿರುದ್ಧ ಪುತ್ತೂರಿನ ಪೊಲೀಸ್ ಠಾಣೆಯಲ್ಲಿ, ಭಾರತೀಯ ನ್ಯಾಯ ಸಂಹಿತಾ–2023ರ ಕಲಂ 64, 92 (ಎಂ) ಮತ್ತು 69ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಇದರ ನ್ಯಾಯಿಕ ವಿಚಾರಣೆ 6ನೇ ಹೆಚ್ಚುವರಿ ಮಂಗಳೂರು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ನಡೆಯುತ್ತಿದೆ.

ದೇಶದಲ್ಲೇ ಮೊದಲ ಆದೇಶ

ಒಂದನೇ ಪುಟದಿಂದ...

ವೈವಾಹಿಕ ವ್ಯಾಜ್ಯಗಳಲ್ಲಿ ಪರಿಣತಿ ಹೊಂದಿರುವ ಹೈಕೋರ್ಟ್‌ನ ಪದಾಂಕಿತ ಹಿರಿಯ ವಕೀಲೆ ಎಸ್.ಸುಶೀಲಾ ಅವರು, ‘ಇಂದಿನ ಆದೇಶ ಮಧ್ಯಂತರ ಆದೇಶ ಎನಿಸಿದ್ದರೂ ಅಪಕೃತ್ಯಗಳನ್ನು ತಡೆಯುವ ಕಾನೂನಿಗೆ ಹೊಸ ಭಾಷ್ಯ ಬರೆದಿದೆ’ ಎಂದು ಹೇಳಿದ್ದಾರೆ.

‘ದೇಶದ ಇತರೆ ಹೈಕೋರ್ಟ್‌ಗಳಲ್ಲಿ ಈ ರೀತಿಯ ಆರ್ಥಿಕ ನೆರವಿನ ಯಾವುದೇ ಆದೇಶ ಸದ್ಯಕ್ಕೆ ನಿಖರವಾಗಿಲ್ಲ. ಇಂದಿನ ಡಿಜಿಟಲ್ ಯುಗದಲ್ಲಿ ಇನ್ನು ಮುಂದೆ ಪ್ರೀತಿಸಿ, ಮದುವೆಯಾಗುವುದಾಗಿ ನಂಬಿಸಿ ಲೈಂಗಿಕ ಸಂಪರ್ಕ ಬೆಳೆಸಿ ಮೋಸ ಎಸಗುವ ಖದೀಮರಿಗೆ ಈ ಆದೇಶ ತಕ್ಕ ಪಾಠ ಕಲಿಸುವುದಕ್ಕೆ ಪೂರ್ವ ನಿದರ್ಶನವಾಗಲಿದೆ’ ಎನ್ನುತ್ತಾರೆ ಹೈಕೋರ್ಟ್‌ನ ಯುವ ವಕೀಲ ಪಿ.ರಾಹುಲ್ ಕೃಷ್ಣಾರೆಡ್ಡಿ.

ಮಾಧ್ಯಮಗಳ ಮುಂದೆ ಹೋಗದಂತೆ ನಿರ್ಬಂಧ


‘ಮಾಧ್ಯಮಗಳು ಈ ವಿಷಯವನ್ನು ಸ್ಥಳೀಯವಾಗಿ ರಾಜಕೀಯ ಕಾರಣಗಳಿಗೆ ಬಳಸಿಕೊಳ್ಳುತ್ತಿವೆ. ಹಾಗಾಗಿ, ಮಾಧ್ಯಮಗಳಿಗೆ ನಿರ್ಬಂಧ ಹೇರಬೇಕು’ ಎಂಬ ಪಿ.ಪಿ.ಹೆಗ್ಡೆಯವರ ಮನವಿಯನ್ನು ನ್ಯಾಯಪೀಠ ತಿರಸ್ಕರಿಸಿದೆ. ‘ಇಂತಹ ವಿಷಯಗಳಲ್ಲಿ ಎಲ್ಲರನ್ನೂ ಸುಮ್ಮನಿರುವಂತೆ ಆದೇಶಿಸಲಾಗದು’ ಎಂದು ಖಂಡತುಂಡವಾಗಿ ನುಡಿದಿದೆ.

‘ಸಂತ್ರಸ್ತೆ, ಆಕೆಯ ಪೋಷಕರು ಅಥವಾ ಸಂಬಂಧಿಗಳು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾರ್ವಜನಿಕವಾಗಿ ಮಾಧ್ಯಮಗಳ ಮುಂದೆ ಯಾವುದೇ ವಿವರ ನೀಡಕೂಡದು’ ಎಂದು ನಿರ್ದೇಶಿಸಿದೆ.

‘ಸಂತ್ರಸ್ತೆಯ ಮಗುವಿಗೆ ‘ಶ್ರೀಕೃಷ್ಣ’ ಎಂದು ನಾಮಕರಣ ಮಾಡುವ ಉದ್ದೇಶ ಹೊಂದಲಾಗಿತ್ತು. ಆದರೆ, ಬಡತನ ಮತ್ತು ದುಃಸ್ಥಿತಿಯಲ್ಲಿ ಇಂತಹುದೊಂದು ಸಂತಸದ ಗಳಿಗೆ ಇಲ್ಲವಾಗಿದೆ’ ಎಂದು ಸಂತ್ರಸ್ತೆ ಪರ ಹೈಕೋರ್ಟ್ ವಕೀಲ ಫ್ರಾನ್ಸಿಸ್ ಝೇವಿಯರ್ ನ್ಯಾಯಪೀಠಕ್ಕೆ ಸಂತ್ರಸ್ತೆಯ ಗೋಳನ್ನು ವಿವರಿಸಿದರು.







ಕೊಹ್ಲಿ, ಪಡಿಕ್ಕಲ್ ಜುಗಲ್‌ಬಂದಿ

ಬೆಂಗಳೂರಿನಲ್ಲಿ ಕೊನೆಯ ಲೀಗ್ ಪಂದ್ಯ ಗೆದ್ದ ಆರ್‌ಸಿಬಿ • ಟೈಟನ್ಸ್‌ಗೆ ಸೋಲು

• ನಾಗೇಶ್ ಶೆಣೈ

ಬೆಂಗಳೂರು: ವಿರಾಟ್ ಕೊಹ್ಲಿ ಮತ್ತು ದೇವದತ್ತ ಪಡಿಕ್ಕಲ್ ಅವರು ಮಿಂಚಿನ ಅರ್ಧಶತಕಗಳ ಮೂಲಕ ತವರಿನ ಪ್ರೇಕ್ಷಕರಿಗೆ ಭರಪೂರ ರಸದೌತಣ ಉಣಬಡಿಸಿದರು. ಗುಜರಾತ್ ಟೈಟನ್ಸ್ ವಿರುದ್ಧ ಪಂದ್ಯದಲ್ಲಿ ಬಿರುಸಿನ ಶತಕದ ಜೊತೆಯಾಟವಾಡಿದ ಈ ಜೋಡಿ, ಬೆಂಗಳೂರಿನ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಅಭಿಮಾನಿಗಳಿಗೆ ಗೆಲುವಿನ ಉಡುಗೊರೆ ನೀಡಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಆರಂಭ ಆಟಗಾರ ಸಾಯಿ ಸುದರ್ಶನ್ (100, 58 ಎಸೆತ) ಅವರ ಆಕರ್ಷಕ ಶತಕದ ನೆರವಿನಿಂದ ಗುಜರಾತ್ ಟೈಟನ್ಸ್ 3 ವಿಕೆಟ್‌ಗೆ 205 ರನ್‌ಗಳ ಉತ್ತಮ ಮೊತ್ತ ಗಳಿಸಿತ್ತು. ಅದರೆ ಎದುರಿಸಿದ ಮೊದಲ ಎಸೆತದಲ್ಲೇ ಜೀವದಾನ ಪಡೆದಿದ್ದ ಕೊಹ್ಲಿ (81, 44 ಎಸೆತ) ಮತ್ತು ಸ್ಥಳೀಯ ಹೀರೊ ಪಡಿಕ್ಕಲ್ (55, 27 ಎಸೆತ, 4x2, 6x6) ಈ ಮೊತ್ತವನ್ನು ಸವಾಲೇ ಅಲ್ಲವೆಂಬಂತೆ ಆಡತೊಡಗಿದರು. 115 ರನ್‌ಗಳ ಈ ಜೊತೆಯಾಟ ಗೆಲುವಿಗೆ ಸೋಪಾನವಾಯಿತು.

ಇವರಿಬ್ಬರ ನಿರ್ಗಮನ ನಂತರ ನಾಯಕ ರಜತ್ ಪಾಟೀದಾರ್, ಜಿತೇಶ್ ಶರ್ಮಾ ಬೇಗ ನಿರ್ಗಮಿಸಿದರು. ಎಲ್ಲರೂ ಅವಸರದಲ್ಲಿದ್ದಂತೆ ಕಂಡರು. ಆದರೆ ಟಿಮ್ ಡೇವಿಡ್ (ಅಜೇಯ 10) ಮತ್ತು ಕೃಣಾಲ್ ಪಾಂಡ್ಯ (ಔಟಾಗದೇ 23, 12 ಎಸೆತ) ಅವರು ಇನ್ನೂ ಏಳು ಎಸೆತಗಳಿರುವಂತೆ (5ಕ್ಕೆ 206) ತಂಡವನ್ನು ಗುರಿ ತಲುಪಿಸಿದರು. ಐದು ವಿಕೆಟ್‌ಗಳಿಂದ ಗೆದ್ದ ಆರ್‌ಸಿಬಿ, ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು. ಇದು ಆರ್‌ಸಿಬಿಗೆ ತವರಿನಲ್ಲಿ 50ನೇ ಜಯ.

ಒಂದೇ ತಾಣದಲ್ಲಿ ಅತಿ ಹೆಚ್ಚು ಜಯ		
ಗೆಲುವು	ತಂಡ	ತಾಣ
58	ಎಂಐ	ವಾಂಖೆಡೆ
55	ಕೆಕೆಆರ್	ಕೋಲ್ಕತ್ತ
53	ಸಿಎಸ್‌ಕೆ	ಚೆನ್ನೈ
50	ಆರ್‌ಸಿಬಿ	ಬೆಂಗಳೂರು
40	ಎಸ್‌ಆರ್‌ಎಚ್	ಹೈದರಾಬಾದ್

ಮೊಹಮದ್ ಸಿರಾಜ್ ಬೌಲಿಂಗ್‌ನಲ್ಲಿ ಮಿಡ್ ವಿಕೆಟ್‌ನಲ್ಲಿದ್ದ ವಾಷಿಂಗ್ಟನ್ ಸುಂದರ್ ಅವರು ಕೊಹ್ಲಿ ಅವರ ಕ್ಯಾಚ್ ಬಿಟ್ಟಿದ್ದು ದುಬಾರಿಯಾಯಿತು. ಮೊದಲ ಪಂದ್ಯ ಆಡುವ ಅವಕಾಶ ಪಡೆದ ಇಂಗ್ಲೆಂಡ್‌ನ ಯುವ ಬ್ಯಾಟರ್ ಜೇಕಬ್ ಬೆಥೆಲ್, ಸಿರಾಜ್ ಬೌಲಿಂಗ್‌ನಲ್ಲಿ ಪಾಯಿಂಟ್‌ನಲ್ಲಿ ಕ್ಯಾಚಿತ್ತರು. ನಂತರ ಕೊಹ್ಲಿ ಮತ್ತು ಪಡಿಕ್ಕಲ್ ಅವರ ಆಟದ ವೈಭವ ಭರ್ತಿಯಾಗಿದ್ದ ಪ್ರೇಕ್ಷಕರಿಗೆ ಮುದ ನೀಡಿತು.

ಕಗಿಸೊ ರಬಾಡ, ಪ್ರಸಿದ್ಧ ಕೃಷ್ಣ, ರಶೀದ್ ಖಾನ್ ಅವರೆಲ್ಲರನ್ನೂ ಈ ಇಬ್ಬರು ದಂಡಿಸಿದರು. ರನ್ ವೇಗ ಹೆಚ್ಚಿಸಲು ಪೈಪೋಟಿಯಲ್ಲಿ ಆಡಿದರು. ರಶೀದ್ ಬೌಲಿಂಗ್‌ನಲ್ಲಿ ಸತತ ಎರಡು ಸಿಕ್ಸರ್‌ಗಳನ್ನು ಸಿಡಿಸಿದ ಪಡಿಕ್ಕಲ್ ಮೊದಲು ಅರ್ಧ ಶತಕ ದಾಟಿದರು. ಮರು ಓವರಿನಲ್ಲಿ ಕೊಹ್ಲಿ ಸಹ ಅರ್ಧ ಶತಕ ಪೂರೈಸಿದರು.

ರಬಾಡ ಬೌಲಿಂಗ್‌ನಲ್ಲಿ ಫ್ಲಿಕ್ ಮಾಡುವ ಮೂಲಕ ಸಿಕ್ಸರ್ ಗಳಿಸಿದ ಕೊಹ್ಲಿ ಶತಕದ ಜೊತೆಯಾಟ ಪೂರೈಸಿದರು. ಆದರೆ ಇಬ್ಬರೂ ಅಲ್ಪ ಅಂತರದಲ್ಲಿ ನಿರ್ಗಮಿಸಿದರು. ಮೊತ್ತ 141 ರನ್‌ಗಳಾಗಿದ್ದಾಗ ರಶೀದ್ ಅವರ ಗೂಗ್ಲಿ ಎಸೆತದಲ್ಲಿ ಮುನ್ನುಗ್ಗಿ ಹೊಡೆಯಲು ಯತ್ನಿಸಿದ ಪಡಿಕ್ಕಲ್ ಬೌಲ್ಡ್ ಆದರು. 13 ರನ್‌ಗಳ ತರುವಾಯ ಜೇಸನ್ ಹೋಲ್ಡರ್ ಅವರ ಬೌನ್ಸರ್‌ನಲ್ಲಿ ಇನ್‌ಸೈಡ್ ಎಜ್ ಆಗಿ ಬೌಲ್ಡ್ ಆದರು. ಆದರೆ ತಂಡದ ಗೆಲುವಿನ ಧಾವಂತಕ್ಕೆ ಇದರಿಂದ ಅಡ್ಡಿಯಾಗಲಿಲ್ಲ.

ಮಿಂಚಿದ ಸಾಯಿ: ಇದಕ್ಕೆ ಮೊದಲು, ಸಾಯಿ ಅವರ ಅಮೋಘ ಆಟದ ನೆರವಿನಿಂದ ನೆರವಿನಿಂದ ಟೈಟನ್ಸ್ ಸವಾಲಿನ ಮೊತ್ತ ದಾಖಲಿಸಿತ್ತು. ಈ ಋತುವಿನಲ್ಲಿ ಸ್ವಲ್ಪ ಮಂಕಾಗಿದ್ದ ಸಾಯಿ ಅವರು ಈ ಪಂದ್ಯಕ್ಕೆ ಮೊದಲು ಆರು ಇನಿಂಗ್ಸ್‌ಗಳಲ್ಲಿ ಒಂದು ಅರ್ಧ ಶತಕವನ್ನಷ್ಟೇ ಗಳಿಸಿದ್ದರು.

ನಾಯಕ ಶುಭಮನ್ ಗಿಲ್ (32, 24 ಎಸೆತ) ಜೊತೆ 128 ರನ್ (76 ಎಸೆತ) ಸೇರಿಸಿ ಅವರು ಒಳ್ಳೆಯ ಬುನಾದಿ ಒದಗಿಸಿಕೊಟ್ಟರು. ಕಟ್, ಡ್ರೈವ್ ಮತ್ತು ಸ್ಕೂಪ್‌ಗಳ ಮೂಲಕ ರನ್ ಪೇರಿಸುತ್ತ ಹೋಗಿದ್ದು ಸಾಯಿ ಅವರ ವಿಶ್ವಾಸಕ್ಕೆ ಕನ್ನಡಿಯಾಯಿತು.

ರಸಿಕ್ ದಾರ್ (6ನೇ ಓವರ್) ಬೌಲಿಂಗ್‌ನಲ್ಲಿ ಲಾಂಗ್ ಆನ್‌ಗೆ ಬೌಂಡರಿ ಬಾರಿಸಿ ಅವರು ಅರ್ಧ ಶತಕ ಗಳಿಸಿದರು. ಕೃಣಾಲ್ ಅವರ 'ಬೌನ್ಸರ್' ಒಂದನ್ನು ಬ್ಯಾಕ್‌ವರ್ಡ್ ಪಾಯಿಂಟ್ ಮೇಲೆ ಸಿಕ್ಸರ್‌ಗೆ ಎತ್ತಿ ಐಪಿಎಲ್‌ನಲ್ಲಿ ವೇಗವಾಗಿ 2000 ರನ್ ಪೂರೈಸಿದ ಶ್ರೇಯಕ್ಕೆ ಪಾತ್ರರಾದರು. ಸಾಯಿ ಅವರು 47 ಇನಿಂಗ್ಸ್‌ನಲ್ಲಿ ಈ ಮೈಲಿಗಲ್ಲು ತಲುಪಿದರೆ, ಕ್ರಿಸ್ ಗೇಲ್ 48 ಇನಿಂಗ್ಸ್ ತೆಗೆದುಕೊಂಡಿದ್ದರು.

ಸುಯಶ್ ಶರ್ಮಾ ಕೊನೆಗೂ ಈ ಜೊತೆಯಾಟ ಮುರಿದರು. ಲಾಂಗ್‌ಆನ್ ಮೇಲೆ ಆಡಲು ಹೋದ ಗಿಲ್, ಪಡಿಕ್ಕಲ್‌ಗೆ ಕ್ಯಾಚ್ ನೀಡಿದರು.

ಸುಯಶ್ ಅವರ ಮುಂದಿನ ಓವರಿನಲ್ಲಿ ಸಾಯಿ ಐಪಿಎಲ್‌ನಲ್ಲಿ ಮೂರನೇ ಶತಕ ಪೂರೈಸಿ ಸಂಭ್ರಮಿಸಿದರು. ಆದರೆ ನಂತರ ಹ್ಯಾಜಲ್‌ವುಡ್ ಬೌಲಿಂಗ್‌ನಲ್ಲಿ ಅವರಿಗೇ ಕ್ಯಾಚ್ ನೀಡಿದರು. ಜೋಸ್ ಬಟ್ಲರ್ (25, 16 ಎಸೆತ) ಕೂಡ ರನ್ ವೇಗ ಹೆಚ್ಚಿಸುವತ್ತ ಲಕ್ಷ್ಯ ನೀಡಿದರು. ವಾಷಿಂಗ್ಟನ್ ಸುಂದರ್ (ಅಜೇಯ 19, 12 ಎಸೆತ) ಜೊತೆಗೂಡಿದ ಹೋಲ್ಡರ್ (ಅಜೇಯ 23, 10ಎಸೆತ) ತಂಡದ ಮೊತ್ತ 200 ದಾಟಿಸಿದರು.

ಆರ್‌ಸಿಬಿಯ ಆರಂಭ ಆಟಗಾರ ಫಿಲ್ ಸಾಲ್ಟ್ ಗಾಯಾಳಾಗಿ ಪಂದ್ಯಕ್ಕೆ ಅಲಭ್ಯರಾಗಿದ್ದರು.





ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಹಾಗೂ ದೇವದತ್ತ ಪಡಿಕ್ಕಲ್ ಪ್ರಜಾವಾಣಿ ಚಿತ್ರಗಳು: ರಂಜು ಪಿ



ಶತಕ ಬಾರಿಸಿದ ಸಾಯಿ ಸುದರ್ಶನ್

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್: 3 ವಿಕೆಟ್‌ಗೆ 205 (20 ಓವರ್‌ಗಳಲ್ಲಿ)
ಸುದರ್ಶನ್ ಸಿ ಮತ್ತು ಬಿ ಹ್ಯಾಜಲ್‌ವುಡ್ 100 (58ಎ, 4x11, 6x5)
ಶುಭಮನ್ ಸಿ ಪಡಿಕ್ಕಲ್ ಬಿ ಸುಯಶ್ 32 (24ಎ, 4x2, 6x1)
ಬಟ್ಲರ್ ಸಿ ಹ್ಯಾಜಲ್‌ವುಡ್ ಬಿ ಭುವನೇಶ್ವರ್ 25 (16ಎ, 4x2, 6x1)
ವಾಷಿಂಗ್ಟನ್ ಸುಂದರ್ ಔಟಾಗದೇ 19 (12ಎ, 4x1, 6x1)
ಜೇಸನ್ ಹೋಲ್ಡರ್ ಔಟಾಗದೇ 23 (10ಎ, 4x1, 6x2)
ಇತರೆ: 6 (ಲೆಗ್‌ಬೈ 3, ವೈಡ್ 3)
ವಿಕೆಟ್ ಪತನ: 1-128 (ಶುಭಮನ್ ಗಿಲ್, 12.4), 2-160 (ಸಾಯಿ ಸುದರ್ಶನ್, 15.3), 3-177 (ಜೋಸ್ ಬಟ್ಲರ್, 17.4)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-31-1, ಜೋಶ್ ಹ್ಯಾಜಲ್‌ವುಡ್ 4-0-40-1, ರಸಿಕ್ ಸಲಾಮ್ ದಾರ್ 3-0-28-0, ಕೃಣಾಲ್ ಪಾಂಡ್ಯ 4-0-50-0, ರೊಮಾರಿಯೊ ಶೆಫರ್ಡ್ 1-0-17-0, ಸುಯಶ್ ಶರ್ಮಾ 4-0-36-1

ರಾಯಲ್ ಚಾಲೆಂಜರ್ಸ್ ಬೆಂಗಳೂರು: 5ಕ್ಕೆ 206 (18.5 ಓವರ್‌ಗಳಲ್ಲಿ)
ಬೆಥೆಲ್ ಸಿ ಶಾರುಕ್ ಬಿ ಸಿರಾಜ್ 14 (10ಎ, 4x3)
ಕೊಹ್ಲಿ ಸಿ ಹೋಲ್ಡರ್ 81 (44ಎ, 4x8, 6x4)
ಪಡಿಕ್ಕಲ್ ಸಿ ರಶೀದ್ 55 (27ಎ, 4x2, 6x6)
ಪಾಟೀದಾರ್ ಸಿ ವಾಷಿಂಗ್ಟನ್ ಬಿ ಸುತಾರ್ 8 (5ಎ, 6x1)
ಜಿತೇಶ್ ಸಿ ಸುತಾರ್ ಬಿ ರಶೀದ್ 10 (6ಎ, 4x1, 6x1)
ಟಿಮ್ ಡೇವಿಡ್ ಔಟಾಗದೇ 10 (9ಎ, 6x1)
ಕೃಣಾಲ್ ಪಾಂಡ್ಯ ಔಟಾಗದೇ 23 (12ಎ, 4x3, 6x1)
ಇತರೆ: 5 (ಲೆಗ್‌ಬೈ 2, ವೈಡ್ 3)
ವಿಕೆಟ್ ಪತನ: 1-26 (ಜೇಕಬ್ ಬೆಥೆಲ್, 2.6), 2-141 (ದೇವದತ್ತ ಪಡಿಕ್ಕಲ್, 12.5), 3-154 (ವಿರಾಟ್ ಕೊಹ್ಲಿ, 13.4), 4-171 (ಜಿತೇಶ್ ಶರ್ಮಾ, 14.6), 5-173 (ರಜತ್ ಪಾಟೀದಾರ್, 15.3)
ಬೌಲಿಂಗ್: ಮೊಹಮ್ಮದ್ ಸಿರಾಜ್ 3-0-25-1, ಕಗಿಸೊ ರಬಾಡ 4-0-45-0, ಜೇಸನ್ ಹೋಲ್ಡರ್ 3.5-0-35-1, ಪ್ರಸಿದ್ಧ ಕೃಷ್ಣ 2-0-31-0, ರಶೀದ್ ಖಾನ್ 4-0-49-2, ಮಾನವ್ ಸುತಾರ್ 2-0-19-1
ಪಂದ್ಯದ ಆಟಗಾರ: ವಿರಾಟ್ ಕೊಹ್ಲಿ

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 5 ವಿಕೆಟ್‌ಗಳ ಗೆಲುವು

ಡೆಲ್ಲಿ ಕ್ಯಾಪಿಟಲ್ಸ್– ಶ್ರೇಯಸ್ ಪಡೆ ಮುಖಾಮುಖಿ ಇಂದು

ಅಜೇಯ ಓಟದತ್ತ ಪಂಜಾಬ್ ಚಿತ್ತ

ನವದೆಹಲಿ (ಪಿಟಿಐ): ಅಜೇಯ ಓಟವನ್ನು ಮುಂದುವರಿಸುವ ಛಲದಲ್ಲಿರುವ ಪಂಜಾಬ್ ಕಿಂಗ್ಸ್ ತಂಡವನ್ನು ಶನಿವಾರ ಇಲ್ಲಿ ನಡೆಯಲಿರುವ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರಿಸಲಿದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯುವ ಈ ಪಂದ್ಯವು ಆತಿಥೇಯ ಡೆಲ್ಲಿಗೆ ಮಹತ್ವದ್ದಾಗಿದೆ. ಅಕ್ಷರ್ ಪಟೇಲ್ ನಾಯಕತ್ವದ ತಂಡವು ಇದುವರೆಗೆ ಆಡಿರುವ ಆರು ಪಂದ್ಯಗಳಲ್ಲಿ ಮೂರು ಗೆದ್ದು, ಮೂರರಲ್ಲಿ ಸೋತಿದೆ. ತನ್ನ ಕಳೆದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಸೋತಿತ್ತು. ಬ್ಯಾಟಿಂಗ್ ವೈಫಲ್ಯದಿಂದಾಗಿ ಅಕ್ಷರ್ ಬಳಗ ಪರಾಭವಗೊಂಡಿತ್ತು. ನಿತೀಶ್ ರಾಣಾ ಅರ್ಧಶತಕ ಮತ್ತು ಸಮೀರ್ ರಿಜ್ವಿಯ ಉತ್ತಮ ಬ್ಯಾಟಿಂಗ್ ಮಾತ್ರ ಗಮನ ಸೆಳೆದಿತ್ತು.

ಅನುಭವಿ ಕೆ.ಎಲ್. ರಾಹುಲ್ 37 ರನ್ ಗಳಿಸಿದ್ದರು. ಆದರೆ ಡೇವಿಡ್ ಮಿಲ್ಲರ್ ಅವರು ಸೊನ್ನೆ ಸುತ್ತಿದ್ದರು. ಇದು ತಂಡಕ್ಕೆ ದುಬಾರಿಯಾಗಿತ್ತು. ಆ ಪಂದ್ಯದಲ್ಲಿ ಬೌಲರ್‌ಗಳೂ ಕಳಪೆ ಆಟವಾಡಿದ್ದರು. ಅಭಿಷೇಕ್ ಶರ್ಮಾ ಅವರು 135 ರನ್ ಗಳಿಸಿದ್ದರು. ಅವರನ್ನು ತಡೆಯಲು ಯಾವ ಬೌಲರ್‌ಗೂ ಸಾಧ್ಯವಾಗಲಿಲ್ಲ. ಅದರಿಂದಾಗಿ ಹೈದರಾಬಾದ್ ತಂಡವು ಬೃಹತ್ ಮೊತ್ತ ದಾಖಲಿಸಿತ್ತು. ಅಂಕಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿ ರುವ ಡೆಲ್ಲಿ ತಂಡವು ಪ್ಲೇ ಆಫ್ ಆಸೆ ಜೀವಂತವಾಗಿಟ್ಟುಕೊಳ್ಳಬೇಕಾದರೆ, ಇಲ್ಲಿಂದ ಮುಂದೆ ಆಡುವ ಪಂದ್ಯಗಳಲ್ಲಿ ಹೆಚ್ಚು ಗೆಲುವುಗಳನ್ನು ಸಾಧಿಸುವುದು ಮುಖ್ಯವಾಗಲಿದೆ.

ಆದರೆ ಪಂಜಾಬ್ ತಂಡವನ್ನು ಮಣಿಸುವುದು ಸುಲಭವಲ್ಲ. ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ತಂಡವು ಇದುವರೆಗೂ ಟೂರ್ನಿಯಲ್ಲಿ ಸೋಲಿಲ್ಲದೇ ಮುನ್ನುಗ್ಗುತ್ತಿದೆ. 11 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯ ಮಳೆಯಿಂದಾಗಿ ರದ್ದಾಗಿದ್ದು ಬಿಟ್ಟರೆ ಉಳಿದದ್ದರಲ್ಲಿ ಜಯ ಸಾಧಿಸಿದೆ.

ತಂಡದ ಬ್ಯಾಟಿಂಗ್ ಪಡೆ ಬಲಿಷ್ಠವಾಗಿದೆ. ಪ್ರಿಯಾಂಶ್ ಆರ್ಯ (211 ರನ್) ಮತ್ತು ಕೂಪರ್ ಕೊನೊಲಿ (223 ರನ್) ಅವರು ಅಮೋಘ ಲಯದಲ್ಲಿದ್ದಾರೆ. ನಾಯಕ ಶ್ರೇಯಸ್, ಪ್ರಭಸಿಮ್ರನ್ ಸಿಂಗ್, ಶಶಾಂಕ್ ಸಿಂಗ್ ಕೂಡ ಉತ್ತಮ ಫಾರ್ಮ್‌ನಲ್ಲಿದ್ದಾರೆ.

ಆಲ್‌ರೌಂಡರ್ ಮಾರ್ಕೊ ಯಾನ್ಸೆನ್, ಎಡಗೈ ವೇಗಿ ಅರ್ಷದೀಪ್ ಸಿಂಗ್, ಕನ್ನಡಿಗ ವೈಶಾಖ ವಿಜಯಕುಮಾರ್, ಝೇವಿಯರ್ ಬಾರ್ಟ್‌ಲೆಟ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು ಪಂದ್ಯದ ಫಲಿತಾಂಶವನ್ನು ತಮ್ಮ ತಂಡದತ್ತ ಸೆಳೆದೊಯ್ಯುವ ಸಮರ್ಥ ಬೌಲರ್‌ಗಳಾಗಿದ್ದಾರೆ. ಇವರ ಕಠಿಣ ಸವಾಲನ್ನು ಮೀರಿ ನಿಲ್ಲುವಲ್ಲಿ ಡೆಲ್ಲಿ ಬ್ಯಾಟರ್‌ಗಳು ಯಶಸ್ವಿಯಾದರೆ ಮಾತ್ರ ಪಂಜಾಬ್ ತಂಡಕ್ಕೆ ಮೊದಲ ಸೋಲಿನ ರುಚಿ ತೋರಿಸಬಹುದು.



ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಅಭ್ಯಾಸ. ಕೋಚ್ ರಿಕಿ ಪಾಂಟಿಂಗ್ (ಎಡ) ಇದ್ದಾರೆ ಪಿಟಿಐ ಚಿತ್ರ



ಅಕ್ಷರ್ ಪಟೇಲ್

ಇಂದಿನ ಪಂದ್ಯ

ಡೆಲ್ಲಿ ಕ್ಯಾಪಿಟಲ್ಸ್ V/s ಪಂಜಾಬ್ ಕಿಂಗ್ಸ್
ತಾಣ: ನವದೆಹಲಿ, ಆರಂಭ: ಮಧ್ಯಾಹ್ನ 3.30

ರಾಜಸ್ಥಾನ ರಾಯಲ್ಸ್ V/s ಸನ್‌ರೈಸರ್ಸ್ ಹೈದರಾಬಾದ್
ತಾಣ: ಜೈಪುರ, ಆರಂಭ: ರಾತ್ರಿ 7.30

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಬಲಾಬಲ	ಒಟ್ಟು ಪಂದ್ಯ 34
ಪಂಜಾಬ್ ಜಯ	17
ಡೆಲ್ಲಿ ಗೆಲುವು	17

ಆಕ್ರಮಣಕಾರಿ ಆಟಕ್ಕೆ ಹೆಸರಾದ ತಂಡಗಳ ಪೈಪೋಟಿ

ರಾಯಲ್ಸ್‌ಗೆ ಸನ್‌ರೈಸರ್ಸ್ ಸವಾಲು

ಜೈಪುರ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡ ಶನಿವಾರ ಇಲ್ಲಿ ನಡೆಯುವ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದ್ದು, ತವರಿನಲ್ಲಿ ಪ್ರಾಬಲ್ಯ ಮುಂದುವರಿಸುವ ವಿಶ್ವಾಸದಲ್ಲಿದೆ. ಮಾತ್ರವಲ್ಲ, ಕೆಲದಿನಗಳ ಹಿಂದೆ ಅನುಭವಿಸಿದ ಮುಖಭಂಗಕ್ಕೆ ಮುಯ್ಯಿ ತೀರಿಸಿಕೊಳ್ಳಲು ಯತ್ನಿಸುವುದು ಖಚಿತ.

ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ನಡೆಯುವ ಈ ಮಹತ್ವದ ಪಂದ್ಯ ಗೆದ್ದು ನಿರ್ಣಾಯಕ ಪಾಯಿಂಟ್ಸ್ ಗಳಿಸಲು ಎರಡೂ ತಂಡಗಳು ಯತ್ನಿಸಲಿವೆ.

ಏಪ್ರಿಲ್ 13ರಂದು ನಡೆದ ಮೊದಲ ಲೆಗ್ ಪಂದ್ಯವನ್ನು ಹೈದರಾಬಾದ್ ತಂಡ 57 ರನ್‌ಗಳಿಂದ ಗೆದ್ದು ಸನ್‌ರೈಸರ್ಸ್ ನಾಗಾಲೋಟಕ್ಕೆ ತಡೆಹಾಕಿತ್ತು. ಯುವ ವೇಗಿ ಪ್ರಫುಲ್ ಹಿಂಗೆ ಪದಾರ್ಪಣೆ ಪಂದ್ಯದಲ್ಲೇ ಗಮನ ಸೆಳೆದಿದ್ದರು. ನಂತರ ರಾಯಲ್ಸ್ ತಂಡ ಚೇತರಿಸಿದ್ದು, ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಜಯಗಳಿಸಿದೆ. ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

ಎರಡೂ ತಂಡಗಳಲ್ಲಿ ಆರಂಭದಲ್ಲೇ ಬೀಸಾಟವಾಡುವ ಬ್ಯಾಟರ್‌ಗಳಿದ್ದಾರೆ. ಈ ಹಿಂದಿನ ಮುಖಾಮುಖಿ ವೇಳೆ ಸನ್‌ರೈಸರ್ಸ್ ನಾಯಕ ಇಶಾನ್ ಕಿಶನ್ ಮತ್ತು ಹೆನ್ರಿಚ್ ಕ್ಲಾಸೆನ್ ಮಿಂಚಿದ್ದರು. ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಹೋದ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಅಬ್ಬರಿಸಿದ್ದರು.

ಪದಾರ್ಪಣೆ ಪಂದ್ಯದಲ್ಲಿ ಹಿಂಗೆ ಮತ್ತು ಸಾಕಿಬ್ ಹುಸೇನ್ ತಲಾ ನಾಲ್ಕು ವಿಕೆಟ್ ಪಡೆದಿದ್ದರೂ, ಸನ್‌ರೈಸರ್ಸ್ ಬೌಲಿಂಗ್ ವಿಭಾಗ ಹೆಚ್ಚು ಅನುಭವ ಹೊಂದಿಲ್ಲ. ಆದರೆ ಅನುಭವಿ ಪ್ಯಾಟ್ ಕಮಿನ್ಸ್ ಗೈರಿನಲ್ಲೂ ಸುಧಾರಣೆ ಕಾಣುತ್ತಿದೆ.

ರಾಜಸ್ಥಾನ ರಾಯಲ್ಸ್ ತಂಡ ಏಳು ಪಂದ್ಯಗಳಲ್ಲಿ ಐದು ಗೆದ್ದು ಉತ್ತಮ ಆರಂಭ ಮಾಡಿದೆ. ಎದುರಾಳಿ ತಂಡದ ಸ್ಥೈರ್ಯ ಕುಸಿಯುವಂತೆ ಆಡಬಲ್ಲ ವೈಭವ ಸೂರ್ಯವಂಶಿ, ಭಾರತ ತಂಡದ ಆಟಗಾರ ಯಶಸ್ವಿ ಜೈಸ್ವಾಲ್, ಧ್ರುವ್ ಜುರೇಲ್ ಅಂಥ ಬ್ಯಾಟರ್‌ಗಳಿದ್ದಾರೆ. ಪರದಾಡಿದವರೆಂದರೆ ನಾಯಕ ರಿಯಾನ್ ಪರಾಗ್ ಮಾತ್ರ. ಸೂರ್ಯವಂಶಿ 254 ರನ್ (ಸ್ಟ್ರೈಕ್‌ರೇಟ್ 220.86) ಗಳಿಸಿದ್ದು, ತಂಡದ ಪರ ಅತಿ ಹೆಚ್ಚು ರನ್ ಗಳಿಸಿದವರಲ್ಲಿ ಅಗ್ರಸ್ಥಾನದಲ್ಲಿದ್ದಾರೆ.

ಜೈಸ್ವಾಲ್ ಅವರು ಆರಂಭದಲ್ಲಿ ಸ್ಥಿರತೆಯ ಜೊತೆ ಆಕ್ರಮಣದ ಆಟ ಆಡಬಲ್ಲರು. 49ರ ಸರಾಸರಿಯಲ್ಲಿ 245 ರನ್ ಕಲೆಹಾಕಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಜೋಫ್ರಾ ಅರ್ಚರ್ 7 ಪಂದ್ಯಗಳಿಂದ 11 ವಿಕೆಟ್ ಪಡೆದಿದ್ದಾರೆ.

ಭಾರತ ತಂಡದ ಹಿರಿಯ ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಲಖನೌ ವಿರುದ್ಧ ಅಜೇಯ 43 ರನ್ ಹೊಡೆದು ತಂಡ ಹೋರಾಟದ ಮೊತ್ತ ಗಳಿಸಲು ನೆರವಾಗಿದ್ದರು. ಇದು ತಂಡದ ವಿಶ್ವಾಸ ಹೆಚ್ಚಿಸಿದೆ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ						
ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	6	5	0	1	11	1.420
ಆರ್‌ಸಿಬಿ	7	5	2	0	10	1.101
ಆರ್ ಆರ್	7	5	2	0	10	0.790
ಎಸ್‌ಆರ್‌ಎಚ್	7	4	3	0	8	0.820
ಸಿಎಸ್‌ಕೆ	7	3	4	0	6	0.118
ಡಿ ಸಿ	6	3	3	0	6	- 0.130
ಜಿ ಟಿ	7	3	4	0	6	- 0.790
ಎಂ ಐ	7	2	5	0	4	0.736
ಎಲ್‌ಎಸ್‌ಜಿ	7	2	5	0	4	- 1.277
ಕೆಕೆಆರ್	7	1	5	1	3	- 0.879

ಆರೆಂಜ್ ಕ್ಯಾಪ್–ವಿರಾಟ್ ಕೊಹ್ಲಿ, ಆರ್‌ಸಿಬಿ (328 ರನ್)
ಪರ್ಪಲ್ ಕ್ಯಾಪ್–ಅನ್ಷುಲ್ ಕಂಬೋಜ್ , ಸಿಎಸ್‌ಕೆ (14 ವಿಕೆಟ್)

ಬಲಾಬಲ	ಒಟ್ಟು ಪಂದ್ಯ 22
ಸನ್‌ರೈಸರ್ಸ್ ಜಯ	13
ರಾಜಸ್ಥಾನ ಗೆಲುವು	9

ಬಿಎಫ್‌ಸಿಗೆ ಮುಂಬೈ ಸಿಟಿ ಸವಾಲು

ಸುನಿಲ್ ಚೆಟ್ರಿ ಪಡೆಗೆ ತವರಿನಲ್ಲಿ ಕೊನೆಯ ಪಂದ್ಯ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್‌ನ ಹಾಲಿ ಆವೃತ್ತಿಯು ನಿರ್ಣಾಯಕ ಹಂತಕ್ಕೆ ತಲುಪಿದ್ದು, ಬೆಂಗಳೂರು ಎಫ್‌ಸಿ ತಂಡವು ತವರಿನಲ್ಲಿ ತನ್ನ ಕೊನೆಯ ಪಂದ್ಯಕ್ಕೆ ಸಜ್ಜಾಗಿದೆ. ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆಯುವ ಹಣಾಹಣಿಯಲ್ಲಿ ಬಿಎಫ್‌ಸಿ ತಂಡವು ಬಲಿಷ್ಠ ಮುಂಬೈ ಸಿಟಿ ತಂಡವನ್ನು ಎದುರಿಸಲಿದೆ.

ಕಳೆದ ವಾರ ಕೋಲ್ಕತ್ತದಲ್ಲಿ ಈಸ್ಟ್ ಬೆಂಗಾಲ್ ವಿರುದ್ಧದ ಪಂದ್ಯದಲ್ಲಿ 3-3 ಅಂತರದಿಂದ ಬಿಎಫ್‌ಸಿ ಡ್ರಾ ಸಾಧಿಸಿತ್ತು. ಆತಿಥೇಯ ತಂಡದ ಆ್ಯಂಟನ್ ಸೋಜ್‌ಬರ್ಗ್ ಕೊನೆಯ ಕ್ಷಣದಲ್ಲಿ ಗೋಲು ಬಾರಿಸಿದ್ದರು. ಇದೀಗ ತವರಿನಲ್ಲಿ ಪೂರ್ಣ ಮೂರು ಅಂಕ ಗಳಿಸುವತ್ತ ಸುನಿಲ್ ಚೆಟ್ರಿ ಪಡೆ ಚಿತ್ತ ಹರಿಸಿದೆ.

ಮುಂಬೈ ಸಿಟಿ ತಂಡದ ಎಂಟು ಪಂದ್ಯಗಳ ಅಜೇಯ ಓಟಕ್ಕೆ ಎಫ್‌ಸಿ ಗೋವಾ ತಂಡವು ತಡೆ ಹಾಕಿತ್ತು. ಕಳೆದ ಪಂದ್ಯದಲ್ಲಿ ಮುಂಬೈ ತಂಡವು 0-2 ಅಂತರದಿಂದ ಗೋವಾಕ್ಕೆ ಮಣಿದಿದ್ದು, ಇದೀಗ ಗೆಲುವಿನ ಹಳಿಗೆ ಮರಳುವ ಪ್ರಯತ್ನದಲ್ಲಿದೆ.

ಪೆಪ್ ಮುನೋಝ್ ಅವರು ಬಿಎಫ್‌ಸಿ ತಂಡದ ಕೋಚ್ ಹುದ್ದೆ ಅಲಂಕರಿಸಿದ ಬಳಿಕ ಒಂದು ಪಂದ್ಯ ಡ್ರಾ ಆಗಿತ್ತು. ಮತ್ತೊಂದು ಪಂದ್ಯದಲ್ಲಿ ತಂಡ ಸೋತಿದೆ. ಅವರ ಮಾರ್ಗದರ್ಶನದಲ್ಲಿ ತಂಡ ಮೊದಲ ಗೆಲುವನ್ನು ಎದುರು ನೋಡುತ್ತಿದೆ.

ಬಿಎಫ್‌ಸಿ ತಂಡವು 9 ಪಂದ್ಯಗಳಲ್ಲಿ 15 ಅಂಕಗಳೊಂದಿಗೆ (ನಾಲ್ಕು ಗೆಲುವು, ಮೂರು ಡ್ರಾ ಮತ್ತು ಎರಡು ಸೋಲು) ಲೀಗ್ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿವೆ. ಮುಂಬೈ ತಂಡವು ಅಷ್ಟೇ ಪಂದ್ಯಗಳಿಂದ 18 ಅಂಕಗಳೊಂದಿಗೆ (5 ಗೆಲುವು, ಮೂರು ಡ್ರಾ, 1 ಸೋಲು) ಮೂರನೇ ಸ್ಥಾನದಲ್ಲಿದೆ.

'ಅಂಕಪಟ್ಟಿಯಲ್ಲಿ ನಮಗಿಂತ ಮೇಲಿರುವ ತಂಡದ ವಿರುದ್ಧ ಆಡುತ್ತಿದ್ದೇವೆ. ಈ ಪಂದ್ಯ ಎರಡೂ ತಂಡಗಳಿಗೆ ಅತ್ಯಂತ ನಿರ್ಣಾಯಕವಾಗಿದೆ. ತವರಿನಲ್ಲಿ ತಂಡವು ಉತ್ತಮ ಪ್ರದರ್ಶನ ನೀಡುವ ನಿರೀಕ್ಷೆಯಿದೆ' ಎಂದು ಎಂದು ಮುನೋಝ್ ಹೇಳಿದ್ದಾರೆ.

ಪಂದ್ಯ ಆರಂಭ: ಸಂಜೆ 5



ಬಿಎಫ್‌ಸಿ ತಂಡದ ನಾಯಕ ಸುನಿಲ್ ಚೆಟ್ರಿ ಎಕ್ಸ್ ಚಿತ್ರ



ಭಾರತದ ಶಾಂಭವಿ ಕ್ಷೀರಸಾಗರ ಹಾಗೂ ದಿವ್ಯಾಂಶು ದೇವಾಂಗನ್

ಶಾಂಭವಿ–ದಿವಾಂಶುಗೆ ವಿಶ್ವದಾಖಲೆ ಚಿನ್ನ

ಕೈರೊ (ಪಿಟಿಐ): ಭಾರತದ ಶಾಂಭವಿ ಕ್ಷೀರಸಾಗರ ಹಾಗೂ ದಿವ್ಯಾಂಶು ದೇವಾಂಗನ್ ಜೋಡಿಯು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ಶೂಟಿಂಗ್ ವಿಶ್ವಕಪ್‌ನ 10 ಮೀ. ಏರ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ವಿಶ್ವದಾಖಲೆಯೊಂದಿಗೆ ಸ್ವರ್ಣ ಜಯಿಸಿತು.


ಶುಕ್ರವಾರ ನಡೆದ ಫೈನಲ್ ಸುತ್ತಿನಲ್ಲಿ ಶಾಂಭವಿ– ದಿವ್ಯಾಂಶು ಅವರು 499.9 ಅಂಕ ಸಂಪಾದಿಸಿದರು. ಭಾರತದವರೇ ಆದ ಇಳವೆನಿಲ್ ವಾಳರಿವನ್– ದಿವ್ಯಾಂಶ್ ಸಿಂಗ್ ಪನ್ವರ್ ಜೋಡಿ 2018ರ ಆವೃತ್ತಿಯಲ್ಲಿ 498.6 ಅಂಕ ಗಳಿಸಿದ್ದರು. ಅದು ಈವರೆಗಿನ ವಿಶ್ವದಾಖಲೆಯಾಗಿತ್ತು.

ತೈವಾನ್‌ನ ಸೈ ಚೀಹ್–ಯಿಂಗ್ ಹಾಗೂ ಶೆನ್ ಯುವಾನ್ ಜೋಡಿ 498.3 ಅಂಕಗಳೊಂದಿಗೆ ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿತು. ಫ್ರಾನ್ಸ್‌ನ ಟೀಫೆನ್ ಪೋಮ್ಸ್– ಗ್ಯಾಸ್ಪರ್ಡ್ ಲೆಸ್ಯೂರ್ ಜೋಡಿ (434.4 ಅಂಕ) ಕಂಚು ಜಯಿಸಿತು.

ಶಾಂಭವಿ– ದಿವ್ಯಾಂಶು ಅವರು ಕ್ವಾಲಿಫಿಕೇಶನ್ ಸುತ್ತಿನಲ್ಲಿಯೂ ಅಗ್ರಸ್ಥಾನ (632 ಅಂಕ) ಪಡೆದಿದ್ದರು.

ಭಾರತವು ನಾಲ್ಕು ಚಿನ್ನ ಸೇರಿ 12 ಪದಕಗಳೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ಸಚಿನ್ ಜನ್ಮದಿನಕ್ಕೆ ಅಭಿಮಾನಿಗಳ ಸಂಭ್ರಮ



ಮುಂಬೈ (ಪಿಟಿಐ): ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರು ಕ್ರಿಕೆಟ್‌ನಿಂದ ನಿವೃತ್ತರಾಗಿ 13 ವರ್ಷಗಳೇ ಕಳೆದುಹೋಗಿವೆ. ಆದರೂ ಕ್ರಿಕೆಟ್ ಪ್ರಿಯರಲ್ಲಿ ಸಚಿನ್ ಮೇಲಿನ ಪ್ರೀತಿ ಕಮ್ಮಿಯಾಗಿಲ್ಲ. ಶುಕ್ರವಾರ 53ನೇ ಜನ್ಮದಿನ ಆಚರಿಸಿದ ಸಚಿನ್ ಅವರಿಗೆ ಶುಭಾಶಯ ಕೋರಲು ಸೇರಿದ್ದ ಅಭಿಮಾನಿಗಳ ಬಳಗವೇ ಈ ಮಾತಿಗೆ ಸಾಕ್ಷಿ.

'ಲಿಟಲ್ ಮಾಸ್ಟರ್' ಖ್ಯಾತಿಯ ಸಚಿನ್ ಅಭಿಮಾನಿಗಳ ಬಳಗದಲ್ಲಿ ಒಬ್ಬ ಬಾಲಕಿ ಅತಿ ಹೆಚ್ಚು ಗಮನ ಸೆಳೆದಳು. 'ಕ್ಯೂಟೆಸ್ಟ್ ಸಚಿನ್ 10 ಫ್ಯಾನ್' ಎಂಬ ಒಕ್ಕಣೆ ಇದ್ದ ಟೀಶರ್ಟ್ ಧರಿಸಿದ್ದ ಆ ಪುಟ್ಟ ಬಾಲಕಿಯನ್ನು ಸಚಿನ್ ಹಾಗೂ ಅವರ ಪತ್ನಿ ಅಂಜಲಿ ಆ ಬಾಲಕಿಯನ್ನು ಎತ್ತಿಕೊಂಡು ಸಂತಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅವರು ಕೇಕ್ ಕೂಡ ಕತ್ತರಿಸಿದರು. ಈ ಸಂದರ್ಭದಲ್ಲಿ ಅವರ ಕಟ್ಟಾ ಅಭಿಮಾನಿ ಸುಧೀರ್ ಸಿಂಗ್ ಅವರು ತ್ರಿವರ್ಣ ಧ್ವಜ ಹಾಗೂ ಶಂಖದೊಂದಿಗೆ ಹಾಜರಿದ್ದರು.

'ನನ್ನ ಈ ದಿನವನ್ನು ಅತ್ಯಂತ ಚೆನ್ನಾಗಿ ಆರಂಭಿಸಿದ್ದೇನೆ. ಆಯಿ (ಅಮ್ಮ), ಅಂಜಲಿ (ಪತ್ನಿ) ಮತ್ತು ಟ್ರಬಲ್ ಮೇಕರ್ (ಪ್ರೀತಿಯ ಸಾಕುನಾಯಿ) ಜೊತೆಗೆ ಇದ್ದಾರೆ. ಇದಕ್ಕಿಂತ ಇನ್ನೇನು ಕೇಳಲಿ' ಎಂದು ಸಾಮಾಜಿಕ ಜಾಲತಾಣದಲ್ಲಿ ಸಚಿನ್ ಬರೆದಿದ್ದಾರೆ.

ಮೇಕೇರಿರ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಮೇಕೇರಿರ, ಕುಲ್ಲೇಟಿರ, ಪರದಂಡ ತಂಡದವರು ಚೇನಂಡ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಶುಕ್ರವಾರದ ಪಂದ್ಯಗಳಲ್ಲಿ ಗೆಲುವು ಸಾಧಿಸಿದರು.

ಇಲ್ಲಿನ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮೇಕೇರಿರ 5-0ಯಿಂದ ಕಾಡ್ಯಮಾಡ ವಿರುದ್ಧ, ಕುಲ್ಲೇಟಿರ 5-0ಯಿಂದ ಚೇನಂಡ ವಿರುದ್ಧ ಭರ್ಜರಿ ಜಯ ಗಳಿಸಿದರೆ, ಪರದಂಡ ತಂಡವು ಐಚೆಟ್ಟಿರ ವಿರುದ್ಧ ಟೈಬ್ರೇಕರ್‌ನಲ್ಲಿ 5-4ರಿಂದ ರೋಚಕ ಗೆಲುವು ಪಡೆಯಿತು.

ಇಟ್ಟಿರ ಮತ್ತು ಮೇರಿಯಂಡ ತಂಡಗಳ ನಡುವೆಯೂ ಸಮಬಲದ ಹೋರಾಟ ನಡೆಯಿತು. ಎರಡೂ ತಂಡಗಳು 2-2 ಗೋಲು ಗಳಿಸಿದವು. ಬಳಿಕ ಟೈಬ್ರೇಕರ್‌ನಲ್ಲಿ ಇಟ್ಟಿರ 2-1ರಿಂದ ಮೇರಿಯಂಡ ವಿರುದ್ಧ ಜಯಿಸಿತು.

ಮಚ್ಚಾರಂಡ 3-2ರಿಂದ ಬೊಳ್ಳೆಪಂಡ ವಿರುದ್ಧ, ಪಳಂಗಂಡ 1-0ಯಿಂದ ಕಾಂಡಂಡ ವಿರುದ್ಧ, ಪೆಮ್ಮಂಡ 1-0ಯಿಂದ ಮುರುವಂಡ ವಿರುದ್ಧ, ಚೇಂದಿರ 2-1ರಿಂದ ಕೊಂಗಂಡ ವಿರುದ್ಧ, ಸಣ್ಣುವಂಡ 3-1 ರಿಂದ ಬೊವ್ವೇರಿಯಂಡ ವಿರುದ್ಧ, ಮಂಡೆಪಂಡ 4-0ರಿಂದ ಪಟ್ಟಚೆರವಂಡ ವಿರುದ್ಧ ಜಯಗಳಿಸಿದವು.

ಟಿಸಿಎಸ್ ವಿಶ್ವ ಟೆನ್ ಕೆ ಓಟ ನಾಳೆ

ಪ್ರಶಸ್ತಿ ಉಳಿಸಿಕೊಳ್ಳುವತ್ತ ಸಾರಾ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿ ಚಾಂಪಿಯನ್, ಉಗಾಂಡಾದ ಸಾರಾ ಚೆಲಂಗತ್ ಅವರು ಭಾನುವಾರ ನಡೆಯಲಿರುವ 18ನೇ ಆವೃತ್ತಿಯ ಟಿಸಿಎಸ್ ವಿಶ್ವ ಟೆನ್ ಕೆ ಓಟದ ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವತ್ತ ಚಿತ್ತ ನೆಟ್ಟಿದ್ದಾರೆ. ಅದೇ ದೇಶದ ಹರ್ಬರ್ಟ್ ಕಿಬೆಟ್ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆಗುವ ವಿಶ್ವಾಸದಲ್ಲಿದ್ದಾರೆ.

'ಕಳೆದ ಆವೃತ್ತಿಯಲ್ಲಿ ಬೆನ್ನುನೋವಿನ ನಡುವೆಯೂ ಪ್ರಶಸ್ತಿ ಜಯಿಸಿದ್ದೆ. ಈ ಬಾರಿ ಸಂಪೂರ್ಣ ಫಿಟ್ ಆಗಿದ್ದೇನೆ. ಪ್ರಶಸ್ತಿ ಉಳಿಸಿಕೊಳ್ಳುವತ್ತ ಚಿತ್ತ ನೆಟ್ಟಿದ್ದೇನೆ' ಎಂದು ಸಾರಾ ಅವರು ಶುಕ್ರವಾರ ನಡೆದ ಮಾಧ್ಯಮ ಸಂವಾದದಲ್ಲಿ ಹೇಳಿದರು.

ಸಾರಾ ಅವರು 2023ರ ವೆಲೆನ್ಸಿಯಾ ಟೆನ್ ಕೆ ಓಟವನ್ನು 30.24 ನಿಮಿಷಗಳಲ್ಲಿ ಪೂರ್ಣಗೊಳಿಸಿದ್ದರು. ಅದು ಅವರ ವೈಯಕ್ತಿಕ ಶ್ರೇಷ್ಠ ಪ್ರದರ್ಶನವೂ ಆಗಿದೆ.

'ಬಾಲ್ಯದಲ್ಲಿ ಪ್ರತಿದಿನ 10 ಕಿ.ಮೀ. (ಒಂದು ಬದಿ) ನಡೆದು ಶಾಲೆಗೆ ತೆರಳುತ್ತಿದ್ದೆ. ಹೀಗಾಗಿ 10 ಕಿ.ಮೀ. ಓಟಕ್ಕೆ ಸಹಜವಾಗಿ ಒಗ್ಗಿಕೊಂಡಿದ್ದೇನೆ. ಭಾನುವಾರವೂ ಮೊದಲಿಗನಾಗಿ ಓಟ ಪೂರ್ಣಗೊಳಿಸುವ ವಿಶ್ವಾಸವಿದೆ' ಎಂದು ವಿಶ್ವದ ವೇಗದ ಓಟಗಾರನೂ ಆಗಿರುವ ಕಿಬೆಟ್ ಹೇಳಿದರು.



ಸಾರಾ ಚೆಲಂಗತ್

ಉಗಾಂಡದ ಓಟಗಾರ ಸ್ಪೇನ್‌ನ ಕ್ಯಾಸ್ಟೆಲ್ಲನ್‌ನಲ್ಲಿ ಈ ವರ್ಷದ ಫೆಬ್ರುವರಿಯಲ್ಲಿ ನಡೆದ ಟೆನ್ ಕೆ ಓಟವನ್ನು 26 ನಿ. 39 ಸೆ.ಗಳಲ್ಲಿ ಪೂರ್ಣಗೊಳಿಸಿ, ಪ್ರಶಸ್ತಿ ಜಯಿಸಿದ್ದರು. 'ಟಿಸಿಎಸ್ ಓಟ'ದ ದಾಖಲೆಯು 27 ನಿಮಿಷ 38 ಸೆಕೆಂಡುಗಳು ಇದೆ.


2023ರ ರನ್ನರ್ಸ್‌ಅಪ್, ಬುರುಂಡಿಯ ರೋಡ್ರಿಗ್ ಕ್ವಿಝಿರಾ ಅವರು ಈ ಬಾರಿ ಚಾಂಪಿಯನ್ ಆಗಲು ಸಕಲ ಪೂರ್ವಸಿದ್ಧತೆಗಳನ್ನು ಮಾಡಿಕೊಂಡಿರುವುದಾಗಿ ತಿಳಿಸಿದರು. ಪ್ರಾಗ್ ಹಾಫ್ ಮ್ಯಾರಾಥಾನ್‌ನಲ್ಲಿ ಸತತ ಎರಡು ಬಾರಿ ಪ್ರಶಸ್ತಿ ಗೆದ್ದಿರುವ ಉತ್ಸಾಹದಲ್ಲಿರುವ ಅವರು, ಬೆಂಗಳೂರಿನಲ್ಲೂ ದಾಖಲೆ ನಿರ್ಮಿಸುವ ಗುರಿ ಇದೆ ಎಂದರು.

ಪುರುಷರ ವಿಭಾಗದಲ್ಲಿ ಕಿಬೆಟ್– ಕ್ವಿಝಿರಾ ನಡುವೆ ನಿಕಟ ಪೈಪೋಟಿ ನಿರೀಕ್ಷಿಸಲಾಗಿದೆ. ಜನವರಿಯಲ್ಲಿ ನಡೆದ ವೆಲೆನ್ಸಿಯಾ ಟೆನ್ ಕೆ ಓಟವನ್ನು 29ನಿ. 25 ಸೆ.ಗಳಲ್ಲಿ ಪೂರ್ಣಗೊಳಿಸಿರುವ ಕೆನ್ಯಾದ ಬ್ರೆಂಡಾ ಜೆಪ್‌ಚೆರ್ಚಿರ್ ಅವರು ಮಹಿಳೆಯರ ವಿಭಾಗದಲ್ಲಿ ಸಾರಾ ಸವಾಲನ್ನು ಮೀರಿ ನಿಲ್ಲುವ ಛಲದಲ್ಲಿದ್ದಾರೆ.

100 ಮೀ: ನಿಪಮ್ ರಾಷ್ಟ್ರೀಯ ದಾಖಲೆ

24ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ರಿಲಯನ್ಸ್‌ನ ಅಭಯ್ ವೇಗದ ಓಟಗಾರ

• ಮೈಲಾರಿ ಲಿಂಗಪ್ಪ


ಅಭಯ್ ಸಿಂಗ್


ನಿಪಮ್

ತುಮಕೂರು: ಉತ್ತರ ಪ್ರದೇಶದ ಅಥ್ಲೀಟ್ ನಿಪಮ್ ಅವರು ತುಮಕೂರಿನಲ್ಲಿ ಶುಕ್ರವಾರ ಆರಂಭಗೊಂಡ 24ನೇ ರಾಷ್ಟ್ರೀಯ ಜೂನಿಯರ್ (20 ವರ್ಷದೊಳಗಿನವರ) ಅಥ್ಲೆಟಿಕ್ ಕ್ರೀಡಾಕೂಟದ ಮಹಿಳೆಯರ 100 ಮೀಟರ್ ಓಟದಲ್ಲಿ ರಾಷ್ಟ್ರೀಯ ಮತ್ತು ಕೂಟ ದಾಖಲೆಯೊಂದಿಗೆ ಚಿನ್ನದ ಸಾಧನೆ ಮೆರೆದರು.

ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಮತ್ತು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಆಶ್ರಯದಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಸ್ಪರ್ಧೆಯಲ್ಲಿ ನಿಪಮ್ 11.53 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಇದರೊಂದಿಗೆ 2025ರಲ್ಲಿ ಅಭಿನಯ ರಾಜರಾಜನ್ (11.54ಸೆ) ಅವರು ಕೊಚ್ಚಿಯಲ್ಲಿ ನಿರ್ಮಿಸಿದ್ದ ರಾಷ್ಟ್ರೀಯ ದಾಖಲೆಯನ್ನು ಮುರಿದರು. ಅಲ್ಲದೆ, ದ್ಯುತಿ ಚಂದ್ (11.63ಸೆ) ಹೆಸರಿನಲ್ಲಿದ್ದ ಕೂಟ ದಾಖಲೆಯನ್ನೂ ತನ್ನ ಹೆಸರಿಗೆ ವರ್ಗಾಯಿಸಿಕೊಂಡರು. ದ್ಯುತಿ 2014ರಲ್ಲಿ ಚೆನ್ನೈನಲ್ಲಿ ಕೂಟ ದಾಖಲೆ ಬರೆದಿದ್ದರು.

ಎಎಫ್‌ಐ ನಿಗದಿಪಡಿಸಿದ ಮಾನದಂಡ (11.79ಸೆ) ಪೂರೈಸಿದ ನಿಪಮ್, ಏಷ್ಯನ್ 20 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದುಕೊಂಡರು. ಈ ಕೂಟವು ಮೇ 28ರಿಂದ 31 ರವರೆಗೆ ಹಾಂಗ್‌ಕಾಂಗ್‌ನಲ್ಲಿ ನಡೆಯಲಿದೆ.

ತಮಿಳುನಾಡಿನ ಭಾವನಾ ಜಿ. (11.87ಸೆ), ಗುಜರಾತ್‌ನ ಕಾಜಲ್ ಹೀರಾಬಾಯಿ (11.88ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಕೊರಳೊಡ್ಡಿದರು.

ಪುರುಷರ 100 ಮೀಟರ್‌ನಲ್ಲಿ ರಿಲಯನ್ಸ್ ಸಂಸ್ಥೆಯ ಅಭಯ್ ಸಿಂಗ್ ವೇಗದ ಓಟಗಾರನಾಗಿ ಹೊರಹೊಮ್ಮಿದರು. ಅವರು 10.41 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಗೆದ್ದರು. ಜೊತೆಗೆ ಎಎಫ್‌ಐ ನಿಗದಿಪಡಿಸಿದ ಮಾನದಂಡ (10.46ಸೆ) ಪೂರೈಸಿ ಏಷ್ಯನ್ ಕೂಟಕ್ಕೆ ಟಿಕೆಟ್ ಪಡೆದರು. ಜಮ್ಮು ಮತ್ತು ಕಾಶ್ಮೀರದ ಯುವರಾಜ್ ಸಿಂಗ್ ಚಿಬ್ (10.523ಸೆ) ಮತ್ತು ಉತ್ತರ ಪ್ರದೇಶದ ಅನ್ಮು ರಜಾಕ್ (10.524ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಫಲಿತಾಂಶಗಳು: ಪುರುಷರು: 100 ಮೀ. ಓಟ: ಅಭಯ್ ಸಿಂಗ್ (ಕಾಲ: 10.41 ಸೆ, ರಿಲಯನ್ಸ್)–1, ಯುವರಾಜ್ ಸಿಂಗ್ (ಜಮ್ಮು ಮತ್ತು ಕಾಶ್ಮೀರ)–2, ಅನ್ಮು ರಜಾಕ್ (ಉತ್ತರ ಪ್ರದೇಶ)–3. **5000 ಮೀ ಓಟ:** ದಿನೇಶ್ (ಕಾಲ: 14.36 ಸೆ, ಉತ್ತರ ಪ್ರದೇಶ)–1, ರವಿ ಯಾದವ್ (ಚಂಡೀಗಢ)–2, ಗುರ್‌ಪ್ರೀತ್ ಕಂಬೋಜ್ (ಉತ್ತರ ಪ್ರದೇಶ)–3.
ಮಹಿಳೆಯರು: 100 ಮೀ. ಓಟ: ನಿಪಮ್ (ಕಾಲ: 11.53 ಸೆ, ಉತ್ತರ ಪ್ರದೇಶ)–1, ಭಾವನಾ ಜಿ. (ತಮಿಳುನಾಡು)–2, ಕಾಜಲ್ ಹೀರಾಬಾಯಿ (ಗುಜರಾತ್)–3. **5000 ಮೀ. ಓಟ:** ಮುಸ್ಕಾನ್ (ಕಾಲ: 16.42 ಸೆ, ಹರಿಯಾಣ)–1, ಸೋನಮ್ ಪರಮಾರ್ (ಐಒಸಿಎಲ್)–2, ಸಾಕ್ಷಿ ಭಂಡಾರಿ (ಮಹಾರಾಷ್ಟ್ರ)–3. **ಡಿಸ್ಕಸ್ ಥ್ರೋ:** ಅಮಾನತ್ ಕಂಬೋಜ್ (ದೂರ: 52.27 ಮೀ, ಪಂಜಾಬ್)–1, ರಿದ್ಧಿ (ಹರಿಯಾಣ)–2, ಸುಪ್ರಿಯಾ ಅತ್ತರಿ (ಎನ್‌ಸಿಒಇ)–3. **ಪೋಲ್‌ವಾಲ್ಟ್:** ಬಿ. ಸೌಂದರ್ಯಾ (ಎತ್ತರ: 3.60 ಮೀ, ತಮಿಳುನಾಡು)–1, ಚುಕಿ ಬಿದ್ರಾ (ರಾಜಸ್ಥಾನ)–2, ಶೃತಿ ರಥೌರ್ (ಮಧ್ಯಪ್ರದೇಶ)–3.


ಪೋಲ್‌ವಾಲ್ಟ್‌ನಲ್ಲಿ ತಮಿಳುನಾಡಿನ ಕ್ರೀಡಾಪಟು ಬಿ.ಸೌಂದರ್ಯಾ ಜಿಗಿತದ ಭಂಗಿ ಪ್ರಜಾವಾಣಿ ಚಿತ್ರ: ಚಂದನ್

ಶೌಚಾಲಯದಲ್ಲಿ ಸೂಜಿ, ಸಿರಿಂಜ್ ಪತ್ತೆ

ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಕ್ರೀಡಾಕೂಟ ನಡೆಯುತ್ತಿರುವ ನಗರದ ಜಿಲ್ಲಾ ಕ್ರೀಡಾಂಗಣದ ಶೌಚಾಲಯದಲ್ಲಿ ಸೂಜಿ, ಸಿರಿಂಜ್ ಪತ್ತೆಯಾಗಿವೆ.

ಗೃಹ ಸಚಿವ ಜಿ.ಪರಮೇಶ್ವರ ಶುಕ್ರವಾರ ಬೆಳಗ್ಗೆ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಮಧ್ಯಾಹ್ನ ನಂತರ ಸೂಜಿ, ಸಿರಿಂಜ್ ಪತ್ತೆಯಾಗಿದ್ದು, ಕ್ರೀಡಾಪಟುಗಳು ಉದ್ದೀಪನ ಮದ್ದು ಸೇವನೆ ಮಾಡಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ.

‘ಕ್ರೀಡಾಂಗಣದ ಶೌಚಾಲಯದಲ್ಲಿ ಉದ್ದೀಪನ ಮದ್ದಿನ ಸಿರಿಂಜ್‌ಗಳು ಸಿಕ್ಕಿವೆ. ಇದನ್ನು ಯಾರು ಬಳಕೆ ಮಾಡಿದ್ದಾರೆ ಎಂಬುದು ಗೊತ್ತಿಲ್ಲ. ಕ್ರೀಡಾಪಟುಗಳನ್ನು ತಪಾಸಣೆಗೆ ಒಳಪಡಿಸಲಾಗುವುದು. ಮದ್ದು ಸೇವನೆ ದೃಢಪಟ್ಟರೆ ಅವರನ್ನು 4 ವರ್ಷ ಅಮಾನತು ಮಾಡಲು ಅವಕಾಶವಿದೆ’ ಎಂದು ಕ್ರೀಡಾಕೂಟದ ನಿರ್ದೇಶಕ ಸತ್ಯನಾರಾಯಣ್ ಪ್ರತಿಕ್ರಿಯಿಸಿದರು.

‘ರಾಷ್ಟ್ರೀಯ ಉದ್ದೀಪನ ಮದ್ದು ನಿಗ್ರಹ ಘಟಕದ (ನಾಡಾ) ತಂಡದಿಂದ ಕ್ರೀಡಾಪಟುಗಳನ್ನು ಪರೀಕ್ಷಿಸಲಾಗುತ್ತದೆ. ಯಾರೇ ತಪ್ಪು ಮಾಡಿದರೂ ಕಠಿಣ ಕ್ರಮಕೈಗೊಳ್ಳಲಾಗುವುದು’ ಎಂದು ಹೇಳಿದರು.ಎಂದರು.

ಅದ್ವಿಕ್, ಚೇತನ್, ಈಶ್ವರ್‌ಗೆ ಜಂಟಿ ಅಗ್ರಸ್ಥಾನ



ಮೈಸೂರು: ಬೆಂಗಳೂರಿನ ಅದ್ವಿಕ್ ಅಭಿನವ್ ಕೃಷ್ಣ, ದಕ್ಷಿಣ ಕನ್ನಡದ ಚೇತನ್ ಮೊಗಸಾಲೆ ಹಾಗೂ ಮೈಸೂರಿನ ಈಶ್ವರ್ ವೀರಪ್ಪನ್ ಅಯ್ಯಪ್ಪನ್ ಅವರು ಶುಕ್ರವಾರ ಇಲ್ಲಿ ಆರಂಭವಾದ ‘ಕೆಎಸ್‌ಸಿಎ’ 13 ವರ್ಷದೊಳಗಿನವರ ಮುಕ್ತ ಚೆಸ್ ಟೂರ್ನಿಯ 2ನೇ ಸುತ್ತಿನ ಮುಕ್ತಾಯಕ್ಕೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ನಗರದ ದಾಸ್‌ಪ್ರಕಾಶ್ ಪ್ಯಾರಡೈಸ್‌ನಲ್ಲಿ ಕರ್ನಾಟಕ ರಾಜ್ಯ ಚೆಸ್ ಸಂಸ್ಥೆಯು ಮೈಸೂರು ಚೆಸ್ ಸೆಂಟರ್ ಸಹಯೋಗದಲ್ಲಿ ಆಯೋಜಿಸಿರುವ ಟೂರ್ನಿಯಲ್ಲಿ ಅದ್ವಿಕ್ ಸೇರಿದಂತೆ 48 ಆಟಗಾರರು ತಲಾ 2 ಪಾಯಿಂಟ್ ಪಡೆದಿದ್ದಾರೆ. ರ್‍ಯಾಂಕಿಂಗ್ ಆಧಾರದಲ್ಲಿ ಸ್ಥಾನ ನೀಡಲಾಗಿದ್ದು, ಇನ್ನೂ 7 ಸುತ್ತಿನ ಆಟ ಬಾಕಿ ಇದೆ. ಗೆದ್ದವರಿಗೆ ₹ 1 ಲಕ್ಷ ನಗದು ಬಹುಮಾನ ಹಾಗೂ ಟ್ರೋಫಿ ಇದೆ.

ಬೆಂಗಳೂರು ಪಾರಮ್ಯ: ಟೂರ್ನಿಯಲ್ಲಿ ಬೆಂಗಳೂರು ಪಾರಮ್ಯ ಸಾಧಿಸಿದೆ. 2 ಸುತ್ತಿನ ಆಟದಲ್ಲಿ 2 ಅಂಕ ಪಡೆದ 48 ಆಟಗಾರರಲ್ಲಿ 31 ಮಂದಿ ಬೆಂಗಳೂರಿನವರಾಗಿದ್ದಾರೆ. ಉಳಿದವರು ದಕ್ಷಿಣ ಕನ್ನಡ, ಮೈಸೂರು, ಶಿವಮೊಗ್ಗ, ದಾವಣಗೆರೆ, ಉಡುಪಿ ಜಿಲ್ಲೆಯವರಾಗಿದ್ದಾರೆ.



ಥಾಮಸ್ ಕಪ್: ಭಾರತ ಶುಭಾರಂಭ

ಹಾರ್ಸೆನ್ಸ್, ಡೆನ್ಮಾರ್ಕ್ (ಪಿಟಿಐ): ಸಿಂಗಲ್ಸ್‌ನಲ್ಲಿ ಆಯುಷ್ ಶೆಟ್ಟಿ ಮತ್ತು ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿಯ ಅಮೋಘ ಆಟದ ಬಲದಿಂದ ಭಾರತ ತಂಡವು ಥಾಮಸ್ ಕಪ್ ಬ್ಯಾಡ್ಮಿಂಟನ್ ಫೈನಲ್ಸ್‌ನಲ್ಲಿ ಶುಭಾರಂಭ ಮಾಡಿತು.

ಶುಕ್ರವಾರ ಆರಂಭವಾದ ಎ ಗುಂಪಿನ ಹಣಾಹಣಿಯಲ್ಲಿ ಭಾರತವು 4–1ರಿಂದ ಕೆನಡಾ ವಿರುದ್ಧ ಜಯಿಸಿತು.

ಈ ಸುತ್ತಿನ ಸಿಂಗಲ್ಸ್‌ನಲ್ಲಿ ವಿಶ್ವ ರ್‍ಯಾಂಕ್‌ನಲ್ಲಿ 13ನೇ ಸ್ಥಾನದಲ್ಲಿರುವ ವಿಕ್ಟರ್ ಲೈ ಅವರು 18-21, 21-19, 21-10 ರಿಂದ ಲಕ್ಷ್ಯ ಸೇನ್ ಅವರನ್ನು ಮಣಿಸಿದರು.

ಡಬಲ್ಸ್‌ನಲ್ಲಿ ಭಾರತದ ಸಾತ್ವಿಕ್ ಮತ್ತು ಚಿರಾಗ್ ಜೋಟಿಯು 21–10, 21–11 ರಿಂದ ಜೊನಾಥನ್ ಬಿಂಗ್ ಟಿಸಾನ್ ಮತ್ತು ಕೆವಿನ್ ಲೀ ವಿರುದ್ಧ ಗೆದ್ದರು. 20 ವರ್ಷದ ಆಯುಷ್ 21–13, 21–17 ನೇರ ಗೇಮ್‌ಗಳಲ್ಲಿ ಬ್ರಯನ್ ಯಾಂಗ್ ವಿರುದ್ಧ ಮೇಲುಗೈ ಸಾಧಿಸಿದರು. 39 ನಿಮಿಷಗಳ ಹೋರಾಟದಲ್ಲಿ 20 ವರ್ಷದ ಆಯುಷ್ ಪಾರಮ್ಯ ಮೆರೆದರು. ಕರ್ನಾಟಕದ ಆಯುಷ್ ಅವರು ಈಚೆಗೆ ಏಷ್ಯಾ ಬ್ಯಾಡ್ಮಿಂಟನ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಇದರಿಂದಾಗಿ ಭಾರತವು 2–1ರ ಮುನ್ನಡೆ ಸಾಧಿಸಿತು.

ಡಬಲ್ಸ್‌ನಲ್ಲಿ ಭಾರತದ ಇನ್ನೊಂದು ಜೋಡಿ ಎಂ.ಆರ್. ಅರ್ಜುನ್ ಮತ್ತು ಹರಿಹರನ್ ಅಮಸ್ಕರುಣನ್ 21–7, 21–15 ರಿಂದ ಟೈ ಅಲೆಕ್ಸಾಂಡರ್ ಲಿಂಡೆಮನ್ ಮತ್ತು ನೈಲ್ ಯಕುರಾ ವಿರುದ್ಧ ಜಯಿಸಿದರು.

ನಂತರದ ಸಿಂಗಲ್ಸ್‌ನಲ್ಲಿ ಕೆ. ಶ್ರೀಕಾಂತ್ 21–17, 21–12ರಿಂದ ಜೋಶುವಾ ಎನ್‌ಗಿಯಾನ್ ವಿರುದ್ಧ ಜಯಸಾಧಿಸಿದರು. ಇದರೊಂದಿಗೆ 4–1ರ ಜಯ ಭಾರತಕ್ಕೆ ಒಲಿಯಿತು. ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದಿದೆ.

ಹಾಲಿ ಚಾಂಪಿಯನ್ ಚೀನಾ ತಂಡವು 5–0ಯಿಂದ ಆಸ್ಟ್ರೇಲಿಯಾ ವಿರುದ್ಧ ಜಯಗಳಿಸಿ ಮೊದಲ ಸ್ಥಾನದಲ್ಲಿದೆ.


ಭಾರತದ ಆಯುಷ್ ಶೆಟ್ಟಿ

ಶ್ರೀನಿಧಿ, ಆದಿತ್ಯಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಶ್ರೀನಿಧಿ ಚೌಧರಿ

ಬೆಂಗಳೂರು: ಕರ್ನಾಟಕದ ಶ್ರೀನಿಧಿ ಚೌಧರಿ ಅವರು ಶುಕ್ರವಾರ ಮುಕ್ತಾಯಗೊಂಡ ಎಐಟಿಎ ಟಿಎನ್‌ಆರ್ ಸ್ಮರಣಾರ್ಥ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಕಿರೀಟ ತಮ್ಮದಾಗಿಸಿಕೊಂಡರು. ಗಂಧರ್ವ ಜಿ. ಅವರು ಪುರುಷರ ವಿಭಾಗದಲ್ಲಿ ರನ್ನರ್ಸ್‌ಅಪ್ ಆದರು.

ಟಾಪ್‌ಸ್ಪಿನ್ ಟೆನಿಸ್ ಅಕಾಡೆಮಿ ಆಯೋಜಿಸಿದ್ದ ₹1 ಲಕ್ಷ ಪ್ರಶಸ್ತಿ ಮೊತ್ತದ ಈ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ತಮಿಳುನಾಡಿನ ಎಂ.ಆದಿತ್ಯ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಮುಖ್ಯ ಸುತ್ತು ಪ್ರವೇಶಿಸಿದ್ದ ಶ್ರೀನಿಧಿ ಅವರು ಫೈನಲ್‌ನಲ್ಲಿ 6–3, 6–2ರಿಂದ ನೇರ ಸೆಟ್‌ಗಳಲ್ಲಿ ಹೃದಯೇಶಿ ಬಿ. ಪೈ ವಿರುದ್ಧ ಗೆಲುವು ಸಾಧಿಸಿದರು. ಪುರುಷರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಆದಿತ್ಯ ಅವರು 7–5, 3–6, 6–2ರಿಂದ ಗಂಧರ್ವ ಅವರನ್ನು ಸೋಲಿಸಿದರು. ಸಿಂಗಲ್ಸ್ ವಿಜೇತರು ತಲಾ ₹12,500 ಬಹುಮಾನ ಜೇಬಿಗಿಳಿಸಿಕೊಂಡರು.





ಅಬ್ಬಬ್ಬಾ ಧಗೆ... ಈ ಸ್ಥಿತಿ ಬಂದದ್ದು ಹೇಗೆ?

• ವರುಣ ಹೆಗಡೆ

ನಗರದಲ್ಲಿ ದಿನದಿಂದ ದಿನಕ್ಕೆ ಬಿಸಿಲ ಧಗೆ ಹೆಚ್ಚುತ್ತಿದ್ದು, ವಾತಾವರಣದಲ್ಲಿ ಉಷ್ಣಾಂಶ ಏರಿಕೆ ಹಾಗೂ ಬಿಸಿಗಾಳಿಯಿಂದ ಜನ ಹೈರಾಣ ಆಗುತ್ತಿದ್ದಾರೆ.

ತೇವಾಂಶ ಕೊರತೆ, ಶುಭ್ರ ಆಕಾಶ, 'ಲಾ ನಿನಾ' ತಟಸ್ಥವಾಗಿರುವ ಪರಿಣಾಮ ಸೇರಿ ವಿವಿಧ ಕಾರಣಗಳಿಂದ ತಾಪಮಾನವು ಸರಾಸರಿಗಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗುತ್ತಿದೆ.

ನಗರದಲ್ಲಿ ಏಪ್ರಿಲ್‌ನಲ್ಲಿ ದಾಖಲಾದ ಗರಿಷ್ಠ ಉಷ್ಣಾಂಶ

ವರ್ಷ	ಗರಿಷ್ಠ ಉಷ್ಣಾಂಶ (ಡಿಗ್ರಿ ಸೆಲ್ಸಿಯಸ್)
2025	35.4
2024	38.5
2023	36.5
2022	36.7
2021	37.2

ಇನ್ನೊಂದೆಡೆ, ಬಿಸಿಗಾಳಿ ಕೂಡ ಬೀಸುತ್ತಿದ್ದು, ಮಧ್ಯಾಹ್ನದ ಅವಧಿಯಲ್ಲಿ ಹೊರಗಡೆ ಓಡಾಡುವುದು ಕಷ್ಟವಾಗುತ್ತಿದೆ. ಈಗಾಗಲೇ ನಗರದ ಉಷ್ಣಾಂಶ 36 ಡಿಗ್ರಿ ಸೆಲ್ಸಿಯಸ್ ದಾಟಿದ್ದು, ಮುಂದಿನ ವಾರವೂ ಮಳೆಯಾಗದಿದ್ದಲ್ಲಿ ಗರಿಷ್ಠ ಉಷ್ಣಾಂಶವು 37 ಡಿಗ್ರಿ ಸೆಲ್ಸಿಯಸ್ ದಾಟಬಹುದು ಎಂದು ಹವಾಮಾನ ಇಲಾಖೆ ಅಂದಾಜಿಸಿದೆ.

ಈ ತಿಂಗಳ ಬಹುತೇಕ ದಿನ ಗರಿಷ್ಠ ಉಷ್ಣಾಂಶವು 35ರಿಂದ 36 ಡಿಗ್ರಿ ಸೆಲ್ಸಿಯಸ್‌ನಷ್ಟು ವರದಿಯಾಗಿದ್ದರೆ, ಕನಿಷ್ಠ ಉಷ್ಣಾಂಶವು 24 ಡಿಗ್ರಿ ಸೆಲ್ಸಿಯಸ್‌ನಷ್ಟಿದೆ. ಈ ಬಾರಿ ಬೇಸಿಗೆಯಲ್ಲಿ ನಿರೀಕ್ಷಿತ ಮಳೆ ಬಾರದಿದ್ದರಿಂದ, ದಿನದ ಬಹುತೇಕ ಅವಧಿ ಉಷ್ಣ ವಾತಾವರಣದಿಂದ ಕೂಡಿದೆ. ಈ ಅವಧಿಯಲ್ಲಿ ಬೇಸಿಗೆ ರಜೆಯ ಕಾರಣ, ಹೊರಾಂಗಣ ಆಟಗಳಿಗೆ ಮೊರೆ ಹೋಗುತ್ತಿರುವ ಮಕ್ಕಳೂ ಬಿಸಿಲ ಧಗೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಅಸ್ವಸ್ಥಗೊಳ್ಳುತ್ತಿದ್ದಾರೆ.

ಸೆಕೆಯ ಅನುಭವ: ನಗರದಲ್ಲಿ ಹಿಂದಿನ ಹಲವು ವರ್ಷಗಳಲ್ಲಿ ಏಪ್ರಿಲ್‌ನಲ್ಲಿ ಸರಾಸರಿ ಗರಿಷ್ಠ ಉಷ್ಣಾಂಶ 34.1 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. 2016ರಲ್ಲಿ ಗರಿಷ್ಠ 39.2 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿತ್ತು. ಈ ವರ್ಷವೂ ವಾತಾವರಣದಲ್ಲಿ ತೇವಾಂಶದ ಕೊರತೆಯಿಂದಾಗಿ ಉಷ್ಣಾಂಶ ಏರುಗತಿ ಪಡೆದಿದೆ. ಇನ್ನೊಂದೆಡೆ, ಕಾಂಕ್ರೀಟ್ ಕಟ್ಟಡಗಳ ನಿರ್ಮಾಣ, ಪರಿಸರ ನಾಶ, ರಸ್ತೆ ಸೇರಿ ವಿವಿಧ ಕಾಮಗಾರಿಗಳಿಂದಾಗಿ ಹಗಲಿನ ಜತೆಗೆ, ರಾತ್ರಿ ಅವಧಿಯಲ್ಲಿಯೂ ಸೆಕೆಯ ಅನುಭವವಾಗುತ್ತಿದೆ. ಈ ತಿಂಗಳು ಮಳೆಯಾಗದಿದ್ದಲ್ಲಿ, ಮೇ ತಿಂಗಳು ದಾಖಲೆ ಪ್ರಮಾಣದಲ್ಲಿ ಗರಿಷ್ಠ ಉಷ್ಣಾಂಶ ವರದಿಯಾಗುವ ಸಾಧ್ಯತೆಯ ಬಗ್ಗೆ ಇಲಾಖೆ ಮುನ್ಸೂಚನೆ ನೀಡಿದೆ.

'ಬೃಹತ್ ಕಾಂಕ್ರೀಟ್ ಕಟ್ಟಡಗಳು, ಸಿಮೆಂಟ್ ಹಾಗೂ ಡಾಂಬರು ರಸ್ತೆಗಳು ಸೂರ್ಯನ ಶಾಖವನ್ನು ಹೀರಿಕೊಂಡು, ರಾತ್ರಿ ವೇಳೆ ಆ ಶಾಖವನ್ನು ಹೊರಹೊಮ್ಮಿಸುತ್ತವೆ. ಇದರಿಂದಾಗಿ ಎಲ್ಲ ಅವಧಿ ಸೆಕೆಯ ಅನುಭವ ಆಗುತ್ತದೆ. ವಾಹನಗಳಿಂದ ಹೊರಹೊಮ್ಮುವ ಶಾಖ, ಕೈಗಾರಿಕೆಗಳು ಹೊರಸೂಸುವ ಬಿಸಿಗಾಳಿ, ವಾತಾವರಣ ತಂಪಾಗಿಸುವ ಪರಿಸರದ ನಾಶ ಸೇರಿ ನಾನಾ ಕಾರಣದಿಂದ ತಾಪಮಾನ ಏರಿಕೆಯಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರವನ್ನು ನಾಶ ಮಾಡುತ್ತಾ ಹೋದಲ್ಲಿ ಮುಂದಿನ ದಿನಗಳಲ್ಲಿ ಅದರ ಪರಿಣಾಮ ಇನ್ನಷ್ಟು ಭೀಕರವಾಗಿರುತ್ತದೆ' ಎಂದು ಹವಾಮಾನ ತಜ್ಞರೊಬ್ಬರು ತಿಳಿಸಿದ್ದಾರೆ.



ಬಿಸಿಲ ಬೇಗೆಯಿಂದ ರಕ್ಷಿಸಿಕೊಳ್ಳಲು ಯುವತಿಯೊಬ್ಬರು ಅವೆನ್ಯೂ ರಸ್ತೆಯ ಮಳಿಗೆಯಲ್ಲಿ ಪುಟ್ಟ ಫ್ಯಾನ್ ಖರೀದಿಸಿದರು. ಪ್ರಜಾವಾಣಿ ಚಿತ್ರ; ಪ್ರಶಾಂತ್ ಎಚ್.ಜಿ.

ಎಳನೀರಿಗೆ ಹೆಚ್ಚಿದ ಬೇಡಿಕೆ

ಬಿಸಿಲಿನ ಬೇಗೆಯಿಂದ ರಕ್ಷಿಸಿಕೊಳ್ಳಲು ನಾನಾ ಕಸರತ್ತು ಮಾಡುತ್ತಿರುವ ಜನ, ಛತ್ರಿ, ಟೋಪಿ, ದುಪಟ್ಟಾಗಳ ಮೊರೆ ಹೋಗುತ್ತಿದ್ದಾರೆ. ಇನ್ನೊಂದೆಡೆ, ಬಾಯಾರಿಕೆಯ ದಾಹ ತಣಿಸಿಕೊಳ್ಳಲು ಎಳನೀರು, ಕಬ್ಬಿನ ರಸ, ಮಜ್ಜಿಗೆ, ತಂಪು ಪಾನೀಯಗಳನ್ನು ಕುಡಿಯುತ್ತಿದ್ದಾರೆ. ಕತ್ತರಿಸಿದ ಹಣ್ಣುಗಳನ್ನೂ ಸೇವಿಸುತ್ತಿದ್ದಾರೆ. ಹೆಚ್ಚಿದ ಬಿಸಿಲ ಝಳದಿಂದಾಗಿ ಎಳನೀರಿಗೆ ಬೇಡಿಕೆ ಹೆಚ್ಚಾಗಿದ್ದು, ₹ 60ರಿಂದ ₹ 70ಕ್ಕೆ ನಗರದಲ್ಲಿ ಮಾರಾಟ ಮಾಡಲಾಗುತ್ತಿದೆ. ಕತ್ತರಿಸಿಟ್ಟ ಕಲ್ಲಂಗಡಿ ಹಣ್ಣು ಕೂಡ ನಗರದ ವಿವಿಧೆಡೆ ಕಾಣಸಿಗುತ್ತಿದ್ದು, ಮಾರಾಟ ಭರದಿಂದ ಸಾಗಿದೆ.





"ಮಳೆಯಾಗದ ಪರಿಣಾಮ ಈ ಬಾರಿ ಬಿಸಿಲ ಧಗೆ ಸಾಮಾನ್ಯಕ್ಕಿಂತ ಹೆಚ್ಚಿದೆ. ಮುಂದಿನ ಹತ್ತು ದಿನಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಮಳೆಯಾದಲ್ಲಿ ತಾಪಮಾನ ಇಳಿಯುತ್ತದೆ

ಸಿ.ಎಸ್. ಪಾಟೀಲ
ಹವಾಮಾನ ಇಲಾಖೆ ತಜ್ಞ

ದೆಹಲಿಯಂತೆ ಆದದ್ದೇಕೆ 'ಉದ್ಯಾನನಗರಿ?'

• ಡಾ. ಕಿರಣ್ ರೆಡ್ಡಿವಾರಿ

ಹಲವು ದಶಕಗಳ ಕಾಲ 'ಉದ್ಯಾನನಗರಿ' ಮತ್ತು 'ನಿವೃತ್ತರ ಸ್ವರ್ಗ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಬೆಂಗಳೂರು ನಗರ ಇಂದು ಸಂಪೂರ್ಣ ವಿರುದ್ಧವಾದ ವಾತಾವರಣ ಹೊಂದಿದೆ. ಅಂದಿನ ಕಾಲದಲ್ಲಿ ಕಡು ಬೇಸಿಗೆಯಲ್ಲೂ ಬೆಂಗಳೂರಿನ ಗಾಳಿ ತಂಪಾಗಿರುತ್ತಿತ್ತು ಮತ್ತು ಪಾದರಸದ ಮಟ್ಟವು ಎಂದಿಗೂ ಮಿತಿ ಮೀರುತ್ತಿರಲಿಲ್ಲ. ಆದರೆ ಈಗಿನ ಈ ಉಷ್ಣ ವೈಪರೀತ್ಯವು ನಿವಾಸಿಗಳನ್ನು ಕಂಗಾಲಾಗಿಸಿದೆ ಮತ್ತು ಅವರು ಸೆಕೆಯ ಜೊತೆಗೆ ಆರೋಗ್ಯ ಸಮಸ್ಯೆಗಳ ವಿರುದ್ಧವೂ ಹೋರಾಡಬೇಕಾಗಿ ಬಂದಿದೆ.

ಈ ಅನಿರೀಕ್ಷಿತ ಹವಾಮಾನ ಬದಲಾವಣೆಯನ್ನು ಅರ್ಥ ಮಾಡಿಕೊಳ್ಳಲು ಭೌಗೋಳಿಕ ಮತ್ತು ವಾತಾವರಣದ ಪ್ರಕ್ರಿಯೆಗಳನ್ನು ಗಮನಿಸಬೇಕಾಗುತ್ತದೆ. ಬೆಂಗಳೂರು ಸಮುದ್ರ ಮಟ್ಟದಿಂದ ಸುಮಾರು 900 ಮೀಟರ್ ಎತ್ತರದಲ್ಲಿದೆ. ಹಾಗಾಗಿ, ಇಲ್ಲಿ ತಂಪಾದ ಗಾಳಿ ಬೀಸುತ್ತಿತ್ತು. ಆದರೆ, ಈಗ ಈ ರಕ್ಷಣಾ ಕವಚವು 'ಎಲ್ ನಿನೋ' ವಿದ್ಯಮಾನದಿಂದಾಗಿ ದುರ್ಬಲಗೊಳ್ಳುತ್ತಿದೆ. ಈ ವಿದ್ಯಮಾನವು ಸಾವಿರಾರು ಮೈಲಿ ದೂರದ ಸಮಭಾಜಕ ಪೆಸಿಫಿಕ್ ಮಹಾಸಾಗರದಲ್ಲಿ ಆಗಿದ್ದರೂ, ಅದರ ಪರಿಣಾಮವಾಗಿ ಈಗ ಇಲ್ಲಿ ತಾಪಮಾನ ಏರಿಕೆಯಾಗುತ್ತಿದೆ.

ಇದರ ಜೊತೆಗೆ, ಸ್ಥಳೀಯವಾಗಿ ಉಂಟಾಗಿರುವ 'ಅರ್ಬನ್ ಹೀಟ್ ಐಲ್ಯಾಂಡ್' (ಯುಎಚ್‌ಐ) ಪರಿಣಾಮವು ಈಗ ಅಪಾಯಕಾರಿ ಹಂತವನ್ನು ತಲುಪಿದೆ. ಒಂದು ಕಾಲದಲ್ಲಿ ಬೆಂಗಳೂರು ಹಸಿರು ಹೊದಿಕೆಗೆ ಹೆಸರಾಗಿತ್ತು. ಆದರೆ ಈಗ ಆ ಹಸಿರು ಹೊದಿಕೆ ಮಾಯವಾಗಿದೆ, ನಗರವು ನಿರಂತರವಾಗಿ ಬೆಳೆಯುತ್ತಿದೆ. ಮೂಲಸೌಕರ್ಯ ವ್ಯವಸ್ಥೆ ಮತ್ತು ಮಾನವ ಚಟುವಟಿಕೆಗಳು ಬೆಳೆದಿವೆ. ಇದರಿಂದಾಗಿ ಸೂರ್ಯನ ಶಾಖವು ಸೂರ್ಯಾಸ್ತದ ನಂತರವೂ ವಾತಾವರಣದಲ್ಲೇ ಉಳಿಯುವಂತಹ 'ಮೈಕ್ರೊಕ್ಲೈಮೇಟ್' ಸೃಷ್ಟಿಯಾಗಿದೆ. ಇದು ಬೆಂಗಳೂರು ಮೊದಲು ಹೊಂದಿದ್ದ ರಾತ್ರಿಯ ತಂಪಾದ ವಾತಾವರಣವನ್ನು ತೊಡೆದಿದ್ದು, ನಗರವು ದೀರ್ಘಕಾಲದವರೆಗೆ ಉಷ್ಣದ ಒತ್ತಡಕ್ಕೆ ಸಿಲುಕುವಂತೆ ಮಾಡಿದೆ.

ನಗರ ಪರಿಸರದ ತಾಪಮಾನವು ನಿರಂತರವಾಗಿ 35 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚಾಗಿ ಇರುತ್ತಿದೆ. ಮುಖ್ಯವಾಗಿ, ಮಕ್ಕಳು ಮತ್ತು ಹಿರಿಯ ನಾಗರಿಕರಿಗೆ ಇದರಿಂದ ಆರೋಗ್ಯ ಸಮಸ್ಯೆಗಳು ಉಂಟಾಗುವ ಸಾಧ್ಯತೆ ಇರುತ್ತದೆ. ಸದ್ಯ ಬೆಂಗಳೂರಿನ ತಾಪಮಾನವು 36 ಡಿಗ್ರಿ ಸೆಲ್ಸಿಯಸ್ ತಲುಪಿದ್ದರೂ, ಅದು ಮೇ ತಿಂಗಳ ದೆಹಲಿಯ ಮಧ್ಯಾಹ್ನದಂತೆ ಭಾಸವಾಗುತ್ತಿದೆ!

ಮಕ್ಕಳ ಮೇಲಾಗುವ ಪರಿಣಾಮ: ಮಕ್ಕಳು ವಯಸ್ಕರಿಗಿಂತ ವೇಗವಾಗಿ ಪರಿಸರದಿಂದ ಶಾಖವನ್ನು ಹೀರಿಕೊಳ್ಳುತ್ತಾರೆ. ಜೊತೆಗೆ, ಅವರ ಬೆವರಿನ ಗ್ರಂಥಿಗಳು ಇನ್ನೂ ಪೂರ್ಣವಾಗಿ ಬೆಳೆದಿರುವುದಿಲ್ಲ. ಇದರಿಂದ ಬೆವರಿನ ಮೂಲಕ ಶಾಖವನ್ನು ಹೊರಹಾಕಿ ದೇಹವನ್ನು ತಂಪುಗೊಳಿಸುವ ಅವರ ಸಾಮರ್ಥ್ಯವು ಕಡಿಮೆ ಇರುತ್ತದೆ. ಅತಿಯಾದ ಶಾಖದಿಂದ ಮಕ್ಕಳಲ್ಲಿ ದಣಿವು ಅವರ ನರಮಂಡಲಕ್ಕೆ ತೊಂದರೆ ಉಂಟು ಮಾಡಬಹುದು.

ಹಿರಿಯ ನಾಗರಿಕರ ಮೇಲಿನ ಒತ್ತಡ: ಈ ಬಿಸಿಲಿನ ಧಗೆಯು ಹಿರಿಯ ನಾಗರಿಕರ ಹೃದಯ ಹಾಗೂ ಮೂತ್ರಪಿಂಡದ ಮೇಲೆ ಒತ್ತಡ ಉಂಟುಮಾಡುತ್ತದೆ. ಹೃದಯವು ಹೆಚ್ಚು ವೇಗವಾಗಿ ಕೆಲಸ ಮಾಡಬೇಕಾದ ಅನಿವಾರ್ಯ ಉಂಟಾಗುತ್ತದೆ.

ಜೀರ್ಣಾಂಗವ್ಯೂಹದ ಮೇಲೆ ನಿಗಾ ಇರಲಿ: ಸಾಮಾನ್ಯವಾಗಿ ಅತಿಯಾದ ಉಷ್ಣತೆಯು ಜೀರ್ಣಾಂಗವ್ಯೂಹದ ಮೇಲೆ ಬೀರುವ ಆಳವಾದ ಪರಿಣಾಮವನ್ನು ಜನ ನಿರ್ಲಕ್ಷಿಸುತ್ತಾರೆ. ನಾವು ಬಿಸಿಗಾಳಿ ಅಥವಾ 'ಹೀಟ್ ವೇವ್' ಬಗ್ಗೆ ಮಾತನಾಡುವಾಗ, ನಮ್ಮ ಗಮನವು ಚರ್ಮ ಮತ್ತು ಹೃದಯದ ಮೇಲೆ ಮಾತ್ರ ಇರುತ್ತದೆ. ಆದರೆ, ದೇಹದ ವ್ಯವಸ್ಥಿತ ವೈಫಲ್ಯಕ್ಕೆ ಜೀರ್ಣಾಂಗವ್ಯೂಹವು ಮೊದಲ ತಾಣವಾಗುವ ಸಾಧ್ಯತೆ ಹೆಚ್ಚಿರುತ್ತದೆ.

ಲೇಖಕ: ಗ್ಯಾಸ್ಟ್ರೋಎಂಟರಾಲಜಿಸ್ಟ್, ನಾರಾಯಣ ಹೆಲ್ತ್ ಸಿಟಿ, ಬೆಂಗಳೂರು

ಮುನ್ನೆಚ್ಚರಿಕೆ ಮತ್ತು ಪರಿಹಾರ

ಬಾಯಾರಿಕೆಯಾಗುವುದು ದೇಹದಲ್ಲಿ ನೀರಿನಂಶ ಕಡಿಮೆಯಾಗಿದೆ ಅಥವಾ ಡಿಹೈಡ್ರೇಷನ್ ಉಂಟಾಗಿದೆ ಎಂಬುದನ್ನು ಸೂಚಿಸುವ ಕೊನೆಯ ಹಂತದ ಸಂಕೇತ. ಆದ್ದರಿಂದ ಸತತವಾಗಿ ನೀರು ಕುಡಿಯುತ್ತಿರಬೇಕು. ಆದರೆ, ಕಾರ್ಬೋನೇಟೆಡ್ ಪಾನೀಯಗಳು ಅಥವಾ ಅತಿಯಾದ ಸಕ್ಕರೆಯುಳ್ಳ ಜ್ಯೂಸ್‌ಗಳ ಮೊರೆ ಹೋಗಬೇಡಿ. ಇವು ಜೀವಕೋಶಗಳಿಂದ ನೀರನ್ನು ಹೊರಕ್ಕೆಳೆದು ಜೀರ್ಣಾಂಗವ್ಯೂಹಕ್ಕೆ ತಳ್ಳುತ್ತವೆ. ಇದರಿಂದ ಡೀಹೈಡ್ರೇಷನ್ ಮತ್ತಷ್ಟು ಉಲ್ಬಣಗೊಂಡು ಸ್ನಾಯುಗಳ ಸೆಳೆತಕ್ಕೆ ಕಾರಣವಾಗಬಹುದು. ಬದಲಾಗಿ, ಓ.ಆರ್.ಎಸ್ ಅಥವಾ ಸ್ವಲ್ಪ ಉಪ್ಪು ಬೆರೆಸಿದ ಮಜ್ಜಿಗೆಯನ್ನು ಕುಡಿಯಿರಿ.

ಆಹಾರದ ಸುರಕ್ಷತೆ: ಇಂತಹ ಬಿಸಿ ಹವಾಮಾನದಲ್ಲಿ ಆಹಾರವು ದಿನಗಳಲ್ಲಲ್ಲ, ಬದಲಾಗಿ ಕೆಲವೇ ಗಂಟೆಗಳಲ್ಲಿ ಹಾಳಾಗುತ್ತದೆ. ಆದ್ದರಿಂದ, ತಯಾರಿಸಿದ ತಕ್ಷಣವೇ ಸೇವಿಸುವ ಕ್ರಮವನ್ನು ಅನುಸರಿಸುವುದು ಉತ್ತಮ. ರಸ್ತೆಬದಿಯ ಕತ್ತರಿಸಿದ ಹಣ್ಣುಗಳು ಅಥವಾ ಸಲಾಡ್‌ಗಳನ್ನು ತಿನ್ನಬೇಡಿ. ಯಾಕೆಂದರೆ, ಇವು ಬೇಸಿಗೆಯಲ್ಲಿ ಹರಡುವ ನೀರು ಆಧಾರಿತ ಜಠರಗರುಳಿನ ಸೋಂಕುಗಳಿಗೆ ಪ್ರಮುಖ ಕಾರಣಗಳಾಗಿವೆ.

ನಿಮ್ಮ ಬೆಳಗಿನ ನಡಿಗೆಯನ್ನು ಸೂರ್ಯೋದಯಕ್ಕಿಂತ ಮುಂಚೆಯೇ ಪೂರ್ಣಗೊಳಿಸಿ. ಬೆಳಿಗ್ಗೆ 11ರಿಂದ ಸಂಜೆ 4ರ ನಡುವೆ ಯು.ವಿ ಕಿರಣಗಳು ಮತ್ತು ಉಷ್ಣತೆಯ ಮಟ್ಟವು ಗರಿಷ್ಠವಾಗಿರುತ್ತದೆ. ಈ ಅವಧಿಯಲ್ಲಿ ದೈಹಿಕ ಶ್ರಮ ಪಡುವುದು ಆಕ್ಸಿಡೇಟಿವ್ ಒತ್ತಡಕ್ಕೆ ಕಾರಣವಾಗಬಹುದು. ಹಿರಿಯರು ಮತ್ತು ಮಕ್ಕಳು ಚೆನ್ನಾಗಿ ಗಾಳಿ ಬರುವ ಮತ್ತು ನೆರಳಿರುವ ಸ್ಥಳದಲ್ಲಿ ಇರಬೇಕು. ಒಂದು ವೇಳೆ ಎ.ಸಿ ಸೌಲಭ್ಯ ಇಲ್ಲದಿದ್ದರೆ, ಒದ್ದೆಯಾದ ಬಟ್ಟೆಯನ್ನು ಮೈಮೇಲೆ ಹಾಕಿಕೊಳ್ಳುವಂತಹ ಸಾಂಪ್ರದಾಯಿಕ ತಂಪು ವಿಧಾನಗಳನ್ನು ಅನುಸರಿಸಬಹುದು.

ರಕ್ತದೊತ್ತಡಕ್ಕಾಗಿ ಮೂತ್ರವರ್ಧಕ ಮಾತ್ರೆಗಳನ್ನು ತೆಗೆದುಕೊಳ್ಳುವವರಿಗೆ ಎಲೆಕ್ಟ್ರೋಲೈಟ್ ಅಸಮತೋಲನ ಉಂಟಾಗುವ ಅಪಾಯ ಹೆಚ್ಚಿರುತ್ತದೆ. ನಿಮ್ಮ ವೈದ್ಯರ ಸಲಹೆ ಇಲ್ಲದೆ ಔಷಧಿಗಳಲ್ಲಿ ಯಾವುದೇ ಬದಲಾವಣೆ ಮಾಡಬೇಡಿ. ಆದರೆ, ಮೂತ್ರ ವಿಸರ್ಜನೆಯ ಪ್ರಮಾಣ ಮತ್ತು ಚರ್ಮದ ದೃಢತೆಯ ಮೇಲೆ ಸದಾ ನಿಗಾ ಇರಲಿ.

ಬೆಂಗಳೂರಿನ ಹಿತಕರವಾದ ಹವಾಮಾನವು ಇಂದು ಸುಡುವ ಮತ್ತು ಕಡು ಬೇಸಿಗೆಯ ವಾತಾವರಣವಾಗಿ ಪರಿವರ್ತಿತವಾಗಿರುವುದು ನಾವು ಎದುರಿಸುತ್ತಿರುವ ಆಧುನಿಕ ಯುಗದ ಅಸ್ಥಿರತೆಗೆ ಒಂದು ಎಚ್ಚರಿಕೆಯಾಗಿದೆ. ನೈಸರ್ಗಿಕವಾಗಿಯೇ ಹವಾನಿಯಂತ್ರಿತ ವಾತಾವರಣಕ್ಕೆ ಹೆಸರಾಗಿದ್ದ ಈ ನಗರವು, ಇಂದು ಭೂಮಿಯ ಭೌತಿಕ ಬದಲಾವಣೆಗಳು ಮತ್ತು ಮಾನವನ ಶಾರೀರಿಕ ಮಿತಿಗಳು ಸಂಧಿಸುವ ಒಂದು ಪ್ರಮುಖ ಅಧ್ಯಯನ ಕೇಂದ್ರವಾಗಿ ನಿಂತಿದೆ. ಒಬ್ಬ ಹಿರಿಯ ವೈದ್ಯನ ದೃಷ್ಟಿಯಲ್ಲಿ ಹೇಳುವುದಾದರೆ, ಈ ಬದಲಾವಣೆಯನ್ನು ಎದುರಿಸಲು ವೈದ್ಯಕೀಯ ಶಾಸ್ತ್ರವು ಹೊಸ ಹಾದಿಯನ್ನು ಸೂಚಿಸುತ್ತಿದೆ. ಈ ಹಾದಿಯಲ್ಲಿ ನಮ್ಮ ಮುಂದಿರುವ 'ಪ್ರಿಸ್ಕ್ರಿಪ್ಷನ್' ಬರೀ ಒಂದು ಮಾತ್ರೆಯಲ್ಲ, ಬದಲಾಗಿ ನಮ್ಮ ಪರಿಸರದೊಂದಿಗೆ ನಾವು ಹೇಗೆ ಬದುಕುತ್ತಿದ್ದೇವೆ ಎಂಬುದನ್ನು ಮೂಲಭೂತವಾಗಿ ಪುನರ್‌ರೂಪಿಸಿಕೊಳ್ಳುವುದೇ ಆಗಿದೆ.

ಪಾರ್ಕಿನ್ಸನ್ ಕಾಯಿಲೆಗೆ ಸಂಗೀತ ಚಿಕಿತ್ಸೆ!

• ಡಾ. ಕುಲದೀಪ್ ಶೆಟ್ಟಿ

ಬೆಂಗಳೂರು, ದೆಹಲಿ ಹಾಗೂ ಮುಂಬೈನಂತಹ ಮಹಾನಗರಗಳ ನರರೋಗ ಚಿಕಿತ್ಸಾಲಯಗಳಲ್ಲಿ ಇತ್ತೀಚಿನ ದಿನಗಳಲ್ಲಿ ಒಂದು ಆಸಕ್ತಿದಾಯಕ ಬದಲಾವಣೆ ಕಂಡುಬರುತ್ತಿದೆ. ಅದೇನೆಂದರೆ, ಪಾರ್ಕಿನ್ಸನ್ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ಬರೀ ಮಾತ್ರೆಗಳನ್ನು ಶಿಫಾರಸು ಮಾಡುವ ಬದಲಿಗೆ, ವೈದ್ಯರು ಇದೀಗ 'ನೀವು ಹಾಡುತ್ತೀರಾ?' ಅಥವಾ 'ನೀವು ಸಂಗೀತ ಕ್ಲಾಸಿಗೆ ಹೋಗುತ್ತೀರಾ?' ಎಂದು ಕೇಳುತ್ತಾರೆ. ಈ ಥರದ ಮಾತುಕತೆ ಈಗೀಗ ಸಾಮಾನ್ಯವಾಗುತ್ತಿದೆ.

ನಿಮಗೆ ಅಚ್ಚರಿ ಅನ್ನಿಸಬಹುದು. ಅದಕ್ಕೆ ಕಾರಣವೇನೆಂದರೆ, ಸಂಗೀತ ಮತ್ತು ಪಾರ್ಕಿನ್ಸನ್ ಚಿಕಿತ್ಸೆಯ ನಡುವಿನ ಸಂಬಂಧ. ಈ ಸಂಬಂಧಕ್ಕೆ ಈಗ ಬಲವಾದ ವೈಜ್ಞಾನಿಕ ಪುರಾವೆಗಳೂ ಸಿಗುತ್ತಿವೆ. ಪ್ರಸ್ತುತ ಲಭ್ಯವಿರುವ ಚಿಕಿತ್ಸೆಗಳು ರೋಗದ ಲಕ್ಷಣಗಳನ್ನು ನಿಯಂತ್ರಿಸಲು ಸಹಕಾರಿಯಾಗಿದ್ದರೂ, ಅವು ತೀವ್ರವಾದ ಅಡ್ಡಪರಿಣಾಮಗಳನ್ನು ಹೊಂದಿವೆ. ಅದರಲ್ಲೂ ಸಣ್ಣ ನಗರ ಹಾಗೂ ಗ್ರಾಮೀಣ ಭಾಗದ ಕುಟುಂಬಗಳಿಗೆ ಈ ಚಿಕಿತ್ಸಾ ವೆಚ್ಚವನ್ನು ಸುದೀರ್ಘ ಕಾಲ ಭರಿಸುವುದು ಆರ್ಥಿಕವಾಗಿ ಸವಾಲಿನ ಕೆಲಸವಾಗಿದೆ. ವೈದ್ಯಕೀಯ ಚಿಕಿತ್ಸೆಯಲ್ಲಿ ಕಂಡುಬರುತ್ತಿರುವ ಈ ಕೊರತೆಯನ್ನು ನೀಗಿಸಲು 'ಗಾಯನ' ಈಗ ಒಂದು ವಿಶ್ವಾಸಾರ್ಹ ಪೂರಕ ಚಿಕಿತ್ಸೆಯಾಗಿ ಪರಿಗಣಿತವಾಗುತ್ತಿದೆ.

ಪಾರ್ಕಿನ್ಸನ್ ಕಾಯಿಲೆಯ ಅತ್ಯಂತ ಹಾನಿಕಾರಕ ಪರಿಣಾಮಗಳಲ್ಲಿ ಒಂದೆಂದರೆ ಅದು ಮಾತು ಅಥವಾ ಧ್ವನಿಯ ಮೇಲೆ ಬೀರುವ ಪರಿಣಾಮ. ರೋಗಿಗಳ ಧ್ವನಿಯು ಕ್ರಮೇಣ ಕ್ಷೀಣಿಸುತ್ತಾ ಹೋಗುತ್ತದೆ.



ಹಾಡುಗಾರಿಕೆಯೇ ಏಕೆ?

ಹಾಡುಗಾರಿಕೆ ಮತ್ತು ಮಾತು ಇವೆರಡೂ ಮೆದುಳಿನ ಒಂದೇ ರೀತಿಯ ನರಮಂಡಲದ ಹಾದಿಗಳು ಮತ್ತು ರಚನಾತ್ಮಕ ಕಾರ್ಯವಿಧಾನಗಳನ್ನು ಹೊಂದಿವೆ. ಹೀಗಾಗಿಯೇ, ಮಾತಿನ ದೋಷಗಳನ್ನು ಸರಿಪಡಿಸಲು ಗಾಯನವನ್ನು ಒಂದು ಚಿಕಿತ್ಸಕ ಅಸ್ತ್ರವಾಗಿ ಬಳಸಲು ಸಾಧ್ಯವಿದೆ.

ಹಾಡುಗಾರಿಕೆಯು ಉಸಿರಾಟದ ಕ್ರಮ, ಧ್ವನಿಯ ಏರಿಳಿತ ಮತ್ತು ಮಾತಿನ ಸ್ಪಷ್ಟತೆಯನ್ನು ಸುಧಾರಿಸುತ್ತದೆ. ಪಾರ್ಕಿನ್ಸನ್ ಕಾಯಿಲೆಯು ಯಾವ ಸ್ನಾಯುಗಳನ್ನು ಕ್ರಮೇಣವಾಗಿ ದುರ್ಬಲಗೊಳಿಸುತ್ತದೆಯೋ ಆ ಸ್ನಾಯುಗಳಿಗೆ, ಅಂದರೆ ಆಹಾರ ನುಂಗಲು ಬಳಸುವ ಸ್ನಾಯುಗಳಿಗೆ ಹಾಡುಗಾರಿಕೆಯಿಂದ ಉತ್ತಮ ವ್ಯಾಯಾಮ ದೊರೆಯುತ್ತದೆ. 449 ರೋಗಿಗಳನ್ನು ಒಳಗೊಂಡ 21 ಅಧ್ಯಯನಗಳ ವರದಿಯನ್ನು ಪರಿಶೀಲಿಸಿದಾಗ, ಹಾಡುಗಾರಿಕೆಯು ಧ್ವನಿಯ ಕಂಪನಾಂಕದ ಶ್ರೇಣಿ, ಗರಿಷ್ಠ ಉಸಿರು ಹೊರಹಾಕುವ ಮತ್ತು ಒಳತೆಗೆದುಕೊಳ್ಳುವ ಒತ್ತಡ ಹಾಗೂ ಧ್ವನಿ ಹೊರಡಿಸುವ ಸಮಯವನ್ನು ಗಮನಾರ್ಹವಾಗಿ ಸುಧಾರಿಸುತ್ತದೆ ಎಂದು ಕಂಡುಬಂದಿದೆ.

ಸಂಗೀತದಿಂದ ದೈಹಿಕ ಚಲನೆಗೂ ಪ್ರಯೋಜನವಿದೆ. ಸಂಶೋಧನೆಗಳ ಪ್ರಕಾರ, ಇದು ರೋಗಿಗಳ ನಡಿಗೆಯ ವೇಗವನ್ನು ಶೇ 15 ರಿಂದ 20ರಷ್ಟು ಹೆಚ್ಚಿಸುವುದಲ್ಲದೆ, ಹೆಜ್ಜೆಯ ಉದ್ದ ಮತ್ತು ದೈಹಿಕ ಸಮತೋಲನವನ್ನು ಸುಧಾರಿಸುತ್ತದೆ ಎಂಬುದು ಸಾಬೀತಾಗಿದೆ.

ಸಮೂಹ ಗಾಯನದ ಮಹತ್ವ

ವೈಯಕ್ತಿಕವಾಗಿ ಹಾಡುವುದರಿಂದ ಖಂಡಿತವಾಗಿಯೂ ಪ್ರಯೋಜನಗಳಿವೆ. ಆದರೆ ಸಮೂಹ ಗಾಯನವು ಅತಿ ಹೆಚ್ಚು ಪರಿಣಾಮಕಾರಿ ಎಂದು ಸಂಶೋಧನೆಗಳು ಪುಷ್ಟೀಕರಿಸುತ್ತವೆ. ಭಾರತದಂತಹ ದೇಶಗಳಲ್ಲಿ, ಇದು ನಮ್ಮ ಸಾಂಸ್ಕೃತಿಕ ಜೀವನಕ್ಕೆ ಅತ್ಯಂತ ಸೂಕ್ತವಾಗಿ ಹೊಂದಿಕೆಯಾಗುತ್ತದೆ. ಒಂದು ಅಧ್ಯಯನಕ್ಕಾಗಿ ಆರು ತಿಂಗಳವರೆಗೆ ವಾರಕ್ಕೊಮ್ಮೆ ಸಮೂಹ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮ ಮುಗಿದ ನಂತರ, ಭಾಗವಹಿಸಿದವರಲ್ಲಿ ಆತಂಕ, ಒತ್ತಡ ಮತ್ತು ರೋಗದ ಬಗೆಗಿನ ಕೀಳರಿಮೆ ಕಡಿಮೆಯಾಗಿರುವುದು ಕಂಡುಬಂದಿದೆ, ಮಾತ್ರವಲ್ಲದೆ ಅವರಿಗೆ ಉತ್ತಮ ಸಾಮಾಜಿಕ ಬೆಂಬಲವೂ ದೊರೆತಿದೆ.

ಭಾರತದಲ್ಲಿ ಭಜನೆ, ಕೀರ್ತನೆ, ಜಾನಪದ ಪರಂಪರೆ ಮತ್ತು ಭಕ್ತಿ ಸಂಗೀತವು ಈಗಾಗಲೇ ದೈನಂದಿನ ಜೀವನದ ಭಾಗವಾಗಿವೆ. ಇವುಗಳಿಗೆ ಈಗ ವೈದ್ಯಕೀಯ ಮನ್ನಣೆ ಸಿಗಬೇಕಿದೆ ಅಷ್ಟೆ.

ಪಾರ್ಕಿನ್ಸನ್ ರೋಗಿಗಳು ಮತ್ತು ಅವರ ಕುಟುಂಬಗಳು, ಮೊದಲು ತಮ್ಮ ನರರೋಗ ತಜ್ಞರು ಅಥವಾ ಸ್ಪೀಚ್-ಲ್ಯಾಂಗ್ವೇಜ್ ಪೆಥಾಲಜಿಸ್ಟ್ ಜೊತೆ ಚರ್ಚಿಸಿ, ಗಾಯನ ಆಧಾರಿತ ಕಾರ್ಯಕ್ರಮವು ಅವರಿಗೆ ಸೂಕ್ತವೇ ಎಂಬುದನ್ನು ತಿಳಿದುಕೊಳ್ಳುವುದು ಮೊದಲ ಹೆಜ್ಜೆಯಾಗಿದೆ. ಸುತ್ತಮುತ್ತಲಿನ ಭಜನಾ ತಂಡ ಅಥವಾ ಸಂಗೀತ ತರಗತಿಗೆ ಸೇರುವುದು ಸುಲಭ ಮತ್ತು ಹೆಚ್ಚು ಆಪ್ತ. ನಿಯಮಿತವಾಗಿ ಪಾಲ್ಗೊಳ್ಳುವುದು ಮುಖ್ಯವಾಗುತ್ತದೆ. ಪಾರ್ಕಿನ್ಸನ್‌ಗೆಂದೇ ರೂಪಿಸಲಾದ ಯೋಜನೆಗಳನ್ನು ಹುಡುಕಿ. ಅಂತರರಾಷ್ಟ್ರೀಯ ಮಟ್ಟದಲ್ಲಿ, ಪಾರ್ಕಿನ್ಸನ್ ರೋಗಿಗಳಿಗಾಗಿಯೇ 'ಪಾರ್ಕಿನ್‌ಸಾಂಗ್'ನಂತಹ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಭಾರತದ ಪ್ರಮುಖ ನಗರಗಳಲ್ಲಿನ ಸ್ಪೀಚ್ ಥೆರಪಿ ಕೇಂದ್ರಗಳು ಮತ್ತು ಪಾರ್ಕಿನ್ಸನ್ ಸಪೋರ್ಟ್ ಗ್ರೂಪ್‌ಗಳು ಈಗ ಇಂತಹ ವಿಧಾನಗಳನ್ನು ಅಳವಡಿಸಿಕೊಳ್ಳಲು ಆರಂಭಿಸಿವೆ.

ಹಾಡುಗಾರಿಕೆಯು ಕೇವಲ ಒಂದು ಪೂರಕ ಚಿಕಿತ್ಸೆಯಾಗಿದ್ದು, ಇದು ವೈದ್ಯಕೀಯ ಚಿಕಿತ್ಸೆಗೆ ಪರ್ಯಾಯವಲ್ಲ. ಪಾರ್ಕಿನ್ಸನ್ ರೋಗಿಗಳ ಸಂಖ್ಯೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ, ಸಂಪ್ರದಾಯ ಮತ್ತು ವಿಜ್ಞಾನದ ಈ ಸಮ್ಮಿಲನದಿಂದ ದೊರಕುವ ಪ್ರಯೋಜನ ಅತ್ಯಂತ ಅಗತ್ಯವಾಗಿದೆ.

ಲೇಖಕ: ನ್ಯೂರಾಲಜಿ ಮತ್ತು ಮೂವ್‌ಮೆಂಟ್ ಡಿಸಾರ್ಡರ್ ಸ್ಪೆಷಲಿಸ್ಟ್
ನಾರಾಯಣ ಹೆಲ್ತ್ ಸಿಟಿ, ಬೆಂಗಳೂರು

ಕಲೆಯೊಂದಿಗೆ ಬೆರೆತರು; ಭಾವನೆಗೆ ಬಣ್ಣ ತುಂಬಿದರು

• ಉಮೇಶಭಟ್ಟ ಪಿ.ಎಚ್.


ಒಮ್ಮೆಲೆ ನೋಡಿದರೆ, ಇವು ಛಾಯಾಚಿತ್ರಗಳೇ ಇರಬೇಕು; ಎಷ್ಟು ಮೋಹಕವಾಗಿ ಸೆರೆಹಿಡಿದಿದ್ದಾರೆ ಅನ್ನಿಸಿಬಿಡುತ್ತದೆ. ಹತ್ತಿರ ತೆರಳಿ ಒಂದೊಂದೇ ಚಿತ್ರವನ್ನು ವೀಕ್ಷಿಸತೊಡಗಿದರೆ, ನಮ್ಮ ಮನಸಿನಲ್ಲಿ ವರ್ಣಚಿತ್ರದ ಕ್ಯಾನ್ವಾಸ್ ಅರಳುತ್ತಾ ಹೋಗುತ್ತದೆ.

ನಗರದ ಚಿತ್ರಕಲಾಪರಿಷತ್ತಿನಲ್ಲಿ ಆರಂಭಗೊಂಡಿರುವ ಐದು ದಿನಗಳ 'ನಮ್ಮ ಪರಂಪರೆ; ಕರ್ನಾಟಕದ ಬೇರುಗಳು' ಎನ್ನುವ ವರ್ಣಚಿತ್ರಗಳ ಗುಂಪು ಕಲಾಪ್ರದರ್ಶನ ಗಮನ ಸೆಳೆಯುತ್ತದೆ.

ಇಲ್ಲಿ ಕಲಾ ವಿದ್ಯಾರ್ಥಿಗಳ ಕಲಾಕೃತಿಗಳಿವೆ. ಹವ್ಯಾಸಿ ಕಲಾವಿದರು, ಹಿರಿಯರ ಚಿತ್ರಗಳೂ ಇವೆ. ಕರ್ನಾಟಕದ ಪರಂಪರೆಯು ವರ್ಣಚಿತ್ರಗಳಲ್ಲಿ ಅನಾವರಣಗೊಂಡಿದೆ. ಪ್ರಕೃತಿಯ ಸೊಬಗು ಬಣ್ಣದಲ್ಲಿ ವಿಭಿನ್ನವಾಗಿ ಅಂದಗೊಂಡಿದೆ. ಊರು–ಕೇರಿಗಳ ಸೊಬಗು ಸೆರೆಯಾಗಿದೆ. ಪ್ರಮುಖ ದೇಗುಲಗಳನ್ನು ಮರುಸೃಷ್ಟಿಗೊಳಿಸಲಾಗಿದೆ. ಹಿರಿ, ಕಿರಿಯ 22 ಕಲಾವಿದರು ಒಂದೆಡೆ ಕಲೆತು, ತಾವು ಕಂಡದ್ದಕ್ಕೆ ಅಭಿವ್ಯಕ್ತಿಯ ರೂಪ ನೀಡಿದ್ದಾರೆ.

ಕಲಾವಿದರಾದ ಎಸ್.ಸಿದ್ಧೇಶಗೌಡ, ಟಿ.ಎಚ್.ಪ್ರಶಾಂತ್ ಕುಮಾರ್, ಶಾಂತಕುಮಾರ್, ಆರ್.ಲೋಕೇಶ, ಸಿ.ಗಿರಿಜಾ, ಎಂ.ಎಸ್.ಮನೋಜ್, ಡಿ.ಆರ್.ಹೇಮಂತರಾಜು (ತುಮಕೂರು), ಎಸ್.ಜೆ.ಶಿವಕುಮಾರ್ (ಕಲಬುರಗಿ), ವೀಣಾ ಆರ್.ನಂದಿ, ಎಂ.ವಿನೋದ್ ಕುಮಾರ್ (ಬೆಂಗಳೂರು), ಬಿ.ಎಂ.ಭೈರವ, ಎಚ್.ಎನ್.ಯೋಗೀಶ್, ಬಿ.ಎನ್.ಯೋಗೀಶ್ (ಮಂಡ್ಯ), ಎನ್.ಹರೀಶ್, ಚೇತನ್ ಚುಕ್ಕಿ (ಆನೇಕಲ್), ಎಂ.ಎಚ್.ವಿಶ್ವನಾಥ್ (ಯಾದಗಿರಿ), ಡಿ.ತೇಜಸ್ವಿನಿ (ಮೈಸೂರು), ಮಲ್ಲಿಕಾರ್ಜುನ ತರನಗಟ್ಟಿ (ಬೆಳಗಾವಿ) ಅವರ ವರ್ಣಚಿತ್ರಗಳು ಮುದ ನೀಡುತ್ತವೆ. ಅತಿಥಿ ಕಲಾವಿದರಾದ ಚಂದ್ರಶೇಖರ್, ಮಲ್ಲಪ್ಪ ಹಳ್ಳಿ (ತುಮಕೂರು), ಎನ್.ಕಾಂತರಾಜು (ಬೆಂಗಳೂರು) ಅವರ ಚಿತ್ರಗಳು ಅರ್ಥಪೂರ್ಣವಾಗಿ ಇವೆ.







ಎನ್. ಹರೀಶ್ ಅವರ ಕಲಾಕೃತಿಗಳು

ಯುವ ಕಲಾವಿದ ಎಂ.ಎಚ್.ವಿಶ್ವನಾಥ್ ಅವರು ಮೈಸೂರು ಅರಮನೆಯ ಮುಖ್ಯದ್ವಾರವನ್ನು ಬಣ್ಣಗಳಲ್ಲಿ ಅರಳಿಸಿದ್ದಾರೆ. ಅಲ್ಲದೆ, ಅರಮನೆ ಎದುರಿಗಿನ ಎರಡು ಪ್ರಮುಖ ತಾಣಗಳಿಗೆ ಚಿತ್ರರೂಪ ನೀಡಿದ್ದಾರೆ. ಹಂಪಿಯ ವಿರೂಪಾಕ್ಷ ದೇಗುಲಕ್ಕೆ ಸಮೀಪದ ಭೀಮ ದ್ವಾರವನ್ನೂ ಚಿತ್ರಿಸಿದ್ದಾರೆ.

ಶಾಂತಕುಮಾರ್ ಅವರ ಕಣ್ಣು ತುಂಬೆಲ್ಲಾ ಬಣ್ಣ ಬಣ್ಣದ ದೋಣಿಗಳೇ ತುಂಬಿವೆ. ಕಡಲ ತಡಿಯಲ್ಲಿ ಮೂರ್ನಾಲ್ಕು ದಿನ ಕಳೆದು, ಅಲ್ಲಿ ಕಂಡದ್ದನ್ನು ವಿಭಿನ್ನವಾಗಿಯೇ ಅಭಿವ್ಯಕ್ತಗೊಳಿಸಿದ್ದಾರೆ.

ಮಲ್ಲಿಕಾರ್ಜುನ ತರನಗಟ್ಟಿ ಮೈಸೂರಿನಲ್ಲಿ ಕಲಾವಿದ್ಯಾರ್ಥಿ. ಮೈಸೂರಿನ ಹೃದಯಭಾಗವಾದ ಕೃಷ್ಣರಾಜೇಂದ್ರ ವೃತ್ತ, ಶೃಂಗೇರಿಯ ಶಾರದಾಂಬೆ ದೇಗುಲ, ಐಹೊಳೆಯ ದುರ್ಗಾ ದೇಗುಲ, ಬಾದಾಮಿಯ ಭೂತನಾಥ ಮಂದಿರಗಳಿಗೆ ಅವರು ಬಣ್ಣದಲ್ಲಿ ಜೀವ ತುಂಬಿದ್ದಾರೆ.

ಹೇಮಂತರಾಜು ಅವರ ಚಿತ್ರ ಸ್ವರೂಪವು ಸಂಪೂರ್ಣ ಕಲೆಯದ್ದು. ಕರಾವಳಿ ಮಣ್ಣಿನ ಯಕ್ಷಗಾನದ ಸನ್ನಿವೇಶಗಳನ್ನು ಅವರು ಕುಂಚದಲ್ಲಿ ಸೆರೆಹಿಡಿದಿದ್ದಾರೆ.

ವಿನೋದ್ ಕುಮಾರ್ ಅವರಿಗೆ ಗಣೇಶನ ಮೇಲೆ ವಿಶೇಷ ಪ್ರೀತಿ. ಅದಕ್ಕಾಗಿ ಗಣೇಶ ಮಂದಿರ ಇರುವ ಪಾರಂಪರಿಕ ತಾಣಗಳಲ್ಲಿ ದಿನಗಳೆದು, ಅದಕ್ಕೆ ಚಿತ್ರ ರೂಪವನ್ನು ವಿಶಿಷ್ಟವಾಗಿಯೇ ನೀಡಿದ್ದಾರೆ. ಅದರಲ್ಲೂ ಹೊಯ್ಸಳ ಶೈಲಿಯ ಗಣೇಶ ಕಲಾಕೃತಿಗಳೇ ಹೆಚ್ಚಾಗಿವೆ.

ಸಿದ್ಧೇಶ್ ಗೌಡ ಅವರನ್ನು ಸೆಳೆದದ್ದು ಶಿರಸಿ ನಗರ. ಅಲ್ಲಿನ ಬೀದಿಗಳಲ್ಲಿ ಸುತ್ತಿ ಊರು, ರಸ್ತೆಗಳನ್ನು ವರ್ಣಚಿತ್ರದ ಮೂಲಕ ಕಟ್ಟಿಕೊಟ್ಟಿದ್ದಾರೆ.

ವೃತ್ತಿಯಲ್ಲಿ ಎಂಜಿನಿಯರ್ ಆಗಿದ್ದರೂ ಪ್ರವೃತ್ತಿಯಲ್ಲಿ ಕಲೆಯೊಂದಿಗೆ ಬೆರೆತಿರುವ ಪ್ರಶಾಂತ್ ಕುಮಾರ್ ಅವರು ಐಹೊಳೆ, ಪಟ್ಟದಕಲ್ಲಿನ ಚಿತ್ರಣವನ್ನು ಆಕರ್ಷಕವಾಗಿಯೇ ಮರು ಸೃಷ್ಟಿಸಿದ್ದಾರೆ.

ಗುರುವಿಗೆ ಗೌರವ

ಈ ಪ್ರದರ್ಶನದಲ್ಲಿ ಗುರು ಒಬ್ಬರಿಗೆ ಗೌರವ ಸಲ್ಲಿಸಿ ಅವರ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇಟ್ಟಿರುವುದು ವಿಶೇಷ. ಚಿತ್ರದುರ್ಗ ಮೂಲದವರಾದರೂ ಮಂಗಳೂರಿನಲ್ಲಿ ಚಿತ್ರಕಲಾ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಾ ಯುವ ಕಲಾವಿದರನ್ನು ತಯಾರು ಮಾಡಿದ್ದ ಸೈಯದ್ ಆಸಿಫ್ ಆಲಿ ಅವರು ತಾವು ರೂಪಿಸಿದ್ದ ಕಲಾಕೃತಿಗಳೊಂದಿಗೆ ಪ್ರದರ್ಶನದಲ್ಲಿ ಭಾಗವಹಿಸಬೇಕಿತ್ತು. ಇತ್ತೀಚೆಗೆ ಅಕಾಲಿಕವಾಗಿ ನಿಧನರಾದರು. ಅವರ ನೆನಪಿನಲ್ಲಿ ಭಾವಚಿತ್ರದ ಜತೆಗೆ ಎರಡು ಕಲಾಕೃತಿಗಳನ್ನು ಪ್ರದರ್ಶಿಸಲಾಗಿದೆ.

ಎನ್.ಹರೀಶ್ ಅವರ ಹೆಚ್ಚಿನ ಚಿತ್ರಗಳಲ್ಲಿ ಬಣ್ಣದ ವೈಭವ ಎದ್ದು ಕಾಣುತ್ತದೆ. ಕೆಂದಾವರೆ, ಪ್ರಕೃತಿ, ಜೋಗ ಜಲಪಾತದ ವೈಭವ, ಹೆಣ್ಣುಮಕ್ಕಳ ಭಾವನೆಗಳಿಗೆ ಬಣ್ಣ ತುಂಬಿದ್ದಾರೆ.

ಪ್ರದರ್ಶನ ಆಯೋಜಕರಲ್ಲಿ ಒಬ್ಬರಾದ ಕಲಾವಿದ ಕಾಂತರಾಜು ಅವರು ಹಂಪಿಯನ್ನು ಚಿತ್ರಿಸಿರುವ ರೀತಿ ಮನಮೋಹಕವಾಗಿದೆ. ವಿದೇಶಗಳಲ್ಲೂ ಕಲಾ ಪ್ರದರ್ಶನ ನೀಡಿರುವ ಅವರು, ಹಲವಾರು ಪ್ರತಿಭೆಗಳಿಗೆ ವೇದಿಕೆ ಒದಗಿಸುತ್ತಾ ಬಂದಿದ್ದಾರೆ.

ಕಾಂತರಾಜು ಅವರ ಪತ್ನಿ ವೀಣಾ ಆರ್. ನಂದಿ ಅವರಂತೂ ಶಿಲ್ಪಕಲಾಕೃತಿಗಳಿಗೆ ಚಿತ್ರದ ಮೂಲಕ ಜೀವ ನೀಡುವ ಪ್ರಯತ್ನ ಮಾಡಿದ್ದಾರೆ. ಗರುಡ, ಗಣೇಶನ ಚಿತ್ರಗಳು ವಿಶೇಷವಾಗಿವೆ.

'ವರ್ಣಚಿತ್ರ ಕಲೆ ಈಗ ಕಡಿಮೆಯಾಗುತ್ತಿದೆ. ಯುವಕಲಾವಿದರಿಗೆ ತರಬೇತಿ ನೀಡಲೆಂದೇ ವಿಶೇಷ ಚಟುವಟಿಕೆಯನ್ನು ರೂಪಿಸಿ, ಅವರಿಗೆ ಇಷ್ಟವಾದ ಕ್ಷೇತ್ರಗಳಿಗೆ ಮೂರ್ನಾಲ್ಕು ದಿನದ ಪ್ರವಾಸ ಕಳುಹಿಸಲಾಗಿತ್ತು. ಅಲ್ಲಿ ಕಂಡದ್ದನ್ನು ವರ್ಣಚಿತ್ರದಲ್ಲಿ ಅವರು ಸೃಷ್ಟಿಸಿದ್ದಾರೆ. ಬಣ್ಣದ ಮಹತ್ವವನ್ನು ಅವರಿಗೆ ತಿಳಿಸಿಕೊಡಲಾಗಿದ್ದು, ಎಲ್ಲರ ಕೃತಿಗಳೂ ಚೆನ್ನಾಗಿ ಮೂಡಿಬಂದಿವೆ' ಎಂದು ಅಂತರರಾಷ್ಟ್ರೀಯ ವರ್ಣಚಿತ್ರ ಸೊಸೈಟಿಯ ಕರ್ನಾಟಕ ಅಧ್ಯಕ್ಷರೂ ಆಗಿರುವ ಕಾಂತರಾಜು ಹೇಳುತ್ತಾರೆ.

150ಕ್ಕೂ ಹೆಚ್ಚು ಕಲಾಕೃತಿಗಳನ್ನು ಭಾನುವಾರದವರೆಗೂ ವೀಕ್ಷಿಸಲು ಅವಕಾಶವಿದೆ.



ಚಿತ್ರಕಲಾ ಪರಿಷತ್ತಿನಲ್ಲಿ ಆರಂಭಗೊಂಡಿರುವ ವರ್ಣಚಿತ್ರ ಪ್ರದರ್ಶನದಲ್ಲಿ ಕಲಾವಿದೆ ವೀಣಾ ಆರ್.ನಂದಿ ಅವರ ಕಲಾಕೃತಿ

ಡಾ. ರಾಜ್ ಹಾಡಿಗೆ ಅಮೆರಿಕದಲ್ಲಿ ಧ್ವನಿಗೂಡಿಸಿದ ನಟ ಮೋಹನ್‌ಲಾಲ್ 2





'ಪರಿಸರದ ಕಥೆಗಳು' ನಾಟಕದ ದೃಶ್ಯ

'ವೀಕೆಂಡ್' ನಾಟಕೋತ್ಸವ

ಬೆಂಗಳೂರಿನ ವಿವಿಧ ರಂಗ ತಂಡಗಳು ಬಸವೇಶ್ವರನಗರದ ಕೆ.ಇ.ಎ. ಪ್ರಭಾತ್ ರಂಗಮಂದಿರದಲ್ಲಿ 'ವೀಕೆಂಡ್' ನಾಟಕೋತ್ಸವ ಹಮ್ಮಿಕೊಂಡಿದ್ದು, ಇದೇ 25ರಂದು ಸಂಜೆ 6.30ಕ್ಕೆ ದಾಟು ಥಿಯೇಟರ್ ವತಿಯಿಂದ 'ಪರಿಸರದ ಕಥೆಗಳು' ನಾಟಕ ಪ್ರದರ್ಶನ ಆಯೋಜಿಸಲಾಗಿದೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಕಥೆ ಆಧಾರಿತ ನಾಟಕ ಇದಾಗಿದ್ದು, ಮನು ಆರ್. ಅವರು ನಿರ್ದೇಶಿಸಿದ್ದಾರೆ. 26ರಂದು ಸಂಜೆ 6.30ಕ್ಕೆ ಅಂತರಂಗ ಬಹಿರಂಗ ತಂಡದಿಂದ 'ಮಿಸ್ಟರ್. ರಾವ್ ಆ್ಯಂಡ್ ಅಸೋಸಿಯೇಟ್ಸ್' ನಾಟಕ ಪ್ರದರ್ಶನ ಕಾಣಲಿದೆ. ಭೀಷ್ಮ ರಾಮಯ್ಯ ಅವರು ರಚಿಸಿರುವ ಈ ನಾಟಕವನ್ನು ಬಾಷ್ ರಾಘವೇಂದ್ರ ನಿರ್ದೇಶಿಸಿದ್ದಾರೆ. ಈ ಎರಡು ನಾಟಕಗಳ ಟಿಕೆಟ್‌ಗಳು ಬುಕ್ ಮೈ ಷೋದಲ್ಲಿ ಲಭ್ಯ.

'ಕಲಾ ಸ್ಪಂದನ' ಸಂಗೀತ–ನೃತ್ಯ

ಬೆಂಗಳೂರು: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್ ಹಾಗೂ ಅಲಂಕೃತ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಜಂಟಿಯಾಗಿ ಇದೇ 25ರಂದು ಸಂಜೆ 6 ಗಂಟೆಗೆ ಜಯನಗರ 4ನೇ ಬ್ಲಾಕ್‌ನಲ್ಲಿರುವ ಸನಾತನ ಕಲಾಕ್ಷೇತ್ರದಲ್ಲಿ 'ಕಲಾ ಸ್ಪಂದನ' ಶಾಸ್ತ್ರೀಯ ಸಂಗೀತ–ನೃತ್ಯ ಕಾರ್ಯಕ್ರಮ ಹಮ್ಮಿಕೊಂಡಿವೆ.

ಶಾಂತಲಾ ಆರ್ಟ್ಸ್ ಅಕಾಡೆಮಿಯ ಕಲಾತ್ಮಕ ನಿರ್ದೇಶಕರಾದ ಪುಲಕೇಶಿ ಕಸ್ತೂರಿ, ಹಿಂದೂಸ್ತಾನಿ ಗಾಯಕಿ ವಡವಾಟಿ ಶಾರದಾ ಭರತ್ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಪ್ರಕ್ಷಿಲಾ ಜೈನ್ ಅವರಿಂದ ಭರತನಾಟ್ಯ ಪ್ರದರ್ಶನ ನಡೆಯಲಿದೆ. ಹಿಂದೂಸ್ತಾನಿ ಗಾಯನದಲ್ಲಿ ವರ್ಣಿಕಾ ಸಂದೀಪ್, ರಿತೀಷ್ ಜೆ.ಆರ್. ಪಾಲ್ಗೊಳ್ಳಲಿದ್ದಾರೆ. ಋತುಪರ್ಣಾ ದೇಸಾಯಿ ಅವರಿಂದ ತಬಲಾ, ಸೃಷ್ಟಿ ದೇಸಾಯಿ ಅವರಿಂದ ಪಿಟೀಲು ಹಾಗೂ ನಾಗೇಂದ್ರ ರಾಣಾಪೂರ್ ಅವರಿಂದ ಹಾರ್ಮೋನಿಯಂ ವಾದನ ನಡೆಯಲಿದೆ.

ಸಾಂಸ್ಕೃತಿಕ ಕಾರ್ಯಕ್ರಮ

ಕಾವ್ಯ ವಾಚನ ಗೀತ ಗಾಯನ

ಬೆಂಗಳೂರು: ಪಂಚಾಮೃತ ಸುಗಮ ಸಂಗೀತ ಅಕಾಡೆಮಿಯು ಇದೇ 25ರಂದು ಬೆಳಿಗ್ಗೆ 10.30ಕ್ಕೆ, ಮಲ್ಲೇಶ್ವರದಲ್ಲಿರುವ ವೇದಮಾತ ಭವನದಲ್ಲಿರುವ ಲೀಲಾದ್ರಿ ಸಿಂಗರ್ಸ್ ಅಕಾಡೆಮಿಯಲ್ಲಿ 'ಆಚಾರ್ಯತ್ರಯರು–ಕನ್ನಡ ಕವಿಗಳು ಕಂಡಂತೆ' ಕಾರ್ಯಕ್ರಮದಡಿ ಕಾವ್ಯ ವಾಚನ ಮತ್ತು ಗೀತ ಗಾಯನ ಹಮ್ಮಿಕೊಂಡಿದೆ.

ಅಕಾಡೆಮಿ ಗೌರವಾಧ್ಯಕ್ಷ ಎ.ಎಂ. ಚಂದ್ರಶೇಖರ, ಗೌರವ ಸಲಹೆಗಾರ ಕೆ.ಸಿ. ರಮೇಶ್, ಸಂಸ್ಥಾಪಕಿ ಗಾಯತ್ರಿ ಕೇಶವ್, ಗಾಯಕ ವಿಜಯ ಹಾವನೂರು ಪಾಲ್ಗೊಳ್ಳಲಿದ್ದಾರೆ. ಧಾರ್ಮಿಕ ಚಿಂತಕ ಎಂ. ವೆಂಕಟೇಶ ಶೇಷಾದ್ರಿ ಅವರಿಗೆ ಗೌರವಾಭಿನಂದನೆ ಸಲ್ಲಿಸಲಾಗುತ್ತದೆ.

ಜಿ.ಎಸ್. ನಾರಾಯಣ ಅವರಿಂದ ಗಮಕ ವಾಚನ ನಡೆಯಲಿದೆ. ದಿವಾಕರ್ ಕಶ್ಯಪ್, ಗಾಯತ್ರಿ ಕೇಶವ, ನರಸಿಂಹ ಹರೀಶ್, ಪ್ರತಿಭಾ ನಂದನ್, ಅಪರ್ಣಾ ಪ್ರಸನ್ನ ಹಾಗೂ ಪಂಚಾಮೃತ ಸುಗಮ ಸಂಗೀತ ಅಕಾಡೆಮಿ ವಿದ್ಯಾರ್ಥಿಗಳಿಂದ ಗೀತ ಗಾಯನ ನಡೆಯಲಿದೆ. ಹರ್ಷ ಶಲವಾಡಿ (ಹಾರ್ಮೋನಿಯಂ), ಗಿರೀಶ್ ಶಲವಾಡಿ (ತಬಲಾ), ಎಸ್. ಶ್ಯಾಮದತ್ತ (ರವಿ) ಅವರು ವಾದ್ಯ ಸಹಕಾರ ನೀಡಲಿದ್ದಾರೆ.

ಶಾಸ್ತ್ರೀಯ ನೃತ್ಯ ಪ್ರದರ್ಶನ

ಬೆಂಗಳೂರು: ನಟೇಶ ನೃತ್ಯಾಲಯವು ಇದೇ 25ರಂದು ಬೆಳಿಗ್ಗೆ 10 ಗಂಟೆಯಿಂದ, ಮಲ್ಲೇಶ್ವರದಲ್ಲಿರುವ ಚೌಡಯ್ಯ ಸ್ಮಾರಕ ಭವನದಲ್ಲಿ 'ರಸ, ಭಾವ ಮತ್ತು ಕಲೆ' ಶೀರ್ಷಿಕೆಯಡಿ ಶಾಸ್ತ್ರೀಯ ನೃತ್ಯ ಪ್ರದರ್ಶನ ಹಮ್ಮಿಕೊಂಡಿದೆ.


ಶ್ರೀಹರಿ ಮತ್ತು ಶಿಷ್ಯಂದಿರಿಂದ ಕಥಕ್, ನಯನಾ ಶ್ರೀನಿವಾಸಮೂರ್ತಿ ಅವರಿಂದ ಭರತನಾಟ್ಯ, ದೇವೇಶ್ ನಾಯರ್ ಅವರಿಂದ ಕೂಚಿಪುಡಿ, ನೀನಾ ಪ್ರಸಾದ್ ಅವರಿಂದ ಮೋಹಿನಿಯಾಟ್ಟಂ, ಪಿ. ಪ್ರವೀಣ್ ಕುಮಾರ್ ಅವರಿಂದ ಭರತನಾಟ್ಯ, ಪ್ರಭಾತ್ ಆರ್ಟ್ಸ್ ಇಂಟರ್‌ನ್ಯಾಷನಲ್ ವತಿಯಿಂದ 'ಗೋವರ್ಧನ ಲೀಲೆ' ನೃತ್ಯರೂಪಕ ಹಮ್ಮಿಕೊಳ್ಳಲಾಗಿದೆ.



'ಸಾಹಿತ್ಯ ಸಂಗೀತ ಸಮಾರೋಹ' ನಾಳೆ

ಸಪ್ತಕ ಬೆಂಗಳೂರು ಸಂಸ್ಥೆಯು ಇದೇ ಭಾನುವಾರ (ಏ.26) ಸಂಜೆ 5 ಗಂಟೆಗೆ, ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ 'ಸಾಹಿತ್ಯ ಸಂಗೀತ ಸಮಾರೋಹ' ಕಾರ್ಯಕ್ರಮ ಹಮ್ಮಿಕೊಂಡಿದೆ.

ನಂತರ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದ್ದು, ಅರುಂಧತಿ ವಸಿಷ್ಠ ಅವರು ಗಾಯನ ಪ್ರಸ್ತುತಪಡಿಸಲಿದ್ದಾರೆ. ಅಮಿತ್ ರಾಜ್ ಎಸ್. (ತಬಲಾ), ಸೂರ್ಯ ಉಪಾಧ್ಯಾಯ (ಹಾರ್ಮೋನಿಯಂ) ಅವರು ವಾದ್ಯ ಸಹಕಾರ ನೀಡಲಿದ್ದಾರೆ.



ಅರುಂಧತಿ ವಸಿಷ್ಠ

ಮೆಂತೆ ಮಾವಿನಕಾಯಿ ಮಸಾಲ ರುಚಿಗೂ ಸೈ ಆರೋಗ್ಯಕ್ಕೂ ಜೈ



ಮಾರ್ಚ್–ಏಪ್ರಿಲ್ ತಿಂಗಳು ಬಂತೆಂದರೆ ಸಾಕು ಎಲ್ಲರ ಮನೆಗಳ ಅಡುಗೆಮನೆಯಲ್ಲಿ ಮಾವಿನಕಾಯಿ, ಮಾವಿನಹಣ್ಣಿನ ರಾಜ್ಯಭಾರ ಶುರುವಾಗುತ್ತದೆ. ಬಿರು ಬೇಸಿಗೆಯಲ್ಲಿ ಮಾವಿನಕಾಯಿಯಿಂದ ರುಚಿ ರುಚಿಯಾದ ಪದಾರ್ಥಗಳನ್ನು ಮಾಡಿಕೊಂಡು ಸವಿಯುವುದೇ ಒಂದು ಹಬ್ಬ.

ಈ ಬೇಸಿಗೆಯಲ್ಲಿ ಮಾವಿನಕಾಯಿಯನ್ನು ಸವಿಯುವುದರ ಜೊತೆಗೆ ಉಷ್ಣದಿಂದಲೂ ತಪ್ಪಿಸಿಕೊಳ್ಳಲು ಇಲ್ಲಿ ಒಂದು ವಿಭಿನ್ನವಾದ ಹಾಗೂ ರುಚಿಯಾದ ಅಡುಗೆಯ ರೆಸಿಪಿ ನಿಮಗಾಗಿ.

ಬೇಕಾಗುವ ಸಾಮಗ್ರಿ: 1 ತೋತಾಪುರಿ ಮಾವಿನಕಾಯಿ ಹಾಗೂ 1 ಹುಳಿ ಮಾವಿನಕಾಯಿ, 4 ಚಮಚ ಎಣ್ಣೆ, 1 ಚಮಚ ಸಾಸಿವೆ, 2 ಚಮಚ ಮೆಂತ್ಯ, 2 ಚಮಚ ಅಚ್ಚ ಕಾರದ ಪುಡಿ, 1 ಚಿಟಿಕೆ ಇಂಗು, ರುಚಿಗೆ ತಕ್ಕಷ್ಟು ಉಪ್ಪು, 2 ಚಮಚ ಬೆಲ್ಲ.

ಮಾಡುವ ವಿಧಾನ: ಮಾವಿನಕಾಯಿಯನ್ನು ಚೆನ್ನಾಗಿ ತೊಳೆದು ಸಿಪ್ಪೆ ತೆಗೆದು ತುರಿದುಕೊಳ್ಳಬೇಕು. ನಂತರ ಸ್ಟವ್ ಹಚ್ಚಿ ಒಂದು ಬಾಣಲೆಗೆ ಎಣ್ಣೆ ಹಾಕಿ. ಕಾದ ನಂತರ ಸಾಸಿವೆ, ಮೆಂತ್ಯ ಹಾಕಿ. ಮೆಂತ್ಯ ಹೊಂಬಣ್ಣಕ್ಕೆ ತಿರುಗಿದ ನಂತರ ತುರಿದ ಮಾವಿನಕಾಯಿಯನ್ನು ಹಾಕಿ ಕೈಯಾಡಿಸಿಕೊಳ್ಳಬೇಕು. ಮಾವಿನಕಾಯಿ ಸ್ವಲ್ಪ ಬಾಡಿದ ನಂತರ ಉಪ್ಪು, ಬೆಲ್ಲ, ಅಚ್ಚ ಕಾರದ ಪುಡಿ, ಇಂಗು ಹಾಕಿ ಸಣ್ಣ ಉರಿಯಲ್ಲಿ ಅದನ್ನು ಚೆನ್ನಾಗಿ ಬೇಯಿಸಬೇಕು. ಬಳಿಕ ಗ್ಯಾಸ್ ಉರಿಯನ್ನು ಆಫ್ ಮಾಡಿ 5ರಿಂದ 10 ನಿಮಿಷ ಅದನ್ನು ಪ್ಲೇಟ್ ಮುಚ್ಚಿ ಇಟ್ಟರೆ ರುಚಿ ರುಚಿಯಾದ, ಸವಿ ಸವಿಯಾದ ಮೆಂತೆ ಮಾವಿನಕಾಯಿ ಮಸಾಲ ಸವಿಯಲು ಸಿದ್ಧವಾಗುತ್ತದೆ.

ಇದನ್ನು ಚಪಾತಿ, ರೊಟ್ಟಿ, ದೋಸೆ ಅಥವಾ ಬಿಸಿ ಬಿಸಿ ಅನ್ನದ ಜೊತೆ ಸೇವಿಸುವುದರಿಂದ ಉತ್ತಮ ರುಚಿ ಸಿಗುತ್ತದೆ. ಹತ್ತರಿಂದ ಹನ್ನೆರಡು ದಿನ ಇದನ್ನು ಡಬ್ಬಿಯಲ್ಲಿ ಶೇಖರಿಸಿ ಇಟ್ಟುಕೊಂಡು ಕೂಡ ಸವಿಯಬಹುದು. ಮಾವಿನಕಾಯಿ ಸೀಸನ್‌ನಲ್ಲಿ ಬ್ಯಾಚುಲರ್ಸ್‌ಗಳಿಗೆ ಇದು ಹೇಳಿ ಮಾಡಿಸಿದಂತಹ ರೆಸಿಪಿ.



ಜಿಕೆವಿಕೆ: ರೈತ ಸಂತೆ ಇಂದು



ಮೇಳದಲ್ಲಿ ಪ್ರದರ್ಶನಕ್ಕೆ ಸಿದ್ಧವಾಗಿರುವ ಮಾವು

• ಪ್ರಜಾವಾಣಿ ವಾರ್ತೆ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಜಿಕೆವಿಕೆ ಆವರಣದಲ್ಲಿ ಶನಿವಾರ ಬೆಳಿಗ್ಗೆ 7ರಿಂದ ಸಂಜೆ 4 ಗಂಟೆಯವರೆಗೆ ರೈತ ಸಂತೆ ಹಮ್ಮಿಕೊಂಡಿದೆ.

ಹಲಸು, ಮಾವು, ಸೀಬೆ, ದ್ರಾಕ್ಷಿ, ಕಲ್ಲಂಗಡಿ ಹಾಗೂ ಕರಬೂಜ ಹಣ್ಣು, ಗಿಣ್ಣು, ತಾಜಾ ಹಣ್ಣಿನ ಪಾನೀಯಗಳು, ಸಿರಿಧಾನ್ಯದ ಹಪ್ಪಳ ಮತ್ತು ಸಂಡಿಗೆ, ಹುರಿಗಾಳು, ಮೌಲ್ಯವರ್ಧಿತ ಸಿರಿಧಾನ್ಯ ಪದಾರ್ಥಗಳು, ಸಾವಯವ ಉತ್ಪನ್ನಗಳು, ರಾಜಮುಡಿ ಅಕ್ಕಿ, ತಾಜಾ ಅಣಬೆ, ಆಲಂಕಾರಿಕ ಮೀನಿನ ಮರಿಗಳು ಈ ಬಾರಿಯ ರೈತ ಸಂತೆಯ ವಿಶೇಷವಾಗಿದೆ. ಇದರ ಜತೆಗೆ ವಿವಿಧ ಹಣ್ಣು ಹಾಗೂ ತರಕಾರಿಗಳು ಸಂತೆಯಲ್ಲಿ ಸಿಗಲಿವೆ.

ಸುಗಂಧ ಮತ್ತು ಔಷಧೀಯ ಸಸ್ಯಗಳು, ಆಲಂಕಾರಿಕ ಗಿಡಗಳು, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಜೈವಿಕ ಕೀಟನಾಶಕ, ಕರಕುಶಲ ವಸ್ತುಗಳು, ಅಡಿಕೆ ಉತ್ಪನ್ನಗಳು, ರೇಷ್ಮೆ ಕೃಷಿಯ ಉಪ ಉತ್ಪನ್ನಗಳು, ಜೇನು ಕೃಷಿ, ವಾಣಿಜ್ಯ ಉತ್ಪನ್ನಗಳು ಸಂತೆಯಲ್ಲಿ ಇರಲಿವೆ.

ಕೃಷಿ ಪ್ರಕಟಣೆಗಳು ಹಾಗೂ ವಿಶ್ವವಿದ್ಯಾಲಯದ ವಿಶೇಷತೆಯ ಬಗ್ಗೆ ಮಾಹಿತಿ ದೊರೆಯಲಿದೆ. ಕೃಷಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯಿರುತ್ತದೆ. ಸಾರ್ವಜನಿಕರು ಮತ್ತು ರೈತರು ಈ ವಿನೂತನ ಸಂತೆಯ ಪ್ರಯೋಜನ ಪಡೆದುಕೊಳ್ಳಬೇಕು ಎಂದು ವಿಶ್ವವಿದ್ಯಾಲಯದ ಹಿರಿಯ ವಾರ್ತಾತಜ್ಞ ಕೆ.ಪಿ. ರಘುಪ್ರಸಾದ್ ಮನವಿ ಮಾಡಿದ್ದಾರೆ.

ಬಿಳಿಮುಟ್ಟು: ಯಾವಾಗ ಅಪಾಯಕಾರಿ?

• ಡಾ. ಕವಿತಾ ಕೋವಿ

ಬಿಳಿಮುಟ್ಟು ಅಥವಾ ಬಿಳಿಸ್ರಾವ– ಇದು ಅನೇಕ ಮಹಿಳೆಯರಿಗೆ ಬಿಟ್ಟೂ ಬಿಡದೆ ಕಾಡುವ ಸಮಸ್ಯೆಯಾಗಿದೆ. ಹಲವು ಸಂದರ್ಭಗಳಲ್ಲಿ ಇದು ಸಾಮಾನ್ಯವಾಗಿರುತ್ತದೆ. ಆದರೆ, ಸ್ರಾವದ ಬಣ್ಣ ಅಥವಾ ವಾಸನೆಯಲ್ಲಿ ಬದಲಾವಣೆ ಕಂಡಾಗ ಅಥವಾ ಇತರ ಅಸ್ವಸ್ಥತೆಯೂ ಕಂಡುಬಂದಾಗ, ಅದು ಆಂತರಿಕ ಸಮಸ್ಯೆಯ ಸೂಚನೆಯಾಗಿರಬಹುದು.


ಆರಂಭದಲ್ಲೇ ಸರಿಯಾದ ಆರೈಕೆ ಮತ್ತು ಸಮಯೋಚಿತ ಚಿಕಿತ್ಸೆಯಿಂದ ಈ ಸಮಸ್ಯೆಯನ್ನು ಸುಲಭವಾಗಿ ನಿರ್ವಹಿಸಬಹುದು ಎನ್ನುತ್ತಾರೆ ವೈದ್ಯರು.

ಗಂಭೀರ ಎನಿಸುವುದು ಯಾವಾಗ?

ವಾಸನೆ ಇಲ್ಲದ ಸ್ವಲ್ಪ ಪ್ರಮಾಣದ ಸ್ಪಷ್ಟ ಬಿಳಿ ಸ್ರಾವವು ಸಾಮಾನ್ಯವಾಗಿ ಯೋನಿಯನ್ನು ಸ್ವಚ್ಛ ಮತ್ತು ಆರೋಗ್ಯಕರವಾಗಿ ಇಡಲು ದೇಹ ಅನುಸರಿಸುವ ನೈಸರ್ಗಿಕ ಪ್ರಕ್ರಿಯೆಯಾಗಿದೆ. ಇದನ್ನು 'ಶರೀರವಿಜ್ಞಾನ ಸ್ರಾವ' ಎಂದು ಕರೆಯಲಾಗುತ್ತದೆ. ಇದಕ್ಕೆ ಚಿಕಿತ್ಸೆಯ ಅಗತ್ಯವಿಲ್ಲ. ಆದರೆ, ದಪ್ಪ, ಹಳದಿ ಮಿಶ್ರಿತ ಹಸಿರು ಅಥವಾ ದುರ್ವಾಸನೆಯ ಬಿಳಿ ಸ್ರಾವವು ಯೀಸ್ಟ್ ಸೋಂಕು ಅಥವಾ ಬ್ಯಾಕ್ಟೀರಿಯಲ್ ವ್ಯಾಜಿನೋಸಿಸ್‌ನಂತಹ ಸೋಂಕುಗಳೊಂದಿಗೆ ಸಂಬಂಧ ಹೊಂದಿರಬಹುದು.

ಆರೋಗ್ಯದ ಮೇಲಾಗುವ ಪರಿಣಾಮ

ಅಸಹಜ ಸ್ರಾವವನ್ನು ನಿರ್ಲಕ್ಷಿಸುವುದರಿಂದ ನಿರಂತರ ಅಸ್ವಸ್ಥತೆ, ತುರಿಕೆ ಮತ್ತು ಕಿರಿಕಿರಿ ಉಂಟಾಗಬಹುದು. ಕೆಲವು ಸಂದರ್ಭಗಳಲ್ಲಿ ಸೋಂಕು ಹರಡಬಹುದು ಅಥವಾ ಆಗಾಗ ಮರುಕಳಿಸಬಹುದು. ದೀರ್ಘಕಾಲ ಚಿಕಿತ್ಸೆ ಪಡೆಯದಿದ್ದರೆ ಕೆಲವು ಸೋಂಕುಗಳು ಸಂತಾನೋತ್ಪತ್ತಿ ಆರೋಗ್ಯದ ಮೇಲೂ ಪರಿಣಾಮ ಬೀರಬಹುದು.



ಸ್ರಾವವು ಸಾಮಾನ್ಯವಾದುದೇ ಅಥವಾ ಸೋಂಕಿನಿಂದ ಆಗಿದೆಯೇ ಎಂದು ವೈದ್ಯರು ಗುರುತಿಸಿ, ಔಷಧ ಅಥವಾ ಆ್ಯಂಟಿಫಂಗಲ್ ಚಿಕಿತ್ಸೆಯಂತಹ ಸೂಕ್ತ ಚಿಕಿತ್ಸೆ ಸೂಚಿಸಬಹುದು. ಸ್ವಯಂ ಔಷಧ ಸೇವನೆ ಮಾಡಬಾರದು. ಏಕೆಂದರೆ ಅದು ಮೂಲ ಕಾರಣವನ್ನು ಗುಣಪಡಿಸದೇ ಇರಬಹುದು.

ಲೇಖಕಿ: ವಿಭಾಗ ಮುಖ್ಯಸ್ಥೆ, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ, ಆಸ್ಟರ್ ವೈಟ್‌ಫೀಲ್ಡ್ ಆಸ್ಪತ್ರೆ

ಸೂಕ್ತ ಪರಿಹಾರಕ್ರಮ ಪಾಲಿಸಿ

- ಉತ್ತಮ ವೈಯಕ್ತಿಕ ನೈರ್ಮಲ್ಯ ಕಾಪಾಡಿಕೊಳ್ಳಿ
- ಸ್ವಚ್ಛ, ಹತ್ತಿಯ ಒಳ ಉಡುಪು ಧರಿಸಬೇಕು'
- ಯೋನಿ ಭಾಗದಲ್ಲಿ ಕಠಿಣ ಅಥವಾ ಸುಗಂಧ ಉತ್ಪನ್ನಗಳ ಬಳಕೆ ಮಾಡಬಾರದು
- ಆ ಭಾಗವನ್ನು ಸ್ವಚ್ಛವಾಗಿ ಇಟ್ಟುಕೊಳ್ಳಿ
- ಮಧುಮೇಹದಂತಹ ಕಾಯಿಲೆಗಳನ್ನು ಸರಿಯಾಗಿ ನಿರ್ವಹಿಸಿ
- ಸೋಂಕಿನ ಲಕ್ಷಣಗಳು ಮುಂದುವರಿದರೆ ವೈದ್ಯಕೀಯ ಸಲಹೆ ಪಡೆಯಿರಿ

ವೈದ್ಯರನ್ನು ಯಾವಾಗ ಭೇಟಿ ಮಾಡಬೇಕು?

ಈ ಕೆಳಗಿನ ಲಕ್ಷಣಗಳು ಕಂಡುಬಂದರೆ ವೈದ್ಯರನ್ನು ಸಂಪರ್ಕಿಸಿ: ದುರ್ವಾಸನೆ, ತುರಿಕೆ ಅಥವಾ ಕಿರಿಕಿರಿ ಉಂಟಾಗುವುದು, ಬಣ್ಣದಲ್ಲಿ ಬದಲಾವಣೆ (ಹಳದಿ, ಹಸಿರು, ಬೂದು), ನೋವು ಅಥವಾ ಉರಿಯ ಭಾವನೆ, ಆಗಾಗ ಮರುಕಳಿಸುವ ಬಿಳಿಸ್ರಾವ.

ಅಸಹಜ ಬಿಳಿ ಸ್ರಾವಕ್ಕೆ ಮುಖ್ಯ ಕಾರಣ

- ಸೋಂಕುಗಳು– ಶಿಲೀಂಧ್ರ ಅಥವಾ ಬ್ಯಾಕ್ಟೀರಿಯಾ ಸೋಂಕುಗಳು ಅತ್ಯಂತ ಸಾಮಾನ್ಯ ಕಾರಣಗಳು.
- ಅನೈರ್ಮಲ್ಯ– ಬ್ಯಾಕ್ಟೀರಿಯಾದ ನೈಸರ್ಗಿಕ ಸಮತೋಲನವನ್ನು ಹಾಳು ಮಾಡಬಹುದು.
- ಹಾರ್ಮೋನ್ ಬದಲಾವಣೆ– ವಿಶೇಷವಾಗಿ ಗರ್ಭಾವಸ್ಥೆ ಅಥವಾ ಋತುಚಕ್ರದ ಸಮಯದಲ್ಲಿ ಹಾರ್ಮೋನ್ ಬದಲಾವಣೆ ಆಗುವುದರಿಂದ ಬಿಳಿ ಸ್ರಾವ ಹೆಚ್ಚಾಗುತ್ತದೆ.
- ಮಧುಮೇಹ– ಮಧುಮೇಹ ಹೆಚ್ಚಿದ್ದರೆ ಯೀಸ್ಟ್ ಸೋಂಕಿನಂತಹ ಅಪಾಯವನ್ನು ಅದು ಹೆಚ್ಚಿಸಬಹುದು.
- ಕಠಿಣ ಉತ್ಪನ್ನಗಳ ಬಳಕೆ– ಸುಗಂಧದ್ರವ್ಯ, ಸಾಬೂನು ಅಥವಾ ಸ್ಪ್ರೇಗಳ ಬಳಕೆಯು ಯೋನಿಗೆ ಕಿರಿಕಿರಿ ಉಂಟುಮಾಡಬಹುದು. ಅನೇಕ ಮಹಿಳೆಯರು ಯೋನಿ ಸ್ರಾವದ ಬಗ್ಗೆ ಮಾತನಾಡಲು ನಾಚಿಕೆ ಪಡುತ್ತಾರೆ ಮತ್ತು ಅದರ ಲಕ್ಷಣಗಳನ್ನು ನಿರ್ಲಕ್ಷಿಸುತ್ತಾರೆ. ಕೆಲವರು ಸರಿಯಾದ ರೋಗನಿರ್ಣಯವಿಲ್ಲದೆ ಮನೆಮದ್ದುಗಳನ್ನು ಅವಲಂಬಿಸುತ್ತಾರೆ.
- ಇಂತಹ ವಿಳಂಬವು ಸೋಂಕಿನ ಸ್ಥಿತಿಯನ್ನು ಉಲ್ಬಣಗೊಳಿಸಬಹುದು. ವಿಶೇಷವಾಗಿ, ಬ್ಯಾಕ್ಟೀರಿಯಲ್ ವ್ಯಾಜಿನೋಸಿಸ್‌ನಂತಹ ಸೋಂಕಾಗಿದ್ದರೆ, ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತದೆ.


ನಾಟಿ ಮೊಟ್ಟೆ Vs ಫಾರಂ ಮೊಟ್ಟೆ ಯಾವುದು ಆರೋಗ್ಯಕರ?

• ಡಾ. ಮೋನಿಷಾ ಪಿ.

ಅಂಗಡಿಗೆ ಹೋಗುವ ಗ್ರಾಹಕರು ಸಾಮಾನ್ಯವಾಗಿ ನಾಟಿ ಮೊಟ್ಟೆ ಖರೀದಿ ಮಾಡಬೇಕಾ ಅಥವಾ ಫಾರಂ ಮೊಟ್ಟೆ ತೆಗೆದುಕೊಳ್ಳಬೇಕಾ ಎಂದು ಗೊಂದಲದಲ್ಲಿ ಇರುತ್ತಾರೆ. ಕೆಲವರು ಮೊಟ್ಟೆ ಎಂದರೆ ಆರೋಗ್ಯಕರ ಅಥವಾ ರುಚಿಕರವಾದದ್ದು ಎಂದು ಭಾವಿಸುತ್ತಾರೆ. ಈ ಲೇಖನವು ನಿಮ್ಮ ಗೊಂದಲವನ್ನು ನಿವಾರಿಸಲು ಸಹಾಯ ಮಾಡುತ್ತದೆ. ಮೊಟ್ಟೆಯು ತಿಳಿ ಕಂದು ಬಣ್ಣದಲ್ಲಿ ಏಕೆ ಇರುತ್ತದೆ? ನಾಟಿ ಮತ್ತು ಫಾರಂ ಮೊಟ್ಟೆಗಳ ಪೋಷಕಾಂಶಗಳ ಹೋಲಿಕೆ ಮತ್ತು ಅವುಗಳ ರುಚಿ, ಅಡುಗೆಯಲ್ಲಿ ಅವು ಹೇಗೆ ವ್ಯತ್ಯಾಸವನ್ನು ಉಂಟು ಮಾಡುತ್ತವೆ ಎಂಬುದನ್ನು ಇಲ್ಲಿ ತಿಳಿಯಬಹುದು.

ಮೊಟ್ಟೆಯ ಬಣ್ಣವು ಅದರ ಪೋಷಕಾಂಶ ಅಥವಾ ಆರೋಗ್ಯ ಲಾಭಗಳನ್ನು ನಿರ್ಧರಿಸುತ್ತದೆ ಎಂದು ಹಲವರು ನಂಬುತ್ತಾರೆ. ಆದರೆ ಇದು ತಪ್ಪು. ಮೊಟ್ಟೆಯ ಬಣ್ಣವು ಕೋಳಿಯ ಜಾತಿ ಮತ್ತು ಜನ್ಯಗುಣಗಳನ್ನು ಆಧರಿಸಿರುತ್ತದೆ. ಕೋಳಿಯು ತಿನ್ನುವ ಆಹಾರ ಅಥವಾ ಪರಿಸರವು ಬಣ್ಣದ ಛಾಯೆಯನ್ನು ಬದಲಾಯಿಸಬಹುದು. ಆದರೆ ಮೂಲ ಬಣ್ಣವನ್ನು ಬದಲಾಯಿಸಲು ಸಾಧ್ಯವಿಲ್ಲ. ಮುಕ್ತವಾಗಿ ಓಡಾಡಿಕೊಂಡಿರುವ ಕೋಳಿಗಳ ಮೊಟ್ಟೆಗಳಲ್ಲಿ ವಿಟಮಿನ್ ಡಿ ಅಂಶ ಸ್ವಲ್ಪ ಹೆಚ್ಚು ಇರಬಹುದು. ಒಮೆಗಾ– 3 ಅಂಶಗಳಿರುವ ಆಹಾರ ತಿನ್ನುವ ಕೋಳಿಗಳು ಹೆಚ್ಚಾಗಿ ಪೋಷಕಾಂಶಯುಕ್ತ ಮೊಟ್ಟೆಗಳನ್ನು ಇಡುತ್ತವೆ.

ಕೋಳಿ ಮೊಟ್ಟೆ ನೋಡಲು ಸಣ್ಣದಾಗಿದ್ದರೂ ಅದರಲ್ಲಿ ಪೌಷ್ಟಿಕಾಂಶಗಳಿಗೆ ಮಾತ್ರ ಯಾವುದೇ ಕೊರತೆ ಇರುವುದಿಲ್ಲ. ನಾಟಿ ಮತ್ತು ಫಾರಂ ಮೊಟ್ಟೆ ಎರಡೂ ಸಮಾನವಾಗಿ ಪೋಷಕಾಂಶಗಳಿಂದ ತುಂಬಿರುತ್ತವೆ. ಮೊಟ್ಟೆಯಲ್ಲಿ ಉತ್ತಮ ಗುಣಮಟ್ಟದ ಪ್ರೋಟೀನ್, ಒಮೇಗಾ-3 ಕೊಬ್ಬು ಆಮ್ಲಗಳು (ಕೋಳಿಯ ಆಹಾರಕ್ಕೆ ಅನುಗುಣವಾಗಿ ಬದಲಾಗುತ್ತವೆ), ವಿಟಮಿನ್‌ಗಳು: ಬಿ2, ಬಿ12, ಎ, ಡಿ, ಇ, ಕಬ್ಬಿಣ, ಫಾಸ್ಫರಸ್, ಸೆಲೆನಿಯಂ ಇವುಗಳ ಜೊತೆಗೆ ಕೋಲಿನ್, ಜೀಕ್ಸಾಂಥಿನ್ ಇರುತ್ತವೆ. ಮೊಟ್ಟೆಯ ಹಳದಿ ಭಾಗ (ಯೋಕ್) ಮೆದುಳು ಮತ್ತು ಕಣ್ಣುಗಳ ಆರೋಗ್ಯಕ್ಕೆ ಉತ್ತಮವಾದರೆ, ಫಾರಂ ಭಾಗ ಶುದ್ಧ ಪ್ರೋಟೀನ್ ಆಗಿದ್ದು, ಸ್ನಾಯುಗಳ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಮೊಟ್ಟೆಯ ಸೇವನೆಯೂ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಮೆದುಳಿನ ಬೆಳವಣಿಗೆ ಮತ್ತು ಸ್ಮರಣಶಕ್ತಿಗೆ ಸಹಕಾರಿಯಾಗುತ್ತದೆ. ಕಣ್ಣುಗಳ ಆರೋಗ್ಯವನ್ನು ಉತ್ತಮಗೊಳಿಸುತ್ತದೆ. ಹೆಚ್ಚು ಹೊತ್ತು ಹೊಟ್ಟೆ ತುಂಬಿದಂತೆ ಅನುಭವವಾಗುತ್ತದೆ. ಹಾಗಾಗಿ, ನಾಟಿ ಮೊಟ್ಟೆ ಮತ್ತು ಫಾರಂ ಮೊಟ್ಟೆ ಎರಡೂ ಸಮಾನ ಆರೋಗ್ಯ ಲಾಭಗಳನ್ನು ನೀಡುತ್ತವೆ.



ಬಣ್ಣವು ರುಚಿ ಮೇಲೆ ಪರಿಣಾಮ ಬೀರುವುದೇ?: ಕೆಲವರು ನಾಟಿ ಮೊಟ್ಟೆಗಳು ಹೆಚ್ಚು ರುಚಿಯಾಗಿವೆ ಎಂದು ಭಾವಿಸುತ್ತಾರೆ. ಆದರೆ ಸಾಮಾನ್ಯವಾಗಿ ಎರಡೂ ಒಂದೇ ರೀತಿ ರುಚಿ ಇರುತ್ತವೆ. ಮೊಟ್ಟೆಯ ಗುಣಮಟ್ಟ ಅಡುಗೆಯ ವಿಧಾನದಿಂದ ಬದಲಾಗುತ್ತದೆ. ಮೊಟ್ಟೆಗಳು ಆರೋಗ್ಯಕರವಾದರೂ, ಕೆಲವು ವಿಷಯಗಳನ್ನು ಗಮನಿಸಬೇಕು.

• ಮೊಟ್ಟೆ ಅಲರ್ಜಿ ಇರುವವರು ತಿನ್ನಬಾರದು • ಹೆಚ್ಚು ಹಳದಿ ಭಾಗ ತಿನ್ನುವುದು ಕೆಲವರಿಗೆ ಕೊಲೆಸ್ಟ್ರಾಲ್ ಹೆಚ್ಚಿಸಬಹುದು • ಕಚ್ಚಾ ಮೊಟ್ಟೆಗಳಲ್ಲಿ ಸ್ಯಾಲ್ಮೊನೆಲ್ಲಾ ಸೋಂಕಿನ ಅಪಾಯ ಇರುತ್ತದೆ. • ಹೆಚ್ಚು ಸ್ಯಾಚುರೇಟೆಡ್ ಕೊಬ್ಬು ಇರುವ ಆಹಾರ ತೆಗೆದುಕೊಳ್ಳುವವರು ಮೊಟ್ಟೆ ಸೇವನೆಯ ಪ್ರಮಾಣವನ್ನು ನಿಯಂತ್ರಿಸಬೇಕು (ಸಾಮಾನ್ಯವಾಗಿ ದಿನಕ್ಕೆ 1–2 ಮೊಟ್ಟೆಗಳು ಆರೋಗ್ಯಕರ ವಯಸ್ಕರಿಗೆ ಸೂಕ್ತ). ಆರೋಗ್ಯಕರ ಜೀವನಶೈಲಿಗೆ ಮೊಟ್ಟೆ ಸೇವನೆ ಉತ್ತಮ. ನಾಟಿ ಮೊಟ್ಟೆ ಲಭ್ಯವಿದ್ದರೆ ಅದನ್ನು ಆಯ್ಕೆ ಮಾಡಬಹುದು, ಇಲ್ಲದಿದ್ದರೆ ಫಾರಂ ಮೊಟ್ಟೆಯನ್ನೇ ಆಯ್ದುಕೊಳ್ಳಬಹುದು.

ಮೊಟ್ಟೆಗಳನ್ನು ಖರೀದಿಸುವಾಗ ಮುಖ್ಯವಾಗಿ ಗಮನಿಸಬೇಕಾದದ್ದು, ಗುಣಮಟ್ಟದ ತಾಜಾತನ. ಯಾವ ಮೊಟ್ಟೆಯಾದರೂ ತಾಜಾ ಮತ್ತು ಸ್ವಚ್ಛವಾಗಿದ್ದರೆ ಅದು ಆರೋಗ್ಯಕ್ಕೆ ಒಳ್ಳೆಯದು. ಒಟ್ಟಿನಲ್ಲಿ, ಆರೋಗ್ಯಕರ ಜೀವನಕ್ಕಾಗಿ ಎರಡೂ ಬಗೆಯ ಮೊಟ್ಟೆಗಳು ಉಪಯುಕ್ತವಾಗಿವೆ.

ಲೇಖಕಿ: ಸಹಾಯಕ ಪ್ರಾಧ್ಯಾಪಕಿ. ಕಾಯಚಿಕಿತ್ಸಾ ವಿಭಾಗ, ಎಸ್‌ಡಿಎಂ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ, ಉಡುಪಿ

ಡೀಪ್‌ಸೀಕ್‌ನಿಂದ ಹೊಸ ಎ.ಐ ಮಾದರಿ: ಗೂಗಲ್‌ಗೆ ಸವಾಲು


ಚೀನಾದ ಸ್ಟಾರ್ಟ್‌ಅಪ್ 'ಡೀಪ್‌ಸೀಕ್' ಹೊಸ ಎ.ಐ ಮಾದರಿ 'ಡೀಪ್‌ಸೀಕ್ ವಿ–4' ಅನ್ನು ಬಿಡುಗಡೆ ಮಾಡಿದೆ. ಒಂದು ವರ್ಷದ ಬಳಿಕ ಹೊಸ ಮಾದರಿಯನ್ನು ಡೀಪ್‌ಸೀಕ್ ಪರಿಚಯಿಸಿದೆ. ಇದು ಅತ್ಯಂತ ಕಡಿಮೆ ವೆಚ್ಚದ ಎ.ಐ ಮಾದರಿ ಎಂದು ಅದು ಹೇಳಿಕೊಂಡಿದೆ.

ಕಳೆದ ವರ್ಷ ಅಮೆರಿಕವು ಎ.ಐ ಕಂಪನಿಗಳಿಗೆ ಸರಿಸಾಟಿಯಾಗಬಲ್ಲ ಕಡಿಮೆ ವೆಚ್ಚದ ಎ.ಐ ಮಾಡೆಲ್ ಪರಿಚಯಿಸಿ ಡೀಪ್‌ಸೀಕ್ ಜಗತ್ತನ್ನು ಬೆರಗುಗೊಳಿಸಿತ್ತು.

ಚೀನಾದ ಸಂಸ್ಥೆಗಳು ಎ.ಐ ತಂತ್ರಜ್ಞಾನವನ್ನು ಕದಿಯಲು ದೊಡ್ಡ ಪ್ರಯತ್ನ ನಡೆಸುತ್ತಿವೆ ಎಂದು ಶ್ವೇತಭವನ ಇತ್ತೀಚೆಗಷ್ಟೇ ಆರೋಪ ಮಾಡಿತ್ತು. ಇದು ಆಧಾರರಹಿತ ಎಂದು ಚೀನಾ ಹೇಳಿತ್ತು. ಇದರ ಬೆನ್ನಲ್ಲೇ ಡೀಪ್‌ಸೀಕ್ ಹೊಸ ಮಾದರಿಯನ್ನು ಬಿಡುಗಡೆ ಮಾಡಿದೆ.

ಹಾಂಗ್‌ಝೌ ಮೂಲದ ಡೀಪ್‌ಸೀಕ್ ಕಳೆದ ವರ್ಷ ಜನವರಿಯಲ್ಲಿ ಎಐ ಚಾಟ್‌ಬಾಟ್ ಆಗಿ ಮಾರುಕಟ್ಟೆಗೆ ಲಗ್ಗೆ ಇಟ್ಟಿತ್ತು. ಎ.ಐ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಹೊಂದಿದ್ದ ಅಮೆರಿಕಕ್ಕೆ ಈ ಕಡಿಮೆ ವೆಚ್ಚದ ಎ.ಐ ಸವಾಲೆಸೆದಿತ್ತು.

ವಿ4 ಆವೃತ್ತಿಯು ಗೂಗಲ್ ಜೆಮಿನಿಗೆ ಸಮನಾದ ಟೋಕನ್‌ಗಳನ್ನು ಹೊಂದಿದೆ. ಹೊಸ ವಿ4 ಅನ್ನು 'ಡೀಪ್‌ಸೀಕ್-ವಿ4-ಪ್ರೊ' ಮತ್ತು 'ಡೀಪ್‌ಸೀಕ್-ವಿ4-ಫ್ಲ್ಯಾಶ್' ಎಂಬ ಎರಡು ಆವೃತ್ತಿಗಳಲ್ಲಿ ಬಿಡುಗಡೆ ಮಾಡಲಾಗಿದೆ.



ಅಲ್ಲು ಅರ್ಜುನ್

ಮುಂದಿನ ತಿಂಗಳಿನಿಂದ ಅಲ್ಲು ಅರ್ಜುನ್ ಹೊಸ ಸಿನಿಮಾ

ತೆಲುಗು ನಟ ಅಲ್ಲು ಅರ್ಜುನ್, ತಮಿಳಿನ ಜನಪ್ರಿಯ ನಿರ್ದೇಶಕ ಲೋಕೇಶ್ ಕನಗರಾಜು ಜತೆ ಸಿನಿಮಾ ಮಾಡುತ್ತಿರುವುದು ಗೊತ್ತೇ ಇದೆ. ತಾತ್ಕಾಲಿಕವಾಗಿ 'ಎಎ23' ಎಂಬ ಶೀರ್ಷಿಕೆ ಹೊಂದಿರುವ ಚಿತ್ರ ಮೇ ತಿಂಗಳಿನಿಂದ ಸೆಟ್ಟೇರಲಿದೆ ಎಂದು ಚಿತ್ರದ ಸಹ ಬರಹಗಾರ ರತ್ನಕುಮಾರ್ ಹೇಳಿದ್ದಾರೆ.

ಈ ಬಗ್ಗೆ ಖಾಸಗಿ ಮಾಧ್ಯಮವೊಂದಕ್ಕೆ ಮಾತನಾಡಿರುವ ಅವರು, ಇದು ನಟರಿಂದ ಅಥವಾ ಚಿತ್ರೀಕರಣ ಸ್ಥಳದಿಂದಾಗಿ ಪ್ಯಾನ್ ಇಂಡಿಯಾ ಸಿನಿಮಾವಲ್ಲ. ಕಥೆಯಿಂದಲೇ ಪ್ಯಾನ್ ಇಂಡಿಯಾ ಸಿನಿಮಾ. ಸಾಕಷ್ಟು ವಿದೇಶಿ ಸನ್ನಿವೇಶಗಳನ್ನೂ ಕಥೆ ಹೊಂದಿದೆ ಎಂದಿದ್ದಾರೆ.



ಲೋಕೇಶ್ ಕನಗರಾಜು

ಈಗಾಗಲೇ ಕಥೆ ಕುರಿತು ಅಲ್ಲು ಅರ್ಜುನ್ ಜತೆ ಅಂತಿಮ ಸುತ್ತಿನ ಮಾತುಕತೆ ನಡೆದಿದೆ. ಸ್ಕ್ರಿಪ್ಟ್ ಅಂತಿಮಗೊಳಿಸುವ ಕೆಲಸ ನಡೆಯುತ್ತಿದೆ. ಮೇ ಎರಡನೇ ವಾರದಿಂದ ಚಿತ್ರೀಕರಣ ಪ್ರಾರಂಭವಾಗುವ ನಿರೀಕ್ಷೆಯಿದೆ ಎಂದು ಅವರು ಹೇಳಿದ್ದಾರೆ.

ಸದ್ಯ ಅಲ್ಲು ಅರ್ಜುನ್, ಅಟ್ಲಿ ನಿರ್ದೇಶನದ 'ರಾಕಾ' ಸಿನಿಮಾದ ಚಿತ್ರೀಕರಣದಲ್ಲಿ ಮಗ್ನರಾಗಿದ್ದಾರೆ. ದೀಪಿಕಾ ಪಡುಕೋಣೆ ಈ ಚಿತ್ರದ ನಾಯಕಿ. ಇದರ ಜತೆಗೆ ಲೋಕೇಶ್ ಕನಗರಾಜು ಚಿತ್ರ ಪ್ರಾರಂಭವಾಗಲಿದೆ. ಲೋಕೇಶ್ ಕನಗರಾಜು ಅವರ ಹಿಂದಿನ ಚಿತ್ರ 'ಕೂಲಿ' ಮಿಶ್ರ ಪ್ರತಿಕ್ರಿಯೆ ನಡುವೆಯೂ ಬಾಕ್ಸಾಫೀಸ್‌ನಲ್ಲಿ ಉತ್ತಮ ಗಳಿಕೆ ಕಂಡಿತ್ತು.

'ಸೋತರೂ, ಗೆದ್ದರೂ ಮುಂದೆ ಸಾಗಲೇಬೇಕು'

• ವಿನಾಯಕ ಕೆ.ಎಸ್.



ಗಣೇಶ್

ನಟ ಗಣೇಶ್ ನಾಯಕನಾಗಿ ನಟಿಸಿದ್ದ 'ಚೆಲ್ಲಾಟ' ಬಿಡುಗಡೆಯಾಗಿ ಇಪ್ಪತ್ತು ವರ್ಷಗಳಾಗಿವೆ. ಇದರೊಂದಿಗೆ ಅವರ ನಾಯಕನ ಪಯಣಕ್ಕೂ ಎರಡು ದಶಕಗಳು ತುಂಬಿವೆ. ಸೋಲು, ಗೆಲುವುಗಳನ್ನು ಸಮನಾಗಿ ಕಂಡಿರುವ ಅವರು, ಈ ಸಿನಿಪಯಣದ ಏರಿಳಿತಗಳ ಬಗ್ಗೆ ಮಾತನಾಡಿದ್ದಾರೆ

'ಬಂದಿದ್ದು ಒಂದು ಹಳ್ಳಿಯಿಂದ. ಕಾಲೇಜು ದಿನಗಳಿಂದ ರಂಗಭೂಮಿಯಲ್ಲಿದ್ದುಕೊಂಡು ನಟನಾಗಬೇಕು ಎಂದು ಕನಸು ಕಂಡವನು. ಕೊನೆಗೆ ಎಲ್ಲಿಗೆ ಹೋಗಬೇಕೆಂದು ಗೊತ್ತಾಗದೆ ಸಹಾಯಕ ನಿರ್ದೇಶಕನಾದೆ. ಇವತ್ತು ಇಲ್ಲಿದೀನಿ ಅಂದ್ರೆ ದೊಡ್ಡವರ, ಅಭಿಮಾನಿಗಳ ಆಶೀರ್ವಾದವಷ್ಟೆ. ಸಾಮಾಜಿಕ ಜಾಲತಾಣಗಳಲ್ಲಿ ಜನಕ್ಕೆ ಅತ್ಯಂತ ಪ್ರೀತಿಪಾತ್ರನಾದ ನಟನೆಂದು ಶುಭ ಕೋರುತ್ತಿದ್ದಾರೆ. ಇದಕ್ಕಿಂತ ಹೆಚ್ಚಿನದ್ದೇನು ಬಯಸಿಲ್ಲ' ಎಂದು ಮಾತು ಪ್ರಾರಂಭಿಸಿದರು ಗಣೇಶ್.

'ಕಾಮಿಡಿ ಟೈಂ' ಎಂಬ ಹಾಸ್ಯಮಯ ಕಾರ್ಯಕ್ರಮದಿಂದ ಇವರು ಜನಪ್ರಿಯರಾದರು. ಸಣ್ಣಪುಟ್ಟ ಪಾತ್ರಗಳನ್ನು ಮಾಡುತ್ತ, ಪ್ರತಿಭೆ, ಶ್ರಮದಿಂದಲೇ ನಾಯಕನಾದರು. 'ನಾಯಕನಾದ ಮೊದಲೇ ಸಿನಿಮಾವೇ ಹೌಸ್‌ಫುಲ್ ಬೋರ್ಡ್ ಬಿತ್ತು. ನನಗೆ ಈಗಲೂ ನೆನಪಿದೆ. ಆವತ್ತು ಗಾಂಧಿನಗರದ ಸಿನಿಮಾ ವಿತರಕರ ಕಚೇರಿಯಲ್ಲಿ ಕುಳಿತಿದ್ದೆ. ಮೇನಕಾ ಚಿತ್ರಮಂದಿರದಲ್ಲಿ ಹೌಸ್‌ಫುಲ್ ಬೋರ್ಡ್ ಬಿತ್ತು ಎಂದು ಗೊತ್ತಾಗುತ್ತಿದ್ದಂತೆ ನಾನು ಮತ್ತು ಪ್ರೀತಂ ಗುಬ್ಬಿ ಓಡೋಡಿ ಬಂದು ಹೌಸ್‌ಫುಲ್ ಬೋರ್ಡ್ ಅನ್ನು ಕಣ್ತುಂಬಿಕೊಂಡೆವು. ಹೊಸ ಹುಡುಗನೊಬ್ಬನನ್ನು ಈ ಮಟ್ಟಕ್ಕೆ ಒಪ್ಪಿಕೊಂಡರಲ್ಲ ಎಂದು ಖುಷಿಯಾಗಿತ್ತು' ಎಂದು ಹಳೆಯ ನೆನಪುಗಳನ್ನು ಮೆಲುಕು ಹಾಕಿದರು.

'ನಾನು ಅತ್ತಾಗ ಪ್ರೇಕ್ಷಕರು ನನ್ನ ಜೊತೆ ಅತ್ತರು, ನಕ್ಕಾಗ ನಕ್ಕರು. ನನ್ನನ್ನು ಮನೆಮಗನ ರೀತಿ ನೋಡಿಕೊಂಡರು. ಹೀಗಾಗಿ 20 ವರ್ಷಗಳು ಪವಾಡವೆಂಬ ರೀತಿಯಲ್ಲಿ ಕಳೆದು ಹೋಯ್ತು. ಪ್ರತಿ ಸಿನಿಮಾ ಸಿಕ್ಕಾಗಲೂ ಖುಷಿಯಿಂದ ಮಾಡುತ್ತೇನೆ. ಫಲಿತಾಂಶ ನಂತರದ್ದು. ಕೆಲಸ ಮೊದಲು. ಆ ಕೆಲಸವನ್ನು ಸರಿಯಾಗಿ ಮಾಡಿದರೆ ಮಾತ್ರ ಫಲಿತಾಂಶ. ಅದನ್ನು ಮೀರಿ ಉತ್ತಮ ಫಲಿತಾಂಶ ಬರದಿದ್ದರೆ ಮುಂದೆ ಮತ್ತೆ ಯತ್ನ ಮಾಡಬೇಕು. ಒಂದು ಸಿನಿಮಾ ಗೆದ್ದಿದೆ ಎಂದು ಸುಮ್ಮನೆ ಕೂರಲು ಸಾಧ್ಯವಿಲ್ಲ ಅಥವಾ ಸೋತಿದೆ ಎಂದು ಚಿಂತೆ ಮಾಡಿದರೂ ಪ್ರಯೋಜನವಿಲ್ಲ. ಎರಡೂ ಸನ್ನಿವೇಶಗಳಲ್ಲಿ ಮುಂದಕ್ಕೆ ಹೋಗಲೇಬೇಕು' ಎನ್ನುತ್ತಾರೆ ಅವರು.

'ನಟನಾಗಿ ಬೇರೆ ಬೇರೆ ರೀತಿಯ ಪಾತ್ರಗಳನ್ನು ಮಾಡಬೇಕು. ಕಮರ್ಷಿಯಲ್ ಆಗಿಯೂ ಗೆಲ್ಲಬೇಕು, ನಟನಾಗಿಯೂ ಗೆಲ್ಲಬೇಕು. ಸವಾಲಿನ ಪಾತ್ರಗಳನ್ನು ಮಾಡುವಾಗ ಮಾನಸಿಕವಾಗಿ ಎಷ್ಟು ಖುಷಿಯಾಗಿ, ನೆಮ್ಮದಿಯಾಗಿ ಇರುತ್ತೇವೆ ಎಂಬುದು ಬಹಳ ಮುಖ್ಯ' ಎಂಬುದು ಅವರ ಅಭಿಮತ.

ಅವರ 'ಮುಂಗಾರು ಮಳೆ' ಚಿತ್ರ ಕನ್ನಡ ಚಿತ್ರರಂಗದಲ್ಲಿ ಹೊಸ ದಾಖಲೆ ಬರೆಯಿತು. ಅಲ್ಲಿಂದ ಈತನಕ 47 ಸಿನಿಮಾಗಳಾಗಿವೆ. 'ಗಾಳಿಪಟ', 'ಚೆಲುವಿನ ಚಿತ್ತಾರ'ದಿಂದ ಹಿಡಿದು ಇತ್ತೀಚೆಗೆ ತೆರೆಕಂಡ 'ಕೃಷ್ಣಂ ಪ್ರಣಯ ಸಖಿ'ವರೆಗೆ ಒಂದಷ್ಟು ಹಿಟ್ ಸಿನಿಮಾಗಳಿವೆ. ಕೆಲವಷ್ಟು ನಿರೀಕ್ಷಿತ ಮಟ್ಟ ತಲುಪಿಲ್ಲ. 'ಬೃಂದವಿಹಾರಿ' ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿದೆ. ಅದು ಮುಗಿದ ತಕ್ಷಣ ತೆರೆಗೆ ಬರಲಿದೆ. 'ಸಿನ್ಸಿಯರ್ಲಿ ರಾಮ್' ಚಿತ್ರೀಕರಣ ನಡೆಯುತ್ತಿದೆ. 'ಪಿನಾಕ' ಕ್ಲೈಮ್ಯಾಕ್ಸ್ ಹಂತದಲ್ಲಿದೆ. ಸದ್ಯ ಅದೇ ಚಿತ್ರದ ಚಿತ್ರೀಕರಣದಲ್ಲಿರುವೆ. 'ಡಿಜಾಂಗೋ ಕೃಷ್ಣಮೂರ್ತಿ' ಮೊದಲ ಹಂತದ ಚಿತ್ರೀಕರಣ ಮುಗಿದಿದೆ. 'ತಮ್ಮ ಸುಖಾಗಮನಬಯಸುವ' ಚಿತ್ರೀಕರಣ ಪ್ರಾರಂಭವಾಗಬೇಕು. ಕೈತುಂಬ ಸಿನಿಮಾಗಳಿವೆ ಎಂದು ತಮ್ಮ ಮುಂದಿನ ಯೋಜನೆಗಳನ್ನು ಅವರು ತೆರೆದಿಟ್ಟರು.

ತುಳುವಿನಲ್ಲಿ ಒಂದು ಸಿನಿಮಾ ನಿರ್ಮಾಣವನ್ನೂ ಮಾಡಿದ್ದಾರೆ. ಅದು ಇನ್ನೆರಡು ತಿಂಗಳಲ್ಲಿ ತೆರೆಗೆ ಬರಲಿದೆ. 'ಕನ್ನಡದಲ್ಲಿಯೂ ಒಳ್ಳೆ ಸಿನಿಮಾ ನಿರ್ಮಾಣ ಯೋಜನೆಯಿದೆ. ಆದರೆ ಉತ್ತಮ ಸ್ಕ್ರಿಪ್ಟ್ ಸಿಗಬೇಕು. ಜತೆಗೆ ಈಗ ನಟನಾಗಿ ಒಪ್ಪಿಕೊಂಡ ಸಿನಿಮಾಗಳು ಮುಗಿಯಬೇಕು. ಅದರ ನಂತರವೇ ಬೇರೆ ಯೋಚನೆ' ಎಂದು ಅವರು ಮಾತಿಗೆ ವಿರಾಮವಿಟ್ಟರು.

ಆ್ಯಸಿಡ್ ದಾಳಿ ಸಂತ್ರಸ್ತರಿಗೆ ಅಪರಿಚಿತೆ ನೆರವು

ಈ ಮೊದಲು 'ತಾಯವ್ವ' ಎಂಬ ಸಿನಿಮಾದಲ್ಲಿ ನಟಿಸಿದ್ದ, ಗೀತಪ್ರಿಯ ಸುರೇಶ್ ಕುಮಾರ್ ಅಭಿನಯದ 'ಅಪರಿಚಿತೆ' ಚಿತ್ರ ಕೆಲವು ದಿನಗಳ ಹಿಂದಷ್ಟೇ ಬಿಡುಗಡೆಯಾಗಿ ಎಲ್ಲರ ಗಮನ ಸೆಳೆದಿತ್ತು. ಇತ್ತೀಚೆಗೆ ಈ ಚಿತ್ರದ ಯಶಸ್ಸನ್ನು ನಿರ್ಮಾಪಕ ಸುರೇಶ್ ಕುಮಾರ್ ಹಾಗೂ ನಟಿ ಗೀತಪ್ರಿಯ ಅವರು 'ಸಕ್ಸಸ್ ಆಫ್ ಅಪರಿಚಿತೆ' ಎಂಬ ಹೆಸರಿನಿಂದ ವಿಭಿನ್ನವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಿದರು.

ಈ ಸಂದರ್ಭದಲ್ಲಿ ಆ್ಯಸಿಡ್ ದಾಳಿಗೆ ತುತ್ತಾದ ಮೂವರು ಮಹಿಳೆಯರಿಗೆ ತಲಾ ಐವತ್ತು ಸಾವಿರ ಹಣವನ್ನು ನೀಡಿ ಸನ್ಮಾನಿಸಿದರು. ನಟಿ ಮೇಘನ ರಾಜ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಹಿರಿಯ ನಟರಾದ ಶ್ರೀನಾಥ್, ಸುರೇಶ್ ಹೆಬ್ಳೀಕರ್ ಹಾಗೂ ಪತ್ರಕರ್ತ ಸದಾಶಿವ ಶೆಣೈ ಮುಂತಾದವರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಗೀತಪ್ರಿಯ ಅವರು 'ತಾಯವ್ವ' ಚಿತ್ರದ ಯಶಸ್ಸಿನ ವೇಳೆ ಗರ್ಭಿಣಿಯರನ್ನು ಸನ್ಮಾನಿಸಿದ್ದರು.

'ಗೀತಪ್ರಿಯ ಒಂದೊಳ್ಳೆ ಉದ್ದೇಶವಿಟ್ಟುಕೊಂಡು ಈ ಸಿನಿಮಾ ಮಾಡಿದ್ದಾರೆ. ಚಿತ್ರದ ಯಶಸ್ಸನ್ನು ಬಹಳ ಅರ್ಥಪೂರ್ಣವಾಗಿ ಸಂಭ್ರಮಿಸಿದ್ದಾರೆ. ಆ್ಯಸಿಡ್ ದಾಳಿಯಿಂದ ತುತ್ತಾದ ಮಹಿಳೆಯರಿಗೆ ಸಹಾಯ ಮಾಡುವ ಉತ್ತಮ ಕಾರ್ಯದ ಮೂಲಕ ಎಲ್ಲರಿಗೂ ಮಾದರಿಯಾಗಿದ್ದಾರೆ. ಇಲ್ಲಿ ಬಂದಿರುವ ಮಹಿಳೆಯರ ಕಥೆ ಕೇಳಿ ನಾನು ಭಾವುಕಳಾದೆ. ಅದಕ್ಕಿಂತ ಅವರನ್ನು ನೋಡಿ ನನ್ನ ಧೈರ್ಯ ಮತ್ತಷ್ಟು ಹೆಚ್ಚಾಯಿತು. ಈ ಸಮಾರಂಭಕ್ಕೆ ನನ್ನನ್ನು ಆಹ್ವಾನಿಸಿದ್ದಕ್ಕಾಗಿ ಗೀತಪ್ರಿಯ ಅವರಿಗೆ ಧನ್ಯವಾದ' ಎಂದರು ನಟಿ ಮೇಘನಾರಾಜ್.

ನಮ್ಮ 'ಅಪರಿಚಿತೆ' ಚಿತ್ರದ ಗಳಿಕೆ ಹಣದಿಂದ ಆ್ಯಸಿಡ್ ದಾಳಿಯಿಂದ ನೊಂದು, ಮರುಜೀವನ ಕಟ್ಟಿಕೊಂಡಿರುವ ಮೂವರು ಮಹಿಳೆಯರಿಗೆ ಸಹಾಯ ಮಾಡೋಣ ಎನಿಸಿತು. ಇಂದಿನ ಯುವಪೀಳಿಗೆಯ ಧ್ವನಿಯಾಗಿರುವ ಮೇಘನಾ ರಾಜ್ ಅವರಿಂದ ಆ ಮಹಿಳೆಯರಿಗೆ ಸನ್ಮಾನ ಮಾಡಿಸಬೇಕೆಂದುಕೊಂಡೆವು. ಮೇಘನಾ ರಾಜ್ ಅವರು ಒಪ್ಪಿಕೊಂಡು ಕಾರ್ಯಕ್ರಮಕ್ಕೆ ಬಂದಿದ್ದಾರೆ. ಅವರಿಗೆ ಹಾಗೂ ಹಿರಿಯ ನಟರಾದ ಶ್ರೀನಾಥ್, ಸುರೇಶ್ ಹೆಬ್ಳೀಕರ್ ಮತ್ತು ಪತ್ರಕರ್ತ ಸದಾಶಿವ ಶೆಣೈ ಅವರಿಗೆ ನನ್ನ ಧನ್ಯವಾದ. ಮುಂದೆ ಕೂಡ ನಮ್ಮ ಸಂಸ್ಥೆಯಿಂದ ಇಂತಹ ಸದಭಿರುಚಿಯ ಚಿತ್ರಗಳು ನಿರ್ಮಾಣವಾಗುತ್ತದೆ. ನಿಮ್ಮೆಲ್ಲರ ಪ್ರೋತ್ಸಾಹವಿರಲಿ' ಎಂದರು ನಟಿ ಗೀತಪ್ರಿಯ.



ಸಂತ್ರಸ್ತೆಯೊಂದಿಗೆ ಮೇಘನಾ ರಾಜ್, ಗೀತಪ್ರಿಯ

ನಟರಾದ ಶ್ರೀನಾಥ್, ಸುರೇಶ್ ಹೆಬ್ಳೀಕರ್ ಹಾಗೂ ಪತ್ರಕರ್ತ ಸದಾಶಿವ ಶೆಣೈ ಅವರು ತಮ್ಮ ಮಾತುಗಳ ಮೂಲಕ ಗೀತಪ್ರಿಯ ಅವರ ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿದರು. ಸುರೇಶ್ ಕುಮಾರ್ ಅವರ ನಿರ್ಮಾಣದ ಈ ಚಿತ್ರವನ್ನು ವಿಶ್ವನಾಥ್ ನಿರ್ದೇಶಿಸಿದ್ದಾರೆ. ಗೀತಪ್ರಿಯ, ಸಿಂಧೂ ಲೋಕನಾಥ್, ಆರ್. ಜೆ. ನಿಖಿತಾ, ಹಿರಿಯ ನಟ ಶ್ರೀನಾಥ್ ಹಾಗೂ ಶ್ರೀನಾಥ್ ಅವರ ಮಗ ರೋಹಿತ್ ಕೂಡ ಚಿತ್ರದ ತಾರಾಬಳಗದಲ್ಲಿದ್ದಾರೆ.



ಮೇಘನಾ ರಾಜ್, ಗೀತಪ್ರಿಯ

ಸಿಕ್ಸರ್... ಎಷ್ಟು ಮೀಟರ್?

• ಗಿರೀಶ ದೊಡ್ಡಮನಿ

ಕ್ರಿಕೆಟ್‌ನಲ್ಲಿ ಸಿಕ್ಸರ್ ಎಂದರೆ ಎಲ್ಲರಿಗೂ ಆಕರ್ಷಣೆ. ಟಿ20 ಕ್ರಿಕೆಟ್ ಬೆಳೆದಂತೆ ಸಿಕ್ಸರ್ ಅನ್ನು ಚೆಂಡು ಬೌಂಡರಿಯಾಚೆ ಸಾಗುವ ದೂರದ ಆಧಾರದಲ್ಲಿ ಅಳೆಯಬೇಕು, 100 ಮೀಟರ್‌ಗಿಂತ ಹೆಚ್ಚು ದೂರ ಹೋದ ಸಿಕ್ಸರ್‌ಗೆ ಎಂಟು ರನ್ ಕೊಡಬೇಕು ಎಂಬ ಸಲಹೆಗಳು ದಿಗ್ಗಜ ಕ್ರಿಕೆಟಿಗರಿಂದಲೇ ಕೇಳಿಬರುತ್ತಿವೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ 'ಆಜಾನುಬಾಹು' ಟಿಮ್ ಡೇವಿಡ್ ಈಚೆಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 106 ಮೀಟರ್ ದೂರದ (Distance) ಸಿಕ್ಸರ್ ಸಿಡಿಸಿದರು. ಆಗಲೂ ಈ ವಾದ ಸಾಮಾಜಿಕ ಜಾಲತಾಣಗಳಲ್ಲಿ ಮತ್ತೆ ಗರಿಗೆದರಿತ್ತು.

ವೀಕ್ಷಕ ವಿವರಣೆಗಾರ ಇರ್ಫಾನ್ ಪಠಾಣ್ ಅವರು ಕೆಲವು ದಿನಗಳ ಹಿಂದಷ್ಟೇ ಈ ವಿಷಯ ಪ್ರಸ್ತಾಪಿಸಿದ್ದರು. ಯೂಟ್ಯೂಬ್‌ನಲ್ಲಿ ಅವರು, 'ಟಿ20 ಕ್ರಿಕೆಟ್‌ನಲ್ಲಿ ಇಂತಹ ನಿಯಮ ಮಾಡುವುದು ಅಪೇಕ್ಷಣೀಯ. ಇದರಿಂದಾಗಿ ಬ್ಯಾಟರ್ ಕೌಶಲ ಮತ್ತು ಸಾಮರ್ಥ್ಯಕ್ಕೆ ಸೂಕ್ತ ಪ್ರತಿಫಲ ನೀಡಿದಂತಾಗುತ್ತದೆ' ಎಂದಿದ್ದರು. ಮೂರು ವರ್ಷಗಳ ಹಿಂದೆ ರೋಹಿತ್ ಶರ್ಮಾ ಕೂಡ ಯೂಟ್ಯೂಬ್ ಸಂದರ್ಶನದಲ್ಲಿ, 'ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಲ್ಲಿ 90 ಮೀಟರ್ ಸಿಕ್ಸರ್‌ಗೆ ಎಂಟು ಮತ್ತು 100 ಮೀಟರ್ ದಾಟಿದರೆ 10 ರನ್ ಕೊಡಬೇಕು. ನಿಯಮ ಬದಲಾಗಬೇಕು' ಎಂದಿದ್ದರು.

ಈ ರೀತಿಯ ನಿಯಮದಿಂದ ಕ್ರಿಕೆಟ್ ಮತ್ತಷ್ಟು ರೋಚಕಗೊಳ್ಳುತ್ತದೆ ಎಂಬುದು ಅವರ ಅಭಿಪ್ರಾಯ. ಅಷ್ಟೇ ಅಲ್ಲ, ಪ್ರೇಕ್ಷಕರಿಗೆ ಮತ್ತಷ್ಟು ಮನರಂಜನೆಯೂ ದೊರೆಯಬಹುದು.

ಹಾಗೆ ನೋಡಿದರೆ, 2008ರಿಂದಲೂ ಇಂತಹ 'ದೈತ್ಯ ಸಿಕ್ಸರ್'ಗಳು ಐಪಿಎಲ್‌ನಲ್ಲಿ ಸಿಡಿಯುತ್ತಲೇ ಇವೆ. ಆದರೆ ನಿಯಮ ಬದಲಾವಣೆಯ ಕುರಿತು ಯಾವುದೇ ಚರ್ಚೆ ಆಗಿಲ್ಲ. ಇಷ್ಟು ವರ್ಷಗಳಲ್ಲಿ ಬೇರೆ ಬೇರೆ ನಿಯಮಗಳು ಹೊಸದಾಗಿ ಜಾರಿಯಾಗಿವೆ ಅಥವಾ ಪರಿಷ್ಕರಣೆಗೊಂಡಿವೆ. ಆದರೆ ಈ ನಿಯಮದ ಕುರಿತು ಮಾತಿಲ್ಲ. ಆಸಕ್ತಿಕರ ಸಂಗತಿಗಳು ಇವೆ.

2008ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್‌ನಲ್ಲಿದ್ದ ಅಲ್ಬೀ ಮಾರ್ಕೆಲ್ ಹೊಡೆದಿದ್ದ 125 ಮೀಟರ್ಸ್ ಸಿಕ್ಸರ್ ದಾಖಲೆಯನ್ನು ಇನ್ನೂ ಯಾರೂ ಮುರಿದಿಲ್ಲ. ಪ್ರವೀಣ್ ಕುಮಾರ್ (124 ಮೀ), ಆ್ಯಡಂ ಗಿಲ್‌ಕ್ರಿಸ್ಟ್ (122 ಮೀ), ರಾಬಿನ್ ಉತ್ತಪ್ಪ (120 ಮೀ), ಯುವರಾಜ್ ಸಿಂಗ್ (119 ಮೀ), ಗೌತಮ್ ಗಂಭೀರ್ (117ಮೀ), ಕ್ರಿಸ್ ಗೇಲ್ (112 ಮೀ) ಹಾಗೂ ಮಹೇಂದ್ರಸಿಂಗ್ ಧೋನಿ (112ಮೀ) ಅವರೂ ತಮ್ಮ ತೋಳ್ಬಲ ಪ್ರದರ್ಶಿಸಿದ್ದಾರೆ.

ಇಷ್ಟು ದೂರದ ಸಿಕ್ಸರ್‌ಗಳು ದಾಖಲಾಗಲು ಹಲವು ಕಾರಣಗಳಿವೆ. ಒಂದು, ಬ್ಯಾಟರ್‌ಗಳ ಅಭ್ಯಾಸದಲ್ಲಿ ಆಗಿರುವ ಬದಲಾವಣೆ. ನೆಟ್ಸ್‌ನಲ್ಲಿ ಸಿಕ್ಸರ್ ಹೊಡೆಯಲು ವಿಶೇಷ ತರಬೇತಿ ನೀಡಲಾಗುತ್ತದೆ. ಬೌಲಿಂಗ್ ಯಂತ್ರಗಳು, ಥ್ರೋಡೌನ್ ಪರಿಣತರ ಮೂಲಕ ಈ ತರಬೇತಿಗಳನ್ನು ಕೊಡಲಾಗುತ್ತದೆ. ನೂತನ ತಂತ್ರಜ್ಞಾನದಲ್ಲಿ ತಯಾರಾಗುತ್ತಿರುವ ಬ್ಯಾಟ್‌ಗಳಿಂದಾಗಿಯೂ ಸಿಕ್ಸರ್ ಹೊಡೆಯುವುದು ಸುಲಭವಾಗುತ್ತಿದೆ. ಆದರೂ ಎಷ್ಟು ಮೀಟರ್ ದೂರ ಸಾಗುತ್ತದೆ ಎಂಬ ಆಧಾರದಲ್ಲಿ ಹೆಚ್ಚು ರನ್ ನೀಡುವುದು ಸರಿಯೇ ಎಂಬ ಚರ್ಚೆಯೂ ನಡೆಯುತ್ತಿದೆ.

'ಎಲ್ಲ ಕ್ರಿಕೆಟ್ ಮೈದಾನಗಳಲ್ಲಿ ಬೌಂಡರಿ ಗೆರೆಯ ಅಳತೆಯು ಒಂದೇ ರೀತಿ ಇರುವುದಿಲ್ಲ. ಸರಾಸರಿ 62ರಿಂದ 70 ಮೀಟರ್‌ಗಳವರೆಗೆ ಇರುತ್ತದೆ. ಆದ್ದರಿಂದ ಸಿಕ್ಸರ್ ನಿಯಮ ಪರಿಷ್ಕರಣೆ ಮಾಡಿ ಅದನ್ನು ಎಲ್ಲ ಕ್ರೀಡಾಂಗಣಗಳಿಗೂ ಏಕರೂಪವಾಗಿ ಅನ್ವಯಿಸುವುದು ಸೂಕ್ತವಾಗುವುದಿಲ್ಲ' ಎಂದು ಬಿಸಿಸಿಐ ಮಾಜಿ ಅಂಪೈರ್ ವಿ.ಎನ್. ಕುಲಕರ್ಣಿ ಹೇಳುತ್ತಾರೆ.

ಒಂದೊಮ್ಮೆ ನಿಯಮ ಪರಿಷ್ಕರಣೆಗೊಂಡು ಹೆಚ್ಚುವರಿ ರನ್ ನೀಡಲು ಆರಂಭವಾದರೆ ಬ್ಯಾಟರ್‌ಗಳು ತಮ್ಮ ಭುಜಬಲ ಮೆರೆಯುವ ಪೈಪೋಟಿಯೂ ಮುಗಿಲೆತ್ತರಕ್ಕೇರಬಹುದು. ಟಿಮ್ ಡೇವಿಡ್ ಅವರಂತಹ ಬಲಾಢ್ಯರು ಹೊಡೆಯುವ ಚೆಂಡುಗಳನ್ನು ಪಡೆಯಲು ಮೈದಾನದ ಹೊರಗಿದ್ದವರ ಸ್ಪರ್ಧೆಯೂ ಹೆಚ್ಚಬಹುದು!



ಟಿಮ್ ಡೇವಿಡ್



ರೋಹಿತ್ ಶರ್ಮಾ

ಡಾ. ರಾಜ್ ಹಾಡಿಗೆ ಅಮೆರಿಕದಲ್ಲಿ ಧ್ವನಿಗೂಡಿಸಿದ ನಟ ಮೋಹನ್‌ಲಾಲ್

ಮಲಯಾಳಂ ನಟ ಮೋಹನ್ ಲಾಲ್ ಅವರು ಕನ್ನಡದ ಹಾಡುಗಳು ಮತ್ತು ನಟಸಾರ್ವಭೌಮ ಡಾ. ರಾಜ್‌ಕುಮಾರ್ ಅವರ ಬಗ್ಗೆ ಅಪಾರ ಅಭಿಮಾನ ಹೊಂದಿದ್ದಾರೆ. ಇವರು ಈ ಹಿಂದೆ ಕಾರ್ಯಕ್ರಮವೊಂದರಲ್ಲಿ ರಾಜ್‌ಕುಮಾರ್ ಅವರ ಹಾಡೊಂದನ್ನು ಹಾಡಿದ್ದರು. ಆ ಮೂಲಕ ಕನ್ನಡಿಗರ ಮೆಚ್ಚುಗೆಗೆ ಪಾತ್ರರಾಗಿದ್ದರು.


ಇತ್ತೀಚೆಗೆ ಮೋಹನ್ ಲಾಲ್ ಅವರು ಅಮೆರಿಕದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದರು. ಈ ಸಂದರ್ಭದಲ್ಲಿ ಅವರು ಇತರ ಕಲಾವಿದರೊಂದಿಗೆ ಸೇರಿ ರಾಜ್‌ಕುಮಾರ್ ಹಾಗೂ ಮಂಜುಳಾ ನಟನೆಯ 'ಎರಡು ಕನಸು' ಸಿನಿಮಾದ ಹಾಡನ್ನು ಹಾಡುವ ಮೂಲಕ ಕನ್ನಡಿಗರ ಮನಗೆದ್ದಿದ್ದಾರೆ.

ವೇದಿಕೆಯಲ್ಲಿ ಕನ್ನಡದ ಹಿಟ್ ಗೀತೆಗಳಲ್ಲಿ ಒಂದಾದ 'ಎಂದೆಂದೂ ನಿನ್ನನು ಮರೆತು ಬದುಕಿರಲಾರೆ' ಹಾಡನ್ನು ಹಾಡಿದ್ದಾರೆ. ಏಪ್ರಿಲ್ 24 ರಾಜ್‌ಕುಮಾರ್ ಅವರ ಹುಟ್ಟುಹಬ್ಬ. ಈ ಸಂದರ್ಭದಲ್ಲಿ ಮೋಹನ್ ಲಾಲ್ ಅವರ ಈ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ನೆಟ್ಟಿಗರೊಬ್ಬರು 'ರಾಜ್ ಅವರ ಬಗ್ಗೆ ಮೋಹನ್ ಲಾಲ್ ಅವರಿಗೆ ಇರುವ ಅಭಿಮಾನ ಈ ಹಾಡಿನ ಮೂಲಕ ಗೊತ್ತಾಗುತ್ತದೆ' ಎಂದು ಕಮೆಂಟ್‌ನಲ್ಲಿ ಬರೆದಿದ್ದಾರೆ.

ಮತ್ತೊಬ್ಬರು 'ಕನ್ನಡಿಗರಂತೆಯೇ ಕನ್ನಡವನ್ನು ಸುಲಭವಾಗಿ ಮಾತನಾಡುತ್ತೀರ' ಎಂದು ಅಚ್ಚರಿ ವ್ಯಕ್ತಪಡಿಸಿದ್ದಾರೆ.


'ಎರಡು ಕನಸು' ಸಿನಿಮಾ 1974ರಲ್ಲಿ ಬಿಡುಗಡೆಗೊಂಡಿತ್ತು. ಸದ್ಯ ಈ ಸಿನಿಮಾ 50 ವರ್ಷಗಳನ್ನು ಪೂರೈಸಿದೆ. ಆದರೆ ಈ ಸಿನಿಮಾದ ಹಾಡುಗಳ ಜನಪ್ರಿಯತೆ ಇಂದಿಗೂ ಕಡಿಮೆಯಾಗಿಲ್ಲ.





ಮೋಹನ್ ಲಾಲ್

ಉಡುಪಿಗೂ ಮುತ್ತು, ಫ್ಯಾಷನ್‌ಗೆ ಒತ್ತು



ಮುತ್ತಿನ ಒಡವೆ ಎಂದರೆ ಮಹಿಳೆಯರಿಗೆ ಅಚ್ಚುಮೆಚ್ಚು. ಈಗ ಉಡುಗೆಯಲ್ಲೂ ಮುತ್ತಿನ ವಿನ್ಯಾಸ ಬಂದಿದ್ದು, ಫ್ಯಾಷನ್‌ಪ್ರಿಯರ ಮನತಣಿಸುತ್ತಿದೆ. ಫಳಫಳನೆ ಹೊಳೆಯುವ ಮುತ್ತಿನ ಒಡವೆಯ ಜೊತೆಗೆ ಉಡುಗೆಯನ್ನೂ ಮುತ್ತಿನಿಂದಲೇ ತಯಾರಿಸಿದ್ದನ್ನು ಮಹಿಳೆಯರು ಇಷ್ಟಪಡುತ್ತಿದ್ದಾರೆ.

ಪ್ಯಾಂಟ್ ಮೇಲೆ ಧರಿಸುವ ಟಾಪ್‌ನ ವಿನ್ಯಾಸವು ಮುತ್ತಿನಿಂದ ಕೂಡಿದ್ದು, ಇದು ಈಗ ಟ್ರೆಂಡ್ ಆಗಿದೆ. ಸಿನಿಮಾ ತಾರೆಯರು, ಮಾಡೆಲ್‌ಗಳು ಹಾಗೂ ಸೆಲೆಬ್ರಿಟಿಗಳು ಮುತ್ತಿನ ಉಡುಗೆಗಳಿಂದ ಕಂಗೊಳಿಸುತ್ತಿದ್ದು, ಮುತ್ತುಪ್ರಿಯರ ಕಣ್ಣುಗಳಲ್ಲಿ ಮಿಂಚಿನ ಸಂಚಾರವಾಗುವಂತೆ ಮಾಡುತ್ತಿದ್ದಾರೆ.

ಹಾಗೆ ನೋಡಿದರೆ, ರಾಜ ಮಹಾರಾಜರ ಕಾಲದಲ್ಲೂ ಮುತ್ತಿನ ಒಡವೆಗೆ ಎಲ್ಲಿಲ್ಲದ ಬೇಡಿಕೆಯಿತ್ತು. ರಾಜ ಮಹಾರಾಜರು ಐದೆಳೆ, ಹತ್ತೆಳೆ ಮುತ್ತಿನ ಸರಗಳಿಗೆ ದೊಡ್ಡದೊಡ್ಡ ಹರಳಿನ ಪೆಂಡೆಂಟ್ ಹಾಕಿಕೊಂಡು ಧರಿಸುತ್ತಿದ್ದರು. ಅವರು ಧರಿಸುವ ಪೇಟ, ಕಿರೀಟಗಳಲ್ಲೂ ಮುತ್ತಿನ ಎಳೆಗಳು ಮಿಂಚುತ್ತಿದ್ದವು. ಹಾಗೇ ಉಡುಗೆ, ಶಾಲುಗಳಲ್ಲೂ ಮುತ್ತಿನಿಂದ ಮಾಡಿದ ವಿನ್ಯಾಸಗಳು ಮನಸೆಳೆಯುತ್ತಿದ್ದವು. ಮಹಾರಾಣಿಯರಿಗಂತೂ ಮುತ್ತಿನ ಒಡವೆ, ಉಡುಗೆ ಎಂದರೆ ಅಚ್ಚುಮೆಚ್ಚಾಗಿತ್ತು. ಮುತ್ತಿನ ಸರ, ಮುತ್ತಿನ ಬಳೆ, ಬಾಜೂಬಂದ್, ಸೊಂಟಪಟ್ಟಿ, ಕಾಲ್ಗೆಜ್ಜೆ, ಕಿವಿಯೋಲೆ ಎಲ್ಲದರಲ್ಲೂ ಹೊಳಪುಳ್ಳ ಮುತ್ತು ಇರುವಂತೆ ನೋಡಿಕೊಳ್ಳುತ್ತಿದ್ದರು. ಇವೆಲ್ಲದರ ಜೊತೆಗೆ ತಾವು ಧರಿಸುತ್ತಿದ್ದ ಸೀರೆಗಳ ಅಂಚಿನಲ್ಲೂ ಮುತ್ತಿನ ವಿನ್ಯಾಸಕ್ಕೆ ಒತ್ತು ಕೊಡುತ್ತಿದ್ದರು. ಇದೇ ಮುಂದೆ ಸಾಮಾನ್ಯ ಮಹಿಳೆಯರಿಗೂ ಮುತ್ತಿನ ಒಡವೆಯಲ್ಲಿ ಆಸಕ್ತಿ ಬರುವಂತೆ ಮಾಡಿತು ಎಂಬುದು ಫ್ಯಾಷನ್ ತಜ್ಞರ ಅಭಿಮತ.

ಈಗಿನ ಮಾಡೆಲಿಂಗ್ ತಾರೆಯರು ರ್‍ಯಾಂಪ್ ಮೇಲೆ ಕ್ಯಾಟ್‌ವಾಕ್ ಮಾಡುವಾಗಲೂ ಮುತ್ತಿನ ಸರಮಾಲೆ ಧರಿಸಿ, ಡ್ರೆಸ್‌ನಲ್ಲೂ ಇದನ್ನೇ ಬಳಕೆ ಮಾಡುತ್ತಾರೆ. ವಿವಿಧ ಗಾತ್ರ, ಬಣ್ಣಗಳಲ್ಲಿ ದೊರೆಯುವ ಮುತ್ತಿನ ಒಡವೆಗಳು ಯುವತಿಯರನ್ನೂ ಸೆಳೆಯುತ್ತಿವೆ.

'ಮುತ್ತಿನಿಂದ ವಿನ್ಯಾಸ ಮಾಡಿದ ಸೀರೆಯ ಅಂಚು, ಬ್ಲೌಸ್‌ಗಳು, ಗೌನ್ ಎಲ್ಲವೂ ಈಗ ಫ್ಯಾಷನ್ ಟ್ರೆಂಡ್ ಸೃಷ್ಟಿಸಿವೆ. ಅಚ್ಚಬಿಳಿಯ ಮುತ್ತು, ಕ್ರೀಮ್, ತಿಳಿಗುಲಾಬಿ ಬಣ್ಣದ ಮುತ್ತಿನ ಉಡುಗೆ– ತೊಡುಗೆ ಜೊತೆಗೆ ಬೇಸಿಗೆ ಕಾಲಕ್ಕಾಗಿಯೇ ಇರುವ ಪೇಸ್ಟಲ್ ಕಲರ್ ಮುತ್ತಿನ ಎಥ್ನಿಕ್ ಉಡುಗೆಗಳು ಹಾಗೂ ಇಂಡೊ ವೆಸ್ಟರ್ನ್ ಶೈಲಿಯ ಉಡುಗೆ ಹೆಚ್ಚು ಜನಪ್ರಿಯವಾಗುತ್ತಿವೆ' ಎಂದು ಹೇಳುತ್ತಾರೆ ಬೆಂಗಳೂರಿನ ಫ್ಯಾಷನ್ ತಜ್ಞೆ ಉಮಾ ಜಯಕುಮಾರ್.

'ಆಧುನಿಕ, ಸಾಂಪ್ರದಾಯಿಕ ಎರಡೂ ರೀತಿಯ ಮನೋಭಾವದವರಿಗೆ ಸೂಕ್ತವಾಗುವಂತೆ ಈ ಉಡುಗೆಗಳನ್ನು ವಿನ್ಯಾಸ ಮಾಡಿರುವುದರಿಂದ ಯಾರು ಬೇಕಾದರೂ ಇವುಗಳನ್ನು ತೊಟ್ಟು ಸಂಭ್ರಮಿಸಬಹುದು' ಎಂಬುದು ಇವರ ಅಭಿಪ್ರಾಯ.

ಕಾಳಜಿ ಹೀಗಿರಲಿ

* ಮುತ್ತಿನ ಉಡುಗೆ ಧರಿಸುವವರು ಆಭರಣ ಧರಿಸದೇ ಇದ್ದರೂ ಚೆನ್ನಾಗಿಯೇ ಕಾಣುತ್ತದೆ.
* ಮುತ್ತಿನ ಉಡುಗೆಯನ್ನು ವಾಷಿಂಗ್ ಮಷೀನ್‌ನಲ್ಲಿ ಹಾಕಿ ಒಗೆಯುವಂತಿಲ್ಲ. ಉಡುಗೆಯನ್ನು ನೆರಳಿನಲ್ಲಿ ಒಣಗಿಸಿ.
* ಮುತ್ತಿನಿಂದ ನೇಯ್ಗೆ ಮಾಡಿದ ಉಡುಗೆಯನ್ನು ಮಡಿಸಿ ಇಡಬೇಡಿ. ಧರಿಸಿದ ಬಳಿಕ ತೆಗೆದಿಡುವಾಗ ಹ್ಯಾಂಗರ್‌ನಲ್ಲಿ ಹಾಕಿ ಇಡಿ.


ಜ್ಯೂ. ಎನ್‌ಟಿಆರ್ ಸಿನಿಮಾ ಬಿಡುಗಡೆ ದಿನಾಂಕ ಘೋಷಣೆ

ದಕ್ಷಿಣ ಭಾರತದ ಪ್ರಸಿದ್ಧ ನಟ ಜೂನಿಯರ್ ಎನ್‌ಟಿಆರ್ ಅವರ ಜೊತೆ ತಮ್ಮ ಮುಂದಿನ ಸಿನಿಮಾ ಮಾಡುತ್ತಿರುವ ನಿರ್ದೇಶಕ ಪ್ರಶಾಂತ್ ನೀಲ್ ಅವರು ಚಿತ್ರದ ತಾತ್ಕಾಲಿಕ ಶೀರ್ಷಿಕೆ ಹಾಗೂ ಬಿಡುಗಡೆಯ ದಿನಾಂಕವನ್ನು ಘೋಷಣೆ ಮಾಡಿದ್ದಾರೆ.

ಹೆಸರು ಅಂತಿಮವಾಗದ ಚಿತ್ರಕ್ಕೆ ತಾತ್ಕಾಲಿಕವಾಗಿ ಹ್ಯಾಷ್‌ಟ್ಯಾಗ್ ಜೊತೆಗೆ 'ಎನ್‌ಟಿಆರ್‌ನೀಲ್' (#NTRNEEL) ಎಂಬ ಶೀರ್ಷಿಕೆ ನೀಡಲಾಗಿದೆ. ಈ ಚಿತ್ರವು 2027ರ ಜೂನ್ 11ರಂದು ವಿಶ್ವದಾದ್ಯಂತ ಚಿತ್ರ-ಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಮೇ 20ರಂದು ಎನ್‌ಟಿಆರ್ ಅವರ ಹುಟ್ಟುಹಬ್ಬದ ಪ್ರಯುಕ್ತ ಈ ಚಿತ್ರದ ಮೊದಲ ಝಲಕ್ ಅನಾವರಣ ಆಗಲಿದೆ ಎಂದು ಚಿತ್ರತಂಡವು ಅಧಿಕೃತ ಮಾಹಿತಿ ನೀಡಿದೆ.

ಚಿತ್ರತಂಡವು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಪೋಸ್ಟರ್‌ನಲ್ಲಿ, ಎನ್‌ಟಿಆರ್ ಅವರ ದಿಟ್ಟ ನೋಟವನ್ನು ಕಾಣಬಹುದು. ಸದ್ಯ, ಈ ಚಿತ್ರವು ಪ್ರೇಕ್ಷಕರ ಗಮನ ಸೆಳೆಯುತ್ತಿದೆ. ಈ ಚಿತ್ರಕ್ಕೆ 'ಡ್ರ್ಯಾಗನ್' ಎಂದು ಹೆಸರಿಡುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಜೂನಿಯರ್ ಎನ್‌ಟಿಆರ್ ಅವರು ಈ ಸಿನಿಮಾಗಾಗಿ ಕೇವಲ 50 ದಿನಗಳಲ್ಲಿ ಸುಮಾರು 9.5 ಕೆ.ಜಿ ತೂಕ ಇಳಿಸಿಕೊಂಡಿದ್ದಾರೆ. ಈ ಕುರಿತ ಚಿತ್ರಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದವು. ಈ ಸಿನಿಮಾದಲ್ಲಿ ನಾಯಕಿಯಾಗಿ ರುಕ್ಮಿಣಿ ವಸಂತ್ ಹಾಗೂ ಪ್ರಮುಖ ಪಾತ್ರದಲ್ಲಿ ಅನಿಲ್ ಕಪೂರ್ ಅವರು ನಟಿಸುತ್ತಿದ್ದಾರೆ ಎನ್ನುವ ಮಾಹಿತಿ ಇದೆ.



ಜೂನಿಯರ್ ಎನ್‌ಟಿಆರ್

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪಬ್ಲಿಕ್ TV ಪ್ರಸ್ತುತ ಪಡಿಸುವ

PUBLIC TV

9ನೇ ಆವೃತ್ತಿ

ವಿದ್ಯಾಪೀಠ

ಇಂದಿನ ಕಲಿಕೆ | ನಾಳಿನ ದಾರಿ ದೀಪ

In association with AD6 advertising
A Unit of Sri Sairam Enterprises

ಕರ್ನಾಟಕದ ಅತಿ ದೊಡ್ಡ ಹಾಗೂ ಬಹು ನಿರೀಕ್ಷಿತ ಶೈಕ್ಷಣಿಕ ಮೇಳ

ಇಂದು ಮತ್ತು ನಾಳೆ

25th April 2026, ಶನಿವಾರ
26th April 2026, ಭಾನುವಾರ

ಬೆಳಿಗ್ಗೆ 9.00 ರಿಂದ ಸಂಜೆ 6.00

ಗಾಯತ್ರಿ ವಿಹಾರ, ಪ್ಯಾಲೇಸ್ ಗ್ರೌಂಡ್ಸ್, ಬೆಂಗಳೂರು

ಗೇಟ್ ನಂ. 4

ಸ್ಥಳದಲ್ಲೇ ಪ್ರವೇಶಾತಿ ಸೌಲಭ್ಯ
ಅರ್ಹ ಅಭ್ಯರ್ಥಿಗಳಿಗೆ ವಿದ್ಯಾರ್ಥಿವೇತನ

125ಕ್ಕೂ ಹೆಚ್ಚು ಪ್ರಮುಖ ಶೈಕ್ಷಣಿಕ ಸಂಸ್ಥೆಗಳು ಒಂದೇ ಸೂರಿನಡಿ

ALL ARE WELCOME!
ENTRY FREE

PLATINUM SPONSORS

Garden City University – Emphasis on Life
CMR University
Ramaiah University of Applied Sciences
Cambridge Institute of Technology – An Autonomous Institution
Sapthagiri NPS University – Unmatched Excellence, Unlimited Potential
REVA University – Bengaluru, India
Presidency University – Bengaluru

GOLD SPONSORS

East Point Group of Institutions
The Oxford Educational Institutions
R R Institutions – Bengaluru
AMC – An Autonomous Institution
East West Group of Institutions – Bengaluru

CREATIVE STALL PARTNERS

New Horizon College of Engineering
KLE Technological University
Amity University Bengaluru
Parul University
ICFAI Foundation for Higher Education
Jyothy Institute of Technology

SILVER SPONSORS

Chanakya University
PES University
Dayananda Sagar University
Brindavan Group of Institutions
Acharya
City Institutions
GM University Davanagere
AIMS Institutes
Krupanidhi Group of Institutions
S.E.A Group of Institutions
ABBS

BEVERAGE PARTNER

ಬಾಯರ್ಸ್ ಕಾಫೀ – Bayar's Coffee – The Warmth of Goodness!

BANKING PARTNER

Karnataka Bank Ltd. – Your Family Bank. Across India.

BUMPER PRIZES FOR STUDENTS

CHANCE TO WIN LAPTOP
THROUGH LUCKY DIP
REGISTER BETWEEN 9AM TO 10.30AM
SPONSORED BY SAPTHAGIRI NPS UNIVERSITY

10 BICYCLES SPONSORED BY ARVIND Residential School & P.U College KUNIGAL

WIN SURPRISE GIFTS EVERY HOUR
*Through lucky dip

*T&C Apply

On the 9th Anniversary of Public TV Vidhyapeeta

We will honour 9 Academic Excellence Toppers in • Arts • Science • Commerce

Students will get an opportunity to meet **eminent speakers and professionals** to discuss about their **future and higher studies.**

Students who have secured 90% and above will be awarded if they bring a photocopy of their marks card.

HI 2 AI - Score more marks Seminar by Handwriting and Memory Expert Mr. Rafiullah Baig

Exhibit your talent by actively participating in **Attractive games, Slow cycle race, Pick and speak & varieties of competition.**

Attend informative seminars by officials from the Karnataka Education Authority on:
- CET Counselling
- Seat Selection Process
- COMED-K
- NEET

and many more

ಎಲ್ಲಾ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಆಹ್ವಾನ

ವಿಶಾಲ ಪಾರ್ಕಿಂಗ್ ವ್ಯವಸ್ಥೆ ಲಭ್ಯವಿದೆ

ಎಸಿ ಸೌಲಭ್ಯ ಹೊಂದಿದ ಕಟ್ಟಡ ವ್ಯವಸ್ಥೆ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331